ಶುಕ್ರವಾರ, ಜನವರಿ 2, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೂಪರ್‌ಸ್ಟಾರ್ ಶುಭಾಶಯ

ನಟ ರಜನೀಕಾಂತ್ ಅವರು ಚೆನ್ನೈನಲ್ಲಿರುವ ತಮ್ಮ ನಿವಾಸದ ಹೊರಗೆ ನೆರೆದಿದ್ದ ಅಭಿಮಾನಿಗಳಿಗೆ ಹೊಸ ವರ್ಷದ ಶುಭಾಶಯಗಳನ್ನು ಕೋರಿದರು

ಟಾಪ್ಸ್‌ಗೆ ಆಯುಷ್

ಕರ್ನಾಟಕದ ಬ್ಯಾಡ್ಮಿಂಟನ್ ಆಟಗಾರ ಆಯುಷ್ ಶೆಟ್ಟಿ ಅವರನ್ನು ಟಾಪ್ಸ್ ಯೋಜನೆಯ ಡೆವಲಪ್‌ಮೆಂಟ್ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ

first circle
BROTHERHOOD IN BUSINESS

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಉದ್ಯಮಿ ಒಕ್ಕಲಿಗ
UDYAMI VOKKALIGA

FC EXPO 2026
4TH EDITION
9, 10 ಮತ್ತು 11 ಜನವರಿ

ಈ ಬಾರಿಯ ಎಫ್‌ಸಿ ಎಕ್ಸ್‌ಪೋ 2026 ಜನವರಿ 9, 10 ಮತ್ತು 11 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿರುವ ಗೇಟ್ ನಂ. 4 ಗಾಯಿತ್ರಿ ಗ್ರ್ಯಾಂಡ್ ಮತ್ತು ಗಾಯತ್ರಿ ವೃಕ್ಷದ ಸಭಾಂಗಣಗಳಲ್ಲಿ ಉದ್ಯಮಿ ಒಕ್ಕಲಿಗ ಪ್ರದರ್ಶನ-ಸಮ್ಮೇಳನ ಹಾಗೂ ನಾಲ್ಕನೇ ಬಾರಿಗೆ ಉದ್ಯಮಿ ಒಕ್ಕಲಿಗ ಜಿಲ್ಲಾ ಸಮ್ಮೇಳನಗಳು ಜರುಗಲಿವೆ. ಎಲ್ಲರಿಗೂ ಆದರದ ಸ್ವಾಗತ.

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ನಂಜಾವಧೂತ ಮಹಾಸ್ವಾಮೀಜಿಯವರು
ಶ್ರೀ ಸ್ಪಟಿಕಪುರಿ ಮಹಾಸಂಸ್ಥಾನ ಮಠ

ಶ್ರೀ ಡಾ|| ನಿಶ್ಚಲಾನಂದನಾಥ ಸ್ವಾಮೀಜಿ
ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ ಬೆಂಗಳೂರು

ಶ್ರೀ ಹೆಚ್ ಡಿ ದೇವೇಗೌಡ
ಭಾರತದ ಮಾಜಿ ಪ್ರಧಾನ ಮಂತ್ರಿಗಳು

ಶ್ರೀ ಡಿ ಕೆ ಶಿವಕುಮಾರ್
ಕರ್ನಾಟಕದ ಉಪ ಮುಖ್ಯಮಂತ್ರಿಗಳು

ಶ್ರೀ ಹೆಚ್.ಡಿ. ಕುಮಾರಸ್ವಾಮಿರವರು
ಸಚಿವರು, ಉಕ್ಕು ಮತ್ತು ಭಾರೀ ಕೈಗಾರಿಕೆ ಭಾರತ ಸರ್ಕಾರ

ಕು. ಶೋಭಾ ಕರಂದ್ಲಾಜೆ
ಕೇಂದ್ರ ಸಚಿವರು ಎಂ.ಎಸ್.ಎಂ.ಇ. ಸಚಿವಾಲಯ, ಭಾರತ ಸರ್ಕಾರ

ಶ್ರೀ ಬಿ ಎನ್ ಬಚ್ಚೇಗೌಡ
ಮಾಜಿ ಸಂಸದರು, ಚಿಕ್ಕಬಳ್ಳಾಪುರ

ಶ್ರೀ ಎಂ ಸಿ ಸುಧಾಕರ್
ಉನ್ನತ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ



ಶ್ರೀ ಕೃಷ್ಣ ಬೈರೇಗೌಡ
ಕಂದಾಯ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಚೆಲುವರಾಯಸ್ವಾಮಿ
ಕೃಷಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಕೆ ವೆಂಕಟೇಶ್
ಪಶುಸಂಗೋಪನೆ ಮತ್ತು ರೇಷ್ಮೆ ಕೃಷಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಆರ್. ಅಶೋಕ್
ವಿರೋಧ ಪಕ್ಷದ ನಾಯಕರು ಕರ್ನಾಟಕ ಸರ್ಕಾರ

ಡಾ|| ಸಿ.ಎನ್. ಮಂಜುನಾಥ್
ಮಾನ್ಯ ಸಂಸದರು ಬೆಂಗಳೂರು ಗ್ರಾಮಾಂತರ

ಶ್ರೀ ಸಿ ಎನ್ ಅಶ್ವತ್ಥನಾರಾಯಣ
ಮಾಜಿ ಉಪಮುಖ್ಯಮಂತ್ರಿ, ಕರ್ನಾಟಕ ಸರ್ಕಾರ



ಶ್ರೀ ಎಲ್.ಆರ್. ಶಿವರಾಮೇಗೌಡ
ಮಾನ್ಯ ಮಾಜಿ ಲೋಕ ಸಭಾ ಸದಸ್ಯರು

ಶ್ರೀ ಎಂ. ಕೃಷ್ಣಪ್ಪ
ಮಾನ್ಯ ಶಾಸಕರು ಬೆಂಗಳೂರು ಉತ್ತರ ವಿಧಾನಸಭಾ ಕ್ಷೇತ್ರ

ಶ್ರೀ ಜಿ ಟಿ ದೇವೇಗೌಡ
ಮಾಜಿ ಸಚಿವರು ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಶ್ರೀ ಗೋಪಾಲಯ್ಯ
ಮಾಜಿ ಸಚಿವರು, ಶಾಸಕರು, ಮಹಾಲಕ್ಷ್ಮಿ ವಿಧಾನಸಭಾ ಕ್ಷೇತ್ರ

ಶ್ರೀ ಎಂ. ಕೃಷ್ಣಪ್ಪ
ಮಾನ್ಯ ಶಾಸಕರು ವಿಜಯನಗರ ವಿಧಾನಸಭಾ ಕ್ಷೇತ್ರ

ಶ್ರೀ ಶರತ್ ಬಚ್ಚೇಗೌಡರು
ಅಧ್ಯಕ್ಷರು, ಕಿಯೋನಿಕ್ಸ್

ಶ್ರೀ ಸಿ.ಟಿ. ರವಿ
ಮಾಜಿ ಸಚಿವರು ಹಾಗೂ ಶಾಸಕರು, ವಿಧಾನ ಪರಿಷತ್



ಶ್ರೀ ಬಿ.ಎಲ್. ಶಂಕರ್
ಅಧ್ಯಕ್ಷರು, ಚಿತ್ರಕಲಾ ಪರಿಷತ್



ಶ್ರೀ ಕೆ.ಹೆಚ್. ಪುಟ್ಟಸ್ವಾಮಿ ಗೌಡ
ಶಾಸಕರು, ಗೌರಿಬಿದನೂರು ವಿಧಾನಸಭಾಕ್ಷೇತ್ರ

ಶ್ರೀ ಎಲ್. ಶ್ರೀನಿವಾಸ್
ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ

firstcircle
BROTHERHOOD IN BUSINESS
FC EXPO 2026
4TH EDITION
9, 10 ಮತ್ತು 11 ಜನವರಿ
ಉದ್ಯಮಿ ಒಕ್ಕಲಿಗ
UDYAMI VOKKALIGA
ಎಫ್‌ಸಿ ಎಕ್ಸ್‌ಪೋ 2026
ಶ್ರೀ ಜಯರಾಮ್ ರಾಯಪುರ
ಮುಖ್ಯ ಮಾರ್ಗದರ್ಶಕರು, ಫಸ್ಟ್ ಸರ್ಕಲ್
ಡಾ॥ ಡಿ. ಮುನಿರಾಜು
ಅಧ್ಯಕ್ಷರು, ಫಸ್ಟ್ ಸರ್ಕಲ್
ಜನವರಿ 9, 10 ಮತ್ತು 11 ರಂದು
ಹಿರಿಯ ಉದ್ಯಮಿಗಳು
ಶ್ರೀ ಪ್ರಶಾಂತ್ ಪ್ರಕಾಶ್
ಸಹಸಂಸ್ಥಾಪಕರು ಮತ್ತು ಪಾಲುದಾರರು
ಆಕ್ಸೆಲ್ ಪಾರ್ಟನರ್ಸ್
ಶ್ರೀ ಸುದರ್ಶನ್ ಕಾರ್ಲೆ
ನಿರ್ದೇಶಕರು
ಕಾರ್ಲೆ ಇಂಟರ್ ನ್ಯಾಷನಲ್ ಪ್ರೈ.ಲಿ.
ಶ್ರೀ ವೆಂಕಟರಮಣೇ ಗೌಡ (ಸ್ಟಾರ್ ಚಂದ್ರು)
ವ್ಯವಸ್ಥಾಪಕ ನಿರ್ದೇಶಕರು
ಸ್ಟಾರ್ ಇನ್‌ಫ್ರಾಟೆಕ್
ಡಾ॥ ಟಿ ವೆಂಕಟ್ ವರ್ಧನ್
ಎಂ.ಡಿ. ಡಿಇಎನ್ಎ
ಎಂಟರ್‌ಮೆಂಟ್ ನೆಟ್ವರ್ಕ್ ಪ್ರೈ. ಲಿ.
ಶ್ರೀ ಕಾರ್ತಿಕ್ ಮುನಿರಾಜು
ಎಂ.ಡಿ. ಡಿಜಿಟಲ್ ಆ್ಯಡ್ ಸೆನ್ಸ್ &
ಪೂರ್ವಿಕ ಔಟ್‌ಡೋರ್ ಅಡ್ವರ್ಟೈಸಿಂಗ್
ಶ್ರೀ ಎಸ್ ಎ ಪುಟ್ಟರಾಜು
ವ್ಯವಸ್ಥಾಪಕ ನಿರ್ದೇಶಕರು
ಸವಿರುಚಿ ಗ್ರೂಪ್ಸ್
ಡಾ॥ ವೆಂಕಟಪ್ಪ ಹೆಚ್.ಎಂ
ಸಂಸ್ಥಾಪಕ ಅಧ್ಯಕ್ಷರು,
ಕಣ್ವ ಡಯಾಗ್ನೋಸ್ಟಿಕ್ಸ್
ಶ್ರೀ ಪ್ರಸನ್ನ ಕುಮಾರ್ ಸಿ
ವ್ಯವಸ್ಥಾಪಕ ನಿರ್ದೇಶಕರು
ವಿಲ್ಕಾರ್ಟ್ ಸೆಲ್ಯೂಷನ್ಸ್ ಪ್ರೈ. ಲಿ.
ಶ್ರೀ ಜಿ.ಜೆ.ಎ. ಪ್ರಸನ್ನ ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಬೆಲ್ ಫಾಸ್ಟ್ ಮ್ಯಾನೇಜ್ ಮೆಂಟ್ ಪ್ರೈ. ಲಿ.
ಶ್ರೀ ಟಿ ವೆಂಕಟೇಶ್
ವ್ಯವಸ್ಥಾಪಕ ನಿರ್ದೇಶಕರು
ಅಭಿಮಾನಿ ಗ್ರೂಪ್ಸ್
ಶ್ರೀ ಚಂದ್ರಪ್ಪ ಬಿ.ಸಿ.
ನಿರ್ದೇಶಕರು
ಎಬೆನುಸ್ ಡಿಸೈನ್ ಸೊಲ್ಯೂಷನ್ಸ್ ಪ್ರೈ. ಲಿ.
ಶ್ರೀ ಸಂದೀಪ್ ರೆಡ್ಡಿ ಬಿ
ವ್ಯವಸ್ಥಾಪಕ ಪಾಲುದಾರರು
ಚಾರಿಗನ್ ಗ್ರೂಪ್
ಶ್ರೀ ರಾಮಸ್ವಾಮಿ
ವಿಸಿಎನ್‌ಆರ್ ಗ್ರೂಪ್ಸ್
ಶ್ರೀ ಕಿಮ್ಮನೆ ಜಯರಾಮ್
ಸಂಸ್ಥಾಪಕರು, ಕಿಮ್ಮನೆ ರೆಸಾರ್ಟ್
ಶ್ರೀ ಪುಟ್ಟಣ್ಣ, ಎಂ.ಎಲ್.ಸಿ.
ಸಾಧನ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್
ಫೌಂಡರ್ ಚೇರ್ಮನ್
ಸೆಕ್ಟರ್ ಅಧ್ಯಕ್ಷರು
ಕೃಷಿ ತಂತ್ರಜ್ಞಾನ
ಡಾ॥ ಎಸ್ ವಿ ಸುರೇಶ
ಕುಲಪತಿಗಳು
ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
ಕೃಷಿ ತಂತ್ರಜ್ಞಾನ
ಡಾ॥ ನಾರಾಯಣ ಗೌಡ
ಮಾಜಿ ಉಪಕುಲಪತಿಗಳು
ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
ಕೃಷಿ ತಂತ್ರಜ್ಞಾನ
ಡಾ॥ ರಾಜೇಂದ್ರ ಪ್ರಸಾದ್
ಮಾಜಿ ಉಪಕುಲಪತಿಗಳು
ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
ಸ್ಟಾರ್ಟ್ ಅಪ್ ಮತ್ತು ಎಂಟರ್ ಪ್ರಿನರ್‌ಶಿಪ್
ಶ್ರೀ ಪ್ರಶಾಂತ್ ಪ್ರಕಾಶ್
ಸಹಸಂಸ್ಥಾಪಕರು ಮತ್ತು ಪಾಲುದಾರರು
ಆಕ್ಸೆಲ್ ಪಾರ್ಟನರ್ಸ್
ಸಮುದಾಯದ ಸಂಘ-ಸಂಸ್ಥೆಗಳ ನಿರ್ವಹಣೆ
ಶ್ರೀ ನೀಲಕಂಠ ಆರ್ ಗೌಡ
ಸಮಾಜ ಸೇವಕರು
ಮಾಜಿ ನಿರ್ದೇಶಕರು ಒಕ್ಕಲಿಗ ಸಂಘ
ಆರೋಗ್ಯ
ಡಾ॥ ಡಿ ಸಿ ಭಗವಾನ್
ಪ್ರಾಂಶುಪಾಲರು, ಕಿಮ್ಸ್
ಸಿಂಡಿಕೇಟ್ ಸದಸ್ಯ, RGUHS
ಗೌರವಾಧ್ಯಕ್ಷರು ಶಿವಮೊಗ್ಗ ಜಿಲ್ಲೆ
ಶ್ರೀ ಆರ್.ಎಂ. ಮಂಜುನಾಥ ಗೌಡ
ಅಧ್ಯಕ್ಷರು, ಮಲೆನಾಡು ಅಭಿವೃದ್ಧಿ ಪ್ರಾಧಿಕಾರ
ಅಧ್ಯಕ್ಷರು, ಡಿ.ಸಿ.ಸಿ. ಬ್ಯಾಂಕ್, ಶಿವಮೊಗ್ಗ
ಆರೋಗ್ಯ ವಲಯ
ಡಾ. ನಾಗೇಶ್
ಗ್ಯಾಸ್ಟ್ರೋಎಂಟರಾಲಜಿಸ್ಟ್
ವಿಕ್ಟೋರಿಯ ಆಸ್ಪತ್ರೆ
ಕನ್ನಡ ಚಿತ್ರರಂಗ ಮತ್ತು ಸಿನಿಮಾ ಸಂಗೀತ ಕ್ಷೇತ್ರ
ಡಾ. ಶಮಿತಾ ಮಲ್ನಾಡ್
ಖ್ಯಾತ ಗಾಯಕರು
ಶಿಕ್ಷಣ
ಶ್ರೀ ಮದನ್ ಕುಮಾರ್
ಮಿಡಾಸ್, ಬೆಂಗಳೂರು
ಮಹಿಳಾ ಉದ್ಯಮಿಗಳು
ಶ್ರೀಮತಿ ಅಮಿತಾ ಪ್ರಶಾಂತ್
ಐರಾ ಅಕಾಡೆಮಿ
ರಿಯಾಲ್ಟಿ ಮತ್ತು ಕಟ್ಟಡ ನಿರ್ಮಾಣ
ಶ್ರೀ ನಯನಕುಮಾರ್ ಗೌಡ
ವ್ಯವಸ್ಥಾಪಕ ಪಾಲುದಾರರು
ಯುನೈಟೆಡ್ ಡೆವಲಪರ್ಸ್
ಎಂಎಸ್‌ಎಂಇ
ಶ್ರೀ ಎಂ ಜೆ ಬಾಲಕೃಷ್ಣ
ಸಂಸ್ಥಾಪಕರು, ಇಂಡೋ ಗ್ಯಾಸ್
ಹೊರಾಂಗಣ ಪ್ರಚಾರಕರು
ಶ್ರೀ ಕೆಂಪರಾಜು
ಸೈನ್ ಪೋಸ್ಟ್ ಇಂಡಿಯಾ ಪ್ರೈ. ಲಿ.
ಎಫ್‌ಸಿ-ಮಹಿಳಾ ಅಧ್ಯಕ್ಷರು
ಶ್ರೀಮತಿ ಶಿಲ್ಪ ಗೌಡ
ಅಧ್ಯಕ್ಷರು,
ಬಿ.ಎನ್.ಬಿ. ಹಾಸ್ಪಿಟಾಲಿಟಿ ಸರ್ವೀಸ್
ಈವೆಂಟ್ ಮ್ಯಾನೇಜ್ಮೆಂಟ್
ಶ್ರೀ ಕನ್ನಡವೇ ಸತ್ಯರಂಗಣ್ಣ
ಗ್ಲೋಬಲ್ ಈವೆಂಟ್ ಮ್ಯಾನೇಜ್ಮೆಂಟ್
ಆತಿಥ್ಯ
ಶ್ರೀ ಮುಕೇಶ್ ಕೆ ಎಂ
ಮಾಲೀಕರು ಮೌಂಟನ್ ವ್ಯೂ ರೆಸಾರ್ಟ್
ಸಾಂಸ್ಕೃತಿಕ ವಲಯ
ಶ್ರೀ ಜಯಪ್ರಕಾಶ್ ಗೌಡ
ಗೌರವಾಧ್ಯಕ್ಷರು, ಎಫ್‌ಸಿ-ಮಂಡ್ಯ ಜಿಲ್ಲೆ
ವೃತ್ತಿಪರ ಮತ್ತು ತಂತ್ರಜ್ಞಾನ ಉದ್ಯೋಗಿಗಳ ವಲಯ
ಶ್ರೀಮತಿ ಭುವನ
ಓಂ ಟೆಕ್ ಸಲ್ಯೂಶನ್ಸ್
ಸೆಕ್ಟರ್ ಸಂಯೋಜಕರು
ಶ್ರೀಮತಿ ಮಂಜುಳ ಪ್ರಕಾಶ್
ಪರಿಶ್ರಮ ಗ್ರೂಪ್
ಪ್ರಧಾನ ಕಾರ್ಯದರ್ಶಿ
ಶ್ರೀ ಅಮರೇಶ್ ಎಂ.
ಚಂದನ ಮೋಟರ್ಸ್ ಗ್ರೂಪ್
ಜಿಲ್ಲಾ ಅಧ್ಯಕ್ಷರು
ಶ್ರೀ ಸಿಎಂಆರ್ ಶ್ರೀನಾಥ್
ಎಫ್‌ಸಿ-ಕೋಲಾರ ಜಿಲ್ಲೆ
ಶ್ರೀ ಆಂಜನೇಯರೆಡ್ಡಿ
ಎಫ್‌ಸಿ-ಚಿಕ್ಕಬಳ್ಳಾಪುರ ಜಿಲ್ಲೆ
ಶ್ರೀ ಮಂಜುನಾಥ ಎಚ್ ಎಸ್
ಎಫ್‌ಸಿ-ತುಮಕೂರು ಜಿಲ್ಲೆ
ಶ್ರೀ ರವಿ ಎಂ.ಎಲ್.ಸಿ.
ರಾಮನಗರ ಜಿಲ್ಲೆ
ಶ್ರೀ ಎಸ್. ಶಶಿಕುಮಾರ್
ಎಫ್‌ಸಿ-ಬೆಂಗಳೂರು ದಕ್ಷಿಣ
ಡಾ॥ ಬಿ. ಶಿವಲಿಂಗಯ್ಯ
ಅಧ್ಯಕ್ಷರು, ಮಂಡ್ಯ ಜಿಲ್ಲೆ
ಶ್ರೀ ಎಂ.ಎ ರಮೇಶ್ ಹೆಗ್ಗಡೆ
ಎಫ್‌ಸಿ-ಶಿವಮೊಗ್ಗ ಜಿಲ್ಲೆ
ಡಾ॥ ಜೆ ಪಿ ಕೃಷ್ಣೇಗೌಡ
ಎಫ್‌ಸಿ-ಚಿಕ್ಕಮಗಳೂರು ಜಿಲ್ಲೆ
ಶ್ರೀ ಬಸವೇಗೌಡರು
ಎಫ್‌ಸಿ-ಮೈಸೂರು ಜಿಲ್ಲೆ
ಶ್ರೀ ದಿಬ್ಬೂರು ಜಯಣ್ಣ
ಎಫ್‌ಸಿ-ಬೆಂಗಳೂರು ಉತ್ತರ
ಶ್ರೀ ಕಿರಣ್
ಎಫ್‌ಸಿ-ಹಾಸನ ಜಿಲ್ಲೆ
ಶ್ರೀ ಪದ್ಮನಾಭ ಕೊಲ್ಚಾರ್
ಎಫ್‌ಸಿ-ದಕ್ಷಿಣ ಕನ್ನಡ ಜಿಲ್ಲೆ
ಡಾ. ಶಿವಾನಂದ ಊರು ಬೈಲು
ಕೊಡಗು
ಶ್ರೀ ಕೆ. ಬೇಗೂರು ನಟರಾಜ್
ಅಧ್ಯಕ್ಷರು, ಎಫ್‌ಸಿ-ಬೆಂ.ಗ್ರಾ.
ಕ್ರಿಯೇಟಿವ್ ಎಂಜಿನೀರ್ಸ್, ಹೊಸಕೋಟೆ
All are welcome – Book your Exhibition Stalls & Food court early
Mega 3 day Vokkaliga Exhibition of Goods and Services.
More than 70,000+ Vokkaliga Entrepreneurs are expected to participate from all districts of Karnataka, Tamil Nadu & Overseas
ನೀವೂ ಬೆಳೆಯಿರಿ.. ನಿಮ್ಮವರನ್ನೂ ಬೆಳೆಸಿರಿ.
ಉಚಿತ ಪ್ರವೇಶ
Follow us on:
+91- 79969 90500, 79969 90600, 94828 30121
firstcircle
BROTHERHOOD IN BUSINESS
All are welcome
ಉದ್ಯಮಿ ಒಕ್ಕಲಿಗ
UDYAMI VOKKALIGA

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಯಶಸ್ವಿನಿಗೆ ವೈಲ್ಡ್‌ಕಾರ್ಡ್

ಕರ್ನಾಟಕದ ಟೇಬಲ್ ಟೆನಿಸ್ ಆಟಗಾರ್ತಿ ಯಶಸ್ವಿನಿ ಘೋರ್ಪಡೆ ಅವರು ವಡೋದರದಲ್ಲಿ ನಡೆಯಲಿರುವ ಯುಟಿಟಿ ಫೀಡರ್ ಸರಣಿಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದಾರೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 85,188 | ನಿಫ್ಟಿ 26,146 | $/₹ 89.98 | ಚಿನ್ನ (Std. 10g) ₹1,39,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,42,300 (ಬೆಂಗಳೂರು)

ಘರ್ಷಣೆ: ‘ಕೈ’ ಕಾರ್ಯಕರ್ತ ಬಲಿ

ಬ್ಯಾನರ್ ಗಲಾಟೆ: ಬಳ್ಳಾರಿ ಉದ್ವಿಗ್ನ • ಜನಾರ್ದನ ರೆಡ್ಡಿ ಮನೆ ಎದುರು ಎರಡು ಗುಂಪುಗಳ ಮಧ್ಯೆ ಕಲ್ಲು ತೂರಾಟ • ಗಾಳಿಯಲ್ಲಿ ಗುಂಡು • ನಿಷೇಧಾಜ್ಞೆ ಜಾರಿ

ಪ್ರಜಾವಾಣಿ ವಾರ್ತೆ

ಸಾವಿಗೀಡಾದ ರಾಜಶೇಖರ್

ಬಳ್ಳಾರಿ: ಶಾಸಕ ಜನಾರ್ದನ ರೆಡ್ಡಿ ಅವರ ಮನೆ ಎದುರು ಬ್ಯಾನರ್ ಕಟ್ಟುವ ವಿಷಯಕ್ಕೆ ಶಾಸಕ ಭರತ್ ರೆಡ್ಡಿ ಮತ್ತು ಜನಾರ್ದನ ರೆಡ್ಡಿ ಬೆಂಬಲಿಗರ ನಡುವೆ ಗುರುವಾರ ರಾತ್ರಿ ಘರ್ಷಣೆ ಸಂಭವಿಸಿದ್ದು, ಘಟನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರೊಬ್ಬರು ಸಾವನ್ನಪ್ಪಿದ್ದಾರೆ. ಪೊಲೀಸರು ಸೇರಿ ಹಲವರಿಗೆ ಗಾಯಗಳಾಗಿದ್ದು, ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

‘ಗುಂಡು ತಾಗಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಮೃತಪಟ್ಟಿದ್ದಾರೆ. ಜನಾರ್ದನ ರೆಡ್ಡಿ ಅವರ ಕಡೆಯಿಂದ ದಾಳಿ ನಡೆದಿದೆ’ ಎಂದು ಶಾಸಕ ಭರತ್ ರೆಡ್ಡಿ ಆರೋಪಿಸಿದ್ದಾರೆ. ಘಟನೆಯಿಂದ ಬಳ್ಳಾರಿ ಉದ್ವಿಗ್ನಗೊಂಡಿದ್ದು, ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

‘ಜನಾರ್ದನ ರೆಡ್ಡಿ ಅವರ ಮನೆ ಎದುರಿನ ಜಾಗದಲ್ಲಿ ಬ್ಯಾನರ್ ಕಟ್ಟುವ ವಿಚಾರಕ್ಕೆ ಮೊದಲಿಗೆ ಜಗಳ ಆರಂಭವಾಗಿದೆ. ಭರತ್ ರೆಡ್ಡಿ ಬೆಂಬಲಿಗ ಎನ್ನಲಾದ ಸತೀಶ್ ರೆಡ್ಡಿ, ಜನಾರ್ದನ ರೆಡ್ಡಿ ಅವರ ಮನೆ ಎದುರು ರಸ್ತೆಯಲ್ಲಿ ಕುರ್ಚಿ ಹಾಕಿಕೊಂಡು ಕೂತು ದರ್ಪದಿಂದ ಬ್ಯಾನರ್ ಕಟ್ಟಿಸಿದರು. ಆಗ ಮಾಜಿ ಸಚಿವ ಶ್ರೀರಾಮುಲು ಅಡ್ಡ ಬಂದರು. ಈ ಕಾರಣಕ್ಕೆ ಎರಡು ಬಣಗಳ ನಡುವೆ ಮೊದಲಿಗೆ ಮಾತಿನ ಚಕಮಕಿ ನಡೆದು, ನಂತರ ಕಲ್ಲು ತೂರಾಟ ನಡೆದಿದೆ’ ಎಂದು ದೂರಲಾಗಿದೆ.

ಈ ವಿಷಯ ತಿಳಿದು ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರು ಸ್ಥಳಕ್ಕೆ ಬಂದಿದ್ದಾರೆ. ಈ ವೇಳೆ ಸತೀಶ್ ರೆಡ್ಡಿ ಅವರ ಖಾಸಗಿ ಗನ್‌ಮ್ಯಾನ್‌ಗಳು ಗಾಳಿಯಲ್ಲಿ 2 ಸುತ್ತು ಗುಂಡು ಹಾರಿಸಿದ್ದಾರೆಂದು ಗೊತ್ತಾಗಿದೆ.

ಘಟನೆ ವಿವರ: ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಬೆಂಬಲಿಗರು ಎನ್ನಲಾದ ಸಾವಿರಕ್ಕೂ ಹೆಚ್ಚು ಮಂದಿ ಎಸ್ಪಿ ಸರ್ಕಲ್‌ನಿಂದ ಜನಾರ್ದನ ರೆಡ್ಡಿ ಮನೆಗೆ ದೊಣ್ಣೆ, ಕಲ್ಲುಗಳೊಂದಿಗೆ ಬಂದು ದಾಳಿ ನಡೆಸಿದರು. ಆಗ ಜನಾರ್ದನ ರೆಡ್ಡಿಯವರ ಮನೆ ಕಿಟಕಿ ಗಾಜು ಹಾನಿಗೀಡಾದವು. ಪೊಲೀಸರು ಜನರನ್ನು ಚದುರಿಸಲು ಗಾಳಿಯಲ್ಲಿ ಗುಂಡು ಹಾರಿಸಿದರು

▶7

ಬಳ್ಳಾರಿಯಲ್ಲಿ ಗುರುವಾರ ನಡೆದ ಗುಂಪು ಘರ್ಷಣೆ ವೇಳೆ ಗಾಳಿಯಲ್ಲಿ ಗುಂಡು ಹಾರಿಸಿದ ಪೊಲೀಸರು

ಗಲಾಟೆ ಯಾಕೆ?

ಬಳ್ಳಾರಿಯ ವಾಲ್ಮೀಕಿ ವೃತ್ತದಲ್ಲಿ ವಾಲ್ಮೀಕಿ ಪ್ರತಿಮೆಯನ್ನು ಸ್ಥಾಪನೆ ಮಾಡಲಾಗಿದೆ. ಜನವರಿ 3ರಂದು ಪ್ರತಿಮೆ ಅನಾವರಣ ಮಾಡಲು ಸಿದ್ಧತೆ ನಡೆಸಲಾಗಿದೆ.

ಈ ಕಾರ್ಯಕ್ರಮಕ್ಕಾಗಿ ನಗರದಾದ್ಯಂತ ಬ್ಯಾನರ್ ಅಳವಡಿಕೆ ಮಾಡಲಾಗುತ್ತಿದೆ. ಬ್ಯಾನರ್ ಅನ್ನು ಜನಾರ್ದನ ರೆಡ್ಡಿ ಅವರ ಮನೆ ಮುಂದೆ ಅಳವಡಿಸುವ ಸಂದರ್ಭದಲ್ಲಿ ಈ ಗಲಾಟೆ ನಡೆದಿದೆ.

ಧರಣಿ ಕುಳಿತ ಶಾಸಕ

ಬಳ್ಳಾರಿ: ಬಳ್ಳಾರಿಯಲ್ಲಿ ತಡರಾತ್ರಿಯೂ ಬಿಗುವಿನ ವಾತಾವರಣ ಮುಂದುವರಿದಿತ್ತು.
ನಗರದ ಸಿರುಗುಪ್ಪ ರಸ್ತೆಯಲ್ಲಿ ಸಂಚಾರ ನಿಷೇಧಿಸಲಾಗಿದೆ.
ಈ ನಡುವೆ ಶಾಸಕ ಜನಾರ್ದನ ರೆಡ್ಡಿ ಬಂಧನಕ್ಕೆ ಆಗ್ರಹಿಸಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ನಗರದ ಅವಂಬಾವಿಯಲ್ಲಿರುವ ಜನಾರ್ದನ ರೆಡ್ಡಿ ನಿವಾಸದ ಎದುರೇ ಗುರುವಾರ ರಾತ್ರಿ ಧರಣಿ ಕುಳಿತರು.

▶7

ತೆಪ್ಪೋತ್ಸವ

ಪ್ರಜಾವಾಣಿ ಚಿತ್ರ
ಭರತ್ ಕಂದಕೂರ



ಕೊಪ್ಪಳದ ಗವಿಸಿದ್ಧೇಶ್ವರ ಮಠದಲ್ಲಿ ಗುರುವಾರ ನಡೆದ ತೆಪ್ಪೋತ್ಸವದ ಸಂದರ್ಭ ಕಂಡುಬಂದ ಬೆಳಕಿನ ವೈಭವ

ಜಾತಿ ಸಂಘಗಳಿಗೆ ಅರಣ್ಯ ಭೂಮಿ ಆದೇಶ ವಾಪಸ್‌ಗೆ ಮೀನಮೇಷ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಜಾತಿ ಆಧಾರಿತ ಸಂಘಟನೆಗಳು ಹಾಗೂ ಐದು ಸರ್ಕಾರಿ ಸಂಸ್ಥೆಗಳಿಗೆ ನಗರದ ಹೊರವಲಯದಲ್ಲಿನ 78 ಎಕರೆ ಅರಣ್ಯ ಭೂಮಿಯನ್ನು ಗುತ್ತಿಗೆ (ಲೀಸ್) ನೀಡಿದ್ದ ಸರ್ಕಾರ, ಆದೇಶ ಹಿಂಪಡೆಯಬೇಕಾದ ಮುಜುಗರದಿಂದ ತಪ್ಪಿಸಿಕೊಳ್ಳಲು ವಿಳಂಬ ನೀತಿ ಅನುಸರಿಸುತ್ತಿದೆ.

ಅರಣ್ಯ ಭೂಮಿಯ ಬಳಕೆ ಮತ್ತು ಹಂಚಿಕೆ ವಿಷಯದಲ್ಲಿ ಗೋದಾವರ್ಮನ್ ಪ್ರಕರಣವೂ ಸೇರಿದಂತೆ ಹಲವು ಪ್ರಕರಣಗಳ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಈ ಬಗ್ಗೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದೆ. 2017ರಲ್ಲಿ ಅಸ್ತಿತ್ವದಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ, ನ್ಯಾಯಾಲಯದ ಆದೇಶಗಳಿಗೆ ವಿರುದ್ಧವಾಗಿ ವಿವಿಧ ಜಾತಿ ಸಂಘಟನೆಗಳಿಗೆ ಅರಣ್ಯ ಭೂಮಿಯನ್ನು 30 ವರ್ಷಗಳಿಗೆ ಗುತ್ತಿಗೆ ನೀಡಿತ್ತು. ಈ ಭೂಮಿಯನ್ನು ವಾಪಸ್ ಪಡೆಯುವ ಈ ವಿಷಯ ಸಚಿವ ಸಂಪುಟ ಮುಂದೆ ಕನಿಷ್ಠ ಎರಡು ಬಾರಿ ಬಂದಿದ್ದು, ಎರಡು ಬಾರಿಯೂ ಮುಂದೂಡಿಕೆಯಾಗಿದೆ.

▶7

ಅಂದಾಜು ಮೌಲ್ಯ ₹2,500 ಕೋಟಿ

ಮಾಚೋಹಳ್ಳಿಯ ಅರಣ್ಯ ಭೂಮಿ ಭಾರಿ ಬೆಲೆ ಬಾಳುತ್ತದೆ. ಅಲ್ಲಿಂದ 10 ಕಿ.ಮೀ ದೂರದಲ್ಲಿರುವ ಕೃಷಿ ಭೂಮಿಯೇ ಎಕರೆಗೆ ₹5 ಕೋಟಿಯಿಂದ ₹15 ಕೋಟಿ ದರಕ್ಕೆ ಮಾರಾಟವಾಗುತ್ತಿದೆ. ಮಾಗಡಿ ರಸ್ತೆಗೆ ನೇರವಾಗಿ ಹೊಂದಿಕೊಂಡಿರುವ ಅರಣ್ಯ ಭೂಮಿ ಸುತ್ತಲ ವಸತಿ ನಿವೇಶನಗಳಿಗೆ ಸಾಕಷ್ಟು ಬೇಡಿಕೆ ಇದೆ. ಚದರ ಅಡಿಗೆ ₹8,000ರಿಂದ ₹13,000ದವರೆಗೆ ಮಾರಾಟವಾಗುತ್ತಿವೆ. ಅರಣ್ಯ ಭೂಮಿಯ ಮೌಲ್ಯ ₹2,500 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ.

ಅರಣ್ಯ ಭೂಮಿ ಪಡೆದ ಸಂಸ್ಥೆಗಳು

- ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಒಕ್ಕೂಟ
- ಕುರುಬರ ಸಂಘ
- ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠ
- ವೀರಶೈವ ಮಹಾಸಭಾ
- ಒಕ್ಕಲಿಗರ ಸಂಘ
- ಆರ್ಯ ಈಡಿಗರ ಸಂಘ
- ಉಪ್ಪಾರ ಸಂಘ
- ವಿವಿಧ ದಲಿತ ಸಂಘಟನೆಗಳು
- ಸರ್ಕಾರಿ ಸಂಸ್ಥೆಗಳು

ಎಲ್ಲಾ ದಾಖಲೆಗಳನ್ನು ಸಚಿವ ಸಂಪುಟದ ಮುಂದೆ ಇಡಲಾಗಿದೆ. ಈ ಪ್ರದೇಶ ಅರಣ್ಯ ಎನ್ನುವ ಇಲಾಖೆಯ ನಿಲುವು ಸ್ಪಷ್ಟವಾಗಿದೆ. ಪ್ರಕರಣ ಕೋರ್ಟ್‌ನಲ್ಲಿರುವ ಕಾರಣ ಪ್ರತಿಕ್ರಿಯೆ ನೀಡಲು ಆಗದು
ಈಶ್ವರ ಖಂಡ್ರೆ, ಅರಣ್ಯ ಸಚಿವ

ಮಸೂದೆಯ ಕರಡು ಸಿದ್ಧ • ಮದುವೆಗೆ ಅಗತ್ಯ ನೆರವು, ದಂಪತಿಗೆ ವಸತಿಯೂ ಲಭ್ಯ

ಮರ್ಯಾದೆಗೇಡು ಹತ್ಯೆಗೆ ಜೈಲು

• ರಾಜೇಶ್ ರೈ ಚಟ್ಲ

ಬೆಂಗಳೂರು: ಜಾತಿಮೀರಿ ಪ್ರೀತಿಸುವವರು, ಮದುವೆಯಾದವರನ್ನು ‘ಮರ್ಯಾದೆ’ಯ ಹೆಸರಿನಲ್ಲಿ ಹಲ್ಲೆ ಮಾಡುವ, ಹತ್ಯೆಗೈಯುವ ಇಲ್ಲವೆ ಅವರಿಗೆ ಬಹಿಷ್ಕಾರ ಹಾಕುವವರನ್ನು ಹೆಡೆಮುರಿ ಕಟ್ಟಲು ಮುಂದಾಗಬೇಕೆಂಬ ಜನಾಗ್ರಹಕ್ಕೆ ಸ್ಪಂದಿಸಿರುವ ಸರ್ಕಾರ, ಇದಕ್ಕಾಗಿ ಮಸೂದೆಯೊಂದನ್ನು ಸಿದ್ಧಪಡಿಸಿದೆ.

ಇಂತಹ ಕೃತ್ಯ ಎಸಗುವವರಿಗೆ ಜೀವಾವಧಿ ಜೈಲು ವಾಸ ಹಾಗೂ ₹5 ಲಕ್ಷದವರೆಗೆ ದಂಡ ವಿಧಿಸಲು ಮಸೂದೆ ಅವಕಾಶ ಕಲ್ಪಿಸಿದೆ.

ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ಇತ್ತೀಚೆಗೆ ಮರ್ಯಾದೆಗೇಡು ಹತ್ಯೆ ನಡೆದಿತ್ತು. ಆ ಬೆನ್ನಲ್ಲೆ, ‘ಇಂತಹ ಮೃಗೀಯ, ಅಮಾನವೀಯ ಮತ್ತು ನಾಗರಿಕ ಸಮಾಜ ತಲೆತಗ್ಗಿಸುವ ಘಟನೆಗಳನ್ನು ತಡೆಯಲು ಪ್ರತ್ಯೇಕ ಕಾಯ್ದೆ ಜಾರಿಗೆ ತರಬೇಕು’ ಎಂಬ ಆಗ್ರಹ ಹೆಚ್ಚಿತ್ತು.

ಈ ಆಶಯ ಸಾಕಾರಗೊಳಿಸಲು ಕಾರ್ಯೋನ್ಮುಖವಾಗಿರುವ ಸರ್ಕಾರ, ‘ಕರ್ನಾಟಕ ಮದುವೆ ಮತ್ತು ಸಂಗಾತಿ ಆಯ್ಕೆಯ ಸ್ವಾತಂತ್ರ್ಯ, ಗೌರವ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ತಡೆಗಟ್ಟುವಿಕೆ ಮತ್ತು ನಿಷೇಧ ಮಸೂದೆ–2026’ರ ಕರಡು ರೂಪಿಸಿದೆ. ಕಾನೂನು ಮತ್ತು ಸಂಸದೀಯ ಇಲಾಖೆ ಇದನ್ನು ಸಿದ್ಧಪಡಿಸಿದೆ.

ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಅಪರಾಧ ತಡೆಗೆ ಕಾನೂನು ಅವಶ್ಯ. ಮದುವೆ ಮತ್ತು ಸಂಬಂಧಗಳಲ್ಲಿ ವೈಯಕ್ತಿಕ ಆಯ್ಕೆಯ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುವ ಯಾವುದೇ ನಡವಳಿಕೆಯನ್ನು ತಡೆಯಲು, ಶಿಕ್ಷಿಸಲು, ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಉದ್ದೇಶವನ್ನು ಮಸೂದೆ ಹೊಂದಿದೆ.

▶7

ಯಾವುದಕ್ಕೆ ನಿಷೇಧ?

- ದಂಪತಿಯ ಸಾವು, ದೈಹಿಕ ಹಾನಿ ಅಥವಾ ಗಾಯ ಉಂಟುಮಾಡುವುದು
- ಮದುವೆ ತಡೆಯಲು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಪ್ರಚೋದಿಸುವುದು
- ದಂಪತಿ ಅಥವಾ ಅವರಲ್ಲಿ ಒಬ್ಬರನ್ನು ನೇರವಾಗಿ ಅಥವಾ ಯಾವುದೇ ಸಂವಹನ ವಿಧಾನದ ಮೂಲಕ ಭೇಟಿಯಾಗಲು, ಸಹವಾಸ ಮಾಡಲು ಯತ್ನ ಅಥವಾ ಅವರು ಬದುಕುವುದಕ್ಕೆ ಕಿರುಕುಳ ನೀಡುವುದು
- ಸಂಗಾತಿ ಅಥವಾ ಅವರೊಂದಿಗೆ ಸಂಬಂಧ ಹೊಂದಿರುವ ಯಾರನ್ನಾದರೂ ಅಪಹರಿಸುವುದು, ಬೆದರಿಕೆ ಹಾಗೂ ಗೃಹ ಬಂಧನದಲ್ಲಿ ಇರಿಸುವುದು
- ದಂಪತಿ ಅಥವಾ ಅವರ ಕುಟುಂಬಕ್ಕೆ ಸಾಮಾಜಿಕ, ಆರ್ಥಿಕ ಬಹಿಷ್ಕಾರ ಹಾಕುವುದು ಹಾಗೂ ದಂಡ ವಿಧಿಸುವುದು
- ದಂಪತಿಯ ತಿಥಿ ಅಥವಾ ಅಂತ್ಯ ಸಂಸ್ಕಾರಕ್ಕೆ ಸಮಾನವಾದ ಆಚರಣೆ ಮಾಡುವುದು
- ಆಸ್ತಿಯಲ್ಲಿನ ಉತ್ತರಾಧಿಕಾರದ ಹಕ್ಕು ನಿರಾಕರಣೆ, ಒಪ್ಪಿಗೆ ವಿರುದ್ಧ ಬಲವಂತದ ಮದುವೆ ಮಾಡುವುದು
- ದಂಪತಿ ಅಥವಾ ಅವರಲ್ಲಿ ಒಬ್ಬರ ಬ್ಯಾಂಕ್ ಖಾತೆ ಸ್ಥಗಿತ ಅಥವಾ ಉದ್ಯೋಗಕ್ಕೆ ಸಂಚಕಾರ ತರುವುದು
- ಗರ್ಭಪಾತ ಮಾಡಿಸುವುದು ಅಥವಾ ಗರ್ಭಪಾತಕ್ಕೆ ಒತ್ತಾಯಿಸುವುದು

40 ಮಂದಿ ಸಜೀವ ದಹನ

ಕ್ರಾನ್ಸ್ –ಮೊಂಟಾನ/ಸ್ವಿಟ್ಜರ್ಲೆಂಡ್ (ಎಪಿ): ಇಲ್ಲಿನ ಸ್ವಿಸ್ ಆಲ್ಪ್ಸ್ ರೆಸಾರ್ಟ್ ಟೌನ್‌ನ ಬಾರ್‌ನಲ್ಲಿ ಹೊಸ ವರ್ಷಾಚರಣೆ ವೇಳೆ ಸಂಭವಿಸಿದ ಅಗ್ನಿ ಅವಘಡದಲ್ಲಿ 40 ಮಂದಿ ಮೃತಪಟ್ಟಿದ್ದು, 115ಕ್ಕೂ ಹೆಚ್ಚು ಗಂಭೀರವಾಗಿ ಗಾಯ ಗೊಂಡಿದ್ದಾರೆ. 15 ರಿಂದ 20 ವರ್ಷದೊಳಗಿನ 200ಕ್ಕೂ ಹೆಚ್ಚು ಮಂದಿ ಬಾರ್ ನಲ್ಲಿದ್ದರು. ಸಾವಿನ ಸಂಖ್ಯೆ ನಿಖರವಾಗಿ ತಿಳಿದಿಲ್ಲ’ ಎಂದು ಪೊಲೀಸರು ತಿಳಿಸಿದರು.

ವಿವರ ಪುಟ ▶10

ಸಿಗರೇಟು ಬೆಲೆ ಏರಿಕೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಂಬಾಕಿನ ಉತ್ಪನ್ನಗಳಿಗೆ ಹೆಚ್ಚುವರಿಯಾಗಿ ಸುಂಕ ವಿಧಿಸಲು ಅವಕಾಶ ಕಲ್ಪಿಸುವ ನಿಯಮವನ್ನು ಕೇಂದ್ರ ಸರ್ಕಾರವು ಗುರುವಾರ ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ಇದರ ಪರಿಣಾಮವಾಗಿ ಸಿಗರೇಟ್ ಮತ್ತು ಗುಟ್ಕಾ ಬೆಲೆಯು ಫೆಬ್ರುವರಿ 1ರಿಂದ ದೊಡ್ಡ ಮಟ್ಟದಲ್ಲಿ ಹೆಚ್ಚಳವಾಗುವ ಸಾಧ್ಯತೆ ಇದೆ.

ತಂಬಾಕಿನ ಉತ್ಪನ್ನಗಳಿಗೆ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಶೇಕಡ 40ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಈ ಪ್ರಮಾಣದ ತೆರಿಗೆಯ ಮೇಲೆ ಹೆಚ್ಚುವರಿಯಾಗಿ ಸುಂಕ ವಿಧಿಸಲು ಹೊಸ ನಿಯಮಗಳು ಅವಕಾಶ ಮಾಡಿಕೊಡುತ್ತವೆ.

ಈಗ ₹18ಕ್ಕೆ ಲಭ್ಯವಿರುವ ಸಿಗರೇಟಿನ ಬೆಲೆಯು ಫೆಬ್ರುವರಿಯಿಂದ ₹21 ಅಥವಾ ₹22ಕ್ಕೆ ಏರಿಕೆ ಆಗುವ ಸಾಧ್ಯತೆ ಇದೆ. ಹೆಚ್ಚುವರಿ ಸುಂಕವನ್ನು ಸಿಗರೇಟು ತಯಾರಿಕಾ ಕಂಪನಿಗಳು ಯಾವ ಪ್ರಮಾಣದಲ್ಲಿ ಗ್ರಾಹಕರಿಗೆ ವರ್ಗಾಯಿಸಲಿವೆ ಎಂಬುದರ ಆಧಾರದಲ್ಲಿ ಬೆಲೆ ಏರಿಕೆ ನಿರ್ಧಾರವಾಗಲಿದೆ.

▶10

ಚಿನಕುರುಳಿ

ಪ್ರಕಾಶ್ ಶೆಟ್ಟಿ

ನಮ್ಮ ಎಲ್ಲ ಮಾರಾಟಗಾರ ಬಂಧುಗಳಿಗೆ
ಹೊಸ ವರ್ಷದ ಧಮಾಕಾ ಕೊಡುಗೆ
ಸ್ಕ್ರಾಚ್ ಮಾಡಿರಿ... ಮತ್ತು ಗೆಲ್ಲಿರಿ..
ಉಚಿತ ಕೂಪನ್

ಸ್ಟಾರ್ ಬಿಗ್ಗಿ ಪಾನ ಮಸಾಲಾದ 5 ಪ್ಯಾಕೆಟ್ ಖರೀದಿಮೇಲೆ 1 ಕೂಪನ್ ಉಚಿತವಾಗಿ ಪಡೆಯಿರಿ ಮತ್ತು ರೂ. 25 ರಿಂದ ರೂ. 50 ರ ವರೆಗಿನ ಉಡುಗೊರೆಗಳನ್ನು ಗೆಲ್ಲಿರಿ.

ಸ್ಟಾರ್ ಬಿಗ್ಗಿ ಪಾನ ಮಸಾಲಾದ ಪ್ರತಿ ಸಿಂಗಲ್ ಬ್ಯಾಗ್ ಖರೀದಿಮೇಲೆ 1 ಕೂಪನ್ ಉಚಿತವಾಗಿ ಪಡೆಯಿರಿ ಮತ್ತು ರೂ. 50 ರಿಂದ ರೂ. 100 ರ ವರೆಗಿನ ಉಡುಗೊರೆಗಳನ್ನು ಗೆಲ್ಲಿರಿ.

ಸ್ಟಾರ್ ಬಿಗ್ಗಿ ಪಾನ ಮಸಾಲಾದ 1 ಬೋರಾ (4 ಸಿಂಗಲ್ ಬ್ಯಾಗಗಳು) ಖರೀದಿಮೇಲೆ 1 ಕೂಪನ್ ಉಚಿತವಾಗಿ ಪಡೆಯಿರಿ ಮತ್ತು ರೂ. 200 ರಿಂದ 500 ರ ವರೆಗಿನ ಉಡುಗೊರೆಗಳನ್ನು ಗೆಲ್ಲಿರಿ. ಮತ್ತು 31 ಮಾರ್ಚ್ 2026 ರ ಮೊದಲು ಈ 50 ಮಾಸ್ಟರ್ ಕೂಪನ್‌ಗಳನ್ನು ಸಂಗ್ರಹಿಸಿ, ಪಡೆಯಿರಿ ಟಿವಿ, ಫ್ರಿಜ್, ವಾಷಿಂಗ್ ಮೆಷಿನ್ (ಗರಿಷ್ಠ ಮೌಲ್ಯ ರೂ 11000)

ಜೈ ಜಿನೇಂದ್ರ ಏಜೆನ್ಸೀಜ್
ನಂ.554, 3ನೇ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು Mob.: 99165 32307
0% Nicotine & Tobacco
Statutory Warning: Chewing of Pan Masala is injurious to health. • Not For Minors.

100% ಬೈಬ್ಯಾಕ್ ಗ್ಯಾರಂಟಿ | ಪರೀಕ್ಷಿಸಲಾಗಿರುವ ಮತ್ತು ಪ್ರಮಾಣೀಕೃತ ವಜ್ರಗಳು | ಖಚಿತ ಜೀವನ ಪರ್ಯಂತ ಮೇಯಿಂಟೆನೆನ್ಸ್
ಸಂಪೂರ್ಣ ಪಾರದರ್ಶಕತೆ | ಜವಾಬ್ದಾರಿಯುತ ಮೂಲದ ಉತ್ಪನ್ನಗಳು

ಕರ್ನಾಟಕದಲ್ಲಿರುವ ಶೋರೂಂಗಳು: ಎಂ.ಜಿ ರೋಡ್ | ಡಿಕೆನ್‌ಸನ್ ರಸ್ತೆ | ಜಯನಗರ | ರಾಜಾಜಿನಗರ | ಕೋರಮಂಗಲ | ಫಿನಿಕ್ಸ್ ಮಾರ್ಕೆಟ್‌ಸಿಟಿ | ಮಾರತ್ತಹಳ್ಳಿ | ಬನ್ನೇರುಘಟ್ಟ ರಸ್ತೆ | ಕಮ್ಮನಹಳ್ಳಿ | ಮಲ್ಲೇಶ್ವರಂ | ಹೆಚ್ ಎಸ್ ಆರ್ ಲೇಔಟ್ | ಬನಶಂಕರಿ | ಯಲಹಂಕ | ಫೋರಮ್ ಸೌತ್ ಬೆಂಗಳೂರು | ಆರ್‌ಆರ್ ನಗರ | ಫೀನಿಕ್ಸ್ ಮಾಲ್ ಆಫ್ ಏಷ್ಯಾ, ಹೆಬ್ಬಾಳ | ವೈಟ್‌ಫೀಲ್ಡ್ | ಸರ್ಜಾಪುರ ರಸ್ತೆ | ಹೆಸರಘಟ್ಟ ಮುಖ್ಯ ರಸ್ತೆ | ಹೆಣ್ಣೂರು ಮುಖ್ಯ ರಸ್ತೆ | ನಾಗರಭಾವಿ | ನ್ಯೂ ಬೆಲ್ ರಸ್ತೆ | ಮೈಸೂರು | ಮಂಡ್ಯ | ಹಾಸನ | ಚಿಕ್ಕಮಗಳೂರು | ಮಂಗಳೂರು | ಉಡುಪಿ | ಬೆಳಗಾವಿ | ಹುಬ್ಬಳ್ಳಿ | ಧಾರವಾಡ | ವಿಜಯಪುರ | ಕಲಬುರಗಿ | ಬೀದರ್ | ಬಳ್ಳಾರಿ | ದಾವಣಗೆರೆ | ಶಿವಮೊಗ್ಗ | ತುಮಕೂರು | ರಾಯಚೂರು | ಕೋಲಾರ | ಹೊಸಪೇಟೆ | ಚಿತ್ರದುರ್ಗ | ಬಾಗಲಕೋಟೆ

Call: 09562 916 916 | BUY ONLINE AT: malabargoldanddiamonds.com
OVER 410 SHOWROOMS ACROSS 14 COUNTRIES
Follow us on @malabargoldanddiamonds

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ಮೆಟ್ರೊ ಕೆಂಪು ಮಾರ್ಗ: ವರದಿ ಸಲ್ಲಿಸಿದ ಸ್ವತಂತ್ರ ಸಮಿತಿ

ಸರ್ಜಾಪುರ–ಹೆಬ್ಬಾಳ ಮಾರ್ಗದ ಅಧಿಕ ಅಂದಾಜು ವೆಚ್ಚಕ್ಕೆ ಸಂಬಂಧಿಸಿ ವಿವರ ಕೇಳಿದ್ದ ಕೇಂದ್ರ ಸರ್ಕಾರ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಸರ್ಜಾಪುರ–ಹೆಬ್ಬಾಳವನ್ನು ಸಂಪರ್ಕಿಸುವ ನಮ್ಮ ಮೆಟ್ರೊ ಕೆಂಪು ಮಾರ್ಗದ ಬಗ್ಗೆ ಸ್ವತಂತ್ರ ಸಮಿತಿ ವರದಿ ಸಲ್ಲಿಸಿದೆ. ಈ ವರದಿಯನ್ನು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಪರಿಶೀಲಿಸಲಿದೆ.

36.59 ಕಿ.ಮೀ. ಉದ್ದದ 'ಕೆಂಪು' ಮಾರ್ಗವು 22.14 ಕಿ.ಮೀ. ಎತ್ತರಿಸಿದ ಮಾರ್ಗ, 14.45 ಕಿ.ಮೀ. ಸುರಂಗ ಮಾರ್ಗ ಒಳಗೊಂಡಿದೆ. ಎತ್ತರಿಸಿದ ಮಾರ್ಗದಲ್ಲಿ 17 ನಿಲ್ದಾಣ, ಸುರಂಗ ಮಾರ್ಗದಲ್ಲಿ 11 ನಿಲ್ದಾಣಗಳು ಇರಲಿವೆ. ₹28,405 ಕೋಟಿ ಅಂದಾಜು ವೆಚ್ಚ ಅಂದರೆ ಪ್ರತಿ ಕಿಲೋಮೀಟರ್‌ಗೆ ₹776.3 ಕೋಟಿ ಎಂದು ವಿಸ್ತೃತ ಯೋಜನಾ ವರದಿಯಲ್ಲಿ ತಿಳಿಸಲಾಗಿತ್ತು.

ಈ ಯೋಜನೆಗೆ ಒಂದು ವರ್ಷದ ಹಿಂದೆ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿತ್ತು. ಬಳಿಕ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಯೋಜನೆಯ ಅಂದಾಜು ವೆಚ್ಚ ಅಧಿಕವಾಗಿದೆ. ಈ ಬಗ್ಗೆ ವಿವರ ನೀಡಿ ಎಂದು ಆರು ತಿಂಗಳ ಹಿಂದೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಬಿಎಂಆರ್‌ಸಿಎಲ್‌ಗೆ ಸೂಚನೆ ನೀಡಿತ್ತು.

'ನಿರ್ಮಾಣ ಹಂತದಲ್ಲಿರುವ ಕಾಳೇನ ಅಗ್ರಹಾರ–ನಾಗವಾರ ನಡುವಿನ ಗುಲಾಬಿ ಮಾರ್ಗವನ್ನು ಮಾನದಂಡವಾಗಿ ಇಟ್ಟುಕೊಂಡು ಕೆಂಪು ಮಾರ್ಗಕ್ಕೆ ಅಂದಾಜು ವೆಚ್ಚ ತಯಾರಿಸಲಾಗಿದೆ. ಪರಿಶೀಲನೆ ನಡೆಸಿ ವರದಿ ನೀಡುವಂತೆ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಸೂಚಿಸಿದ್ದರಿಂದ ಸ್ವತಂತ್ರ ಸಮಿತಿ ನೇಮಕ ಮಾಡಲಾಗಿತ್ತು. ಅಂದಾಜು ವೆಚ್ಚದ ಬಗ್ಗೆ ಸಮರ್ಥನೆಯನ್ನು ಸ್ವತಂತ್ರ ಸಮಿತಿಯ ಮುಂದೆ ಇಟ್ಟಿದ್ದೇವೆ' ಎಂದು ಬಿಎಂಆರ್‌ಸಿಎಲ್ ಹಿರಿಯ ಅಧಿಕಾರಿ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

'ನಗರದ ಹೊರಗೆ ನಡೆಯುವ ಮೆಟ್ರೊ ಕಾಮಗಾರಿಗೆ ಕಡಿಮೆ ವೆಚ್ಚ ಆಗುತ್ತದೆ. ನಗರದ ಒಳಗೆ ಕಾಮಗಾರಿ ನಡೆಸಲು ಭಾರಿ ವೆಚ್ಚ ಮಾಡಬೇಕಾಗುತ್ತದೆ. ಕೆಂಪು ಮಾರ್ಗದಲ್ಲಿ 11 ಕಿ.ಮೀ. ಸುರಂಗ ಕೊರೆದು ಹಳಿ ನಿರ್ಮಿಸಬೇಕು. 11 ಭೂಗತ ನಿಲ್ದಾಣಗಳನ್ನು ನಿರ್ಮಿಸಬೇಕು. ಭೂಸ್ವಾಧೀನ, ಮಾರ್ಗ ರಚನೆ, ಹಳಿ ಜೋಡಣೆ, ನಿಲ್ದಾಣ ಕಟ್ಟಡಗಳ ನಿರ್ಮಾಣ, ವಿದ್ಯುತ್ ಸರಬರಾಜು ವ್ಯವಸ್ಥೆ, ಸಿಗ್ನಲಿಂಗ್, ದೂರಸಂಪರ್ಕ, ಡಿಪೋಗಳು, ರೈಲು ಕೋಚ್ ಪೂರೈಕೆ ಹೀಗೆ ಒಟ್ಟು 13 ಅಂಶಗಳನ್ನು ಪರಿಗಣಿಸಿ ಅಂದಾಜು ವೆಚ್ಚವನ್ನು ತಯಾರಿಸಿರುವುದಾಗಿ ತಿಳಿಸಿದ್ದೇವೆ' ಎಂದು ವಿವರ ನೀಡಿದರು.

ನಗರದ ಪ್ರಮುಖ ವಹಿವಾಟು ಪ್ರದೇಶಗಳಲ್ಲಿ ಒಂದಾಗಿರುವ ಕೋರಮಂಗಲವನ್ನು ಹಾದು ಹೋಗುವ ಕೆಂಪು ಮಾರ್ಗದ ಕಾಮಗಾರಿಯನ್ನು 2030ರ ವೇಳೆಗೆ ಪೂರ್ಣಗೊಳಿಸಿ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿತ್ತು. ಒಂದು ವರ್ಷ ಕಳೆದಿದ್ದು, ಸದ್ಯದಲ್ಲೇ ಒಪ್ಪಿಗೆ ಸಿಕ್ಕಿದರೆ 2031ರಲ್ಲಿ ಸಂಚಾರ ಆರಂಭವಾಗಬಹುದು ಎಂದರು.

ಕೇಂದ್ರದ ಒಪ್ಪಿಗೆ ನಿರೀಕ್ಷೆ

'ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಸ್ವತಂತ್ರ ಸಮಿತಿ ವರದಿ ಸಲ್ಲಿಸಿದೆ. ಸಚಿವಾಲಯವು ಪರಿಶೀಲಿಸಿ ಈಗಿರುವ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಅನುಮೋದನೆ ನೀಡಿದರೆ ಮುಂದಿನ ಕೆಲಸ ಆರಂಭಿಸುತ್ತೇವೆ. ಡಿಪಿಆರ್ ಬದಲಾಯಿಸಿ ಎಂದು ಹೇಳಿದರೆ ಬದಲಾವಣೆಗಳನ್ನು ಮಾಡುತ್ತೇವೆ. ಈ ವರ್ಷವೇ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದು ಹೆಬ್ಬಾಳ–ಸರ್ಜಾಪುರ ಮಾರ್ಗದ ಕಾಮಗಾರಿ ಆರಂಭವಾಗುವ ನಿರೀಕ್ಷೆ ಇದೆ' ಎಂದು ನಮ್ಮ ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.



ನಮ್ಮ ಮೆಟ್ರೊ ಕೆಂಪು ಮಾರ್ಗ

ನಿಲ್ದಾಣದ ಉದ್ದ ಕಡಿತ?

'ಆರು ಕೋಚ್‌ಗಳ ರೈಲು ನಿಲುಗಡೆಗೆ ಸುರಂಗ ಮಾರ್ಗದಲ್ಲಿ 240–265 ಮೀಟರ್ ಉದ್ದದ ನಿಲ್ದಾಣ ನಿರ್ಮಿಸಲಾಗುತ್ತದೆ. ಅದೇ ಅಂದಾಜನ್ನು ಕೆಂಪು ಮಾರ್ಗದಲ್ಲಿಯೂ ನೀಡಲಾಗಿದೆ. ಮುಂದೆ ವಿಸ್ತೃತ ಯೋಜನಾ ವರದಿಯನ್ನು ಬದಲಾಯಿಸಬೇಕೆಂದು, ವೆಚ್ಚ ಕಡಿಮೆ ಮಾಡಬೇಕೆಂದು ಸೂಚನೆ ಬಂದರೆ ಆಗ ಸುರಂಗ ಮಾರ್ಗದ ಉದ್ದವನ್ನು ಸ್ವಲ್ಪ ಕಡಿತಗೊಳಿಸಬೇಕಾಗುತ್ತದೆ' ಎಂದು ಬಿಎಂಆರ್‌ಸಿಎಲ್‌ನ ತಜ್ಞ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮೆಟ್ರೊ ನಿಲುಗಡೆಗೆ ತೊಂದರೆಯಾಗದಂತೆ ಸುರಂಗ ಮಾರ್ಗದ ಪ್ರತಿ ನಿಲ್ದಾಣವನ್ನು ಸುಮಾರು 40 ಮೀಟರ್ ಕಡಿತಗೊಳಿಸಬಹುದು. ಆಗ ₹3000 ಕೋಟಿ ವೆಚ್ಚ ಕಡಿಮೆ ಮಾಡಬಹುದು. ಉದ್ದ ಕಡಿಮೆ ಮಾಡುವುದು ಭವಿಷ್ಯದ ದೃಷ್ಟಿಯಿಂದ ಒಳ್ಳೆಯದಲ್ಲ' ಎಂದು ವಿಶ್ಲೇಷಿಸಿದ್ದಾರೆ.

ಹೊಸ ವರ್ಷ: ನಮ್ಮ ಮೆಟ್ರೊಗೆ ₹1 ಕೋಟಿ ಹೆಚ್ಚುವರಿ ವರಮಾನ

ಹೊಸ ವರ್ಷದ ಪ್ರಯುಕ್ತ ಬುಧವಾರ ರಾತ್ರಿ 11.30ರ ನಂತರ ಮೆಟ್ರೊದಲ್ಲಿ 40,774 ಪ್ರಯಾಣಿಕರು ಸಂಚರಿಸಿದ್ದು, ಹೆಚ್ಚುವರಿಯಾಗಿ ₹1 ಕೋಟಿ ವರಮಾನವನ್ನು ಬಿಎಂಆರ್‌ಸಿಎಲ್ ಗಳಿಸಿದೆ. ಡಿ.25ರವರೆಗೆ ಸರಾಸರಿ 9.5 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದರು. ಕ್ರಿಸ್‌ಮಸ್ ರಜೆಯಿಂದಾಗಿ ಪ್ರಯಾಣಿಕರ ಪ್ರಮಾಣ ಕಡಿಮೆಯಾಗಿತ್ತು. ಡಿ.26 ಮತ್ತು 27ರಂದು ತಲಾ 7 ಲಕ್ಷ, ಡಿ.28ರಂದು 6 ಲಕ್ಷಕ್ಕಿಂತಲೂ ಕಡಿಮೆ ಜನರು ಮೆಟ್ರೊ ಬಳಸಿದ್ದರು. ಡಿ.29 ಸೋಮವಾರ 8.51 ಲಕ್ಷ, ಮಂಗಳವಾರ 8 ಲಕ್ಷ ಪ್ರಯಾಣಿಕರು ಸಂಚರಿಸಿದ್ದರು.

ಡಿ.31ರಂದು ಒಟ್ಟು 8.94 ಲಕ್ಷ ಪ್ರಯಾಣಿಸಿದ್ದರು. ಪ್ರತಿದಿನ ₹2.8 ಕೋಟಿ ವರಮಾನ ಬರುತ್ತಿತ್ತು. ಹೆಚ್ಚುವರಿ ಅವಧಿಯ ಟಿಕೆಟ್ ಮೂಲಕ ₹40 ಲಕ್ಷ ಸೇರಿ ಒಟ್ಟು ಸುಮಾರು ₹1 ಕೋಟಿ ಅಧಿಕ ಆದಾಯ ಬಂದಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ. ರಜೆಗಳೆಲ್ಲ ಮುಗಿದು ಉದ್ಯೋಗಿಗಳು ಉದ್ಯೋಗಕ್ಕೆ ಮರಳುವುದರಿಂದ ಈ ವಾರದಿಂದ ಪ್ರಯಾಣ ಸಂಚಾರ ಹೆಚ್ಚಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪ್ರಿನ್ಸ್ ಜ್ಯುವೆಲ್ಲರಿಯಿಂದ 'ಪ್ರಿನ್ಸೆಸ್ ಆಫ್ ಟುಡೇ' ಅಭಿಯಾನ ಆರಂಭ

ಬೆಂಗಳೂರು : ದಕ್ಷಿಣ ಭಾರತದ ಪ್ರಸಿದ್ಧ ಆಭರಣ ಮಳಿಗೆಯಾದ ಪ್ರಿನ್ಸ್ ಜ್ಯುವೆಲ್ಲರಿ ತನ್ನ ಗ್ರಾಹಕರಿಗೆ ಹೊಸ ವರ್ಷಾಚರಣೆ ಮತ್ತು ಸಂಕ್ರಾಂತಿ ಹಬ್ಬದ ಪ್ರಯುಕ್ತ ವಿಶೇಷ ಕೊಡುಗೆಗಳನ್ನು ನೀಡುತ್ತಿದೆ. ವಿಶೇಷವಾಗಿ ಮದುವೆಗೆ ಸಿದ್ಧವಾಗುತ್ತಿರುವ ಮಹಿಳೆಯರಿಗೆಂದು ನಾನಾ ವಿನ್ಯಾಸಗಳ ಕಲೆಕ್ಷನ್ ಒದಗಿಸುತ್ತಿದ್ದು, 'ಪ್ರಿನ್ಸೆಸ್ ಆಫ್ ಟುಡೇ' ಎಂಬ ವಿನೂತನ ಅಭಿಯಾನಕ್ಕೆ ಚಾಲನೆ ನೀಡಿದೆ.



ಸಂಪ್ರದಾಯ ಮತ್ತು ಆಧುನಿಕತೆಯ ಸಂಗಮ: ಈ ಬಾರಿಯ ಹಬ್ಬದ ಸಂಗ್ರಹವು ದಕ್ಷಿಣ ಭಾರತದ ದೇವಾಲಯದ ಕಲೆ ಮತ್ತು ಪರಂಪರೆಯಿಂದ ಪ್ರೇರಿತವಾಗಿದೆ. ಪ್ರತಿಯೊಂದು ಆಭರಣವೂ ಪಾರಂಪರಿಕ ಶೈಲಿಯಲ್ಲಿದ್ದರೂ, ಇಂದಿನ ಮಹಿಳೆಯರ ಅಭಿರುಚಿಗೆ ತಕ್ಕಂತೆ ಹಗುರವಾದ ಮತ್ತು ಸುಲಭವಾಗಿ ಧರಿಸಬಹುದಾದ ಸಮಕಾಲೀನ ವಿನ್ಯಾಸವನ್ನು ಹೊಂದಿದೆ. ವಿಶೇಷವಾಗಿ, ಹೊಸದಾಗಿ ಪರಿಚಯಿಸಲಾದ 'ಮುಹೂರ್ತಂ ಕಲೆಕ್ಷನ್' ಮದುವೆ ಮತ್ತು ಇತರ ಶುಭ ಸಮಾರಂಭಗಳಿಗೆ ಸೂಕ್ತವಾದ ವಿಭಿನ್ನ ವಿನ್ಯಾಸಗಳನ್ನು ಒಳಗೊಂಡಿದೆ. ಗ್ರಾಹಕರಿಗಾಗಿ ಈ ಆಕರ್ಷಕ ಹಬ್ಬದ ಕೊಡುಗೆಗಳು

ಬೆಂಗಳೂರು, ಚೆನ್ನೈ ಮತ್ತು ಕೊಯಮತ್ತೂರಿನ ಎಲ್ಲಾ ಮಳಿಗೆಗಳಲ್ಲಿ ಈ ಸೀಮಿತ ಅವಧಿಗೆ ಸಿಗಲಿವೆ.

ಏನೇನು ಕೊಡುಗೆಗಳು : ಎಲ್ಲಾ ಚಿನ್ನದ ಆಭರಣಗಳ ಖರೀದಿಯ ಮೇಲೆ ಕೇವಲ 6% ವೇಸ್ಟೇಜ್ ಮಾತ್ರ ಇರಲಿದೆ. ಜತೆಗೆ, ಬೆಳ್ಳಿಯ ಸಾಮಗ್ರಿಗಳ ಮೇಲೆ 0% ವೇಸ್ಟೇಜ್, ಪ್ರತಿ ಕ್ಯಾರೆಟ್ ವಜ್ರದ ಮೇಲೆ ₹20,000 ವರೆಗೆ ರಿಯಾಯಿತಿ ನೀಡಲಾಗುತ್ತಿದೆ. ಇದರೊಂದಿಗೆ, ಯಾವುದೇ ಜ್ಯುವೆಲ್ಲರಿಯಿಂದ ಖರೀದಿಸಿದ ಹಳೆಯ ಚಿನ್ನವನ್ನು ನೀಡಿ, ಹೊಸ ಬಿಐಎಸ್ 916 ಹಾಲ್‌ಮಾರ್ಕ್ ಆಭರಣಗಳನ್ನು ಪಡೆಯುವ ಅವಕಾಶವನ್ನು ಪ್ರಿನ್ಸ್ ಜ್ಯುವೆಲ್ಲರಿ ಒದಗಿಸುತ್ತಿದೆ.

ಏನಿದು ಪ್ರಿನ್ಸೆಸ್ ಆಫ್ ಟುಡೇ : ಪ್ರಿನ್ಸ್ ಜ್ಯುವೆಲ್ಲರಿಯಿಂದ ಆರಂಭಿಸಲಾಗಿರುವ ಈ ಅಭಿಯಾನ ಸ್ವಾಭಿಮಾನಿಗಳಾಗಿ, ತಮ್ಮದೇ ವಿಭಿನ್ನ ಅಭಿರುಚಿಯೊಂದಿಗೆ ಹೊಸತನ್ನು ಸ್ವೀಕರಿಸುವ, ಆಧುನಿಕತೆಯೊಂದಿಗೆ ಸಾಂಪ್ರದಾಯಗಳಿಗೆ ಗೌರವ ನೀಡುವ ಮಹಿಳೆಯರಿಗೆಂದು ಆರಂಭಿಸಲಾದ ಅಭಿಯಾನ. ಈ ಅಭಿಯಾನದ ಭಾಗವಾಗಿ ಮಹಿಳೆಯರಿಗೆ ಮೆಚ್ಚುಗೆಯಾಗುವ ವಿಭಿನ್ನ ಕರಕುಶಲತೆ ಹೊಂದಿದ ನಾವೀನ್ಯತೆಯ ಚಿನ್ನಾಭರಣಗಳನ್ನು ಗ್ರಾಹಕರಿಗೆ ನೀಡಲಾಗುತ್ತಿದೆ. ವಿಶೇಷವಾಗಿ ದಕ್ಷಿಣ ಭಾರತದ ದೇಗುಲಗಳ ಕರಕುಶಲ ಲೇಪನವುಳ್ಳ ಆಭರಣಗಳು, ಮದುವೆಗಳಿಗೆಂದೇ ಪ್ರತ್ಯೇಕ ಕಲೆಕ್ಷನ್ ನೀಡಲಾಗುತ್ತಿದೆ.

ಪ್ರಿನ್ಸ್ ಜ್ಯುವೆಲ್ಲರಿಯ ನಿರ್ದೇಶಕ ಜೋಸೆಫ್ ಪ್ರಿನ್ಸ್, 'ಈ ಹಬ್ಬದ ಸೀಸನ್ ನಮಗೆ ಅತ್ಯಂತ ವಿಶೇಷವಾದುದು. ನಮ್ಮ ಅತ್ಯುತ್ತಮ ಕಲೆಗಾರಿಕೆಯನ್ನು ಕೈಗೆಟುಕುವ ದರದಲ್ಲಿ ಗ್ರಾಹಕರಿಗೆ ತಲುಪಿಸುವುದು ಮತ್ತು ಇಂದಿನ ಮಹಿಳೆಯರ ಅಭಿರುಚಿಗೆ ತಕ್ಕಂತೆ ವಿಭಿನ್ನ ಶೈಲಿಯ ವಿನ್ಯಾಸಗಳನ್ನು ಒದಗಿಸುವುದು ನಮ್ಮ ಗುರಿಯಾಗಿದೆ. ಜತೆಗೆ, ಮಹಿಳೆಯ ಸಂಭ್ರಮಗಳಿಗೆ ಅತ್ಯಾಕರ್ಷಕ ಆಭರಣಗಳನ್ನು ಗ್ರಾಹಕರಿಗೆ ಒದಗಿಸಲು ಪ್ರಿನ್ಸ್ ಜ್ಯುವೆಲ್ಲರಿ ಸದಾ ಶ್ರಮಿಸುತ್ತಿದೆ' ಎಂದರು. ಕ್ರಿಸ್‌ಮಸ್‌ನಿಂದ ಸಂಕ್ರಾಂತಿಯವರೆಗೆ ನಡೆಯಲಿರುವ ಈ ಸಂಭ್ರಮದ ಮಾರಾಟವು ಗ್ರಾಹಕರಿಗೆ ನೆನಪಿನಲ್ಲಿ ಉಳಿಯುವಂತಹ ಶಾಪಿಂಗ್ ಅನುಭವವನ್ನು ನೀಡಲಿದೆ.

ಪ್ರಸ್ತುತಿ:ಪಿವಿ ಬ್ರ್ಯಾಂಡ್ ಸ್ಪಾಟ್

ಜಕಣಾಚಾರಿ ಸಂಸ್ಮರಣಾ ದಿನಾಚರಣೆಯಲ್ಲಿ ಸತೀಶ ಜಾರಕಿಹೊಳಿ ಭರವಸೆ

'ರಾಜ್ಯ ಬಜೆಟ್‌ನಲ್ಲಿ ವಿಶ್ವಕರ್ಮರಿಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಬಜೆಟ್‌ನಲ್ಲಿ ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗೆ ಪೂರಕವಾಗಿ ಹೆಚ್ಚಿನ ಅನುದಾನವನ್ನು ಒದಗಿಸಲು ಪ್ರಯತ್ನಿಸಲಾಗುವುದು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಶೋಷಿತ ವರ್ಗಗಳಿಗೆ ದನಿ ನೀಡುವ ಕೆಲಸವನ್ನು ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಈ ವರ್ಗಗಳಿಗೆ ಹಿಂದಿನ ಬಜೆಟ್‌ಗಳಲ್ಲೂ ಹೆಚ್ಚಿನ ಅನುದಾನ ನೀಡಿದ್ದು, ಅದನ್ನು ಈ ಬಾರಿಯೂ ಮುಂದುವರಿಸಲಿದೆ' ಎಂದು ಹೇಳಿದರು.

'ಕೆಲವರು ಈಗಲೂ ತಮ್ಮ ಕಸುಬಿಗೆ ಸೀಮಿತವಾಗಿದ್ದು, ಸರ್ಕಾರವೇ ಸೌಲಭ್ಯ ನೀಡಬೇಕು ಎನ್ನುವ ಮನಃಸ್ಥಿತಿ ಹೊಂದಿದ್ದಾರೆ. ಇದರಿಂದ ಎಲ್ಲಾ ಸಮುದಾಯದವರು ಹೊರ ಬರಬೇಕು. ಮಕ್ಕಳು ಉನ್ನತ ಶಿಕ್ಷಣ ಪಡೆದು ವಿವಿಧ ಹುದ್ದೆ ಪಡೆಯುವಂತೆ ಮಾಡಬೇಕು. ಉದ್ಯಮಿಗಳಾಗಿ ರೂಪುಗೊಳ್ಳಬೇಕು. ನೀವು ಬಯಸುವ ಸ್ಥಾನಕ್ಕೆ ಸುಮ್ಮನೇ ಯಾರೂ ನಿಮ್ಮನ್ನು ಕೂರಿಸುವುದಿಲ್ಲ. ಛಲದಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿನ ಉನ್ನತ ಹುದ್ದೆಗಳನ್ನು ಪಡೆಯಬೇಕು' ಎಂದು ಸಲಹೆ ನೀಡಿದರು.

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಅರೇ ಮಾದನಹಳ್ಳಿಯ ಶಿವಸುಜ್ಞಾನಮೂರ್ತಿ ಸ್ವಾಮೀಜಿ ಮಾತನಾಡಿ, 'ಜಕಣಾಚಾರಿ ಎನ್ನುವವರು ಕಾಲ್ಪನಿಕ ವ್ಯಕ್ತಿ. ಅವರು ಯಾವುದೇ ಶಿಲ್ಪ ಕೆತ್ತನೆ ಮಾಡಿಲ್ಲ ಎನ್ನುವ ಅಭಿಪ್ರಾಯ ಮೂಡಿಸುವ ಪ್ರಯತ್ನ ಹಿಂದೆ ಆಗಿತ್ತು. ಆದರೆ ಹಲವಾರು ಗ್ರಂಥ, ನಾಡಗೀತೆಯಲ್ಲೂ ಜಕಣಾಚಾರಿ ಅವರ ಸಾಧನೆಯ ಉಲ್ಲೇಖವಿದೆ. ಈ ಕಾರಣದಿಂದಲೇ ಜಕಣಾಚಾರಿ ಅವರ ಸ್ಮರಣೆ ಕಾರ್ಯಕ್ರಮ ರೂಪಿಸಲು ಕೋರಿದಾಗ ಕಾಂಗ್ರೆಸ್ ಸರ್ಕಾರ ಅನುಮತಿ ನೀಡಿತು. ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮವನ್ನೂ ಸ್ಥಾಪಿಸಿ ಪ್ರಗತಿಗೆ ಒತ್ತು ನೀಡಿದೆ' ಎಂದು ನುಡಿದರು.

'ಕರ್ನಾಟಕದಲ್ಲಿ ಯುನೆಸ್ಕೊ ಮಾನ್ಯತೆ ಪಡೆದಂತಹ ಶಿಲ್ಪಕಲೆ ರೂಪಿಸಿದ್ದು ವಿಶ್ವಕರ್ಮರು. ಸರ್ವಧರ್ಮಗಳ ಶ್ರದ್ಧಾ ಕೇಂದ್ರಗಳಿಗೆ ರೂಪವನ್ನು ನೀಡಿದ್ದಾರೆ. ಜಕಣಾಚಾರಿ ಅವರ ಹೆಸರಿನಲ್ಲಿ ಸಂಸ್ಮರಣಾ ತಾಣವನ್ನು ರೂಪಿಸಿ ಅಲ್ಲಿ ಶಿಲ್ಪಕಲೆಗಳ ವಿಶಾಲ ತರಬೇತಿ, ಪ್ರದರ್ಶನ ಹಾಗೂ ಮಾರಾಟ ಕೇಂದ್ರ ಸ್ಥಾಪಿಸಬೇಕು. ಸಮುದಾಯಕ್ಕೆ ಹೆಚ್ಚಿನ ಬಲ ತುಂಬಬೇಕು' ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಬಿ.ಶ್ರೀಕಂಠಾಚಾರ್ ಅವರು ಉಪನ್ಯಾಸ ನೀಡಿದರು.

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನದಲ್ಲಿ ಅಂಧ ಕ್ರಿಕೆಟ್ ಆಟಗಾರ್ತಿ ಕಾವ್ಯ, ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನ ಮೂರ್ತಿ, ಅರೆಮಾದನಹಳ್ಳಿ ಮಠದ ಶಿವಸುಜ್ಞಾನಮೂರ್ತಿ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ.ಮಂಜುನಾಥ್, ನಿರ್ದೇಶಕಿ ಕೆ.ಎಂ. ಗಾಯತ್ರಿ ಅವರು ಜಕಣಾಚಾರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

'ಟೆಂಡರ್‌ನಲ್ಲಿ ನೇರ ಭಾಗಿಗೆ ಅವಕಾಶ ನೀಡಿ'

'ಕಟ್ಟಡ ಕಾಮಗಾರಿಗಳ ಟೆಂಡರ್ ಪಡೆಯಲು ಗುತ್ತಿಗೆದಾರರಿಗೆ ಅವಕಾಶವಿದೆ. ವಿಶ್ವಕರ್ಮ ಸಮುದಾಯದವರು ನೇರವಾಗಿ ಭಾಗಿಯಾಗಲು ಲೋಕೋಪಯೋಗಿ ಇಲಾಖೆಯಲ್ಲಿ ಅವಕಾಶ ಮಾಡಿಕೊಡಿ. ಸಂಕಷ್ಟದಲ್ಲಿರುವ ಸಮುದಾಯದವರ ಕೈ ಹಿಡಿಯುವ ಕೆಲಸ ಸರ್ಕಾರದಿಂದಲೇ ಆಗಬೇಕು' ಎಂದು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ.ಸುಜ್ಞಾನಮೂರ್ತಿ ಮನವಿ ಮಾಡಿದರು.

ದೇವನಹಳ್ಳಿ ಸುತ್ತಮುತ್ತ ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಹೊಸ ವರ್ಷದ ಮೊದಲ ದಿನ ದೇವನಹಳ್ಳಿ ಸುತ್ತಮುತ್ತ ಹಾಗೂ ಚಿಕ್ಕಬಳ್ಳಾಪುರ ಪ್ರವಾಸಿ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದರು. ಹೀಗಾಗಿ ಪಟ್ಟಣದ ಬೈಪಾಸ್ ರಸ್ತೆ, ರಾಣಿ ಸರ್ಕಲ್ ಬಳಿ ಗುರುವಾರ ಬೆಳಿಗ್ಗೆಯಿಂದಲೇ ಭಾರಿ ವಾಹನ ದಟ್ಟಣೆ ಉಂಟಾಗಿತ್ತು.

ಎಸ್‌ಟಿಆರ್‌ಆರ್ ರಸ್ತೆ ಮೂಲಕ ಸಂಚರಿಸುತ್ತಿದ್ದ ಲಾರಿಗಳು ಮತ್ತು ಟ್ರಕ್‌ಗಳು ವಿಮಾನ ನಿಲ್ದಾಣ ರಸ್ತೆ ಹಾಗೂ ಹೈದರಾಬಾದ್ ರಸ್ತೆಗೆ ಸಂಪರ್ಕ ಸಾಧಿಸಲು ಗಂಟೆಗಳ ಕಾಲ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.

ಎನ್‌ಎಚ್–7ರಲ್ಲಿರುವ ಸಾಯಿ ಬಾಬಾ ದೇಗುಲಕ್ಕೆ ಭೇಟಿ ನೀಡಿದ ಭಕ್ತರು ಹೆದ್ದಾರಿಯಲ್ಲಿಯೇ ವಾಹನಗಳನ್ನು ನಿಲ್ಲಿಸಿದ್ದರಿಂದ ಆವತಿಯಿಂದ ಇಸ್ರೊ ಗೇಟ್‌ವರೆಗೂ ವಾಹನಗಳ ಸಾಲು ನಿಂತು ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತು. ಹಠಾತ್ ಉಂಟಾದ ವಾಹನ ದಟ್ಟಣೆಯಿಂದ ಸಾರ್ವಜನಿಕರು ತೊಂದರೆ ಅನುಭವಿಸಿದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101
ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156–295427 ಇಮೇಲ್-eemidcbpura@gmail.com

ಮರು ಟೆಂಡರ್ ಅಧಿಸೂಚನೆ

ಸಂಖ್ಯೆ:ಕಾಸಬ/ತಾಂಶಾ/ತಾಂಸ/ಮರು ಟೆಂಡರ್/2025–26 ದಿನಾಂಕ:30/12/2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 13/2025–26, ದಿನಾಂಕ: 06/11/2025. ರಲ್ಲಿ ಆಹ್ವಾನಿಸಲಾಗಿದ್ದ ಇಂಡೆಂಟ್ ಸಂಖ್ಯೆ: MI/2025-26/DA/WORK_INDENT8175 ಮತ್ತು MI/2025-26/DA/WORK_INDENT8187 ಟೆಂಡರ್‌ಗಳಲ್ಲಿ ಯಾವುದೇ ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರದೇ ಇರುವುದರಿಂದ ಮರು ಟೆಂಡರ್ ಕರೆಯಲಾಗಿರುತ್ತದೆ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 09/01/2026 ಸಂಜೆ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ: 12/01/2026 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದಲ್ಲಿ). ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)
ಸಂ:ಮು.ಪ್ರವ್ಯ(ತಾ)/ಉ.ಪ್ರವ್ಯ(ಪ್ರೊ&ಎಪಿಸಿಸಿ)/ಕಾನಿಇಂ(ಪ್ರೊ)–3/ಸ.ಕಾ.ನಿ.ಇಂ–7/2025–26/5061–075 ದಿನಾಂಕ:01–01–2026

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ/ಕಾಮಗಾರಿಗಳ ವಿವರ
ಕವಿಪ್ರನಿನಿ/2025–26/ಟಿಎಲ್/ವರ್ಕ್_ಇಂಡೆಂಟ್3102
ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ: **ಕಾಮಗಾರಿ–ಎ:**ಕೊಳ್ಳೇಗಾಲ ತಾಲ್ಲೂಕಿನ 220ಕೆವಿ ಮಧುವನಹಳ್ಳಿ ಉಪ–ಕೇಂದ್ರದಿಂದ 66ಕೆವಿ ದೊಡ್ಡಿಂದುವಾಡಿ ಉಪ–ಕೇಂದ್ರದವರೆಗೆ ಅಸ್ತಿತ್ವದಲ್ಲಿರುವ 66ಕೆವಿ 4.301 ಕಿಮೀ ಉದ್ದದ ಎಸ್‌ಸಿ ಲೈನ್ ಮತ್ತು ಎಸ್‌ಸಿ ಟವರ್‌ಗಳನ್ನು ಡಿಸಿ ಟವರ್‌ಗಳಿಂದ ಬದಲಾಯಿಸಿ ಹಾಲಿ ಕಾರಿಡಾರ್‌ನಲ್ಲಿ ಹೊಸ ಕೊಯೋಟ್ ಕಂಡಕ್ಟರ್ ಲೈನಿನ ಪುನರ್ ನಿರ್ಮಾಣದ ಕಾಮಗಾರಿ ಮತ್ತು 220ಕೆವಿ ಮಧುವನಹಳ್ಳಿ ಉಪ–ಕೇಂದ್ರ ಮತ್ತು 66ಕೆವಿ ದೊಡ್ಡಿಂದುವಾಡಿ ಉಪ–ಕೇಂದ್ರಗಳಲ್ಲಿ 2 ಸಂಖ್ಯೆಯ 66ಕೆವಿ ಟರ್ಮಿನಲ್‌ಬೇ ನಿರ್ಮಾಣದ ಕಾಮಗಾರಿ. **ಕಾಮಗಾರಿ–ಬಿ:** ಚಾಮರಾಜನಗರ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿರುವ 66ಕೆ.ವಿ. ದೇವನೂರು ನಂಜನಗೂಡು–ಪಣ್ಯದ ಹುಂಡಿ–ಚಾಮರಾಜನಗರ 22.857 ಕಿ.ಮೀ. ಉದ್ದದ ಎಸ್‌ಸಿ ಮಾರ್ಗ ಮತ್ತು ಎಸ್‌ಸಿ ಟವರ್‌ಗಳನ್ನು ಡಿಸಿ ಟವರ್‌ಗಳಿಂದ ಬದಲಾಯಿಸಿ ಹಾಲಿ ಕಾರಿಡಾರ್‌ನಲ್ಲಿ ಹೊಸ ಕೊಯೋಟ್ ಕಂಡಕ್ಟರ್ ಲೈನಿನ ಪುನರ್ ನಿರ್ಮಾಣದ ಕಾಮಗಾರಿ. **ಕಾಮಗಾರಿ–ಸಿ:** ಹನೂರು ತಾಲ್ಲೂಕಿನಲ್ಲಿ 66ಕೆವಿ ಕೊತ್ತನೂರು ಉಪ–ಕೇಂದ್ರದಿಂದ ಬಂಡಳ್ಳಿ ಉಪ–ಕೇಂದ್ರಕ್ಕೆ ರೇಡಿಯಲ್ ಜೋಡಣೆಗಾಗಿ, ಕೊತ್ತನೂರು ಮಾರ್ಗ LILO **ಬಿಂದುವಿನಿಂದ ಬಂಡಳ್ಳಿ** ಉಪಕೇಂದ್ರದವರೆಗೆ ಹಾಲಿ ಅಸ್ತಿತ್ವದಲ್ಲಿರುವ 66ಕೆವಿ ಲಿಂಕ್ ಲೈನ್ ಪುನರ್‌ನಿರ್ಮಾಣ ಮತ್ತು ಹಾಲಿ 66ಕೆವಿ **ದೊಡ್ಡಿಂದುವಾಡಿ–ಹನೂರು** ಎಸ್‌ಸಿ ಮಾರ್ಗ ಮತ್ತು ಎಸ್‌ಸಿ ಟವರ್‌ಗಳನ್ನು ಡಿಸಿಲೈನ್ ಮತ್ತು ಡಿಸಿ ಟವರ್‌ಗಳಿಂದ ಬದಲಾಯಿಸಿ ಪುನರ್ ನಿರ್ಮಾಣದ ಕಾಮಗಾರಿ. ಎಲ್ಲಾ ಉಪಕರಣಗಳ/ಸಾಮಗ್ರಿಗಳ ಸರಬರಾಜು ಮತ್ತು ಸ್ಥಾಪನೆ ಮಾಡಿ (ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು, ಕಾರ್ಯಾರಂಭಗೊಳಿಸುವುದು ಮತ್ತು ಪ್ರಸ್ತುತ ಮಾರ್ಗದಿಂದ ಕಳಚುವ ಸಾಮಗ್ರಿಗಳನ್ನು ಬಿಡ್ಡುದಾರರು ಖರೀದಿಸುವುದು (buy back of released materials from existing line). ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 02.02.2026 @ 15:00ಗಂಟೆ**

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in**ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in**ನಲ್ಲಿ ಲಾಗಿನ್ ಆಗಿ **ದಿನಾಂಕ 02.01.2026** ರಂದು ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಕವಿಪ್ರನಿನಿ, ನಿಗಮ ಕಾರ್ಯಾಲಯ,
2ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560009

ಕಾಂಡ ಕೋಶ ವಿಜ್ಞಾನ ಮತ್ತು ಪುನರುತ್ಪಾದಕ ಔಷಧಿ ಸಂಸ್ಥೆ (ಬ್ರಿಕ್–ಇನ್‌ಸ್ಟೆಮ್)
ಬ್ರಿಕ್ ಸಂಸ್ಥೆಯ ಸ್ವಾಯುತ್ತ ಸಂಶೋಧನಾ ಸಂಸ್ಥೆ, ಜೈವಿಕ ತಂತ್ರಜ್ಞಾನ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಭಾರತ ಸರ್ಕಾರ
ಜಿಕೆವಿಕೆ, ಅಂಚೆ ಪೆಟ್ಟಿಗೆ ಸಂ. 6506, ಬಳ್ಳಾರಿ ರಸ್ತೆ, ಬೆಂಗಳೂರು–560065. ಫೋನ್: 91–80–61948001
www.instem.res.in
BRIC a DBT Organization | इनस्टेम inStem

ಆರ್ಕಿಟೆಕ್ಟ್‌ಗಳಿಂದ / ಆರ್ಕಿಟೆಕ್ಚರಲ್ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಗೆ ಮನವಿ ಆಹ್ವಾನ

ಆರ್‌ಇಒಐ ನೋಟಿಸ್ ನಂ.: ಇನ್‌ಸ್ಟೆಮ್/15021/15/ಆರ್‌ಇಒಐ–01/2025–26 ದಿನಾಂಕ: 22.12.2025

ಕಾಂಡ ಕೋಶ ವಿಜ್ಞಾನ ಮತ್ತು ಪುನರುತ್ಪಾದಕ ಔಷಧಿ ಸಂಸ್ಥೆ (ಬ್ರಿಕ್–ಇನ್‌ಸ್ಟೆಮ್) ಎಂಬ ಸಂಸ್ಥೆಯು, ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಜೈವಿಕ ತಂತ್ರಜ್ಞಾನ ಇಲಾಖೆಯ ನೇತೃತ್ವದದ ಅಡಿಯಲ್ಲಿನ ಜೈವಿಕ ಸಂಶೋಧನೆ ಮತ್ತು ಆವಿಷ್ಕಾರ ಪರಿಷತ್‌ನ (ಬ್ರಿಕ್) ಒಂದು ಸ್ವಾಯುತ್ತ ಸಂಶೋಧನಾ ಸಂಸ್ಥೆ ಆಗಿರುತ್ತದೆ. ಇದೀಗ ಬ್ರಿಕ್–ಇನ್‌ಸ್ಟೆಮ್ ಸಂಸ್ಥೆಯು ಜಿಕೆವಿಕೆ, ಬಳ್ಳಾರಿ ರಸ್ತೆ, ಬೆಂಗಳೂರು–65 ವಿಳಾಸದಲ್ಲಿನ ತನ್ನ ಪ್ರಾಂಗಣದಲ್ಲಿ ಸಂಶೋಧನಾ ಕೇಂದ್ರ, ಹ್ಯೂಮನ್ ಎಂಬ್ರಿಯಾಲಜಿ ಅಪ್ಲಿಕೇಶನ್ ಮತ್ತು ಟ್ರೈನಿಂಗ್ (ಕ್ರಿಯೇಟ್) ಮತ್ತು ಟ್ರಾನ್ಸಿಟ್ ಹಾಸ್ಟೇಲ್‌ಗಾಗಿ, ಸುಮಾರು 6000 ಚ.ಮೀ. ಬಿಲ್ಟಪ್ ಪ್ರದೇಶವುಳ್ಳ ಒಂದು ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ ಪ್ರತಿಷ್ಠಿತ ಆರ್ಕಿಟೆಕ್ಟ್‌ಗಳಿಂದ/ ಆರ್ಕಿಟೆಕ್ಚರಲ್ ಸಂಸ್ಥೆಗಳಿಂದ **"ಆಸಕ್ತಿ ವ್ಯಕ್ತಪಡಿಸುವಿಕೆಗೆ (ಇಒಐ)"** ಮತ್ತು ಪೂರ್ವಾರ್ಹತಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತಿಯುಳ್ಳ ಸಂಸ್ಥೆಗಳು, **12.01.2026 ರಂದು 11:0 ಗಂಟೆಯೊಳಗೆ** ಡಿಬಿಟಿ ಇ–ವಿಜಾರ್ಡ್ ಪೋರ್ಟಲ್‌ಗೆ (https://dbt.ewizard.in/HomePage/loadSiteHomePage/iMSwyJhT59QNo3to9tpGQ) ಭೇಟಿ ನೀಡುವ ಮೂಲಕ ಆನ್‌ಲೈನ್ ವಿಧಾನದ ಮುಖಾಂತರ ತಮ್ಮ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸಲ್ಲಿಸಬಹುದು. ಮುಂದೆ ಹೊರಡಿಸಬಹುದಾದ ತಿದ್ದುಪಡಿ ಸೇರಿದಂತೆ ಹೆಚ್ಚಿನ ವಿವರಗಳಿಗಾಗಿ, ನಮೂನೆಗಳಿಗಾಗಿ, ದಯವಿಟ್ಟು ಡಿಬಿಟಿ ಇ–ವಿಜಾರ್ಡ್ ಪೋರ್ಟಲ್, ಸಿಪಿಪಿಪಿ (https://eprocure.gov.in/epublish/app) ಮತ್ತು ನಮ್ಮ www.instem.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ರಿಜಿಸ್ಟ್ರಾರ್, ಬ್ರಿಕ್–ಇನ್‌ಸ್ಟೆಮ್
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
CBC 36304/11/0003/2526

ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.195/33, 'ಶ್ರೀ ಸುಧಾ ರಜತ ಭವನ', ಆರ್.ವಿ.ರಸ್ತೆ, ಜಯನಗರ, ಬೆಂಗಳೂರು–560004
ದೂರವಾಣಿ: 26565651, ಫ್ಯಾಕ್ಸ್: 26567189, ಮೊ.: 8867701055
ಇಮೇಲ್ : generalmanager@srisudhabank.com

ಸ್ಥಿರಾಸ್ತಿ ಸ್ವಾಧೀನ ಪ್ರಕಟಣೆ (ಕಾಯ್ದೆ ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(1) ರಡಿ ಅನುಬಂಧ IV)

ಆದಾಗಿ, ಕೆಳಸಹಿದಾರರು ಶ್ರೀ ಸುಧಾ ಕೋ–ಆಪ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಈ ನೋಟೀಸ್‌ನಲ್ಲಿ ತಿಳಿಸಿರುವಂತೆ ದಿನಾಂಕ: 17–01–2025 ರಂದು ಇದ್ದಂತೆ ರೂ.1,28,33,661/– (ಒಂದು ಕೋಟಿ ಇಪ್ಪತ್ತೆಂಟು ಲಕ್ಷ ಮೂವತ್ತ ಮೂರು ಸಾವಿರ ಆರುನೂರು ಅರವತ್ತೊಂದು ರೂಪಾಯಿಗಳು ಮಾತ್ರ) ಮೊತ್ತವನ್ನು ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಸಾಲಗಾರರಾದ **ಶ್ರೀ.ಯಲ್ಲಪ್ಪ ವಿ ಬಿನ್ ವೆಂಕಟಸ್ವಾಮಿ ಹಾಗೂ ಶ್ರೀ.ಕಿರಣ್ ಯಲ್ಲಪ್ಪ ಬಿನ್ ಯಲ್ಲಪ್ಪ** ವಿ.ನಂ.25/4, 1ನೇ ಮುಖ್ಯರಸ್ತೆ, ಗ್ಯಾಲಾಕ್ಸಿ ಬಾರ್ ಹತ್ತಿರ, ಬ್ಯಾಟರಾಯನಪುರ,ಮೈಸೂರು ರಸ್ತೆ, ಬೆಂಗಳೂರು–560026 ಮತ್ತು ಜಾಮೀನುದಾರರಾದ **ಶ್ರೀ.ಹರ್ಷ ಯಲ್ಲಪ್ಪ ಬಿನ್ ಯಲ್ಲಪ್ಪ** ವಿ. ನಂ.25/4, 1ನೇ ಮುಖ್ಯರಸ್ತೆ, ಗ್ಯಾಲಾಕ್ಸಿ ಬಾರ್ ಹತ್ತಿರ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು–560026. ಇವರಿಗೆ ಕರೆ ನೀಡಿ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ, 2002ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002ರ ನಿಯಮ 3 ಓದಿಕೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ: 17–01–2025 ರಂದು ಡಿಮ್ಯಾಂಡ್ ನೋಟಿಸ್ ನೀಡಿದ್ದರೂ ಸಹ, ಸಾಲಗಾರರು/ಜಾಮೀನುದಾರು ಸಾಲದ ಬಾಕಿಯನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ/ಜಾಮೀನುದಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13 ರ ಉಪಪ್ರಕರಣ (4) ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು **ದಿನಾಂಕ: 02–01–2026** ರಂದು ಕೆಳಸಹಿದಾರರು **ಸ್ವಾಧೀನಪಡಿಸಿಕೊಂಡಿದ್ದಾರೆ**. ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ, ಯಾರೂ ಕೂಡ ಸದರಿ ಸ್ವತ್ತಿನ ಬಗ್ಗೆ ವ್ಯವಹರಿಸಬಾರದು ಹಾಗೂ ಒಂದು ವೇಳೆ ಸದರಿ "ಸ್ವತ್ತಿನ ಸಂಬಂಧ ವ್ಯವಹರಿಸಿದ್ದೇ ಆದರೆ ಅದು "ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿ, ಜಯನಗರ ಶಾಖೆ, ಬೆಂಗಳೂರು–560004". ಇದರ ಸಾಲದ ಸಂಖ್ಯೆ ಐ.ಪಿ.ಬಿ–201800000072 ಮತ್ತು ಐ.ಪಿ.ಬಿ–201800000076 ರ ಸಂಬಂಧ **ದಿನಾಂಕ: 01/01/2026** ರಂದು ಇದ್ದಂತೆ ಅಸಲು, ಬಡ್ಡಿ ಮತ್ತಿತರೆ ಬಾಬ್ತು ಬರಬೇಕಾಗಿರುವ **ರೂ.1,17,02,219/–** (ಒಂದು ಕೋಟಿ ಹದಿನೇಳು ಲಕ್ಷ ಎರಡು ಸಾವಿರ ಎರಡುನೂರ ಹತ್ತೊಂಭತ್ತು ರೂಪಾಯಿಗಳು ಮಾತ್ರ) ಜೊತೆಗೆ ಖಾತೆ ಚುಕ್ತಾ ದಿನಾಂಕದವರೆಗಿನ ಬಡ್ಡಿ ಮತ್ತಿತರೆ ಖರ್ಚುಗಳ ಬಾಬ್ತು ಪಾವತಿಗೊಳಪಡುತ್ತದೆ.

ಭದ್ರತಾ ಆಸ್ತಿಗಳನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಸಮಯದ ಸಂಬಂಧ ಕಾಯ್ದೆಯ ಪ್ರಕರಣ 13(8) ರ ಉಪಬಂಧಗಳ ಬಗ್ಗೆ ಸಾಲಗಾರರ ಗಮನ ಸೆಳೆಯಲಾಗಿದೆ.

ಸಾಲಗಾರರ ಹೆಸರು


ಶ್ರೀ.ಯಲ್ಲಪ್ಪ ವಿ

ಶ್ರೀ.ಕಿರಣ್ ಯಲ್ಲಪ್ಪ

ಜಾಮೀನುದಾರರ ಹೆಸರು


ಶ್ರೀ.ಹರ್ಷ ಯಲ್ಲಪ್ಪ

ಶ್ರೀ ಯಲ್ಲಪ್ಪ ವಿ ಬಿನ್ ವೆಂಕಟ್ಟಸ್ವಾಮಿ ರವರಿಗೆ ಸೇರಿದ ಸ್ವತ್ತಿನ ವಿವರಗಳು: ಐಟಂ–01:–ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 41ನೇ ವಾರ್ಡ್ ಗೆ ಸೇರಿದ ಬೆಂಗಳೂರು ಬ್ಯಾಟರಾಯನಪುರ, 1ನೇ ಮುಖ್ಯರಸ್ತೆಯಲ್ಲಿರುವ 25ನೇ ಸಂಖ್ಯೆ (ಮಾಜಿ ಸಂಖ್ಯೆ 36)ರ ಪಿ.ಐ.ಡಿ 41–51–25ನೇ ಸಂಖ್ಯೆ ಸ್ಥಿರಾಸ್ತಿ ಗೆ ಚೆಕ್ಕುಬಂದಿ: ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ–25, ಪಶ್ಚಿಮಕ್ಕೆ; ವಿ ಯಲ್ಲಪ್ಪ ರವರಿಗೆ ಸೇರಿದ ಇದೇ ಸ್ವತ್ತಿನ ಪೈಕಿ ದಕ್ಷಿಣ ಭಾಗದ ಸ್ವತ್ತು, ಉತ್ತರಕ್ಕೆ; ಸ್ವತ್ತಿನ ಸಂಖ್ಯೆ–24 ಮತ್ತು 26, ದಕ್ಷಿಣಕ್ಕೆ:ರಸ್ತೆ ಈ ಮಧ್ಯೆಯಿರುವ, ಪೂರ್ವ ಪಶ್ಚಿಮ 25 ಅಡಿಗಳು, ಉತ್ತರ–ದಕ್ಷಿಣ : 50 ಅಡಿಗಳು ಒಟ್ಟು 1250 ಚದರ ಅಡಿಗಳ ನಿವೇಶನ.

ಐಟಂ–02:– ಬೃಹತ್ ಬೆಂಗಳೂರು ಮಹನಗರ ಪಾಲಿಕೆ 41ನೇ ವಾರ್ಡ್ ಗೆ ಸೇರಿದ ಬೆಂಗಳೂರು ಬ್ಯಾಟರಾಯನಪುರ, 1ನೇ ಮುಖ್ಯರಸ್ತೆಯಲ್ಲಿರುವ 25/4ನೇ ಸಂಖ್ಯೆ,ಪಿ.ಐ.ಡಿ 41–44–25/4ನೇ ಸಂಖ್ಯೆ ಸ್ಥಿರಾಸ್ತಿ ಗೆ ಚೆಕ್ಕುಬಂದಿ:– ಪೂರ್ವಕ್ಕೆ: ಇದೇ ಸ್ವತ್ತಿನ ಪೈಕಿ ಬೆಟ್ಟೇಗೌಡರ ಪತ್ನಿ ನಿರ್ಮಲರವರಿಗೆ ಸೇರಿದ ಸ್ವತ್ತು, ಪಶ್ಚಿಮಕ್ಕೆ:ಇದೇ ಸ್ವತ್ತಿನ ಪೈಕಿ ವಿ.ಯಲ್ಲಪ್ಪರವರಿಗೆ ಸೇರಿದ ಉತ್ತರ ಭಾಗದ ಸ್ವತ್ತು,ಉತ್ತರಕ್ಕೆ: ಸ್ವತ್ತಿನ ಸಂಖ್ಯೆ–24, ದಕ್ಷಿಣಕ್ಕೆ: ರಸ್ತೆ, ಈ ಮಧ್ಯೆಯಿರುವ, ಪೂರ್ವ ಪಶ್ಚಿಮ:15 ಅಡಿಗಳು, ಉತ್ತರ–ದಕ್ಷಿಣ : 50 ಅಡಿಗಳು ಒಟ್ಟು 750 ಚದರ ಅಡಿಗಳ ನಿವೇಶನ ಐಟಂ ನಂ.1 ಮತ್ತು 2ರ ನಿವೇಶನದ ಒಟ್ಟು 2000 ಚದರ ಅಡಿಗಳುಳ್ಳ ನಿವೇಶನ ಮತ್ತು ಚಕ್ಕುಬಂದಿಗೊಳ್ಳಪಟ್ಟ ನಿವೇಶನವನ್ನೊಳಗೊಂಡು ಸದರಿ ನಿವೇಶನದಲ್ಲಿ ನಿರ್ಮಿಸಿರುವ ಪೂರ್ಣಕಟ್ಟಡವನ್ನೊಳಗೊಂಡ ಸ್ವತ್ತು.

ಸ್ಥಳ: ಬೆಂಗಳೂರು
ದಿನಾಂಕ: 02/01/2026
ಸಹಿ/–
ಅಧಿಕೃತ ಅಧಿಕಾರಿ/ಪ್ರಧಾನ ವ್ಯವಸ್ಥಾಪಕರು
ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು–560004

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUSINESS
Business to Business
Others

V3 AGRITECH
Survey No 181/1, Behind Anjanadri Convention Hall, Tavarekere, Magadi Main Road, Bangalore - 562130.

V3 AGRITECH, we are delighted to inform that we are importing and introducing to the Farmers, 100% Water Soluble Mixtures of Fertilizers grade as per the specifications mentioned below,
1. V3 GROW SMART – NPK - 19:19:19, Total Nitrogen (N) – 19%, Total Phosphates (P2O5) – 19% and Total Potassium (K2O) – 19%
IN THE ABOVE GRADE, (a) Moisture per cent by weight, max 1.5% (b) Total Chloride (as Cl) per cent by weight, max – 0.5%, (c) Matter insoluble in water per cent by weight., max- 0.5% (d) Lead (as Pb) per cent by weight, max 0.003% (e) Cadmium (as Cd) per cent by weight, max 0.0025 (f) Arsenic (as As) per cent by weight, max 0.01%.
In Pursuance to the S. O order No. 2900(E), dated 24th October 2015, As per Fertilizer Control Order- FCO, issued and supersession of the notification of the Government of India in the Ministry of Agriculture and Farmers Welfare (Department of Agriculture, Cooperation and Farmers Welfare), Govt. of India.
Email Id: v3agritech@gmail.com, Phone No.: +91 9606452165, 7795902575

REAL ESTATE SELLING
Sites
Electronic City

KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan
Call : 70260 13388

Commercial Building
Nagarabhavi

NAGARABAVI BDA COMPLEX opposite COMMERCIAL 50x80 4-FLOOR BUILDING SALE with SELLAR,suitable for HOSPITAL,SHOWROOM, others.Contact: 9845059407

PUBLIC NOTICE

PUBLIC NOTICE
This Is to Inform the general public that our client Mr.NAGENDRA R, S/o late Rangamallaiah, residing at No. 213 2, Ganesha Sawmill road, Near Maheshwari Temple, T Dasarahalli, Bangalore North, Bangalore-560057, has misplaced the original Sale Deed document **No.BLN-1-31953-2004-05, BOOK NO.1, Stored in CD No.BLND73, Registered Date-27-10-2004** registered before the Senior Sub registrar, Bangalore North taluk, Bangalore, and Notarized GPA Dated-26-07-1990 In respect of the residential property bearing No.02 Eastern portion, situated at Assessment No.56/3,khata no.56/3 of Dasarahalli village, Yeshwathpura Hobli, Bangalore North Taluk.
In this regard he has already filed a complaint before the KSP Portal (E-lost) on 29/12/2025. Report No.1981937/2025. If anyone has come Into possession of the said documents, the same may informed or handed over to him at the address stated above or to the undersigned.
MAHESHA P K Advocate,
No.F-11, B-11, 14th Cross,
Near Peenya Sug-registrar office,
4th Phase, Peenya,
Bangalore-560058.
M: +91 9448308750.

PERSONAL
Change of Name

CHANGE OF NAME
We, **Anil Kumar Maurya** and **Prity Verma,** residing # E/279 201, Maithri Residency, 11th Main Residency, 11th Main, 5th Cross, Malleshapalya, New Thippasandra Post, Bengaluru-560075, have changed our minor Son's name from **Pranav Avtar Maurya** to **PRANAV MAURYA** vide affidavit dated 01-12-2025 before notary S. Subashini, Bengaluru

I, SMT. Lini Dhas Shajin, D/o. Christudhas, aged about 38 years R/at 93, 4th A Cross, 1st Floor, Aicobo nagar, Near UCO Bank, BTM 1st Stage, BTM Layout, Bangalore South, Tavarekere, Bengaluru- 560029 have changed my name from LINIDHAS CHRISTUDHAS ELIZABETH to LINI DHAS SHAJIN vide affidavit dated 31/12/2025 before Notary Sivakumara M.N Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE
This is to inform the general public that my client **M/s Kammavari Sangham** (Regd.) agreed to purchase the below mentioned schedule properties from Mrs. A.SHARADAMBA W/o. Dr.B.N. Venkatachalapathi setty, Aged about 73 years, residing at No.1902/26, 2nd A Main Road, Yediyur, 6th Block, Jayanagar, Bangalore - 560069, who claims to be the absolute owner having a marketable and subsisting title. If any person/s having any claim, right, title or interest whatsoever over the schedule properties and objections for the sale, if any., the same may be forwarded to the undersigned in writing with supporting documents within **7 days** from the date of publication of this notice, failing which it will be deemed that there are no claims, right, title or interest by anybody whomsoever and there are "NO OBJECTIONS" for completion of the sale transaction and my client will proceed with the execution and registration of the absolute sale deed.
SCHEDULE: All the piece and parcel of **BDA site bearing No.1094 (Corporation No.1094/33) present BBMP A Khatha No.33-1094, situated at 8th Cross, Now Known as new 9th Main, Ashoknagar, Banashankari 1st stage, II Block, Bangalore 560050, old BBMP PID No.53-133-33, present BBMP IPID NO. 8192867530, BBMP ward No.164, Vidya Peeta, site measuring EAST TO WEST : 40 (forty) ft, and NORTH TO SOUTH : 97'+95/2 feet together with 5 (five) squares old R.C.C. Building standing thereon,** and bounded on: **EAST BY :** Site No.1095, **WEST BY :** Site No.1093, **NORTH BY :** Road, **SOUTH BY :** Site No.1133 and 1132.
M. SUDHAKAR, Advocate
No.37, 1st Floor, Opp.Kamala Nehru Vidhaya Mandir Southend Road,
Basavangudi, BANGALORE - 560 004.
Phone No. 26771177, Mobile-9886063456.

26 ಕಿ.ಮೀ ‘ಫುಟ್‌ಪಾತ್ ನಡಿಗೆ’

ಬೆಳಿಗ್ಗೆ 7ರಿಂದ ಸಂಜೆ 6.30ರವರೆಗೆ ನಡಿಗೆ
9ರಿಂದ 76 ವರ್ಷದವರೆಗಿನ ಜನ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷದ ಮೊದಲ ದಿನದಂದು ನಗರದಲ್ಲಿ ಪಾದಚಾರಿಗಳ ಸುರಕ್ಷತೆ, ಅವರು ನಡೆದು ಹೋಗಬಹುದಾದ ಮಹತ್ವವನ್ನು ಒತ್ತಿ ಹೇಳುವ ಉದ್ದೇಶದಿಂದ, ವಿಶ್ವದ ಅತಿ ಉದ್ದದ 26 ಕಿ.ಮೀ ಸಮೂಹ ಪಾದಚಾರಿ ‘ಫುಟ್‌ಪಾತ್ ನಡಿಗೆ’ ನಡೆಯಿತು.

ಗುರುವಾರ ಬೆಳಿಗ್ಗೆ 7 ಗಂಟೆಗೆ ಆರಂಭವಾದ ‘ಫುಟ್‌ಪಾತ್ ನಡಿಗೆ’ಯಲ್ಲಿ ಒಂಬತ್ತು ವರ್ಷದಿಂದ 76 ವರ್ಷ ವಯಸ್ಸಿನ 300ಕ್ಕೂ ಹೆಚ್ಚು ನಾಗರಿಕರು/ಪಾದಚಾರಿಗಳು ಭಾಗವಹಿಸಿದ್ದರು. ನಿಗದಿತ ಮಾರ್ಗದಲ್ಲಿ ಸಂಪೂರ್ಣವಾಗಿ ಫುಟ್‌ಪಾತ್‌ಗಳಲ್ಲೇ ನಡೆದು, ಸಂಜೆ 6.30ರವರೆಗೆ 165 ಮಂದಿ 26 ಕಿ.ಮೀ ದೂರವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು.

ಆರ್.ವಿ. ರಸ್ತೆ, ಜಯನಗರ, ಸಿದ್ದಾಪುರ, ಲಾಲ್‌ಬಾಗ್, ಕೆ.ಎಚ್. ರಸ್ತೆ, ಕೆ-100 ಮಾರ್ಗ, ಹೊಸೂರು ರಸ್ತೆ, ರಿಚ್ಮಂಡ್ ರಸ್ತೆ, ಕಬ್ಬನ್ ಪಾರ್ಕ್, ವಿಧಾನ ಸೌಧ, ಕಬ್ಬನ್ ರಸ್ತೆ, ಹಲಸೂರು ಕೆರೆ, ಕಂಟೋನ್ಮೆಂಟ್, ಜಯಮಹಲ್, ಮೇಖ್ರಿ ವೃತ್ತ ಹಾಗೂ ಯಶವಂತಪುರ ಪ್ರದೇಶಗಳಲ್ಲಿ ನಡಿಗೆ ನಡೆಯಿತು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹಾಗೂ ದಕ್ಷಿಣ, ಪಶ್ಚಿಮ ಮತ್ತು ಉತ್ತರ ನಗರ ಪಾಲಿಕೆಗಳ ಆಯುಕ್ತರು ಪಾಲ್ಗೊಂಡಿದ್ದರು.

ವಾಕಲೂರು ಯೋಜನೆಯ ಸಮನ್ವಯಕಾರರಾದ ಅರುಣ್ ಪೈ ಅವರ ನೇತೃತ್ವದಲ್ಲಿ ನಡಿಗೆ ಕಾರ್ಯಕ್ರಮ ನಡೆಯಿತು ಎಂದು ಜಿಬಿಎ ಪ್ರಕಟಣೆ ತಿಳಿಸಿದೆ.

‘ಫುಟ್‌ಪಾತ್ ನಡಿಗೆ’ ಕಾರ್ಯಕ್ರಮದಲ್ಲಿ ಶಾಲಿನಿ ರಜನೀಶ್ ಮಾತನಾಡಿದರು

ಪಿ.ಜಿ: ಸುರಕ್ಷತಾ ನಿಯಮ ಅನುಸರಣೆ ಕಡ್ಡಾಯ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಸರ್ವಿಸ್ ಅಪಾರ್ಟ್‌ಮೆಂಟ್, ಹಾಸ್ಟಲ್ ಮತ್ತು ಪಿ.ಜಿಗಳಲ್ಲಿ ಸುರಕ್ಷತಾ ನಿಯಮಗಳನ್ನು ನಿಗದಿತ ಅವಧಿಯೊಳಗೆ ಪರಿಶೀಲಿಸಿ, ಅಗತ್ಯ ತಿದ್ದುಪಡಿ ಕೈಗೊಳ್ಳಬೇಕು ಎಂದು ಆಯುಕ್ತ ಡಿ.ಎಸ್.ರಮೇಶ್ ತಿಳಿಸಿದರು.

ಸಂಸ್ಥೆಗಳ ಮಾಲೀಕರು/ ನಿರ್ವಾಹಕರು/ ವ್ಯವಸ್ಥಾಪಕರಿಗೆ ಈ ಬಗ್ಗೆ ನೋಟಿಸ್ ಜಾರಿ ಮಾಡಲಾಗಿದ್ದು, ನಗರ ಪಾಲಿಕೆಯ ವತಿಯಿಂದ ಸೂಚಿಸಲಾಗಿರುವ ಹಾಗೂ ಜಾರಿಯಲ್ಲಿರುವ ಎಲ್ಲ ನಿಯಮಗಳನ್ನೂ ಕಡ್ಡಾಯವಾಗಿ ಅನುಸರಣೆ ಮಾಡಬೇಕು ಎಂದು ಸೂಚಿಸಲಾಗಿದೆ ಎಂದರು.

ಇತ್ತೀಚೆಗೆ ಸಂಭವಿಸಿರುವ ಅನಿಲ ಸ್ಫೋಟ ಹಾಗೂ ಅಗ್ನಿ ಅವಘಡಗಳಂತಹ ದುರಂತಗಳು ಪುನರಾವರ್ತನೆಯಾಗದಂತೆ ತಡೆಯುವುದು ಮತ್ತು ಸಾರ್ವಜನಿಕರ ಜೀವ ಹಾಗೂ ಆಸ್ತಿ ಸುರಕ್ಷತೆಯನ್ನು ಖಚಿತಪಡಿಸುವುದು ಈ ಕ್ರಮದ ಮುಖ್ಯ ಉದ್ದೇಶ ಎಂದು ಹೇಳಿದರು.

ಎಲ್.ಪಿ.ಜಿ./ಅನಿಲ ಸಂಪರ್ಕಗಳ ಸುರಕ್ಷಿತ ಹಾಗೂ ಅಧಿಕೃತ ಬಳಕೆ, ಅಕ್ರಮ ಹಾಗೂ ಅಸುರಕ್ಷಿತ ಅನಿಲ ಸಿಲಿಂಡರ್‌ಗಳ ಸಂಪೂರ್ಣ ನಿಷೇಧ, ಸರಿಯಾದ ಗಾಳಿ ಮತ್ತು ಅಗ್ನಿ ಸುರಕ್ಷತಾ ಕ್ರಮ, ವಿದ್ಯುತ್ ಸುರಕ್ಷತೆ ಹಾಗೂ ಓವರ್‌ಲೋಡ್ ತಪ್ಪಿಸುವ ಕ್ರಮ, ಮಾನ್ಯ ಹಾಗೂ ಅಸ್ತಿತ್ವದಲ್ಲಿರುವ ವ್ಯಾಪಾರ ಪರವಾನಗಿ ಮತ್ತು ಅಗತ್ಯ ನೋಂದಣಿಯನ್ನು ಹೊಂದಿರಬೇಕು.

ಮುಂದಿನ ದಿನಗಳಲ್ಲಿ ನಗರ ಪಾಲಿಕೆ ವತಿಯಿಂದ ವಿಶೇಷ ತಪಾಸಣಾ ಅಭಿಯಾನ ಕೈಗೊಳ್ಳಲಾಗುವುದು. ಸುರಕ್ಷತಾ ನಿಯಮಗಳನ್ನು ಪಾಲಿಸಲು ವಿಫಲವಾದವರ ಆಸ್ತಿಗಳನ್ನು ಜಪ್ತಿ ಮಾಡಿ, ವ್ಯಾಪಾರ ಪರವಾನಗಿಯನ್ನು ರದ್ದುಪಡಿಸಲಾಗುವುದು ಎಂದು ತಿಳಿಸಿದರು.

ಬೈಕ್‌ಗಳಿಗೆ ಕಾರು ಡಿಕ್ಕಿ: ಇಬ್ಬರ ಸಾವು

ಮಾಗಡಿ/ನೆಲಮಂಗಲ: ತಾಲ್ಲೂಕಿನ ಸೋಲೂರು ಹೋಬಳಿ ಲಕ್ಕೇನಹಳ್ಳಿಯಲ್ಲಿ ಗುರುವಾರ ಕಾರೊಂದು ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆದ ಪರಿಣಾಮ, ಒಬ್ಬ ಬೈಕ್ ಸವಾರ ಹಾಗೂ ಮತ್ತೊಂದು ಬೈಕ್‌ನ ಹಿಂಬದಿ ಕುಳಿತಿದ್ದ ಮಹಿಳೆ ಮೃತಪಟ್ಟಿದ್ದಾರೆ.

ತಾಲ್ಲೂಕಿನ ತೊರಿಮುಡಲು ಪಾಳ್ಯ ಅಶ್ವಿನಿ (26) ಮತ್ತು ನೆಲಮಂಗಲ ನಿವಾಸಿ ಶ್ರೇಯಸ್ (28) ಮೃತರು. ಘಟನೆಯಲ್ಲಿ ಮಹಿಳೆ ಪತಿ ರಮೇಶ್ ಹಾಗೂ ಒಂದು ವರ್ಷದ ಪುತ್ರ ಯುವಾನ್ ಗಂಭೀರವಾಗಿ ಗಾಯಗೊಂಡಿದ್ದು, ನೆಲಮಂಗಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಲಕ್ಕೇನಹಳ್ಳಿ ಬಳಿ ಕುಣಿಗಲ್ ಕಡೆಯಿಂದ ಮೂವರು ಯುವಕರಿದ್ದ ಕಾರು ವೇಗವಾಗಿ ಬಂದು, ವಿಭಜಕದ ಮೇಲೆ ಹತ್ತಿ, ಪಲ್ಟಿಯಾಗಿ ಪಕ್ಕದ ರಸ್ತೆಯಲ್ಲಿ ಹೋಗುತ್ತಿದ್ದ ಎರಡು ಬೈಕ್‌ಗಳಿಗೆ ಗುದ್ದಿದೆ. ಅಶ್ವಿನಿ ಅವರು ಸ್ಥಳದಲ್ಲೇ ಮೃತಪಟ್ಟರೆ, ಶ್ರೇಯಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

‘ಸರ್ಕಾರಿ ಸೇವೆ ವಿಳಂಬ: ಅಪರಾಧಕ್ಕೆ ಸಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದ ಸೇವೆಗಳನ್ನು ಜನರಿಗೆ ಯಾವುದೇ ವಿಳಂಬ ಮಾಡದೆ ತಲುಪಿಸುವ ಜೊತೆಗೆ, ಜಾತ್ಯತೀತವಾಗಿ, ಮಾನವೀಯ ನೆಲೆಯಲ್ಲಿ ಸ್ಪಂದಿಸುವ ಕೆಲಸ ಮಾಡಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಹೊಸ ವರ್ಷದ ಪ್ರಯುಕ್ತ ಸರ್ಕಾರದ ಎಲ್ಲ ಹಿರಿಯ ಅಧಿಕಾರಿಗಳಿಗೆ ಶುಭಾಶಯ ಕೋರಿ ಮಾತನಾಡಿದ ಅವರು, ‘ಸಂವಿಧಾನದಲ್ಲಿ ಇರುವಂತೆ ಎಲ್ಲರಿಗೂ ಸಮಾನ ಅವಕಾಶ, ಅಧಿಕಾರ ವಿಕೇಂದ್ರೀಕರಣಗಳನ್ನು ಸಾಧಿಸುವುದು ನಮ್ಮ ಹೊಣೆಗಾರಿಕೆ’ ಎಂದರು.

‘ಸಮ ಸಮಾಜ ನಿರ್ಮಿಸುವ ಗುರಿಯನ್ನು ಸರ್ಕಾರ ಹೊಂದಿದ್ದು, ಎಲ್ಲರಿಗೂ ನ್ಯಾಯ ಒದಗಿಸುವುದು ಅವಶ್ಯ. ಅಧಿಕಾರಿಗಳು 30-40 ವರ್ಷಗಳು ಅಧಿಕಾರದಲ್ಲಿದ್ದರೆ, ನಾವು ಐದು ವರ್ಷ ಅಧಿಕಾರದಲ್ಲಿರುತ್ತೇವೆ. ಜನರಿಗೆ ಅವಶ್ಯವಿರುವ ಸರ್ಕಾರದ ಸೇವೆಗಳನ್ನು ಒದಗಿಸುವಲ್ಲಿ ವಿಳಂಬ ನೀತಿ ಅನುಸರಿಸುವುದೂ ಅಪರಾಧವೇ’ ಎಂದರು.

‘ರೈತರ ಹಾಗೂ ಜನರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ಸಾಮಾಜಿಕ ನ್ಯಾಯದಿಂದ ವಂಚಿತರಾದವರಿಗೆ ನ್ಯಾಯ ಒದಗಿಸಲು ಶ್ರಮಿಸಬೇಕು’ ಎಂದರು.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಕಷ್ಟಸುಖಗಳಿಗೆ ಸ್ಪಂದಿಸಲು ಹೆಚ್ಚಿನ ಆದ್ಯತೆ ನೀಡಬೇಕು’ ಎಂದೂ ಸಲಹೆ ನೀಡಿದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಪೊಲೀಸ್ ಮಹಾ ನಿರ್ದೇಶಕ ಎಂ.ಎ. ಸಲೀಂ ಇದ್ದರು.

ವಿಂಗಡಿಸದಿದ್ದರೆ ಮನೆಯಿಂದ ತ್ಯಾಜ್ಯ ಸಂಗ್ರಹವಿಲ್ಲ

ಮಿಶ್ರ ಕಸ ತೆಗೆದುಕೊಂಡರೆ ಗುತ್ತಿಗೆದಾರರಿಗೂ ದಂಡ; ಖಾಲಿ ನಿವೇಶನದ ಸ್ವಚ್ಛತೆ ಜವಾಬ್ದಾರಿ

• ಆರ್. ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿರುವ ಮನೆಗಳಿಂದ ವಿಂಗಡಿಸಿರುವ ತ್ಯಾಜ್ಯವನ್ನು ಮಾತ್ರ ಸಂಗ್ರಹಿಸಬೇಕು ಎಂಬ ಷರತ್ತು ವಿಧಿಸಿದ್ದು, ಮಿಶ್ರ ಕಸ ಪಡೆದುಕೊಂಡರೆ ಗುತ್ತಿಗೆದಾರರಿಗೆ ದಂಡ ವಿಧಿಸುವ ಜೊತೆಗೆ ಪ್ರಕರಣ ದಾಖಲಿಸಲು ನಿರ್ಧರಿಸಲಾಗಿದೆ.

ಜಿಬಿಎ ವ್ಯಾಪ್ತಿಯಲ್ಲಿರುವ 28 ವಿಧಾನಸಭೆ ಕ್ಷೇತ್ರಗಳಲ್ಲಿ, ಪ್ರಾಥಮಿಕ ತ್ಯಾಜ್ಯ ಸಂಗ್ರಹ, ಎರಡನೇ ಹಂತದ ತ್ಯಾಜ್ಯ ವರ್ಗಾವಣೆ, ರಸ್ತೆ ಗುಡಿಸಿದ ಕಸ ಸಂಗ್ರಹಿಸಲು, ₹544.91 ಕೋಟಿ ವೆಚ್ಚದಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದಿಂದ (ಬಿಎಸ್‌ಡಬ್ಲ್ಯುಎಂಎಲ್) 33 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲಾಗಿದ್ದು, ಅದರ ಅಂತಿಮ ಪ್ರಕ್ರಿಯೆ ನಡೆಯುತ್ತಿದೆ. ಈ ಪದ್ಧತಿಯಲ್ಲಿ ಗುತ್ತಿಗೆ ನೀಡಿದರೆ, ಸೇವಾದಾರರಿಗೆ (ಗುತ್ತಿಗೆದಾರರು) ಹೆಚ್ಚಿನ ಜವಾಬ್ದಾರಿ ವಹಿಸಲಾಗಿದೆ.

ಗುತ್ತಿಗೆದಾರರು ಮನೆಗಳ ಬಾಗಿಲಿನಿಂದ ತ್ಯಾಜ್ಯ ಸಂಗ್ರಹವನ್ನು ಬೆಳಿಗ್ಗೆ 6.30ರೊಳಗೆ ಆರಂಭಿಸಬೇಕು. ಒಣ, ಹಸಿ ತ್ಯಾಜ್ಯವನ್ನು ಪ್ರತ್ಯೇಕವಾಗಿಯೇ ಮನೆಗಳಿಂದ ಪಡೆಯಬೇಕು. ಮಿಶ್ರವಾಗಿ ನೀಡುವ ಮನೆಯಿಂದ ಕಸ ತೆಗೆದುಕೊಳ್ಳದೆ, ಡಿಜಿಟಲ್ ರೂಪದಲ್ಲಿ ಚಿತ್ರ ಹಾಗೂ ವಿಡಿಯೊ ದಾಖಲೆಯೊಂದಿಗೆ ಅವರ ಬಗ್ಗೆ ಬಿಎಸ್‌ಡಬ್ಲ್ಯುಎಂಎಲ್‌ನ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಮಿಶ್ರ ತ್ಯಾಜ್ಯವನ್ನು ಪಡೆದುಕೊಂಡಿದ್ದೇ ಆದಲ್ಲಿ ಗುತ್ತಿಗೆದಾರರ ಮೇಲೆ ಕ್ರಿಮಿನಲ್ ಪ್ರಕರಣವನ್ನೂ ದಾಖಲಿಸಲಾಗುತ್ತದೆ.

ಸಣ್ಣ ಪ್ರಮಾಣದ ವಾಣಿಜ್ಯ ಸಂಕೀರ್ಣಗಳಿಂದ ಬೆಳಿಗ್ಗೆ 10ರಿಂದ 1 ಗಂಟೆಯೊಳಗೆ ತ್ಯಾಜ್ಯ ಸಂಗ್ರಹವನ್ನು ಆರಂಭಿಸಬೇಕು. ಒಣ ಹಾಗೂ ಹಸಿ ಕಸವನ್ನು ಪ್ರತ್ಯೇಕವಾಗಿಯೇ ಸಂಗ್ರಹಿಸಿ, ಅದನ್ನು ಎರಡನೇ ಹಂತದ ತ್ಯಾಜ್ಯ ವರ್ಗಾವಣೆ ಘಟಕಗಳಿಗೆ ತಲುಪಿಸಬೇಕು. ಸ್ಯಾನಿಟರಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಅಥವಾ ಕಾಗದದ ಕವರ್‌ಗಳಲ್ಲಿ ಚಿಹ್ನೆಯೊಂದಿಗೆ ಸಂಗ್ರಹಿಸಿ ಸಾಗಣೆ ಮಾಡಬೇಕು ಎಂಬ ಷರತ್ತು ವಿಧಿಸಲಾಗಿದೆ.

ಡಿಫಾಲ್ಟ್: ಗುತ್ತಿಗೆ ಪಡೆಯುವ ಸಂದರ್ಭದಲ್ಲಿ ವಿಧಿಸಲಾಗಿರುವ ಷರತ್ತುಗಳನ್ನು ಗುತ್ತಿಗೆದಾರರು ಪಾಲಿಸದಿದ್ದರೆ, ಅವರಿಗೆ ಹೆಚ್ಚಿನ ದಂಡ ವಿಧಿಸುವ ಷರತ್ತು ವಿಧಿಸಲಾಗಿದೆ. 90 ದಿನದ ನಂತರವೂ ಅವರು ಷರತ್ತುಗಳನ್ನು ಪೂರೈಸದಿದ್ದರೆ ಅವರನ್ನು 'ಡಿಫಾಲ್ಟ್' ಮಾಡಿ ಗುತ್ತಿಗೆ ರದ್ದುಪಡಿಸುವ ಅಧಿಕಾರವನ್ನು ಬಿಎಸ್‌ಡಬ್ಲ್ಯುಎಂಎಲ್ ಹೊಂದಿರುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಮನೆಗಳಿಂದ ತ್ಯಾಜ್ಯ ಸಂಗ್ರಹಿಸುತ್ತಿಲ್ಲ ಎಂದು ಪ್ರತಿ ದಿನ 10ಕ್ಕಿಂತ ಕಡಿಮೆ ದೂರು ಬಂದರೆ ದಂಡ ಇರುವುದಿಲ್ಲ. ದಿನಕ್ಕೆ 10ರಿಂದ 500 ದೂರುಗಳು ಬಂದರೆ ಪ್ರತಿ ದೂರಿಗೆ ₹100ರಂತೆ ಗುತ್ತಿಗೆದಾರರಿಗೆ ದಂಡ. ದಿನಕ್ಕೆ 500ಕ್ಕೂ ಹೆಚ್ಚು ದೂರುಗಳು ಮೂರು ತಿಂಗಳು ಸತತವಾಗಿ ಬಂದರೆ, ಪ್ರತಿ ದೂರಿಗೆ ₹100 ದಂಡ ಹಾಗೂ ಗುತ್ತಿಗೆದಾರರನ್ನು ಡಿಫಾಲ್ಟ್ ಮಾಡಲಾಗುತ್ತದೆ ಎಂದರು.

ಶೇ 20ರಷ್ಟು ಕಡಿತ

ಇಎಸ್‌ಐ, ಪಿಎಫ್, ವೇತನ ಪಾವತಿಸಿದ ದಾಖಲೆಗಳನ್ನು ಒದಗಿಸಿದ ನಂತರವಷ್ಟೇ ಪ್ಯಾಕೇಜ್ ಪಡೆಯುವ ಗುತ್ತಿಗೆದಾರರ ಒಟ್ಟಾರೆ ಸೇವಾ ಶುಲ್ಕದಲ್ಲಿ ಶೇ 80ರಷ್ಟನ್ನು ಮಾತ್ರ ಗುತ್ತಿಗೆದಾರರಿಗೆ ಪ್ರತಿ ತಿಂಗಳು ಪಾವತಿ ಮಾಡಲಾಗುತ್ತದೆ. ಶೇ 20ರಷ್ಟು ಬಾಕಿ ಉಳಿಸಿಕೊಂಡು, ಅದನ್ನು 'ಪೆನಾಲ್ಟಿ' ಸಂದರ್ಭದಲ್ಲಿ ಕಡಿತ ಮಾಡಿಕೊಳ್ಳಲು ಬಿಎಸ್‌ಡಬ್ಲ್ಯುಎಂಎಲ್ ನಿರ್ಧರಿಸಿದೆ.

ಆರು ಸಾವಿರ ಪೌರ ಕಾರ್ಮಿಕರಿಗೆ ಭವಿಷ್ಯ ನಿಧಿ ಪಾವತಿಸದೆ 'ಡಿಫಾಲ್ಟ್' ಆಗಿರುವ ಗುತ್ತಿಗೆದಾರರು ಈ ಹೊಸ ಪ್ಯಾಕೇಜ್‌ನಲ್ಲಿ ಬಂದಿದ್ದರೆ, ಅವರಿಂದ ಬಾಕಿ ವಸೂಲಿ ಮಾಡಬೇಕೇ ಅಥವಾ ಹೊಸ ಗುತ್ತಿಗೆ ನೀಡುವುದೇ ಬೇಡವೇ ಎಂಬ ಬಗ್ಗೆ ಯೋಚಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಯಾವುದಕ್ಕೆ ಎಷ್ಟು ದಂಡ?

ದಂಡ	ದಾಖಲೆ ಕೊರತೆ	ಹೇಗೆ
₹5,000	ಡಿಜಿಟಲ್ ಹಾಜರಾತಿ	ಗುತ್ತಿಗೆ ಪಡೆದು ಒಂದು ತಿಂಗಳ ನಂತರ ನಿಗದಿಪಡಿಸಿದ್ದಕ್ಕಿಂತ ಶೇ 90ರಷ್ಟು ಮಾತ್ರ ಸಿಬ್ಬಂದಿ ಹೊಂದಿದ್ದರೆ ಪ್ರತಿ ತಿಂಗಳು ಪ್ರತಿ ವ್ಯಕ್ತಿಗೆ ದಂಡ
₹500		ಶೇ 80ರಿಂದ 90ರಷ್ಟು ಸಿಬ್ಬಂದಿ ಇದ್ದರೆ, ವೇತನ ಕಡಿತದ ಜೊತೆಗೆ ಪ್ರತಿ ವ್ಯಕ್ತಿಗೆ ಮೊದಲ 30 ದಿನಕ್ಕೆ ದಂಡ. ನಂತರ 30 ದಿನಕ್ಕೆ ₹1000, 60 ದಿನದ ನಂತರ ₹5000 ಹಾಗೂ 90 ದಿನದ ನಂತರ ಗುತ್ತಿಗೆದಾರರು ಡಿಫಾಲ್ಟ್
₹5,000		ಶೇ 80ಕ್ಕಿಂತ ಕಡಿಮೆ ಸಿಬ್ಬಂದಿ ಇದ್ದರೆ, ವೇತನ ಕಡಿತದ ಜೊತೆಗೆ ಪ್ರತಿ ವ್ಯಕ್ತಿಗೆ ಪ್ರತಿ ದಿನಕ್ಕೆ 30 ದಿನಗಳವರೆಗೆ ₹5,000 ದಂಡ. 30 ದಿನದ ನಂತರ ಡಿಫಾಲ್ಟ್
ಶೇ 1ರಷ್ಟು ಸೇವಾ ಶುಲ್ಕ	ಪ್ಯಾಕೇಜ್ ಪ್ರದೇಶದಲ್ಲಿ ಶೇ 100ರಷ್ಟು ಮನೆಗಳಿಂದ ತ್ಯಾಜ್ಯ ಸಂಗ್ರಹಿಸದಿದ್ದರೆ	ಪ್ರತಿ ದಿನ
ಶೇ 0.05 ಸೇವಾ ಶುಲ್ಕ	ತ್ಯಾಜ್ಯ ವಿಂಗಡಿಸಿ ನೀಡದವರ ಮಾಹಿತಿ ಒದಗಿಸದಿದ್ದರೆ	ಒಂದು ತಿಂಗಳಿಗೆ ಗುತ್ತಿಗೆದಾರರಿಗೆ ನೀಡುವ ಮೊತ್ತಕ್ಕೆ ಪ್ರತಿದಿನ ದಂಡ
₹5,000	ಮಾರುಕಟ್ಟೆ, ಸಾರ್ವಜನಿಕ ಉದ್ಯಾನಗಳಿಂದ ಹಸಿರು ತ್ಯಾಜ್ಯ, ಮನೆಗಳಿಂದ ಸಿಆ್ಯಂಡ್‌ಡಿ ತ್ಯಾಜ್ಯ ಸಂಗ್ರಹಿಸದಿದ್ದರೆ	ಪ್ರತಿಯೊಂದು ಪ್ರಕರಣಕ್ಕೆ ದಂಡ
₹250	ಪ್ರಾಣಿಗಳ ಮೃತದೇಹ ವಿಲೇವಾರಿ ಮಾಡದಿದ್ದರೆ	ವರದಿಯಾದ ನಾಲ್ಕು ಗಂಟೆಗಳಲ್ಲಿ ಪ್ರಾಣಿ ದೇಹ ವಿಲೇವಾರಿಯಾಗದ ಪ್ರತಿ ಪ್ರಕರಣಕ್ಕೆ ದಂಡ
₹50,000	ಅನಧಿಕೃತ ಸ್ಥಳದಲ್ಲಿ ತ್ಯಾಜ್ಯ ಸುರಿಯುವುದು ಅಥವಾ ಬೆಂಕಿ ಹಚ್ಚುವುದಕ್ಕೆ	ದಂಡದ ಜೊತೆಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ
₹1,000	ತ್ಯಾಜ್ಯ ಸಾಗಣೆಯಲ್ಲಿ ಕಸ ಅಥವಾ ದ್ರವತ್ಯಾಜ್ಯ ಸೋರಿಕೆಯಾದರೆ	ಪ್ರತಿ ದಿನ ಪ್ರತಿ ಪ್ರಕರಣಕ್ಕೆ ದಂಡ

ಗುತ್ತಿಗೆದಾರರಿಗೆ ಷರತ್ತುಗಳು

- ರಸ್ತೆ, ಪಾದಚಾರಿ ಮಾರ್ಗ, ಮೇಲ್ಸೇತುವೆ ಹಾಗೂ ಕೆಳಸೇತುವೆಗಳಲ್ಲಿ ಸಂಗ್ರಹವಾದ ತ್ಯಾಜ್ಯದ ವಿಲೇವಾರಿ ಕಾರ್ಯವನ್ನು ಬೆಳಿಗ್ಗೆ 11 ಗಂಟೆಯಿಂದಲೇ ಗುತ್ತಿಗೆದಾರರು ಆರಂಭಿಸಿ, ಮಧ್ಯಾಹ್ನ 2ರ ವೇಳೆಗೆ ಮುಗಿಸಬೇಕು
- ಮಧ್ಯಾಹ್ನ 2.30ರಿಂದ ರಾತ್ರಿ 10 ಗಂಟೆಯವರೆಗೆ ಹಾಗೂ ಅಗತ್ಯವಿರುವ ಕಡೆ ಸಂಜೆ 6.30ರಿಂದ ಮಧ್ಯರಾತ್ರಿ 2.30ರವರೆಗೆ ರಸ್ತೆಗಳನ್ನು ಗುಡಿಸಬೇಕು
- ಆಟದ ಮೈದಾನ, ಸ್ಮಶಾನ, ಉದ್ಯಾನ, ಸಾರ್ವಜನಿಕ ಶೌಚಾಲಯಗಳಲ್ಲಿನ ಕಸ, ಸ್ಯಾನಿಟರಿ ತ್ಯಾಜ್ಯ, ಹಸಿರು ತ್ಯಾಜ್ಯ, ಮಿಶ್ರ ತ್ಯಾಜ್ಯವನ್ನು ಮಧ್ಯಾಹ್ನದೊಳಗೆ ವಿಲೇವಾರಿ ಮಾಡಬೇಕು
- ರಸ್ತೆಗಳಲ್ಲಿ ಇರಿಸಲಾಗಿರುವ ತ್ಯಾಜ್ಯದ ಬುಟ್ಟಿಗಳು ಹಾಗೂ ಹೊಸದಾಗಿ ಅಳವಡಿಸಲಾಗುವ 'ಲಿಟರ್ ಬಿನ್'ಗಳಲ್ಲಿನ ಕಸ ಹೊರ ಬೀಳದಂತೆ ನಿರ್ವಹಣೆ ಮಾಡಬೇಕು
- ಸಾರ್ವಜನಿಕರಿಂದ ಬರುವ ದೂರುಗಳನ್ನು ಗುತ್ತಿಗೆದಾರರಿಗೆ ವರ್ಗಾಯಿಸಿದ ಮೇಲೆ, ಅದನ್ನು ಪರಿಹರಿಸಿದ ಬಗ್ಗೆ ಡಿಜಿಟಲ್ ದಾಖಲೆಗಳೊಂದಿಗೆ ಮಾಹಿತಿ ಒದಗಿಸಬೇಕು
- ಮನೆಯೊಂದರಿಂದ 300 ಕೆ.ಜಿಗಿಂತ ಕಡಿಮೆ ಇರುವ ಕಟ್ಟಡ ತ್ಯಾಜ್ಯವನ್ನು (ಸಿಆ್ಯಂಡ್‌ಡಿ) ಗುತ್ತಿಗೆದಾರರು ಸಂಗ್ರಹಿಸಿ, ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡಬೇಕು
- ಉದ್ಯಮದಲ್ಲಿ ನಿಗದಿಯಾಗಿರುವ ಕನಿಷ್ಠ ವೇತನವನ್ನು ಸಿಬ್ಬಂದಿಯ ಬ್ಯಾಂಕ್ ಖಾತೆಗೆ ನೇರವಾಗಿ ಗುತ್ತಿಗೆದಾರರು ಪಾವತಿಸಬೇಕು. ಭವಿಷ್ಯ ನಿಧಿ (ಪಿಎಫ್) ಮತ್ತು ಇಎಸ್‌ಐ ಆಯಾ ತಿಂಗಳ 5ರೊಳಗೆ ಪಾವತಿಸಬೇಕು
- ಸಿಬ್ಬಂದಿಯ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಸೇರಿದಂತೆ ಅಗತ್ಯ ದಾಖಲೆಗಳನ್ನು ಗುತ್ತಿಗೆದಾರರು ಪಡೆದು, ಅವರಿಗೆ ಗುರುತಿನ ಚೀಟಿಯನ್ನು ನೀಡಬೇಕು. ಹಾಜರಾತಿಯನ್ನು ಬಯೊಮೆಟ್ರಿಕ್‌ನಲ್ಲಿ ಹೊಂದಿರಬೇಕು. ಅವರಿಗೆ ಎಲ್ಲ ರೀತಿಯ ರಕ್ಷಣಾ ಕವಚ, ಸಮವಸ್ತ್ರಗಳನ್ನು ವಿಮೆಯೊಂದಿಗೆ ಒದಗಿಸಬೇಕು

ಸುದ್ದಿ 2 ನಿಮಿಷ

ವಿಂಜೋ ಸಂಸ್ಥೆ ಹಣ ವಹಿವಾಟಿಗೆ ಜಾರಿ ನಿರ್ದೇಶನಾಲಯ ತಡೆ

ಬೆಂಗಳೂರು: ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ವಿಂಜೋ ಆನ್‌ಲೈನ್ ಗೇಮಿಂಗ್ ಸಂಸ್ಥೆಯ ಕಚೇರಿ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿ ವಿವಿಧ ಬ್ಯಾಂಕ್‌ಗಳ ಖಾತೆಗಳಲ್ಲಿ ₹192 ಕೋಟಿ ಇರುವುದನ್ನು ಪತ್ತೆ ಹಚ್ಚಿದ್ದಾರೆ. ಈ ಹಣದ ವಹಿವಾಟು ಅನ್ನು ಸ್ಥಗಿತಗೊಳಿಸಿ, ಮುಂದಿನ ತನಿಖೆ ಆರಂಭಿಸಿದ್ದಾರೆ.

ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ಇತ್ತೀಚೆಗೆ ದಾಳಿ ನಡೆಸಿದ್ದರು. ವಿಂಜೋ ಕಂಪನಿಗೆ ಸಂಬಂಧಿಸಿದ ಲೆಕ್ಕಪತ್ರ ವಿಭಾಗದ ಕಚೇರಿಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದರು. ಈ ವೇಳೆ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುವುದು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುವುದು ಪತ್ತೆಯಾಗಿತ್ತು. ಆ ವಹಿವಾಟುಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಇ.ಡಿ. ತಿಳಿಸಿದೆ.

ನವೆಂಬರ್ 18ರಂದು ವಿಂಜೋ ಕಚೇರಿ ಹಾಗೂ ನಿರ್ದೇಶಕರ ನಿವಾಸಗಳ ಮೇಲೆ ಇ.ಡಿ. ಶೋಧ ನಡೆಸಿದ ವೇಳೆ ನಿಯಮಬಾಹಿರ ಚಟುವಟಿಕೆ ಹಾಗೂ ಹಣಕಾಸಿನ ವ್ಯವಹಾರದಲ್ಲಿ ತೊಡಗಿರುವ ಬಗ್ಗೆ ಮಹತ್ವದ ದಾಖಲೆಗಳು ದೊರೆತ್ತಿದ್ದವು. ಆನ್‌ಲೈನ್ ಗೇಮ್, ವಿಂಜೋ ಆ್ಯಪ್‌ನಲ್ಲಿ ರಿಯಲ್ ಮನಿ ಗೇಮ್ಸ್ ಆಟವಾಡುತ್ತಿದ್ದ ಗ್ರಾಹಕರು, ಕಂಪನಿ ಕಡೆಯಿಂದ ವ್ಯಕ್ತಿಗಳು ಆಟವಾಡುತ್ತಿದ್ದಾರೆ ಎಂದು ಸುಳ್ಳು ಹೇಳಿತ್ತು. ವಾಸ್ತವವಾಗಿ ಎ.ಐ, ಅಲ್ಗಾರಿದಮ್ ಮತ್ತು ಸಾಫ್ಟ್‌ವೇರ್‌ಗಳ ಮೂಲಕ ಆಟವಾಡಿಸಲಾಗುತ್ತಿತ್ತು ಎಂಬುದನ್ನು ಇ.ಡಿ ಅಧಿಕಾರಿಗಳು ಬಹಿರಂಗ ಪಡಿಸಿದ್ದರು. ಇದು ಅಕ್ರಮ ಎಂದು ತನಿಖಾ ಸಂಸ್ಥೆ ತಿಳಿಸಿದೆ.

ವಿಂಜೋ ಕಂಪನಿ ಮೇಲೆ ನಡೆದ ದಾಳಿ ವೇಳೆ 2024ರ ಮೇನಿಂದ 2025ರ ಆಗಸ್ಟ್‌ವರೆಗೆ ಸುಮಾರು ₹177 ಕೋಟಿ, 2022ರ ಏಪ್ರಿಲ್‌ನಿಂದ 2023ರ ಡಿಸೆಂಬರ್‌ವರೆಗೆ ₹557 ಕೋಟಿ, ಅಲ್ಲದೆ, ಕೇಂದ್ರ ಸರ್ಕಾರ ರಿಯಲ್ ಮನಿ ಗೇಮ್ಸ್ ಮೇಲೆ ನಿಷೇಧ ವಿಧಿಸಿದ ಬಳಿಕವೂ, ವಿಂಜೋ ಕಂಪನಿ ಬಳಕೆದಾರ ಗ್ರಾಹಕರ ₹43 ಕೋಟಿ ಮೊತ್ತದ ಹಣವನ್ನು ವಾಪಸ್ ನೀಡದಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ವಿಂಜೋ ಸುಮಾರು ₹802 ಕೋಟಿ ಮೌಲ್ಯದ ಆದಾಯ ಹೊಂದಿದ್ದು, ವಿದೇಶಗಳಿಗೆ ಹಣ ವರ್ಗಾವಣೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ.

ಆರು ರಸ್ತೆಗಳಲ್ಲಿ 9 ಟನ್ ತ್ಯಾಜ್ಯ

ಬೆಂಗಳೂರು: ಹೊಸ ವರ್ಷಾಚರಣೆ ಸಂದರ್ಭದಲ್ಲಿ ನಗರದ ಪ್ರಮುಖ ಆರು ರಸ್ತೆಗಳಲ್ಲಿ ಸಂಗ್ರಹವಾಗಿದ್ದ ಒಂಬತ್ತು ಟನ್ ಕಸವನ್ನು ಐದು ಗಂಟೆಗಳಲ್ಲಿ ನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದ್ದಾರೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಸೆಂಟ್‌ಮಾರ್ಕ್ಸ್ ರಸ್ತೆ, ಇಂದಿರಾನಗರ, ರೆಸಿಡೆನ್ಸಿ ರಸ್ತೆಗಳಲ್ಲಿ ಶುಕ್ರವಾರ ಮುಂಜಾನೆ 3ರಿಂದ ಬೆಳಿಗ್ಗೆ 8 ಗಂಟೆಯವರೆಗೆ ಸ್ವಚ್ಛತಾ ಕಾರ್ಯ ನಿರ್ವಹಿಸಲಾಗಿದೆ ಎಂದು ನಗರ ಪಾಲಿಕೆಯ ಹೆಚ್ಚುವರಿ ಅಭಿವೃದ್ಧಿ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದರು.

ಮದ್ಯದ ಬಾಟಲ್, ಚಪ್ಪಲಿ, ಶೂ, ಬಟ್ಟೆಗಳು, ಊಟ, ತಿಂಡಿ, ತಿನಿಸುಗಳ ಪ್ಲೇಟ್, ಪ್ಲಾಸ್ಟಿಕ್ ತ್ಯಾಜ್ಯ, ಸಿಗರೇಟ್ ಇನ್ನಿತರೆ ತ್ಯಾಜ್ಯ ಸೇರಿ ಸುಮಾರು ಒಂಬತ್ತು ಟನ್ ಕಸವನ್ನು ತೆರವುಗೊಳಿಸಲಾಗಿದೆ. ರಾತ್ರಿ ಸಮಯದಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸಿದ ಪೌರ ಕಾರ್ಮಿಕರು, ಸ್ವಚ್ಛತಾ ಸಿಬ್ಬಂದಿ, ಆಟೊ ಟಿಪ್ಪರ್ ಚಾಲಕರ ಕಾರ್ಯ ಶ್ಲಾಘನಾರ್ಹ ಎಂದರು.

110 ಪೌರ ಕಾರ್ಮಿಕರು, ಮೂವರು ಕಿರಿಯ ಆರೋಗ್ಯ ಪರಿವೀಕ್ಷಕರು, 10 ಆಟೊ ಟಿಪ್ಪರ್, ಮೂರು ಪ್ರೆಷರ್ ಜೆಟ್ ವಾಟರ್ ಕ್ಲೀನಿಂಗ್ ಯಂತ್ರಗಳನ್ನು ಸ್ವಚ್ಛತಾ ಕಾರ್ಯದಲ್ಲಿ ಬಳಸಲಾಗಿದೆ ಎಂದು ಹೇಳಿದರು.

ಕೋಗಿಲು: ಇದೇ 5ಕ್ಕೆ ಬಿಜೆಪಿ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಗಿಲು ಬಡಾವಣೆಯಲ್ಲಿ ಅಕ್ರಮ ಮನೆಗಳ ತೆರವು ಪ್ರಕರಣದಲ್ಲಿ ವಿದೇಶಿ ವಲಸಿಗರಿಗೆ ಮನೆ ಹಂಚಿಕೆ ಮಾಡಿದರೆ ನ್ಯಾಯಾಲಯದ ಮೆಟ್ಟಿಲು ಹತ್ತುತ್ತೇವೆ. ಅಲ್ಲದೇ, ಸರ್ಕಾರದ ವಿರುದ್ಧ ಇದೇ 5ರಂದು ಬೃಹತ್ ಪ್ರತಿಭಟನೆ ನಡೆಸುತ್ತೇವೆ' ಎಂದು ಬಿಜೆಪಿಯ ಸತ್ಯ ಶೋಧನಾ ತಂಡದ ಅಧ್ಯಕ್ಷರೂ ಆದ ಶಾಸಕ ಎಸ್.ಆರ್. ವಿಶ್ವನಾಥ್ ತಿಳಿಸಿದರು.

ಈ ಪ್ರಕರಣದ ಅಧ್ಯಯನಕ್ಕಾಗಿ ರಚಿಸಲಾದ ತಂಡದ ಮೊದಲ ಸಭೆ ಗುರುವಾರ ನಡೆಯಿತು. ಆ ಬಳಿಕ ವಿಶ್ವನಾಥ್ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಬಡಾವಣೆಯಲ್ಲಿನ ಸರ್ವೆ ನಂಬರ್‌ಗಳು, ಯಾವ ರಾಜ್ಯ ಮತ್ತು ಯಾವ ದೇಶದವರು ವಾಸ ಇದ್ದಾರೆ ಎಂಬ ಮಾಹಿತಿಯನ್ನು ಸಂಗ್ರಹಿಸುತ್ತೇವೆ. ಒಂದು ವಾರದಲ್ಲಿ ಪಕ್ಷದ ಅಧ್ಯಕ್ಷರಿಗೆ ವರದಿ ಕೊಡುತ್ತೇವೆ. ಯಾರಿಗೇ ಆಗಲಿ, ಮನೆ ಕೆಡವಿದ ವಾರದಲ್ಲೇ ತರಾತುರಿಯಲ್ಲಿ ಮನೆ ವಿತರಿಸಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

'ಬೈಯಪ್ಪನಹಳ್ಳಿಯಲ್ಲಿ 14 ಮಹಡಿಗಳ ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿ ನಡೆದಿದೆ. ಆನ್‌ಲೈನ್‌ನಲ್ಲಿ ಶೇ 50ರಷ್ಟು ಮನೆಗಳ ಮಂಜೂರಾತಿ ನಡೆದಿದೆ. ಶಾಸಕರ ವಿವೇಚನೆಗೆ ಮೀಸಲಾದ ಶೇ 50ರಷ್ಟು ಮನೆಗಳ ಹಂಚಿಕೆ ನಡೆದಿಲ್ಲ. ಮನೆಗಾಗಿ ಆರು ವರ್ಷಗಳಿಂದ ಕಾಯುತ್ತಿರುವವರಿಗೇ ಇನ್ನೂ ಕೊಟ್ಟಿಲ್ಲ' ಎಂದರು.

ಒಂದು ಮನೆಗೆ ಒಬ್ಬ ಫಲಾನುಭವಿ ₹10.5 ಲಕ್ಷ ಪಾತಿಸಬೇಕು. ಆತ ಬ್ಯಾಂಕ್ ಸಾಲ ಅಥವಾ ಸ್ವಂತ ಹಣ ಪಾವತಿಸಬೇಕು. ಆದರೆ, ಮನೆ ಕಳೆದುಕೊಂಡವರಿಗೆ ಜಿಬಿಎಯಿಂದ ₹5 ಲಕ್ಷ , ಅಲ್ಪಸಂಖ್ಯಾತ ಇಲಾಖೆಯಿಂದ ₹2.50 ಲಕ್ಷ ನೀಡಲಾಗುತ್ತದೆ. ಫಲಾನುಭವಿ ₹2.50 ಲಕ್ಷ ಮಾತ್ರ ಪಾವತಿಸಿದರೆ ಸಾಕು ಎಂದು ಸರ್ಕಾರ ಹೇಳಿದೆ. ಬೆಂಗಳೂರು ಸುತ್ತ 45 ಸಾವಿರ ಮನೆಗಳು ನಿರ್ಮಾಣ ಆಗುತ್ತಿವೆ. ಇವರಿಗೂ ಇದೇ ಮಾನದಂಡ ಅನ್ವಯ ಆಗುತ್ತದೆಯಾ? ಇವರಿಗೂ ಅದೇ ರೀತಿ ರಿಯಾಯಿತಿ ನೀಡಬೇಕು ಎಂದು ಒತ್ತಾಯಿಸಿದರು.

ಸತ್ಯ ಶೋಧನಾ ತಂಡದ ಸದಸ್ಯರೂ ಆಗಿರುವ ವಿಧಾನಪರಿಷತ್ ಸದಸ್ಯ ಕೆ.ಎಸ್.ನವೀನ್, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ ರಾವ್ ಮತ್ತು ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್ ಹರೀಶ್ ಸಭೆಯಲ್ಲಿ ಭಾಗವಹಿಸಿದ್ದರು.

'ಎಲ್ಲರಿಗೂ ಒಂದೇ ಮಾನದಂಡ ಇರಲಿ'

ಇವರಿಗೆ ತಕ್ಷಣದಲ್ಲೇ ಏಕೆ ಪುನರ್ವಸತಿ ಮಾಡಬೇಕು? ಮನೆ ಇಲ್ಲದವರು ಸಾಕಷ್ಟು ಜನ ಇದ್ದಾರೆ. ಕೋಗಿಲು ಸಂತ್ರಸ್ತರು ಮಾತ್ರ ₹2.50 ಲಕ್ಷ ಕಟ್ಟಬೇಕು ಎಂದು ನಿರ್ಣಯ ಮಾಡುವ ಬದಲಿಗೆ, ಎಲ್ಲರಿಗೂ ಒಂದೇ ಕಾನೂನು ಮಾಡಿ

ಎಸ್.ಟಿ. ಸೋಮಶೇಖರ್, ಬಿಜೆಪಿ ಉಚ್ಚಾಟಿತ ಶಾಸಕ

'ವೋಟ್ ಬ್ಯಾಂಕ್ ಪೋಷಣೆ'

ರಾಜ್ಯ ಸರ್ಕಾರ ವೋಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದೆ. ಕೋಗಿಲು ಬಡಾವಣೆಯಲ್ಲಿ 15–20 ವರ್ಷಗಳಿಂದ ಜನ ವಾಸ ಇದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ, ಎಷ್ಟು ಜನ ಅಲ್ಲಿ ಎಷ್ಟು ವರ್ಷಗಳಿಂದ ವಾಸವಿದ್ದಾರೆ? ವಲಸಿಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಕಾಂಗ್ರೆಸ್ ಓಲೈಕೆಗೆ ಮುಂದಾಗಿದೆ

ಎಸ್.ಸುರೇಶ್ ಕುಮಾರ್, ಬಿಜೆಪಿ ಶಾಸಕ

ಹೇಳಿಕೆ ಸಮರ್ಥಿಸಿಕೊಂಡ ಪಿಣರಾಯಿ

ತಿರುವನಂತಪುರ (ಪಿಟಿಐ): 'ಮನೆಗಳನ್ನು ಧ್ವಂಸಗೊಳಿಸಿದ ಸಂದರ್ಭದಲ್ಲಿ ಪ್ರತಿಕ್ರಿಯೆಗಳನ್ನು ನೀಡುವಾಗ ರಾಜ್ಯದ ಗಡಿಗಳಿಗಷ್ಟೇ ಸೀಮಿತಗೊಳಿಸುವುದಿಲ್ಲ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ಪಿಣರಾಯಿ ವಿಜಯನ್

'ಶಿವಗಿರಿಯ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸಿದ ಸಂದರ್ಭದಲ್ಲಿ ಅವರ ಮುಂದೆ ನಿಮ್ಮ ಕಳವಳವನ್ನು ವ್ಯಕ್ತಪಡಿಸಿದ್ದೀರಾ' ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, 'ಕಾರ್ಯಕ್ರಮಕ್ಕೆ ಕಾಂಗ್ರೆಸ್ ನಾಯಕರು (ಸಿದ್ದರಾಮಯ್ಯ) ತಡವಾಗಿ ಬಂದರು. ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸುವ ಉದ್ದೇಶದಿಂದ ಅನುಮತಿ ಪಡೆದುಕೊಂಡು ಅಲ್ಲಿಂದ ತೆರಳಿದೆನು' ಎಂದು ಹೇಳಿದ್ದಾರೆ.

'ಸಚಿವ ಸಂಪುಟ ಸಭೆಗೂ ಮುನ್ನ ನಟ ಮೋಹನ್ ಲಾಲ್ ತಾಯಿ ನಿಧನರಾಗಿದ್ದರಿಂದ ಅಲ್ಲಿಗೆ ತೆರಳಿ ಸಂತಾಪ ಸಲ್ಲಿಸಿದ್ದೆನು, ಸಭೆಯ ಬಳಿಕ ಕಣ್ಣೂರಿನಲ್ಲಿ ಮೃತಪಟ್ಟ ಪಕ್ಷದ ನಾಯಕರಿಗೆ ಸಂತಾಪ ಸಲ್ಲಿಸಲು ಅಲ್ಲಿಗೆ ತೆರಳಿದ್ದೆನು' ಎಂದು ತಿಳಿಸಿದ್ದಾರೆ.

'ಮನೆಗಳ ಧ್ವಂಸದ ವಿಚಾರದಲ್ಲಿ ಮಧ್ಯಪ್ರವೇಶಿಸಬೇಡಿ' ಎಂಬ ಕರ್ನಾಟಕ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಮನೆಗಳ ಧ್ವಂಸ ಹಾಗೂ ಅಲ್ಪಸಂಖ್ಯಾತರ ಹಕ್ಕುಗಳ ವಿಚಾರ ಬಂದಾಗ ನಾವು ನಮ್ಮ ಪ್ರತಿಕ್ರಿಯೆಗಳನ್ನು ಯಾವುದೇ ಗಡಿಗಳಿಗೆ ಸೀಮಿತಗೊಳಿಸುವುದಿಲ್ಲ. ನಾವು ಇಂತಹ ವಿಷಯಗಳಿಗೆ ಕಠಿಣವಾಗಿ ಪ್ರತಿಕ್ರಿಯಿಸಿದ್ದೇವೆ. ಪ್ಯಾಲೆಸ್ಟೀನಿನ ಗಾಜಾ ಸೇರಿದಂತೆ ಬೇರೆ ದೇಶಗಳಲ್ಲಿ ನಡೆದ ವೇಳೆ ಕೂಡ ಇದೇ ರೀತಿಯಾಗಿ ನಮ್ಮ ನಿಲುವು ತಿಳಿಸಿದ್ದೇವೆ' ಎಂದು ಸಮರ್ಥಿಸಿಕೊಂಡಿದ್ದಾರೆ.

ಹೊಸ ವರುಷದ ಹರುಷ

ಪ್ರಜಾವಾಣಿ ಚಿತ್ರ: ರಂಜು ಪಿ.

ಹೊಸ ವರ್ಷದ ಮೊದಲ ದಿನವಾದ ಗುರುವಾರ ಗಿರಿನಗರದಲ್ಲಿರುವ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸಾವಿರಾರು ಭಕ್ತರು ಭೇಟಿ ನೀಡಿ, ದೇವರ ದರ್ಶನ ಪಡೆದರು

ಹೊಸ ವರ್ಷಾಚರಣೆ: ಪಬ್‌ನಲ್ಲಿ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬುಧವಾರ ರಾತ್ರಿ ಹೊಸ ವರ್ಷಾಚರಣೆ ಸಂಭ್ರಮದ ವೇಳೆ ಸಣ್ಣಪುಟ್ಟ ಗಲಾಟೆ, ಪೊಲೀಸರ ಜತೆಗೆ ವಾಗ್ವಾದ, ಅಲ್ಲಲ್ಲಿ ತಳ್ಳಾಟದಂತಹ ಘಟನೆಗಳು ನಡೆದಿವೆ.

ಸ್ಥಳದಲ್ಲಿದ್ದ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಿ, ಯುವಕರ ಗುಂಪು ಚದುರಿಸಿದರು. ಸಣ್ಣಪುಟ್ಟ ಅವಾಂತರ ಹೊರತುಪಡಿಸಿ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ ಎಂದು ಪೊಲೀಸರು ಹೇಳಿದರು.

ಚರ್ಚ್‌ಸ್ಟ್ರೀಟ್‌ನ ಪಬ್‌ವೊಂದರಲ್ಲಿ ಮಹಿಳಾ ಸಿಬ್ಬಂದಿ ಜೊತೆಗೆ ಯುವಕರು ಗಲಾಟೆ ಮಾಡಿದ್ದರು. ಮದ್ಯ ಸೇವಿಸಿ ಬಂದಿದ್ದ ಯುವಕರು, ಅನುಚಿತ ವರ್ತನೆ ತೋರಿದ್ದರು. ಪಬ್‌ನ ಇತರೆ ಸಿಬ್ಬಂದಿ, ಯುವಕರನ್ನು ಹೊರಕ್ಕೆ ಕಳುಹಿಸಿದರು.

ಮಹಾತ್ಮಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಹಾಗೂ ಕೋರಮಂಗಲದಲ್ಲಿ ಸಣ್ಣಪುಟ್ಟ ಗಲಾಟೆಗಳು ನಡೆದಿವೆ. ಹಲಸೂರು ಗೇಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದೆ. ಕ್ಯಾಬ್ ಚಾಲಕನ ಶರ್ಟ್ ಬಿಚ್ಚಿಸಿ ಹಲ್ಲೆ ನಡೆಸಲಾಗಿತ್ತು.

ಸಂಭ್ರಮದ ವೇಳೆ ಮದ್ಯದ ಅಮಲಿನಲ್ಲಿ ತೂರಾಡುತ್ತಿದ್ದ ಯುವಕರು, ಯುವತಿಯರನ್ನು ಪೊಲೀಸರೇ ಕ್ಯಾಬ್ ಮತ್ತು ಆಟೊಗಳ ಬಳಿ ಕರೆದೊಯ್ದು ಮನೆಗೆ ಕಳುಹಿಸಿದ್ದು ಕಂಡುಬಂತು.

ಎಲ್ಲೆಲ್ಲಿ ಏನಾಯಿತು...?

- ಎಂ.ಜಿ. ರಸ್ತೆಯಲ್ಲಿ ಯುವತಿಯ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಯುವಕನ ಮೇಲೆ ಹಲ್ಲೆ ನಡೆಸಲಾಗಿತ್ತು. ಸಂಭ್ರಮ ಮುಗಿಸಿ ಮನೆಗೆ ತೆರಳುವಾಗ ಯುವತಿಯನ್ನು ಕೆಲವು ಯುವಕರು ರೇಗಿಸಿದ್ದರು. ಅದನ್ನು ಪ್ರಶ್ನಿಸಿದ ಯುವತಿಯ ಸ್ನೇಹಿತನ ಮೇಲೆ ಹಲ್ಲೆ ನಡೆಸಿದ್ದರು. ಮಾಹಿತಿ ಬಂದ ಕೂಡಲೇ ಗಾಯಾಳು ಯುವಕನಿಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ ಪೊಲೀಸರು, ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು.
- ಒಪೇರಾ ಜಂಕ್ಷನ್ ಬಳಿ ಬಂದಿದ್ದ ವ್ಯಕ್ತಿಯೊಬ್ಬ ಮದ್ಯದ ಅಮಲಿನಲ್ಲಿ ಪೊಲೀಸರಿಗೆ ನಿಂದನೆ ಮಾಡಿದ್ದ. ಮದ್ಯಪಾನ ಮಾಡಿ ಕಿರಿಕಿರಿ ಉಂಟು ಮಾಡುತ್ತಿದ್ದ ವ್ಯಕ್ತಿಗೆ ಪೊಲೀಸರು ಕಪಾಳಮೋಕ್ಷ ಮಾಡಿ ಬುದ್ಧಿ ಹೇಳಿ ಕಳುಹಿಸಿದ್ದರು.
- ಮಲ್ಲತ್ತಹಳ್ಳಿಯ ರೆಸ್ಟೋರೆಂಟ್‌ವೊಂದರಲ್ಲಿ ಮದ್ಯದ ಮತ್ತಿನಲ್ಲಿ ಕೆಲವು ಯುವಕರ ನಡುವೆ ಗಲಾಟೆ ನಡೆದಿದೆ. ಈ ವೇಳೆ ಮಧ್ಯ ಪ್ರವೇಶಿಸಿದ ಬೌನ್ಸರ್‌ಗಳು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದರು.
- ನಾಗರಬಾವಿಯ ಪಬ್‌ವೊಂದರ ಮುಂದೆ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿತ್ತು.

ಭೂಮಿ ನೀಡಲು ನೈಸ್ ತಕರಾರು: ಅವರಿಗೆ ಪಾಠ ಕಲಿಸುತ್ತೇವೆ: ಡಿ.ಕೆ. ಶಿವಕುಮಾರ್

ಬಿಡಿಎ ಜಾಗದಲ್ಲೇ ಸ್ಕೈಡೆಕ್: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ ಜಾಗದಲ್ಲೇ ಸ್ಕೈಡೆಕ್ ನಿರ್ಮಾಣ ಮಾಡಲಾಗುತ್ತದೆ. ವಿಮಾನ ಹಾರಾಟಕ್ಕೆ ಗೋಪುರದ ಸಮಸ್ಯೆ ಇರದಂತೆ ಸ್ಥಳವನ್ನು ಗುರುತಿಸಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಚಲ್ಲಘಟ್ಟ, ಭೀಮನಕುಪ್ಪೆಯಲ್ಲಿ ಬಿಡಿಎ ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆ ಸಮೀಪ ಸ್ಕೈಡೆಕ್ ನಿರ್ಮಾಣ ಸ್ಥಳ ಮತ್ತು ರಸ್ತೆ ಕಾಮಗಾರಿಯನ್ನು ಗುರುವಾರ ಪರಿಶೀಲಿಸಿ ಅವರು ಮಾತನಾಡಿದರು.

'ನೈಸ್ ಸಂಸ್ಥೆಗೆ ನೀಡಲಾಗಿದ್ದ ಕೆಐಎಡಿಬಿ ಜಾಗವನ್ನು ತೆಗೆದುಕೊಳ್ಳಲು ನಿರ್ಧರಿಸಿದ್ದೆವು. ಇದಕ್ಕೆ ನೈಸ್ ಸಂಸ್ಥೆಯವರು ತಕರಾರು ಎತ್ತಿದ್ದಾರೆ. ಅವರು ಸರ್ಕಾರಕ್ಕಿಂತ ದೊಡ್ಡವರು ಎಂದು ಭಾವಿಸಿದ್ದಾರೆ. ಹೀಗಾಗಿ ಬೇರೆ ದಾರಿ ಹುಡುಕುತ್ತೇವೆ. ಅವರಿಗೆ ಹೇಗೆ ಪಾಠ ಕಲಿಸಬೇಕು ಎಂಬುದು ಗೊತ್ತಿದೆ. ಹೀಗಾಗಿ ಸ್ಕೈಡೆಕ್‌ಗಾಗಿ ನಾವು ಬೇರೆ ಕಡೆ ಬಿಡಿಎ ಜಾಗ ಗುರುತಿಸಿದ್ದೇವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಲೂಪ್‌ಗೆ ಚಾಲನೆ: ಹೆಬ್ಬಾಳ ಜಂಕ್ಷನ್‌ನಲ್ಲಿರುವ ಮೇಲ್ಸೇತುವೆಯಲ್ಲಿ ಹೊಸ ಲೂಪ್‌ಗೆ ಡಿ.ಕೆ. ಶಿವಕುಮಾರ್ ಅವರು ಗುರುವಾರ ಅಧಿಕೃತವಾಗಿ ಚಾಲನೆ ನೀಡಿದರು.

'ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಬೆಂಗಳೂರಿನ ಉತ್ತರ ಭಾಗದ ಜನರ ಸುಗಮ ವಾಹನ ಸಂಚಾರಕ್ಕೆ ಹೆಬ್ಬಾಳ ಮೇಲ್ಸೇತುವೆಯ ಎರಡನೇ ಲೂಪ್ ಸಹಕಾರಿಯಾಗಲಿದೆ. ಈ ಮೂಲಕ ಸಂಚಾರ ದಟ್ಟಣೆ ನಿವಾರಿಸಿದ್ದೇವೆ' ಎಂದು ತಿಳಿಸಿದರು.

'ಮುಂದಿನ ದಿನಗಳಲ್ಲಿ ಈ ಭಾಗದಲ್ಲಿ ಒಂದೂವರೆ ಕಿ.ಮೀ. ಸುರಂಗ ರಸ್ತೆ ಬರಲಿದೆ. ಮೇಖ್ರಿ ವೃತ್ತದ ಬಳಿಯತ್ತ ಮೇಲ್ಸೇತುವೆ ಸಾಗಲಿದೆ. ಇದನ್ನು ಮೂರು ಭಾಗವಾಗಿ ನಿರ್ಮಿಸಲಾಗುವುದು. ತುಮಕೂರು ರಸ್ತೆಯಿಂದ ಕೆ.ಆರ್. ಪುರದವರೆಗೆ ಮೇಲ್ಸೇತುವೆ ಮೂಲಕ ಹೊರ ವರ್ತುಲ ರಸ್ತೆ (ಒಆರ್ ಆರ್) ಮಾಡಲು ಮುಂದಾಗಿದ್ದೇವೆ' ಎಂದು ಮಾಹಿತಿ ನೀಡಿದರು.

'ಬಿಡಿಎ ಈ ವರ್ಷ 50ನೇ ವಸಂತಕ್ಕೆ ಕಾಲಿಟ್ಟಿದ್ದು, ನನ್ನ ರಾಜಕೀಯ ಜೀವನದಲ್ಲಿ ಹಿಂದೆಂದೂ ಮಾಡಲಾಗದ ಐತಿಹಾಸಿಕ ಯೋಜನೆಗಳನ್ನು ಹಮ್ಮಿಕೊಂಡಿದೆ. 120 ಕಿ.ಮೀ ಉದ್ದದ ಬೆಂಗಳೂರು ಬಿಸಿನೆಸ್ ಕಾರಿಡಾರ್ (ಬಿಬಿಸಿ) ಅನ್ನು ಕಾರ್ಯರೂಪಕ್ಕೆ ತರಲು ರೈತರ ಭೂಮಿ ಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ಇದಕ್ಕೆ ಶೇ 35ರಷ್ಟು ವಾಣಿಜ್ಯ ಭೂಮಿಯನ್ನು ರೈತರಿಗೆ ಪರಿಹಾರವಾಗಿ ನೀಡಲಾಗುತ್ತಿದೆ. ಜತೆಗೆ, ಸಣ್ಣ ಟೌನ್ ಶಿಪ್ ನಿರ್ಮಾಣಕ್ಕೆ ರೈತರಿಗೆ ಉತ್ತಮ ಪರಿಹಾರ ನೀಡುತ್ತಿದ್ದೇವೆ' ಎಂದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಸ್ಕೈಡೆಕ್ ನಿರ್ಮಾಣಕ್ಕಾಗಿ ಡಿ.ಕೆ. ಶಿವಕುಮಾರ್ ಅವರು ಸ್ಥಳ ಪರಿಶೀಲನೆ ನಡೆಸಿದರು. ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಉಪಸ್ಥಿತರಿದ್ದರು

ಚಲ್ಲಘಟ್ಟ–ಭೀಮನಕುಪ್ಪೆಯಲ್ಲಿ ಸ್ಕೈಡೆಕ್!

'ಬಿಡಿಎ ಸ್ವಾಧೀನಪಡಿಸಿಕೊಂಡಿರುವ ಚಲ್ಲಘಟ್ಟ ಹಾಗೂ ಭೀಮನಕುಪ್ಪೆ ಸರ್ವೆ ನಂಬರ್‌ಗಳಲ್ಲಿ ಸುಮಾರು 50 ಎಕರೆ ಜಾಗವಿದ್ದು, ಅದರಲ್ಲಿ 25 ಎಕರೆ ಜಾಗವನ್ನು ಸ್ಕೈಡೆಕ್ ಹಾಗೂ ಇತರೆ ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

'ನೈಸ್ ರಸ್ತೆಗೆ ಹೊಂದಿಕೊಂಡಂತಿರುವ ರಾಮಸಂದ್ರದ ಸರ್ವೆ ನಂ. 39, 40, 41ರಲ್ಲಿ ಸ್ಕೈಡೆಕ್ ನಿರ್ಮಿಸಲು ಯೋಜಿಸಲಾಗಿತ್ತು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ನೀಡಿದ್ದ 8 ಎಕರೆ 33 ಗುಂಟೆಯನ್ನು ನೈಸ್ ಸಂಸ್ಥೆ ಉಪಯೋಗಿಸಿಕೊಂಡಿರಲಿಲ್ಲ. ಈ ಭೂಮಿ ಸೇರಿದಂತೆ ಒಟ್ಟು 33 ಎಕರೆ ಪ್ರದೇಶದಲ್ಲಿ ಸ್ಕೈಡೆಕ್ ಯೋಜನೆಗೆ ಬಳಸಿಕೊಳ್ಳಲು ಈ ಹಿಂದೆ ನಿರ್ಧರಿಸಲಾಗಿತ್ತು. ಆದರೆ, ನೈಸ್ ಸಂಸ್ಥೆಯ ತಕರಾರಿನಿಂದಾಗಿ ಅಲ್ಲಿಂದ ಸುಮಾರು ಒಂದು ಕಿ.ಮೀ ದೂರದಲ್ಲಿ ಬಿಡಿಎ ಜಾಗದಲ್ಲೇ ಸ್ಕೈಡೆಕ್ ಯೋಜನೆಗೆ ಭೂಮಿ ಉಪಯೋಗಿಸಿಕೊಳ್ಳಲಾಗಿದೆ. ಬೆಂಗಳೂರು ಜಿಲ್ಲಾಧಿಕಾರಿಯವರಿಂದ ಭೂಮಿಯನ್ನು ಹಸ್ತಾಂತರಿಸಿಕೊಳ್ಳುವುದು ಮಾತ್ರ ಬಾಕಿ ಉಳಿದಿದ್ದು, ಈ ಪ್ರಕ್ರಿಯೆ ಶೀಘ್ರವೇ ಪೂರ್ಣಗೊಳ್ಳಲಿದೆ' ಎಂದು ಹೇಳಿದರು.

ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆ ನಡುವೆ ಬಿಡಿಎ ನಿರ್ಮಿಸುತ್ತಿರುವ 'ಪ್ರಮುಖ ರಸ್ತೆ'ಗೂ (ಎಂಎಆರ್) ಈಗ, ಸ್ಕೈಡೆಕ್‌ಗೆ ಗುರುತಿಸಲಾಗಿರುವ ಸ್ಥಳಕ್ಕೂ ಸಂಪರ್ಕವಿರಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ನಗರದಲ್ಲಿ ಇಂದು

'ದಲಿತ ಸಾಹಿತ್ಯ ಮತ್ತು ಚಳವಳಿ–50' ಮೂರು ದಿನಗಳ ರಾಜ್ಯಮಟ್ಟದ ಅಧ್ಯಯನ ಶಿಬಿರ: ಉದ್ಘಾಟನೆ: ಎಲ್. ಎನ್. ಮುಕುಂದರಾಜ್, ದಿಕ್ಸೂಚಿ ಮಾತು: ಎಚ್. ಗೋವಿಂದಯ್ಯ, ಅಧ್ಯಕ್ಷತೆ: ಎಸ್.ಎಂ. ಜಯಕರ, ಅತಿಥಿಗಳು: ಕೆ.ಟಿ. ಶಾಂತಲಾ, ಚಂದ್ರಕಾಂತ್ ಕರಿಗಾರ್, ಎಂ. ಸುನೀತಾ, ಕೋಟಿಗಾನಹಳ್ಳಿ ರಾಮಯ್ಯ, 'ದಲಿತ ಸಾಹಿತ್ಯ ಹಾಗೂ ಚಳವಳಿಯ ಹುಟ್ಟು ಮತ್ತು ತಾತ್ವಿಕತೆಯ ಸ್ವರೂಪ' ಗೋಷ್ಠಿ: ಇಂದೂಧರ ಹೊನ್ನಾಪುರ, ಹುಲಿಕುಂಟೆ ಮೂರ್ತಿ, ಕೆ.ವಿ. ನೇತ್ರಾವತಿ, 'ಬೂಸಾ ಚಳವಳಿ, ದಲೇಕಯುಸಂ ಮತ್ತು ದಲಿತ ಸಂಘರ್ಷ ಸಮಿತಿ' ಗೋಷ್ಠಿ: ಅಗ್ರಹಾರ ಕೃಷ್ಣಮೂರ್ತಿ, ರಾಮದೇವ ರಾಕೆ, ಅನಸೂಯ ಕಾಂಬಳೆ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30ರಿಂದ



ಅಗ್ರಹಾರ ಕೃಷ್ಣಮೂರ್ತಿ

ಎರಡನೇ ರಾಷ್ಟ್ರೀಯ ಮರಗೆತ್ತನೆ ಶಿಬಿರದ ಉದ್ಘಾಟನೆ: ಆರ್. ಗಿರೀಶ್, ಅತಿಥಿಗಳು: ಎಂ.ಸಿ. ರಮೇಶ್, ವೈ.ಎಸ್. ಪಾಟೀಲ, ಎ.ಎನ್. ಯಲ್ಲಪ್ಪ ರೆಡ್ಡಿ, ಪ.ಸ. ಕುಮಾರ್, ಆರ್. ಚಂದ್ರಶೇಖರ್, ಆಯೋಜನೆ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ತೋಟಗಾರಿಕೆ ಇಲಾಖೆ, ಸ್ಥಳ: ಲಾಲ್‌ಬಾಗ್ ಸಸ್ಯತೋಟ (ಲಾಲ್‌ಬಾಗ್‌ಗೆ ಕೆರೆಗೆ ಹೊಂದಿಕೊಂಡಿರುವ ನೀಲಗಿರಿ ಪ್ರದೇಶ), ಬೆಳಿಗ್ಗೆ 11

ರಾಷ್ಟ್ರೀಯ ಕೈಮಗ್ಗ ಮೇಳಕ್ಕೆ ಚಾಲನೆ: ಸಿದ್ದರಾಮಯ್ಯ, ಉಪಸ್ಥಿತಿ: ಗಿರಿರಾಜ್ ಸಿಂಗ್, ಡಿ.ಕೆ.ಶಿವ ಕುಮಾರ್, ಶೋಭಾ ಕರಂದ್ಲಾಜೆ, ಅಧ್ಯಕ್ಷತೆ: ಶಿವಾನಂದ ಎಸ್. ಪಾಟೀಲ, ಸ್ಥಳ: ರಾಣಿ ಅಬ್ಬಕ್ಕ ಆಟದ ಮೈದಾನ (ಕಮಲಮ್ಮನ ಗುಂಡಿ), ಮಹಾಲಕ್ಷ್ಮಿಪುರ ಲೇಔಟ್, ಮಧ್ಯಾಹ್ನ 12.30

ಹಾಸ್ಯಬ್ರಹ್ಮ ಟ್ರಸ್ಟ್ ದತ್ತಿ 'ಜಾನಪದದಲ್ಲಿ ಹಾಸ್ಯ' ಉಪನ್ಯಾಸ: ರವಿ ಯು.ಎಂ., ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ನಿರಂತರಂ ರಾಷ್ಟ್ರೀಯ ಸಂಗೀತ ಮತ್ತು ನೃತ್ಯೋತ್ಸವ: ಗಾಯನ: ಹರಿಣಿ ಶ್ರೀಧರ್, ಪಿಟೀಲು: ವೆಂಕಟೇಶ ಜೋಸ್ಯಾರ್, ಮೃದಂಗ: ಪಿ. ಜನಾರ್ದನ ರಾವ್, ಭಕ್ತಿ ಗೀತೆಗಳ ಗಾಯನ: ಸುಜಯ್ ಶಾನಭಾಗ್, ಭರತನಾಟ್ಯ ಪ್ರದರ್ಶನ: ಶಿಲ್ಪಾ ಸೇತುರಾಮನ್, ಪ್ರೀತಿ ಪ್ರಸಾದ್, ಆಯೋಜನೆ: ಸಂಗೀತ ಸಂಭ್ರಮ ಇನ್‌ಸ್ಟಿಟ್ಯೂಷನ್ ಆಫ್ ಮ್ಯೂಸಿಕ್ ಆ್ಯಂಡ್ ಡಾನ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ ಸಂಜೆ 5

ಧನುರ್ಮಾಸದ ಸಂಗೀತ ರುದ್ರ ಸಹಿತ ಇಷ್ಟಲಿಂಗ ಮಹಾಶಿವಪೂಜೆ, ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ: ಸಾನ್ನಿಧ್ಯ: ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಡಾ.ಸಿ.ಎನ್. ಮಂಜುನಾಥ್, ಉಪಸ್ಥಿತಿ: ಬಿ.ಎಸ್. ಪರಮಶಿವಯ್ಯ, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6

'ಕಾಲಚಕ್ರ' ನಾಟಕ ಪ್ರದರ್ಶನ: ಅತಿಥಿಗಳು: ಗಾಯತ್ರಿ ಕೆ.ಎಂ., ಕೆ.ವಿ. ನಾಗರಾಜಮೂರ್ತಿ, ಶಶಿಧರ್ ಭಾರಿಘಾಟ್, ಕೆ. ರಾಮಕೃಷ್ಣಯ್ಯ, ಲಕ್ಷ್ಮೀ ಚಂದ್ರಶೇಖರ್, ನಾಟಕದ ನಿರ್ದೇಶನ: ಹುಲಗಪ್ಪ ಕಟ್ಟಿಮನಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ಭರತನಾಟ್ಯ ಪ್ರದರ್ಶನ: ಸಾಧನ ಪ್ರಕಾಶ್, ಆಯೋಜನೆ: ದಿ ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್, ಸ್ಥಳ: ಕೆಆರ್‌ಜಿ ಹಾಲ್, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6.30

ಮಾರ್ಗಶೀರ್ಷೋತ್ಸವ: 'ಶರಸೇತು ಬಂಧ' ಯಕ್ಷಗಾನ ಪ್ರದರ್ಶನ: ಸುವರ್ಣ ಪ್ರಸಾಧನ ಯಕ್ಷರಂಗ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಗಾನವಿ ಕುಟುಂಬಸ್ಥರ ವಿರುದ್ಧ ಎಫ್‌ಐಆರ್

ನವ ವಿವಾಹಿತರ ಆತ್ಮಹತ್ಯೆ ಪ್ರಕರಣಕ್ಕೆ ಮತ್ತೊಂದು ತಿರುವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ನವ ವಿವಾಹಿತರಾದ ಬಿ.ಚನ್ನಸಂದ್ರ ನಿವಾಸಿ ಗಾನವಿ ಹಾಗೂ ವಿದ್ಯಾರಣ್ಯಪುರದ ನಿವಾಸಿ ಸೂರಜ್ ಆತ್ಮಹತ್ಯೆ ಪ್ರಕರಣವು ಮತ್ತೊಂದು ತಿರುವು ಪಡೆದಿದ್ದು, ಗಾನವಿ ಕುಟುಂಬದ 9 ಮಂದಿ ವಿರುದ್ಧ ವಿದ್ಯಾರಣ್ಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೂರಜ್ ಅವರ ಅತ್ತಿಗೆ ಬಿ.ಎನ್.ಸಿಂಧು ಅವರು ನೀಡಿದ ದೂರಿನ ಮೇರೆಗೆ ಗಾನವಿ ಕುಟುಂಬದ ರಾಧಾ, ಬಾಬುಗೌಡ, ಕಾರ್ತಿಕ್, ಮಹಾದೇವ, ಗಗನ್, ಶಶಿಕುಮಾರ್, ರುಕ್ಮಿಣಿ, ಅಭಿಲಾಷ್, ಅಭಿಷೇಕ್ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಮಹಾರಾಷ್ಟ್ರದ ನಾಗ್ಪುರಕ್ಕೆ ತೆರಳಿ ಸೂರಜ್ ಅವರು ಆತ್ಮಹತ್ಯೆ ಮಾಡಿಕೊಳ್ಳಲು ಗಾನವಿ ಕುಟುಂಬಸ್ಥರೇ ಕಾರಣ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

ಪತಿ ಸೂರಜ್ ಹಾಗೂ ಅವರ ಕುಟುಂಬಸ್ಥರ ಕಿರುಕುಳಕ್ಕೆ ಬೇಸತ್ತು ಗಾನವಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ದೂರು ನೀಡಲಾಗಿತ್ತು. ಎಫ್‌ಐಆರ್ ದಾಖಲಾದ ಬೆನ್ನಲ್ಲೇ ಸೂರಜ್ ಹಾಗೂ ಅವರ ತಾಯಿ ಜಯಂತಿ ಮಹಾರಾಷ್ಟ್ರಕ್ಕೆ ತೆರಳಿ ತಲೆ ಮರೆಸಿಕೊಂಡಿದ್ದರು. ಎರಡು ದಿನಗಳ ಬಳಿಕ ಸೂರಜ್ ಸಹ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಅವರ ತಾಯಿ ಆತ್ಮಹತ್ಯೆಗೆ ಯತ್ನಿಸಿದ್ದರು.

ಸೂರಜ್ ಹಾಗೂ ಗಾನವಿ ಅವರು ಅಕ್ಟೋಬರ್ 29ರಂದು ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು. ಅರಮನೆ ಮೈದಾನದಲ್ಲಿ ಅದ್ದೂರಿ ಆರತಕ್ಷತೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶ್ರೀಲಂಕಾಗೆ ಹತ್ತು ದಿನಗಳ ಹನಿಮೂನ್‌ಗೆ ದಂಪತಿ ತೆರಳಿದ್ದರು. ಪ್ರವಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ,

ಗಾನವಿ ಹಾಗೂ ಸೂರಜ್

ದಂಪತಿ ಮನೆಗೆ ವಾಪಸ್ ಬಂದಿದ್ದರು. ನಂತರ, ಮನೆಯಲ್ಲೂ ಜಗಳ ನಡೆದಿತ್ತು. ಗಾನವಿ ಅವರನ್ನು ಪೋಷಕರು ಮನೆಗೆ ಕರೆದೊಯ್ದಿದ್ದರು. ತವರು ಮನೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅಸ್ವಸ್ಥಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿ ಮೃತಪಟ್ಟಿದ್ದರು. ಮೃತದೇಹವನ್ನು ಸೂರಜ್ ನಿವಾಸಕ್ಕೆ ತಂದು ಪೋಷಕರು ಹಾಗೂ ಕುಟುಂಬಸ್ಥರು ಪ್ರತಿಭಟನೆ ನಡೆಸಿದ್ದರು.

'ಬೇರೆ ಹುಡುಗನ್ನು ಪ್ರೀತಿ ಸುತ್ತಿದ್ದೇನೆ. ಆತನನ್ನು ಮದುವೆ ಆಗಬೇಕೆಂದು ನಿರ್ಧರಿಸಿದ್ದೇನೆ ಎಂದು ಶ್ರೀಲಂಕಾಕ್ಕೆ ತೆರಳಿದ್ದ ವೇಳೆ ಗಾನವಿ ಅವರು ಸೂರಜ್‌ಗೆ ಹೇಳಿದ್ದರು. ಆ ಮಾತಿನಿಂದ ಆಘಾತಗೊಂಡು ಸೂರಜ್ ಅವರು ಶ್ರೀಲಂಕಾ ಪ್ರವಾಸವನ್ನು ಮೊಟಕುಗೊಳಿಸಿ ವಾಪಸ್ ಬಂದಿದ್ದರು. ಈ ವಿಷಯವನ್ನು ಮುಚ್ಚಿಟ್ಟು ಮದುವೆ ಮಾಡಲಾಗಿತ್ತು. ಅಲ್ಲದೇ ಗಾನವಿ ಆಸ್ಪತ್ರೆಗೆ ದಾಖಲಾದ ಮೇಲೆ ಅಭಿಷೇಕ್, ಅಭಿಲಾಷ್ ಮತ್ತಿತರರು ಬೆದರಿಕೆ ಹಾಕಿದ್ದರು' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ರಾಮಮೂರ್ತಿನಗರ ಹಾಗೂ ವಿದ್ಯಾರಣ್ಯಪುರ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮದ್ಯ ಸೇವಿಸಿ ವಾಹನ ಚಾಲನೆ 501 ಚಾಲಕರ ವಿರುದ್ಧ ಎಫ್‌ಐಆರ್

ಮದ್ಯಪಾನ ಮಾಡಿ, ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಕಾರ್ಯಾಚರಣೆ ನಡೆಸಿದ ನಗರದ ವಿವಿಧ ಸಂಚಾರ ಠಾಣೆ ಪೊಲೀಸರು, 501 ಚಾಲಕರ ವಿರುದ್ಧ ಬುಧವಾರ ರಾತ್ರಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಬ್ ಹಾಗೂ ಕ್ಲಬ್ ಸೇರಿದಂತೆ ವಿವಿಧೆಡೆ ನಡೆದ ಹೊಸ ವರ್ಷಾಚರಣೆಯ ಪಾರ್ಟಿಗಳಲ್ಲಿ ಕೆಲವರು ಮದ್ಯ ಸೇವಿಸಿ ವಾಹನ ಚಾಲನೆ ಮಾಡಿಕೊಂಡು ಮನೆಗೆ ತೆರಳುತ್ತಿದ್ದರು. ಬುಧವಾರ ರಾತ್ರಿ 160ಕ್ಕೂ ಹೆಚ್ಚು ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಡಿಸೆಂಬರ್ 22ರಿಂದ 31ರವರೆಗೆ ನಗರದಾದ್ಯಂತ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ. ಈ ವಿಶೇಷ ಕಾರ್ಯಾಚರಣೆ ವೇಳೆ 3,30,106 ವಾಹನಗಳ ತಪಾಸಣೆ ಮಾಡಲಾಗಿದೆ. ಸಂಚಾರ ನಿಯಮ ಉಲ್ಲಂಘಿಸಿದ 4,648 ವಾಹನ ಸವಾರರು ಹಾಗೂ ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ವಿಶೇಷ ಕಾರ್ಯಾಚರಣೆಯನ್ನು ನಿರಂತರವಾಗಿ ಮುಂದುವರಿಸಲಾಗುವುದು ಎಂದು ಸಂಚಾರ ಪೊಲೀಸರು ಹೇಳಿದರು.

ನಾಲ್ವರು ಪಾದಚಾರಿಗಳ ಮೇಲೆ ಕಾರು ಹತ್ತಿಸಲು ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನಮತ್ತ ಕಾರು ಚಾಲಕರೊಬ್ಬರು ನಾಲ್ವರು ಪಾದಚಾರಿಗಳ ಮೇಲೆ ಕಾರು ಹತ್ತಿಸಲು ಯತ್ನಿಸಿದ ಘಟನೆ ಸಹಕಾರ ನಗರದಲ್ಲಿ ಬುಧವಾರ ರಾತ್ರಿ ನಡೆದಿದೆ.

ದೊಡ್ಡಬೊಮ್ಮಸಂದ್ರದ ಸುನಿಲ್ ಕುಮಾರ್ ಹಾಗೂ ಮಾಲ್ ಆಫ್ ಏಷ್ಯಾದ ಭದ್ರತಾ ವಿಭಾಗದ ಉಸ್ತುವಾರಿಯ ವಿರುದ್ಧ ಸಹಕಾರನಗರ ಸಂಚಾರ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಪೊಲೀಸ್ ಸಿಬ್ಬಂದಿ ಗಂಗಾಧರ್ ಗುರವ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ. ಕೊಡಿಗೇಹಳ್ಳಿ ಅಕ್ಕಮ್ಮ, ಚಂದ್ರಶೇಖರ್, ರಾಜಲಕ್ಷ್ಮಿ, ಪ್ರಜ್ವಲ್ ಅವರು ಗಾಯಗೊಂಡಿದ್ದಾರೆ.

ಮಾಲ್ ಆಫ್ ಏಷ್ಯಾದ ಗೇಟ್ ನಂ. 3ರ ಬಳಿ ಬುಧವಾರ ರಾತ್ರಿ 10.15ರ ಸುಮಾರಿಗೆ ಘಟನೆ ನಡೆದಿದೆ. ಘಟನೆಯ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಜನರ ಸಂಚಾರ ಹೆಚ್ಚಿತ್ತು. ಮಾಲ್ ಆಫ್ ಏಷ್ಯಾ ಆವರಣದಿಂದ ಕಾರು ಅತಿವೇಗವಾಗಿ ಬಂದು ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಬ್ಯಾರಿಕೇಡ್‌ಗೆ ಏಕಾಏಕಿ ಡಿಕ್ಕಿ ಹೊಡೆದಿತ್ತು. ಅದಾದ ಮೇಲೆ ಪಾದಚಾರಿ ಮಾರ್ಗದಲ್ಲಿ ತೆರಳುತ್ತಿದ್ದ ನಾಲ್ವರಿಗೂ ಡಿಕ್ಕಿ ಹೊಡೆದಿದೆ. ಅವರು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಕಾರು ಚಾಲಕ ಮದ್ಯದ ಅಮಲಿನಲ್ಲಿ ಪಾದಚಾರಿ ಮಾರ್ಗಕ್ಕೆ ಕಾರು ಹತ್ತಿಸಿದ್ದಾರೆ. ಮಾಲ್‌ಗೆ ಬರುವವರಿಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಇರುವುದು ಘಟನೆಗೆ ಕಾರಣವಾಗಿದೆ. ಚಾಲಕ ಸುನಿಲ್ ಕುಮಾರ್ ಹಾಗೂ ಮಾಲ್ ಆಫ್ ಏಷ್ಯಾದ ಭದ್ರತಾ ವಿಭಾಗದ ಉಸ್ತುವಾರಿ ವಿರುದ್ಧ ಪ್ರಕರಣ ದಾಖಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಚಾಲಕ ಕೊಲೆ: ದುಷ್ಕರ್ಮಿಗಳು ಪರಾರಿ

ಕೆ.ಪಿ.ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಆಟೊ ಚಾಲಕರೊಬ್ಬರನ್ನು ಅವರ ಮನೆಯ ಎದುರು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಲಾಗಿದೆ.

ಕೊಳ್ಳೆಗಾಲದ ರೇಚಣ್ಣ (45) ಕೊಲೆಯಾದವರು. ರೇಚಣ್ಣ ಅವರು ಕೆಲವು ವರ್ಷಗಳಿಂದ ಕೆ.ಪಿ.ಅಗ್ರಹಾರದಲ್ಲಿ ಕುಟುಂಬ ಸಮೇತ ವಾಸವಾಗಿದ್ದರು. ಆಟೊ ಚಾಲನೆ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಬುಧವಾರ ತಡರಾತ್ರಿ 11.40ರ ಸುಮಾರಿಗೆ ರೇಚಣ್ಣ ಮನೆಯಿಂದ ಹೊರಗಡೆ ಬಂದಿದ್ದರು. ಆಗ ಸ್ಥಳಕ್ಕೆ ಬಂದ ದುಷ್ಕರ್ಮಿಗಳು, ಅವರ ಬೆನ್ನಿಗೆ ಇರಿದು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಬೆನ್ನಿಗೆ ಇರಿದ ಪರಿಣಾಮ ತೀವ್ರ ಗಾಯಗೊಂಡಿದ್ದ ರೇಚಣ್ಣ ಅವರು ಮನೆ ಮುಂದೆಯೇ ಬಿದ್ದಿದ್ದರು. ಮದ್ಯ ಸೇವಿಸಿ ಮಲಗಿರಬಹುದು ಎಂದು ಸ್ಥಳೀಯರು ಆರಂಭದಲ್ಲಿ ಭಾವಿಸಿದ್ದರು. ಆದರೆ, ಕೆಲ ಹೊತ್ತಿನ ಬಳಿಕ ರೇಚಣ್ಣನ ಬಳಿ ಬಂದು ನೋಡಿದಾಗ ರಕ್ತಸ್ರಾವದಿಂದ ಮೃತಪಟ್ಟಿರುವುದು ಗೊತ್ತಾಗಿತ್ತು. ಕೃತ್ಯದ ಮಾದರಿ ಗಮನಿಸಿದರೆ ವೈಯಕ್ತಿಕ ದ್ವೇಷಕ್ಕೆ ಕೊಲೆ ಮಾಡಲಾಗಿದೆ ಎಂಬಂತೆ ಕಂಡುಬರುತ್ತಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ವಿಧಾನಸೌಧದ ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಯ ಮುಂಭಾಗ ಭೀಮಾ ಕೋರೆಗಾಂವ್ ವಿಜಯೋತ್ಸವದ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೇಣದ ಬತ್ತಿ ಹಚ್ಚುವ ಮೂಲಕ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಲಾಯಿತು. ಮೂಡ್ನಾಕೂಡು ಚಿನ್ನಸ್ವಾಮಿ, ಮಾವಳ್ಳಿ ಶಂಕರ್, ಡಿ.ಉಮಾಪತಿ, ಎಸ್.ಜಿ. ಸಿದ್ಧರಾಮಯ್ಯ, ಇಂದಿರಾ ಕೃಷ್ಣಪ್ಪ ಹಾಗೂ ಇತರರು ಹಾಜರಿದ್ದರು ಪ್ರಜಾವಾಣಿ ಚಿತ್ರ

ಹೊಸವರ್ಷ: ಶಿವಗಂಗೆಗೆ ಭಕ್ತರ ದಂಡು

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಹೊಸ ವರ್ಷದ ಪ್ರಯುಕ್ತ ಶಿವಗಂಗೆಗೆ ಹೆಚ್ಚಿನ ಭಕ್ತರು ಆಗಮಿಸಿದ್ದರು. ಗಂಗಾಧರೇಶ್ವರ ಸ್ವಾಮಿ, ಹೊನ್ನಾದೇವಿ ಮತ್ತು ಗಣೇಶ ದೇವರಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿದರು.

ಬೆಟ್ಟ ಏರುವುದಕ್ಕೆ ಜಿಲ್ಲಾಡಳಿತ ನಿಷೇಧ ಏರಿತ್ತು. ಇದರಿಂದ ಶಿವಗಂಗೆ ಬೆಟ್ಟ ಏರಲು ಹಾಗೂ ಇತರೆ ದೇವರುಗಳ ದರ್ಶನಕ್ಕೆ ಅವಕಾಶ ಇರಲಿಲ್ಲ. ಮುಂದಿನ ವರ್ಷವಾದರೂ ಇಲ್ಲಿ ನಿರ್ಬಂಧವನ್ನು ಹಾಕದೆ ಭಕ್ತರಿಗೆ ಸಹಕಾರ ನೀಡುವ ವ್ಯವಸ್ಥೆ ಆಗಬೇಕು ಎಂಬುದು ಭಕ್ತರ ಅಹವಾಲಾಗಿತ್ತು.

ದೇವಾಲಯಕ್ಕೆ ಬರುವ ಭಕ್ತರಿಗೆ ಅನುಕೂಲವಾಗಲೆಂದು ಸರತಿಯ ಸಾಲಿನಲ್ಲಿ ಬರಲು ವ್ಯವಸ್ಥೆ ಮಾಡಲಾಗಿತ್ತು. ಕೆಲ ಕಾಲ ನೂಕುನುಗ್ಗಲು ಉಂಟಾಗಿತ್ತು.

ಬನ್ನೇರುಘಟ್ಟದಲ್ಲಿ ಜನಸಂದಣಿ (ಆನೇಕಲ್ ವರದಿ): ಹೊಸ ವರ್ಷದ ಮೊದಲ ದಿನ 25 ಸಾವಿರ ಪ್ರವಾಸಿಗರು ಬನ್ನೇರುಘಟ್ಟ ಉದ್ಯಾನಕ್ಕೆ ಭೇಟಿ ನೀಡಿದ್ದರು ಎಂದು ಉದ್ಯಾನದ ಅಧಿಕಾರಿಗಳು ತಿಳಿಸಿದ್ದಾರೆ. ಸಾಮಾನ್ಯ ದಿನಗಳಲ್ಲಿ ಭೇಟಿ ನೀಡುವವರ ಸಂಖ್ಯೆಗಿಂತ ಇದು ದುಪ್ಪಟ್ಟು ಎಂದಿದ್ದಾರೆ.

ಮತ್ತೊಬ್ಬ ಹಿಂದೂ ಮೇಲೆ ದಾಳಿ

ಬಾಂಗ್ಲಾದೇಶ ಪ್ರಕ್ಷುಬ್ಧ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಹಿಂದೂ ಉದ್ಯಮಿಯೊಬ್ಬರ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದ ದುಷ್ಕರ್ಮಿಗಳು, ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಶರಿಯತ್‌ಪುರ ಜಿಲ್ಲೆಯ ದಾಮುದ್ಯದ ಬಜಾರ್ ಬಳಿ ಬುಧವಾರ ರಾತ್ರಿ ಈ ಕೃತ್ಯ ನಡೆದಿದೆ.

ಅಂಗಡಿ ಮುಚ್ಚಿ ಮನೆಗೆ ತೆರಳುತ್ತಿದ್ದ ಖೋಕೇನ್ ಚಂದ್ರದಾಸ್ (50) ಎಂಬುವರ ಮೇಲೆ ಹಲ್ಲೆ ನಡೆಸಲಾಗಿದೆ. ಸ್ಥಳೀಯರು ಅವರನ್ನು ಢಾಕಾದ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಸಾಂಸ್ಕೃತಿಕ ಗುಲಾಮಗಿರಿಯಿಂದ ಮುಕ್ತರಾಗಿ: ಎಸ್.ಜಿ.ಸಿದ್ಧರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಸ್ಕೃತಿಕ ಗುಲಾಮಗಿರಿಯಿಂದ ಮುಕ್ತವಾಗದ ಹೊರತು ಪ್ರಜಾಪ್ರಭುತ್ವ ಉಳಿಸಿಕೊಳ್ಳಲು ಆಗುವುದಿಲ್ಲ. ಎಲ್ಲರಿಗೂ ಸಮಾನವಾಗಿ ಬೇಕಾಗಿರುವ ಅವಕಾಶ ಪಡೆದುಕೊಳ್ಳಲು ಆಗುವುದಿಲ್ಲ ಎಂದು ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ ನಗರ ಜಿಲ್ಲಾ ಸಮಿತಿ ವತಿಯಿಂದ ವಿಧಾನಸೌಧ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಎದುರು ಗುರುವಾರ ಆಯೋಜಿಸಿದ್ದ 208ನೇ ಭೀಮಾ ಕೋರೆಗಾಂವ್ ವಿಜಯೋತ್ಸವ ಪ್ರಯುಕ್ತ 'ಸಾಮಾಜಿಕ ಸಮಾನತಾ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದರು.

'ಅಂಬೇಡ್ಕರ್ ಅವರು ಹೇಳಿದಂತೆ ಶಿಕ್ಷಣ, ಸಂಘಟನೆ, ಹೋರಾಟ ಮಾತ್ರ ದಮನಿತ ಸಮುದಾಯಗಳಿಗೆ ದಿಕ್ಕು ತೋರಿಸುವಂತಹ ದಾರಿಗಳು. ವಂಚನೆಗೆ ಒಳಗಾಗಿರುವ ಸಮುದಾಯಗಳ ಚರಿತ್ರೆ ದಾಖಲಾಗಿರಲಿಲ್ಲ. ಕೋರೆಗಾಂವ್ ಯುದ್ಧದ ಬಗ್ಗೆಯೂ ಚರಿತ್ರೆಯಲ್ಲಿ ದಾಖಲಾಗಿರಲಿಲ್ಲ. ಅಂಬೇಡ್ಕರ್ ಶೋಧಿಸದೇ ಇದ್ದರೇ, ಕೋರೆಗಾಂವ್ ಯುದ್ಧದ ವಿಜಯೋತ್ಸವವನ್ನು ಆಚರಣೆ ಮಾಡಲು ಆಗುತ್ತಿರಲಿಲ್ಲ' ಎಂದು ತಿಳಿಸಿದರು.

'ಅಂಬೇಡ್ಕರ್ ಅವರ ಶೋಧನೆಯ ಫಲವಾಗಿ ಚರಿತ್ರೆ ಪುನರ್ ರಚಿತವಾಗಿದೆ. ಚರಿತ್ರೆಯನ್ನು ಮರೆತ ಜನಾಂಗ ವರ್ತಮಾನವನ್ನು ಅರ್ಥ ಮಾಡಿಕೊಳ್ಳಲಾಗದು, ವರ್ತಮಾನವನ್ನು ಅರ್ಥ ಮಾಡಿಕೊಳ್ಳದಿರುವ ಜನಾಂಗ, ಭವಿಷ್ಯವನ್ನು ರೂಪಿಸಿಕೊಳ್ಳುವುದಿಲ್ಲ. ನಾವು ಓದುತ್ತಿರುವ ಚರಿತ್ರೆ ಒಂದು ರೀತಿಯಲ್ಲಿ ತಿರುಚಿದ ಚರಿತ್ರೆಯಾಗಿದೆ. ಇತ್ತೀಚೆಗೆ ವಾಟ್ಸ್‌ಆ್ಯಪ್‌ಗಳಲ್ಲಿ ಹರಿದಾಡುತ್ತಿರುವುದು ತಿರುಚಿರುವ ಚರಿತ್ರೆ. ವಂಚಿತ ಸಮುದಾಯಗಳ ವಿರುದ್ಧವಾದ ಚರಿತ್ರೆ. ಮಕ್ಕಳು ಅದನ್ನೇ ಓದುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ಆದರೆ, ಸಾಂಸ್ಕೃತಿಕ ಗುಲಾಮಗಿರಿಯಿಂದ ಮುಕ್ತಿ ಸಿಕ್ಕಿಲ್ಲ. ಎಲ್ಲರೂ ಮನುಷ್ಯರಾಗಿ ಬದುಕೋಣ. ಚರಿತ್ರೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳೋಣ' ಎಂದರು.

ಇದೇ ವೇಳೆ ಮೇಣದ ಬತ್ತಿ ಹಚ್ಚಿ ಭೀಮಾ ಕೋರೆಗಾಂವ್ ಯುದ್ಧದಲ್ಲಿ ಹುತಾತ್ಮರಾದವರಿಗೆ ಗೌರವ ಸಲ್ಲಿಸಲಾಯಿತು. ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ದಲಿತ ಸಂಘರ್ಷ ಸಮಿತಿಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ, ಪತ್ರಕರ್ತ ಡಿ.ಉಮಾಪತಿ, ವಕೀಲ ನರಸಿಂಹಮೂರ್ತಿ ಉಪಸ್ಥಿತರಿದ್ದರು.

ಮಾರ್ಚ್ 27ರಿಂದ ರಾಮನವಮಿ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಮಾರ್ಚ್ 27ರಿಂದ ಏಪ್ರಿಲ್ 22ರವರೆಗೆ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ '88ನೇ ಶ್ರೀ ರಾಮನವಮಿ ಸಂಗೀತೋತ್ಸವ' ಹಮ್ಮಿಕೊಂಡಿದೆ.

ಈ ಸಂಗೀತೋತ್ಸವದಲ್ಲಿ ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕರು, ವೀಣೆ, ಪಿಟೀಲು, ಕೊಳಲು ಸೇರಿ ವಿವಿಧ ವಾದ್ಯಗಳ ವಾದಕರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ಮಾರ್ಚ್ 27ರಂದು ಬೆಳಿಗ್ಗೆ 8.30ರಿಂದ ರಾಮನವಮಿ ಮಹಾ ಅಭಿಷೇಕ ನಡೆಯಲಿದೆ. ಸಂಜೆ 5.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ.

ಸಂಗೀತೋತ್ಸವದಲ್ಲಿ ಮಲ್ಲಾಡಿ ಸಹೋದರರು, ರಾಮಕೃಷ್ಣನ್ ಮೂರ್ತಿ, ವಿದ್ಯಾಭೂಷಣ್, ಶಿವಶ್ರೀ ಸ್ಕಂದಪ್ರಸಾದ್, ಸಂದೀಪ್ ನಾರಾಯಣ್, ರಂಜನಿ ಮತ್ತು ಗಾಯತ್ರಿ, ಸುಮಾ ಸುಧೀಂದ್ರ, ತ್ರಿಚೂರ್ ಸಹೋದರರು, ರವೀಂದ್ರ ಯಾವಗಲ್, ವೆಂಕಟೇಶ್ ಕುಮಾರ್, ಎಸ್. ಸಾಕೇತರಾಮನ್, ಪ್ರವೀಣ್ ಗೋಡ್ಖಿಂಡಿ, ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಸೇರಿ ಸಂಗೀತ ಕ್ಷೇತ್ರದ ಪ್ರಮುಖ ಗಾಯಕರು ಹಾಗೂ ಕಲಾವಿದರು ಕಛೇರಿ ನಡೆಸಿಕೊಡಲಿದ್ದಾರೆ.

www.ramanavamitickets.com ವೆಬ್‌ಸೈಟ್ ಮೂಲಕ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು. ವಿವರಕ್ಕೆ 9448079079 ಅಥವಾ 9483518012ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಭೂ ವಿಜ್ಞಾನಿ ಸಿ. ನಾಗಣ್ಣ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭೂ ವಿಜ್ಞಾನಿ, ಜಯನಗರ 5ನೇ ಬ್ಲಾಕ್ ನಿವಾಸಿ ಸಿ. ನಾಗಣ್ಣ (96) ಗುರುವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಇದ್ದಾರೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಭೂವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಅವರು, ಜೆಕ್ ರಿಪಬ್ಲಿಕ್ ದೇಶದಲ್ಲಿ ಪಿಎಚ್.ಡಿ ಮಾಡಿದ್ದರು. 1969ರಲ್ಲಿ ಅಪೋಲೋ 9 ನೌಕೆ ಹೊತ್ತು ತಂದಿದ್ದ ಚಂದ್ರನ ಬೆಸಾಲ್ಟ್ ಶಿಲೆಗಳ (ಅಗ್ನಿಶಿಲೆ) ಅಧ್ಯಯನಕ್ಕೆ ನಾಸಾ ಸಂಸ್ಥೆ ಆರಿಸಿದ ಭೂ ವಿಜ್ಞಾನಿಗಳಲ್ಲಿ ನಾಗಣ್ಣ ಅವರೂ ಒಬ್ಬರಾಗಿದ್ದರು.

ಭಾರತದಲ್ಲಿ ಮೊದಲ ಬಾರಿಗೆ ಜಲಭೂವಿಜ್ಞಾನ ವಿಷಯದಲ್ಲಿ ಎಂ.ಟೆಕ್ ಪರಿಚಯಿಸಿದ್ದರು. ಸೇಂಟ್ ಮೇರಿ ದ್ವೀಪದಲ್ಲಿ ಜ್ವಾಲಾಮುಖಿಯಿಂದ ಉಂಟಾಗಿರುವ ವಿಶಿಷ್ಟ ಬಂಡೆಗಳತ್ತ ಭೂವಿಜ್ಞಾನಿಗಳನ್ನು ಸೆಳೆದಿದ್ದರು. ಭಾರತೀಯ ಖನಿಜ ವಿಜ್ಞಾನ ಸಂಘದ ಅಧ್ಯಕ್ಷರಾಗಿ 20 ವರ್ಷ ಕಾರ್ಯ ನಿರ್ವಹಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮತ್ತು ಕೃಷ್ಣದೇವರಾಯ ವಿಶ್ವವಿದ್ಯಾಲಯದ ನಂದಿಹಳ್ಳಿ ಕ್ಯಾಂಪಸ್‌ನಲ್ಲಿ ಭೂಗೋಳ ಮತ್ತು ಪರಿಸರ ವಿಜ್ಞಾನ ವಿಭಾಗ ಸ್ಥಾಪಿಸಿದ್ದರು. ಬೆಂಗಳೂರು ವಿ.ವಿಯಲ್ಲಿ ಭೂ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ 24 ವರ್ಷ ಕೆಲಸ ಮಾಡಿದ್ದರು. ಜಕೊಸ್ಲೊವಾಕಿಯಾದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಗೌರವ ಫೆಲೋ ಆಗಿದ್ದರು. ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು 2014ರಲ್ಲಿ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿತು. ಹಲವು ಪ್ರಶಸ್ತಿಗಳನ್ನು ಪಡೆದಿದ್ದರು.

ಮೃತರ ಅಂತ್ಯ ಸಂಸ್ಕಾರ ಶುಕ್ರವಾರ (ಜ.2) ಮಧ್ಯಾಹ್ನ 12ಕ್ಕೆ ಅವರ ಸ್ವಂತ ಊರಾದ ಚಾಮರಾಜನಗರ ಜಿಲ್ಲೆಯ ಹೆಗ್ಗವಾಡಿಪುರದಲ್ಲಿ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಪ್ರಶಸ್ತಿಗೆ ಪುಸ್ತಕ ಆಹ್ವಾನ

ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತು 'ಲೋಕ ಸರಸ್ವತಿ ಗ್ರಂಥ ಪ್ರಶಸ್ತಿ'ಗೆ ಜನಪದ ಗೀತೆ, ಕಥೆ, ಗಾದೆ, ಒಗಟು ಸೇರಿ ಜಾನಪದದ ವಿವಿಧ ಪ್ರಕಾರದಲ್ಲಿ 2025ನೇ ಸಾಲಿನಲ್ಲಿ ಪ್ರಕಟವಾದ ಕೃತಿಗಳನ್ನು ಆಹ್ವಾನಿಸಿದೆ.

ಈ ಪ್ರಶಸ್ತಿಗೆ ಒಂದು ಕೃತಿಯನ್ನು ಆಯ್ಕೆ ಮಾಡಲಾಗುತ್ತದೆ. ಜಾನಪದ ಲೋಕದಲ್ಲಿ ಫೆಬ್ರುವರಿ ತಿಂಗಳು ನಡೆಯುವ 'ಜಾನಪದ ಲೋಕೋತ್ಸವ'ದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಕೃತಿಗಳನ್ನು ಇದೇ 10ರೊಳಗೆ ಆಡಳಿತಾಧಿಕಾರಿ, ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಸಿರಿಭುವನ, ನಂ.1, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-560054 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 23605033

भारत सरकार GOVERNMENT OF INDIA

ಗಮನಿಸಿ

ಪಾನ್ ಮಸಾಲ ಉತ್ಪಾದಕರೇ!

ಆರೋಗ್ಯ ಸುರಕ್ಷೆ ಮೂಲಕ ರಾಷ್ಟ್ರೀಯ ಸುರಕ್ಷೆ (ಎಚ್‌ಎಸ್‌ಎನ್‌ಎಸ್)
1ನೇ ಫೆಬ್ರವರಿ, 2026 ರಿಂದ ಸೆಸ್ ಕಾಯ್ದೆ, 2025 ಜಾರಿ

ಪಾನ್ ಮಸಾಲ ಉತ್ಪಾದಿಸುವ ಯಂತ್ರೋಪಕರಣಗಳ/ ಪ್ರಕ್ರಿಯೆಗಳ ಮೇಲೆ ಎಚ್‌ಎಸ್‌ಎನ್‌ಎಸ್ ಸೆಸ್ ವಿಧಿಸಲಾಗುತ್ತದೆ. ತೆರಿಗೆಗೆ ಒಳಪಡುವ ಪ್ರತಿಯೊಬ್ಬರೂ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಮತ್ತು ಪಾವತಿಸಬೇಕು.

ಕಡ್ಡಾಯ ನೋಂದಣಿ
(ಫಾರಂ ಎಚ್‌ಎಸ್‌ಎನ್‌ಎಸ್ ರಿಜಿ–01)

- wwww.cbic-gst.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಮತ್ತು ಎಚ್‌ಎಸ್‌ಎನ್‌ಎಸ್ ಸೆಸ್ ಟ್ಯಾಬ್ ಅಡಿಯಲ್ಲಿನ "ನ್ಯೂ ಯೂಸರ್" ಕ್ಲಿಕ್ ಮಾಡಿ ನೋಂದಣಿಗಾಗಿ ಅರ್ಜಿ ಸಲ್ಲಿಸಿರಿ.
- ನೋಂದಣಿ ಉಲ್ಲೇಖ ಸಂಖ್ಯೆ (ಇಆರ್‌ಎನ್) ಪಡೆದುಕೊಳ್ಳಲು ನಿಮ್ಮ ಹೆಸರು, ಪ್ಯಾನ್, ಇಮೇಲ್, ಮೊಬೈಲ್ ವಿವರಗಳನ್ನು ನಿಖರವಾಗಿ ದಾಖಲಿಸಿ.
- ಎಚ್‌ಎಸ್‌ಎನ್‌ಎಸ್ ರಿಜಿ–01 ಫಾರಂ ಭರ್ತಿ ಮಾಡಲು ನಿಮ್ಮ ಎಆರ್‌ಎನ್ ಬಳಸಿರಿ.
- ಆರಂಭಿಕ ಪಾವತಿಗಾಗಿ ತಾತ್ಕಾಲಿಕ ನೋಂದಣಿ ಸಂಖ್ಯೆ (ಟಿಆರ್‌ಎನ್) ಪಡೆಯಿರಿ.

ಮಾಸಿಕ ಸೆಸ್ ಪಾವತಿ
(ಫಾರಂ ಎಚ್‌ಎಸ್‌ಎನ್‌ಎಸ್ ಪಿಎಂಟಿ–01)

- ಆಯಾ ತಿಂಗಳ 7ನೇ ದಿನದೊಳಗೆ ವಿದ್ಯುನ್ಮಾನ ವಿಧಾನದಲ್ಲಿ ಪಾವತಿಸಿ.
- (ಉದಾ: ಫೆಬ್ರವರಿ 2026ರ ಪಾವತಿಯನ್ನು 7ನೇ ಫೆಬ್ರವರಿ 2026ರೊಳಗೆ ಪಾವತಿಸುವುದು)
- ಟ್ಯಾಕ್ಸ್‌ಪೇಯರ್ ಡ್ಯಾಶ್‌ಬೋರ್ಡ್‌ಗೆ ಲಾಗಿನ್ ಮಾಡಿ, ಮೆನ್ಯು ಟ್ಯಾಬ್ ಅಡಿಯಲ್ಲಿನ ಇ–ಪೇಮೆಂಟ್ ಸೆಲೆಕ್ಟ್ ಮಾಡುವ ಮೂಲಕ ಸೆಸ್ ಪಾವತಿಸಬಹುದು.

ಸೆಸ್ ಡಿಕ್ಲರೇಶನ್
(ಫಾರಂ ಎಚ್‌ಎಸ್‌ಎನ್‌ಎಸ್ ಡಿಸಿ–01)

- ನೋಂದಣಿ ಅನುಮೋದನೆಗೊಂಡ 7 ದಿನಗಳೊಳಗೆ ಫೈಲ್ ಮಾಡಿ.
- ಟ್ಯಾಕ್ಸ್‌ಪೇಯರ್ ಡ್ಯಾಶ್‌ಬೋರ್ಡ್‌ಗೆ ಲಾಗಿನ್ ಮಾಡಿ, ಮೆನ್ಯು ಟ್ಯಾಬ್ ಅಡಿಯಲ್ಲಿನ ಡಿಕ್ಲರೇಶನ್ ಕ್ಲಿಕ್ ಮಾಡಿ ನಿಮ್ಮ ಡಿಕ್ಲರೇಶನ್ ಸಲ್ಲಿಸಬಹುದು.

ಮಾಸಿಕ ರಿಟರ್ನ್
(ಫಾರಂ ಎಚ್‌ಎಸ್‌ಎನ್‌ಎಸ್ ರಿಟ–01)

- ಮುಂದಿನ ತಿಂಗಳ 20ನೇ ದಿನದೊಳಗೆ ವಿದ್ಯುನ್ಮಾನ ವಿಧಾನದಲ್ಲಿ ಫೈಲ್ ಮಾಡಿರಿ (ಉದಾ: ಫೆಬ್ರವರಿ 2026ರ ರಿಟರ್ನ್‌ನ್ನು 20ನೇ ಮಾರ್ಚ್ 2026 ರೊಳಗೆ ಫೈಲ್ ಮಾಡಿ)
- ಟ್ಯಾಕ್ಸ್‌ಪೇಯರ್ ಡ್ಯಾಶ್‌ಬೋರ್ಡ್‌ಗೆ ಲಾಗಿನ್ ಮಾಡಿ, ಮೆನ್ಯು ಟ್ಯಾಬ್ ಅಡಿಯಲ್ಲಿನ ರಿಟರ್ನ್ ಕ್ಲಿಕ್ ಮಾಡುವ ನಿಮ್ಮ ರಿಟರ್ನ್ ಫೈಲ್ ಮಾಡಬಹುದು.

CBC 15502/13/0049/2526

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ದಿನಾಂಕ 31.12.2025ರ ಅಧಿಸೂಚನೆ ಸಂ. ಎಸ್.ಒ. 6153(ಇ) ಮತ್ತು ದಿನಾಂಕ 01.01.2026ರ 01/2026–ಎಚ್‌ಎಸ್‌ಎನ್‌ಎಸ್ ಪರಿಶೀಲಿಸಿರಿ

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಪರ್ಕಿಸಿ: cbicmitra.helpdesk@icegate.gov.in 18004250232

@cbic_india @cbicindia @CBICINDIA @cbicindia @CBICIndia www.cbic.gov.in

ಟಾಕ್ಸಿಕ್ ಮೇಲೆ ನಿರೀಕ್ಷೆ ಅಪಾರ
ವೃದ್ಧಿಸಬಹುದೆ ಚಿತ್ರರಂಗದ ವ್ಯವಹಾರ?

• ವಿನಾಯಕ ಕೆ.ಎಸ್

2025ರಲ್ಲಿ ಕನ್ನಡದ ಸುಮಾರು 230ಕ್ಕೂ ಹೆಚ್ಚು ಸಿನಿಮಾಗಳು ತೆರೆಕಂಡಿವೆ. ಆದರೆ ಬಾಕ್ಸಾಫೀಸ್ ಕೊಳ್ಳೆ ಹೊಡೆದಿದ್ದು ಎರಡು ಸಿನಿಮಾಗಳು ಮಾತ್ರ! ಹಾಕಿದ ಬಂಡವಾಳ ಮರುಗಳಿಕೆ ಮಾಡಿದ ಸಿನಿಮಾಗಳ ಸಂಖ್ಯೆ ಹತ್ತು ದಾಟಲಾರವು. ವರ್ಷದ ಅಂತ್ಯದಲ್ಲಿ ತೆರೆಕಂಡ ಸ್ಟಾರ್ ನಟರ ಸಿನಿಮಾಗಳಿಗೆ ಪ್ರೇಕ್ಷಕರ ಪ್ರತಿಕ್ರಿಯೆ ಆಶಾದಾಯಕವಾಗಿರಲಿಲ್ಲ. ಇವೆಲ್ಲವುಗಳ ನಡುವೆ 2026ರಲ್ಲಿ ಉದ್ಯಮ ಮತ್ತೆ ಪುಟಿದೇಳಬಹುದೆಂಬ ನಿರೀಕ್ಷೆ ಚಿತ್ರರಂಗದ್ದು.

‘ಚಿತ್ರರಂಗದಲ್ಲಿ ಯಶಸ್ಸಿನ ಪ್ರಮಾಣ ಬಹಳ ಕಡಿಮೆ. 2025ರಲ್ಲಿ ಹಾಕಿದ ಬಂಡವಾಳ ಪೂರ್ತಿಯಾಗಿ ಮರುಗಳಿಸಿದ ಸಿನಿಮಾಗಳು ಕೂಡ ವಿರಳ. 2026ರಲ್ಲಿಯೂ ನಮ್ಮದೇ ಸಂಸ್ಥೆಯ ‘ಟಾಕ್ಸಿಕ್’, ‘ಕೆಡಿ’ ಬಿಟ್ಟರೆ ಈಗಾಗಲೇ ಬಿಡುಗಡೆ ದಿನಾಂಕ ಘೋಷಣೆಗೊಂಡ ಸ್ಟಾರ್‌ಗಳ ಬಹುನಿರೀಕ್ಷಿತ ಸಿನಿಮಾಗಳಿಲ್ಲ. ಒಬ್ಬಿಬ್ಬರ ಹೊರತಾಗಿ ಬೇರೆ ಸ್ಟಾರ್ ಸಿನಿಮಾಗಳು ಪ್ರಾರಂಭವೇ ಆಗಿಲ್ಲ. ಹೀಗಾಗಿ ಈ ವರ್ಷ ನಿರೀಕ್ಷೆ ಬಹಳ ಕಡಿಮೆ ಇದೆ. ಯಾವ ಸ್ಟಾರ್ ಕೂಡ ಲೆಕ್ಕಕ್ಕೆ ಬರುವುದಿಲ್ಲ. ಜನರನ್ನು ಅಚ್ಚರಿಸಿಗೊಳ್ಳುವ ಸಿನಿಮಾಗಳು ಬರಬೇಕಷ್ಟೆ. ಅದರ ಹೊರತಾಗಿ ಬೇರೆ ಯಾವ ಪವಾಡವೂ ನಡೆಯುವುದಿಲ್ಲ’ ಎನ್ನುತ್ತಾರೆ ಸಿನಿಮಾ ವಿತರಕ ಹಾಗೂ ಕೆವಿಎನ್ ನಿರ್ಮಾಣ ಸಂಸ್ಥೆಯ ಸುಪ್ರೀತ್.

ಚಿತ್ರರಂಗದಲ್ಲಿ ಹೊಸಬರ ಸಿನಿಮಾಗಳು ಗೆಲ್ಲುತ್ತಿಲ್ಲ. ಸ್ಟಾರ್‌ಗಳ ಚಿತ್ರಗಳನ್ನು ಜನ ಕೈ ಹಿಡಿಯುತ್ತಿಲ್ಲ ಎಂಬ ಪರಿಸ್ಥಿತಿಯಿದೆ. ಹಾಗಂತ 2026 ರಲ್ಲಿಯೂ ಚಿತ್ರಗಳ ಸಂಖ್ಯೆ ಕಡಿಮೆಯಾಗುವ ಲಕ್ಷಣಗಳಿಲ್ಲ. ‘2025ರ ನವೆಂಬರ್‌ನಿಂದ ಡಿಸೆಂಬರ್ ಅಂತ್ಯದವರೆಗೆ 100ಕ್ಕೂ ಹೆಚ್ಚು ಸಿನಿಮಾಗಳು ಸೆನ್ಸಾರ್ ಆಗಿವೆ. ಪ್ರತಿನಿತ್ಯ ಸರಾಸರಿ ನಾಲ್ಕು ಸಿನಿಮಾಗಳನ್ನು ನೋಡಿ ಸೆನ್ಸಾರ್ ಮಾಡಿದ್ದೇವೆ. ಇವುಗಳಲ್ಲಿ 3–4 ಸಿನಿಮಾಗಳನ್ನು ಬಿಟ್ಟು ಉಳಿದವು ಇನ್ನಷ್ಟೆ ಬಿಡುಗಡೆಗೊಳ್ಳಬೇಕಿವೆ’ ಎನ್ನುತ್ತಾರೆ ಬೆಂಗಳೂರಿನ ಸಿಬಿಎಫ್‌ಸಿ (ಸೆನ್ಸಾರ್ ಮಂಡಳಿ) ಅಧಿಕಾರಿಗಳು.

ಉದ್ಯಮ ಅನುಭವಿಗಳ ಪ್ರಕಾರ 2025ರ 125ಕ್ಕೂ ಹೆಚ್ಚು ಸಿನಿಮಾಗಳು ಸೆನ್ಸಾರ್ ಆಗಿಯೂ ಬಿಡುಗಡೆಯಾಗದೆ ಉಳಿದಿವೆ. ಅವುಗಳಲ್ಲಿ ಅರ್ಧದಷ್ಟು ಈ ವರ್ಷದ ಮೊದಲಾರ್ಧದಲ್ಲಿ ತೆರೆ ಕಾಣಲಿವೆ. ಕಳೆದ ಕೆಲ ವರ್ಷಗಳ ಅಂಕಿಅಂಶಗಳನ್ನು ಗಮನಿಸಿದರೆ ಪ್ರತಿ ವರ್ಷ 275 ಸಿನಿಮಾಗಳು ಸೆಟ್ಟೇರುತ್ತಿವೆ. ಅದೇ ರೀತಿ ಈ ವರ್ಷವೂ ಮತ್ತೊಂದಷ್ಟು ಹೊಸ ಸಿನಿಮಾಗಳು ಸೇರ್ಪಡೆಗೊಳ್ಳಲಿವೆ. ಅಲ್ಲಿಗೆ ಈ ವರ್ಷ ಬಿಡುಗಡೆಗೊಳ್ಳುವ ಸಿನಿಮಾಗಳ ಸಂಖ್ಯೆ 250 ದಾಟಬಹುದು ಎಂದು ಅಂದಾಜಿಸಲಾಗಿದೆ. ಆದರೆ ಇವುಗಳಲ್ಲಿ ಬಹುತೇಕ ಹೊಸಬರ ಸಿನಿಮಾಗಳು.

ಬಹು ನಿರೀಕ್ಷಿತ ಸಿನಿಮಾಗಳ ಕೊರತೆ

2026ರಲ್ಲಿ ಈಗಾಗಲೇ ಬಜ್ ಸೃಷ್ಟಿಸಿರುವ ಸಿನಿಮಾಗಳ ಸಂಖ್ಯೆ ಕಡಿಮೆಯಿದೆ. ದುನಿಯಾ ವಿಜಯ್ ನಟನೆಯ ‘ಲ್ಯಾಂಡ್‌ಲಾರ್ಡ್’ ಜನವರಿಯಲ್ಲಿ ಬಿಡುಗಡೆಗೊಳ್ಳಲಿದೆ. ವಿಜಯ್ ಹಿಂದಿನ ಚಿತ್ರ ಹಿಟ್ ಆಗಿದ್ದರಿಂದ, ಜತೆಗೆ ‘ಕಾಟೇರ’ ಚಿತ್ರದ ಬರಹಗಾರರಾಗಿದ್ದ ಜಡೇಶ್ ಹಂಪಿ ನಿರ್ದೇಶನವಿರುವುದರಿಂದ ನಿರೀಕ್ಷೆ ಹೆಚ್ಚಿದೆ. ಮಾರ್ಚ್‌ನಲ್ಲಿ ಯಶ್ ನಟನೆಯ ‘ಟಾಕ್ಸಿಕ್’ ಚಿತ್ರ ಮಾ.19ರಂದು ತೆರೆ ಕಾಣಲಿದೆ. ಧ್ರುವ ಸರ್ಜಾ ನಟನೆಯ ‘ಕೆಡಿ’ ಏ.30ರಂದು ತೆರೆಗೆ ಬರಲಿದೆ ಎಂದು ಚಿತ್ರತಂಡ ಘೋಷಿಸಿದೆ. ಶಿವರಾಜ್‌ಕುಮಾರ್ ನಟನೆಯ ‘ಡ್ಯಾಡ್’ ತೆರೆ ಕಾಣುವುದು ಖಚಿತ.

ಕಳೆದ ವರ್ಷ ಸೂಪರ್ ಹಿಟ್ ಚಿತ್ರಕೊಟ್ಟ ರಿಷಬ್ ಶೆಟ್ಟಿಯ ಸಿನಿಮಾವಿಲ್ಲ. ರಕ್ಷಿತ್ ಶೆಟ್ಟಿ ಸಿನಿಮಾ ಇನ್ನಷ್ಟೇ ಸೆಟ್ಟೇರಬೇಕಿದೆ. ಉಪೇಂದ್ರ ಅವರ ‘ಭಾರ್ಗವ’ ಈ ವರ್ಷ ತೆರೆ ಕಾಣಲಿದೆ. ಸುದೀಪ್ ಅವರ ‘ಬಿಲ್ಲ ರಂಗ ಬಾಷಾ’ ಸೆಟ್ಟೇರಿದೆ. ಅದು ಈ ವರ್ಷ ತೆರೆಗೆ ಬರುವುದು ಅನುಮಾನ. ಆದರೆ ಜೂನ್‌ನಲ್ಲೊಂದು ಸಿನಿಮಾ ತೆರೆಗೆ ತರುವುದಾಗಿ ಸುದೀಪ್ ಹೇಳಿದ್ದಾರೆ. ಚಿತ್ರೋದ್ಯಮದಲ್ಲಿ ಎರಡನೇ ಸಾಲಿನಲ್ಲಿ ನಿಲ್ಲುವ ಮಾಸ್ ನಾಯಕರ ಸಿನಿಮಾಗಳೂ ಒಂದಷ್ಟಿವೆ. ಡಾಲಿ ಧನಂಜಯ ನಟನೆಯ ‘ಅಣ್ಣ ಫ್ರಂ ಮೆಕ್ಸಿಕೊ’ ಈ ವರ್ಷ ತೆರೆ ಕಾಣಲಿದೆ. ಫೆಬ್ರುವರಿಯಲ್ಲಿ ರಾಜ್ ಬಿ.ಶೆಟ್ಟಿ ನಟನೆಯ ‘ರಕ್ಕಸಪುರದೊಳ್’ ಬಿಡುಗಡೆಯಾಗಲಿದೆ. ಡಾಲಿ ಹಾಗೂ ಶಿವಣ್ಣ ನಟನೆಯ ‘666 ಆಪರೇಷನ್ ಡ್ರೀಮ್ ಥಿಯೇಟರ್’ ಈ ವರ್ಷವೇ ಬರುವ ಬಗ್ಗೆ ಖಚಿತತೆ ಇಲ್ಲ. ನೀನಾಸಂ ಸತೀಶ್ ಅವರ ‘ದಿ ರೈಸ್ ಆಫ್ ಅಶೋಕ’ ಈ ವರ್ಷದ ಮೊದಲಾರ್ಧದಲ್ಲಿ ತೆರೆಗೆ ಬರಲಿದೆ. ‘ಅಯೋಗ್ಯ–2’ ಕೂಡ ಈ ವರ್ಷವೇ ಬಿಡುಗಡೆಗೊಳ್ಳುವ ಸಾಧ್ಯತೆಯಿದೆ. ರಮೇಶ್ ಅರವಿಂದ್, ಪ್ರಜ್ವಲ್ ದೇವರಾಜ್ ಸಿನಿಮಾಗಳೂ ಇವೆ.

‘ನಟನ ಹಿಂದಿನ ಸಿನಿಮಾ ಹಿಟ್ ಆಗಿದ್ದರೆ ಮಾತ್ರ ಪ್ರಸ್ತುತ ಸಿನಿಮಾದ ಮೇಲೆ ಸ್ವಲ್ಪ ಭರವಸೆ ಇರುತ್ತದೆ. ಇಲ್ಲವಾದಲ್ಲಿ ಸ್ಟಾರ್ ಸಿನಿಮಾಗಳಾದರೂ ಮೊದಲ ದಿನದ ಮೂರನೇ ಪ್ರದರ್ಶನಕ್ಕೆ ಚಿತ್ರಮಂದಿರ ಖಾಲಿ ಹೊಡೆಯುತ್ತದೆ. ಸಿನಿಮಾ ಚೆನ್ನಾಗಿದ್ದರೆ ಮಾತ್ರ ಜನ ಬರುತ್ತಾರೆ ಎಂಬುದು ಸ್ಪಷ್ಟವಾಗಿದೆ. ‘ಸು ಫ್ರಂ ಸೋ’ ರೀತಿಯಲ್ಲಿ ಯಾವುದೋ ಒಂದು ಸಿನಿಮಾ ಬಂದು ಮೋಡಿ ಮಾಡಬೇಕಷ್ಟೆ. ಇಲ್ಲವಾದರೆ ಈ ವರ್ಷ ಕೂಡ ಚಿತ್ರರಂಗದ ಪಾಲಿಗೆ ಸಪ್ಪೆ’ ಎನ್ನುತ್ತಾರೆ ಚಿತ್ರಮಂದಿರದ ಮಾಲೀಕರೊಬ್ಬರು.

ದ್ವಿತೀಯಾರ್ಧದಲ್ಲಿ ದೊಡ್ಡ ಸಿನಿಮಾಗಳಿಲ್ಲ

‘ಈ ವರ್ಷದ ಮೊದಲಾರ್ಧ ಆಶಾದಾಯಕವಾಗಿದೆ. ಸ್ಟಾರ್‌ಗಳ ನಿರೀಕ್ಷಿತ ಸಿನಿಮಾಗಳಿವೆ. ಜತೆಗೆ ‘ಲವ್ ಮಾಕ್ಟೇಲ್–3’, ‘ಅಯೋಗ್ಯ–2’ ಸಿನಿಮಾಗಳು ತೆರೆ ಕಾಣಲಿವೆ. ನಿಜವಾದ ಭಯ ಇರುವುದು ಈ ವರ್ಷದ ದ್ವಿತೀಯಾರ್ಧದಲ್ಲಿ. ದೊಡ್ಡ ಸ್ಟಾರ್‌ಗಳ ಸಿನಿಮಾವಿಲ್ಲ. ಹೊಸಬರ ಸಿನಿಮಾ ಗೆಲುವು ಉದ್ಯಮಕ್ಕೆ ಪ್ರತಿಭೆಗಳನ್ನು ನೀಡುತ್ತದೆ. ಸ್ಟಾರ್ ಸಿನಿಮಾಗಳು ಬಂಡವಾಳ ನೀಡುತ್ತವೆ. ಎರಡೂ ರೀತಿಯ ಸಿನಿಮಾಗಳು ಗೆದ್ದಾಗ ಉದ್ಯಮದಲ್ಲಿ ಸಮತೋಲನವಿರುತ್ತದೆ. ಎರಡು ತಿಂಗಳಿಗೊಂದಾದರೂ ಹಿಟ್ ಸಿನಿಮಾ ಬರಬೇಕು’ ಎನ್ನುತ್ತಾರೆ ನಿರ್ದೇಶಕ, ನಿರ್ಮಾಪಕ ತರುಣ್ ಕಿಶೋರ್ ಸುಧೀರ್.

ನಟರಾಜ್, ನಿರೀಕ್ಷಾ ಶೆಟ್ಟಿ

‘ಕರಿಕಾಡ’ನ ಹಾಡು ಬಿಡುಗಡೆ

ನಟರಾಜ್ ಹಾಗೂ ನಿರೀಕ್ಷಾ ಶೆಟ್ಟಿ ಜೋಡಿಯಾಗಿ ನಟಿಸಿರುವ ‘ಕರಿಕಾಡ’ ಚಿತ್ರದ ‘ಕಬ್ಬಿನ ಜಲ್ಲೆ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಗಿಲ್ಲಿ ವೆಂಕಟೇಶ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರ ಫೆಬ್ರುವರಿ 6ರಂದು ತೆರೆಗೆ ಬರಲಿದೆ.

ಗೀತೆಗೆ ಅತಿಶಯ್ ಜೈನ್ ಸಂಗೀತವಿದ್ದು, ನಿರ್ದೇಶಕರೇ ಸಾಹಿತ್ಯ ರಚಿಸಿದ್ದಾರೆ. ಅತಿಶಯ್ ಹಾಗೂ ಮಾನಸ ಹೊಳ್ಳ ಹಾಡಿಗೆ ಧ್ವನಿಯಾಗಿದ್ದಾರೆ.

‘ಇದೊಂದು ಮ್ಯೂಸಿಕಲ್ ಜರ್ನಿ. ಸಾಹಸಮಯ ಅಂಶಗಳನ್ನು ಹೊಂದಿರುವ ಸಿನಿಮಾ. ನಾನು ಮೂಲತಃ ಐಟಿ ಉದ್ಯೋಗಿ. ವಾರಾಂತ್ಯ ಹಾಗೂ ರಜೆ ದಿನಗಳಲ್ಲಿ ಚಿತ್ರೀಕರಣ ಮಾಡಿ ಈ ಚಿತ್ರವನ್ನು ಮುಗಿಸಿದ್ದೇವೆ. ನನ್ನ ಪತ್ನಿ ದೀಪ್ತಿ ದಾಮೋದರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ’ ಎಂದಿದ್ದಾರೆ ನಟರಾಜ್.

ಅತಿಶಯ್ ಜೈನ್ ಹಾಗೂ ಶಶಾಂಕ್ ಶೇಷಗಿರಿ ಸಂಗೀತ, ಜೀವನ್ ಗೌಡ ಛಾಯಾಚಿತ್ರಗ್ರಹಣ, ದೀಪಕ್ ಸಿ.ಎಸ್ ಸಂಕಲನ ಚಿತ್ರಕ್ಕಿದೆ.

ಏಪ್ರಿಲ್‌ನಲ್ಲಿ ‘ಲವ್ ಮಾಕ್ಟೇಲ್–3’

ಡಾರ್ಲಿಂಗ್ ಕೃಷ್ಣ, ಸಂವೃತಾ

2020ರಲ್ಲಿ ತೆರೆಕಂಡ ‘ಲವ್ ಮಾಕ್ಟೇಲ್’ ಸಿನಿಮಾ ನಟ ಡಾರ್ಲಿಂಗ್ ಕೃಷ್ಣ ಹಾಗೂ ನಟಿ ಮಿಲನಾ ನಾಗರಾಜ್ ಸಿನಿಪಯಣಕ್ಕೆ ದೊಡ್ಡ ತಿರುವು ನೀಡಿತ್ತು. ಅದರ ಫ್ರಾಂಚೈಸಿ ಮುಂದುವರಿದಿದ್ದು, ‘ಲವ್ ಮಾಕ್ಟೇಲ್–3’ ಈ ವರ್ಷ ಏ.10ರಂದು ತೆರೆಗೆ ಬರಲಿದೆ.

ಸಿನಿಮಾಕ್ಕೆ ಡಾರ್ಲಿಂಗ್ ಕೃಷ್ಣ ಅವರೇ ಆ್ಯಕ್ಷನ್–ಕಟ್ ಹೇಳಿದ್ದು, ಜತೆಗೆ ನಿರ್ಮಾಣವನ್ನೂ ಮಾಡಿದ್ದಾರೆ. ಈ ಚಿತ್ರದ ಹಿಂದಿನ ಎರಡು ಭಾಗಗಳು ಯಶಸ್ಸು ಕಂಡಿತ್ತು. ‘ಲವ್ ಮಾಕ್ಟೇಲ್ ಮೊದಲೆರಡು ಭಾಗಗಳ ಜಾನರ್ ಬೇರೆ ಬೇರೆಯದ್ದಾಗಿತ್ತು. ಮೂರನೇ ಭಾಗದಲ್ಲಿ ಅಪ್ಪ–ಮಗಳ ಕಥೆಯಿದೆ. ನಿಧಿ ಕಳೆದುಕೊಂಡ ಬಳಿಕದ ಕಥೆ. ಇದು ‘ಆದಿ’ಯ ಪಯಣವೂ ಹೌದು. ಎರಡನೇ ಭಾಗದ ಕ್ಲೈಮ್ಯಾಕ್ಸ್‌ನಲ್ಲಿ ಬರುವ ದತ್ತು ಮಗಳ ಪಾತ್ರ ಇಲ್ಲಿ ಮುಂದುವರಿದಿದೆ’ ಎಂದಿದ್ದಾರೆ ಡಾರ್ಲಿಂಗ್ ಕೃಷ್ಣ.

ಬೆಂಗಳೂರು, ಮೈಸೂರು, ಕಛ್, ಜೋಧ್‌ಪುರ್, ಜೈಸಲ್ಮೇರ್, ಅಂಡಮಾನ್, ಜಾರ್ಜಿಯಾದಲ್ಲಿ ಚಿತ್ರೀಕರಣಗೊಂಡಿದೆ. ನಕುಲ್ ಅಭ್ಯಂಕರ್ ಸಂಗೀತ, ಶ್ರೀ ಕ್ರೇಜಿಮೈಂಡ್ ಛಾಯಾಚಿತ್ರಗ್ರಹಣ ಹಾಗೂ ಸಂಕಲನ ಚಿತ್ರಕ್ಕಿದೆ. ಮಿಲನಾ ನಾಗರಾಜ್, ಸಂವೃತಾ, ದಿಲೀಪ್ ರಾಜ್ ಮುಂತಾದವರು ಚಿತ್ರದಲ್ಲಿದ್ದಾರೆ.

ತಾಳ್ಮೆ ಪರೀಕ್ಷಿಸುವ ಕಥೆ

ನಾವು ನೋಡಿದ ಸಿನಿಮಾ

ತೀರ್ಥರೂಪ ತಂದೆಯವರಿಗೆ

- ನಿರ್ಮಾಣ: ಜೈ ಚಾಮುಂಡೇಶ್ವರಿ ಪ್ರೊಡಕ್ಷನ್
- ನಿರ್ದೇಶನ: ರಾಮೇನಹಳ್ಳಿ ಜಗನ್ನಾಥ್
- ತಾರಾಗಣ: ನಿಹಾರ್ ಮುಖೇಶ್, ರಚನಾ ಇಂದರ್, ಸಿತಾರ, ರವೀಂದ್ರ ವಿಜಯ್ ಮತ್ತಿತರರು

ಭಾವನಾತ್ಮಕ ಸಿನಿಮಾದಲ್ಲಿ ಭಾವನೆಯನ್ನು ತಟ್ಟುವಂಥ ಸನ್ನಿವೇಶಗಳು ಹೆಚ್ಚಿರದಿದ್ದರೆ, ಭಾವನೆಗಳನ್ನು ದಾಟಿಸುವ ಸಮರ್ಥ ಕಲಾವಿದರು ಇಲ್ಲದಿದ್ದರೆ ತಾಳ್ಮೆ ಕೆಡಲು ಪ್ರಾರಂಭತ್ತದೆ. ಅದೇ ರೀತಿ ಭಾವನಾತ್ಮಕ ಕಥೆಯನ್ನು ಕೈಗೆತ್ತಿಕೊಂಡ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ಚಿತ್ರಕಥೆ ಬರವಣಿಗೆಯಲ್ಲಿ ಎಡವಿದ್ದಾರೆ. ಹೀಗಾಗಿ ‘ತೀರ್ಥರೂಪ ತಂದೆಯವರಿಗೆ’ ಪ್ರಾರಂಭದಿಂದಲೇ ತಾಳ್ಮೆ ಪರೀಕ್ಷಿಸಲು ಶುರು ಮಾಡುತ್ತದೆ.

ಕಳೆದ ವರ್ಷ ‘ಎಲ್ಲೋ ಜೋಗಪ್ಪ ನಿನ್ನರಮನೆ’ ಸಿನಿಮಾ ಬಿಡುಗಡೆಗೊಂಡಿತ್ತು. ಅದೇ ರೀತಿಯ ಕಥಾಹಂದರ ಹೊಂದಿರುವ ಚಿತ್ರ ‘ತೀರ್ಥರೂಪ’. ಯಾವುದೋ ಕಾರಣದಿಂದ ತಂದೆಯಿಂದ ದೂರವಾದ ಮಗನೊಬ್ಬ ಮತ್ತೆ ತಂದೆಯನ್ನು ಹುಡುಕಿಕೊಂಡು ಹೋಗುವುದೇ ಚಿತ್ರದ ಕಥೆ. ಯೂಟ್ಯೂಬರ್ ಆಗಿರುವ ಕಥಾನಾಯಕ ಪೃಥ್ವಿಯ ಬದುಕಿನ ಪಯಣದಿಂದಲೇ ಕಥೆ ಪ್ರಾರಂಭವಾಗುತ್ತದೆ. ಆತನ ತಾಯಿ ಜಾನಕಿ. ಆಕೆಗೊಬ್ಬ ಗೆಳೆಯ ವಿಶ್ವನಾಥ. ಈ ವಿಶ್ವನಾಥನಿಂದಲೇ ಪೃಥ್ವಿ ಸಮಾಜದಲ್ಲಿ ಸಾಕಷ್ಟು ಅವಮಾನಗಳನ್ನು ಅನುಭವಿಸುತ್ತ ಇರುತ್ತಾನೆ. ಹೀಗಾಗಿಯೇ ಆತ ತಾಯಿಯಿಂದಲೂ ಅಂತರ ಕಾಯ್ದುಕೊಂಡಿರುತ್ತಾನೆ. ಈತನ ಬದುಕಿನಲ್ಲಿ ಬರುವವಳು ಅಕ್ಷರ. ಇವರಿಬ್ಬರ ಭೇಟಿ, ಪೃಥ್ವಿಯ ಹಿನ್ನೆಲೆ ಕಥೆ ಮುಗಿಯುವ ಹೊತ್ತಿಗೆ ಚಿತ್ರದ ಮೊದಲಾರ್ಧ ಸಮೀಪಿಸಿರುತ್ತದೆ.

ಚಿತ್ರದ ನಿಜವಾದ ಕಥೆ ಪ್ರಾರಂಭವಾಗುವುದು ಮೊದಲಾರ್ಧದ ಅಂತ್ಯದಲ್ಲಿ. ದ್ವಿತೀಯಾರ್ಧದಿಂದ ಕಥೆ ವೇಗ ಪಡೆಯುತ್ತದೆಯಾದರೂ, ಅಲ್ಲಿಯೂ ಒಂದಷ್ಟು ಅನವಶ್ಯ ದೃಶ್ಯಗಳು ಮತ್ತೆ ಕಥೆಯ ಸೊಗಡನ್ನು ಕೆಡಿಸುತ್ತವೆ. ಉದಾಹರಣೆಗೆ ನಾಯಕ ಅಪ್ಪನನ್ನು ಹುಡುಕಿಕೊಂಡು ಕೊಚ್ಚಿನ್‌ಗೆ ಹೋಗುವ ದೃಶ್ಯದಲ್ಲಿ ಕಾಲೇಜಿನಲ್ಲಿ ನಡೆಯುವ ಘಟನೆಯೊಂದನ್ನು ಬಿಟ್ಟು ಬೇರೆ ಯಾವ ಅಂಶಗಳು ಮುಖ್ಯ ಕಥೆಗೆ ಹೆಚ್ಚು ಪೂರಕವಾಗಿಲ್ಲ. ಭಾವ ಪಯಣದಲ್ಲಿ ನಾಯಕನ ಬಿಲ್ಡಪ್, ಆತನನ್ನು ವೈಭವೀಕರಿಸುವ ದೃಶ್ಯಗಳು, ಅದಕ್ಕಾಗಿಯೇ ಖಳನಾಯಕನ ಸೃಷ್ಟಿಯಂಥ ಸನ್ನಿವೇಶಗಳು ಅನಗತ್ಯ. ಎರಡು ಫೈಟ್‌ಗಳು, ನಾಯಕನಿಗೊಬ್ಬ ಎದುರಾಳಿ, ಆತನ ಒಂದಷ್ಟು ದೃಶ್ಯಗಳನ್ನು ಅಪ್ಪ–ಮಗನ ಸಂಬಂಧದ ಕಥೆಯನ್ನು ಹೇಳುವ, ಕುಟುಂಬದ ಸಂಬಂಧಗಳ ಮಹತ್ವ ತಿಳಿಸುವ ಸನ್ನಿವೇಶಗಳನ್ನಾಗಿ ಪರಿವರ್ತಿಸುವ ಅವಕಾಶ ನಿರ್ದೇಶಕರಿಗಿತ್ತು.

ನಾಯಕನ ಬಾಲ್ಯದಲ್ಲಿ ಆತನ ಕುಟುಂಬದಲ್ಲಿ ಒಂದು ಘಟನೆ ನಡೆದಿರುತ್ತದೆ. ಆ ಘಟನೆ ಏನು, ಅದರಿಂದಾದ ಪರಿಣಾಮಗಳೇನು ಎಂಬುದೇ ಒಟ್ಟಾರೆ ಚಿತ್ರ. ಆದರೆ ವಾರಪತ್ರಿಕೆಯಲ್ಲಿ ಬಂದು ಜಗಜ್ಜಾಹೀರಾದ ಆ ಸನ್ನಿವೇಶದ ಸತ್ಯಕಥೆ 20 ವರ್ಷಗಳು ಕಳೆದರೂ ನಾಯಕನಿಗೆ ಗೊತ್ತೇ ಆಗಿರುವುದಿಲ್ಲ. ಆ ವಿಷಯ ತಿಳಿಯಲು ನಾಯಕಿಯ ಮನೆ ಬಾಗಿಲಿನವರೆಗೆ ಪಯಣ ಸಾಗಬೇಕು ಎಂಬ ಅಂಶವೇ ಲಾಜಿಕ್ ಇಲ್ಲದ್ದು ಎನ್ನಿಸಿ, ಒಟ್ಟಾರೆ ಕಥೆಯಲ್ಲಿನ ಕುತೂಹಲವನ್ನೇ ಕಳೆದುಬಿಡುತ್ತದೆ.

ಹಲವು ರೀತಿಯ ಭಾವನಾತ್ಮಕ ಪ್ರಪಂಚವನ್ನು ಕಟ್ಟಿಕೊಡುವ ಯತ್ನವನ್ನು ನಿರ್ದೇಶಕರು ಮಾಡಿದ್ದಾರೆ. ಮಗನ ಪ್ರೀತಿಗಾಗಿ ಹಂಬಲಿಸುವ ತಾಯಿಯ ಕರುಳಿದೆ. ಹೆಣ್ಣು–ಗಂಡಿನ ಸಂಬಂಧಕ್ಕೆ ವಿವಿಧ ರೀತಿಯ ಬಣ್ಣ ಕಟ್ಟಿದಾಗಲೂ ಕದಲದ ಜೋಡಿಯಿದೆ. ಅಪ್ಪನಿಂದ ನೊಂದುಕೊಳ್ಳುವ ಮಕ್ಕಳಿದ್ದಾರೆ.

ಚಿತ್ರದಲ್ಲಿ ಇಷ್ಟವಾಗುವುದು ನಾಯಕನ ತಂದೆ ಪಾತ್ರದಲ್ಲಿ ನಟಿಸಿರುವ ರವೀಂದ್ರ ವಿಜಯ್. ಭೌತಶಾಸ್ತ್ರದ ಪ್ರಾಧ್ಯಾಪಕನಾಗಿ ಪಾತ್ರವನ್ನು ಜೀವಿಸಿದ್ದಾರೆ. ತಾಯಿಯಾಗಿ ಸಿತಾರ ನಟನೆ ಕೂಡ ಚೆನ್ನಾಗಿದೆ. ಆದರೆ ಪಾತ್ರಪೋಷಣೆ ಇನ್ನಷ್ಟು ಗಟ್ಟಿಯಾಗಬಹುದಿತ್ತು. ವಿಶ್ವನಾಥನಾಗಿ ರಾಜೇಶ್ ನಟರಂಗ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಪೃಥ್ವಿಯಾಗಿ ಅರ್ಧ ಸಿನಿಮಾ ಆವರಿಸಿರುವ ನಿಹಾರ್ ಮುಖೇಶ್‌ಗಿದು ಮೊದಲ ಸಿನಿಮಾ ಎಂಬುದು ನಟನೆಯಿಂದಲೇ ಗೊತ್ತಾಗುತ್ತದೆ. ಅಕ್ಷರಳಾಗಿ ರಚನಾ ಇಂದರ್ ಭಾವನಾತ್ಮಕ ದೃಶ್ಯಗಳಲ್ಲಿ ಇನ್ನಷ್ಟು ಉತ್ತಮವಾಗಿ ನಟಿಸುವ ಅವಕಾಶವಿತ್ತು.

ಚಿತ್ರದ ಅತಿದೊಡ್ಡ ಶಕ್ತಿ ಜೋ ಕೋಸ್ಟ್ ಅವರ ಹಿನ್ನೆಲೆ ಸಂಗೀತ. ಹಲವು ದೃಶ್ಯಗಳಲ್ಲಿ ಕಣ್ಣುಮುಚ್ಚಿ ಹಿನ್ನೆಲೆ ಸಂಗೀತವನ್ನೇ ಕೇಳುತ್ತಿರಬಹುದು! ಆದರೆ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ದೀಪಕ್ ಅವರ ಛಾಯಾಚಿತ್ರಗ್ರಹಣದಲ್ಲಿ ಮೇಘಾಲಯದ ದೃಶ್ಯಗಳು ಚಿತ್ರದ ಅಂದವನ್ನು ಹೆಚ್ಚಿಸಿದೆ. ಮುಖ್ಯಕಥೆಗೆ ಕೊಡುಗೆ ನೀಡದ ಹಲವು ದೃಶ್ಯಗಳನ್ನು ಬದಿಗಿಟ್ಟು ಅವಧಿಯನ್ನು 30 ನಿಮಿಷಗಳಷ್ಟು ತಗ್ಗಿಸಿದ್ದರೆ ಚಿತ್ರದ ವೇಗವೂ ತುಸು ಹೆಚ್ಚಾಗುತ್ತಿತ್ತು.

ದಿವಾಕರ್, ಸಂಸ್ಕೃತಿ

ಎರಡು ಚಿತ್ರಗಳು ತೆರೆಗೆ

ಡಿಸೆಂಬರ್ ಅಂತ್ಯದಲ್ಲಿ ಸ್ಟಾರ್‌ಗಳ ಎರಡು ಸಿನಿಮಾಗಳು ಬಿಡುಗಡೆಗೊಂಡ ಪರಿಣಾಮ ಈ ವಾರ ಚಿತ್ರಮಂದಿರಗಳಲ್ಲಿ ಪೈಪೋಟಿ ಇಲ್ಲ. ಹೊಸ ವರ್ಷದ ಮೊದಲ ವಾರ ಎರಡು ಸಿನಿಮಾಗಳು ಮಾತ್ರ ತೆರೆ ಕಾಣುತ್ತಿವೆ.

ತೀರ್ಥರೂಪ ತಂದೆಯವರಿಗೆ

‘ಹೊಂದಿಸಿ ಬರೆಯಿರಿ’ ಸಿನಿಮಾದ ಮೂಲಕ ಗುರುತಿಸಿಕೊಂಡಿದ್ದ ರಾಮೇನಹಳ್ಳಿ ಜಗನ್ನಾಥ್ ನಿರ್ದೇಶನದ ಚಿತ್ರ ಗುರುವಾರವೇ ತೆರೆಕಂಡಿದೆ. ಬದುಕಿನಲ್ಲಾದ ಒಂದು ಚಿಕ್ಕ ತಪ್ಪು ಕುಟುಂಬವನ್ನು ಎಷ್ಟು ದೂರ ಮಾಡುತ್ತದೆ, ಒಂದಾಗಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬ ಆಶಯದ ಜೊತೆಗೆ ತಂದೆ ತಾಯಿ ಮೌಲ್ಯಗಳನ್ನು ಸಾರುವ ಚಿತ್ರವಿದು. ನಿಹಾರ್ ಮುಖೇಶ್ ನಾಯಕ. ಸಿತಾರಾ, ರಾಜೇಶ್ ನಟರಂಗ ಪ್ರಮುಖ ಪಾತ್ರಗಳಲ್ಲಿದ್ದಾರೆ. ರವೀಂದ್ರ ವಿಜಯ್, ಅಜಿತ್ ಹಂದೆ ಸೇರಿದಂತೆ ಅನುಭವಿ ತಾರಾಬಳಗ ಚಿತ್ರದಲ್ಲಿದೆ. ಚಿತ್ರವು ‘ಜೈ ಚಾಮುಂಡೇಶ್ವರಿ ಪ್ರೊಡಕ್ಷನ್ಸ್’ ಮೂಲಕ ನಿರ್ಮಾಣವಾಗಿದ್ದು, ರಾಮೇನಹಳ್ಳಿ ಜಗನ್ನಾಥ್ ಅವರೇ ಕಥೆ ಬರೆದಿದ್ದಾರೆ. ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಚಿತ್ರೀಕರಣಗೊಂಡಿದೆ. ಚಿತ್ರಕ್ಕೆ ದೀಪಕ್ ಯರಗೇರಾ ಛಾಯಾಚಿತ್ರಗ್ರಹಣ, ಜೋ ಕಾಸ್ಟ್ ಸಂಗೀತ ಸಂಯೋಜನೆ ಮತ್ತು ಪ್ರಶಾಂತ್ ರಾಜಪ್ಪ ಸಂಭಾಷಣೆಯಿದೆ.

ಶಿವಲೀಲಾ

ಲಿಂಗತ್ವ ಅಲ್ಪಸಂಖ್ಯಾತರ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರವಿದು. ಮಂಜಮ್ಮ ಜೋಗತಿ ಪ್ರಮುಖ ಪಾತ್ರದಲ್ಲಿದ್ದಾರೆ. ಅಶೋಕ್ ಜೈರಾಮ್ ನಿರ್ದೇಶನ ಮತ್ತು ನಿರ್ಮಾಣವಿದೆ.

ಸಮಾಜದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಸಾಮಾನ್ಯರ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕುವ ಬಲವಾದ ಪ್ರಯತ್ನವಿದು. ದೇಹದಲ್ಲಿ ಆಗುವ ಬದಲಾವಣೆಯಿಂದ ಬಹುತೇಕ ಮಕ್ಕಳನ್ನು ಮನೆಯಿಂದ ಹೊರಗೆ ಹಾಕುತ್ತಾರೆ. ಆ ಮಕ್ಕಳು ಸಮಾಜದಲ್ಲಿ ಬದುಕಲು ಪಡುವ ಯಾತನೆ, ಎದುರಾಗುವ ತೊಂದರೆಗಳನ್ನು ಚಿತ್ರದಲ್ಲಿ ತೋರಿಸಲಾಗಿದೆ ಎಂದಿದೆ ಚಿತ್ರತಂಡ.

ದಿವಾಕರ್‌ಗೆ ಸಂಸ್ಕೃತಿ ಜೋಡಿಯಾಗಿದ್ದಾರೆ. ರಮೇಶ್ ಕೃಷ್ಣ ಸಂಗೀತ, ಪ್ರವೀಣ್ ಶೆಟ್ಟಿ ಛಾಯಾಚಿತ್ರಗ್ರಹಣವಿದೆ.

ನಯನ ಮನೋಹರ ಎನ್ನುತ್ತ ಬಂದ ಧರ್ಮ ಕೀರ್ತಿರಾಜ್

ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸುತ್ತಿರುವ ‘ನಯನ ಮನೋಹರ’ ಸಿನಿಮಾದ ಶೀರ್ಷಿಕೆ ಹಾಗೂ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಪುನೀತ್ ಕೆ.ಜಿ.ಆರ್ ಚೊಚ್ಚಲ ನಿರ್ದೇಶನದ ಚಿತ್ರವಿದು.

‘ನಾಯಕನಾಗಿ 25ನೇ ಚಿತ್ರವಿದು. ಇದೊಂದು ಮೈಲುಗಲ್ಲು ಎನ್ನಬಹುದು. ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತೇನೆ. ಈ ಸಿನಿಮಾ ನನಗೆ ಹೆಸರು ತಂದುಕೊಡುತ್ತದೆ ಎಂಬ ನಂಬಿಕೆಯಿದೆ’ ಎಂದರು ಧರ್ಮ ಕೀರ್ತಿರಾಜ್.

‘ಸಿನಿಮಾ ನೂರು ದಿನ ಪ್ರದರ್ಶನ ಕಂಡಾಗ ಇದೇ ಜಾಗದಲ್ಲಿಯೇ ಸಂಭ್ರಮಿಸೋಣ. ಟೀಸರ್‌ನಲ್ಲಿರುವಂತೆ ಚಿತ್ರ ಮಾಡಿ. ಕನ್ನಡ ಚಿತ್ರೋದ್ಯಮ ಯಾವುದರಲ್ಲಿಯೂ ಕಡಿಮೆ ಇಲ್ಲ. ಮೊದಲು ಕನ್ನಡ ಚಿತ್ರ ನೋಡಿ. ನಂತರ ಬೇರೆ ಭಾಷೆಯ ಕಡೆ ಗಮನ ಕೊಡಿ’ ಎಂದರು ಪ್ರಿಯಾಂಕಾ ಉಪೇಂದ್ರ.

‘ಚಿತ್ರದ ಕುರಿತು ಈಗಲೇ ಏನನ್ನು ಹೇಳಲಾಗದು. ಸಿನಿಮಾ ಯಾವ ರೀತಿ ಇರುತ್ತದೆಂದು ಟೀಸರ್, ಪೋಸ್ಟರ್‌ನಲ್ಲಿ ಸಣ್ಣದೊಂದು ಸುಳಿವು ನೀಡಿದ್ದೇನೆ. ಎಲ್ಲರಿಗೂ ತಲುಪುವಂಥ ಸಿನಿಮಾವಿದು. ಧರ್ಮ ಕೀರ್ತಿರಾಜ್ ಅವರಿಗೆ ಈ ಸಿನಿಮಾ ದೊಡ್ಡ ಮಟ್ಟದಲ್ಲಿ ಗೆಲುವು ಕೊಡುತ್ತದೆಂಬ ಆಶಾಭಾವನೆಯಿದೆ. ನಾಯಕಿ ಸೇರಿದಂತೆ ಚಿತ್ರದ ಕುರಿತು ಉಳಿದ ವಿವರಗಳನ್ನು ಮುಂದಿನ ದಿನಗಳಲ್ಲಿ ನೀಡುತ್ತೇನೆ’ ಎಂದರು ನಿರ್ದೇಶಕ.

ಅನುಷ್ ಸಿದ್ದಪ್ಪ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ವಾಸುಕಿ ವೈಭವ್ ಸಂಗೀತವಿದೆ.



ಧರ್ಮ ಕೀರ್ತಿರಾಜ್

ರವಿಚಂದ್ರನ್, ರಿಶ್ವಿನ್

‘ಪ್ಯಾರ್’ಗೆ ರವಿಚಂದ್ರನ್ ಸಾಥ್

ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ‘ಪ್ಯಾರ್’ ಚಿತ್ರದ ‘ಒಂದೇ ಮಾತಲಿ ಹೇಳೋದಾದರೆ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡು ಜನಮನ್ನಣೆ ಗಳಿಸುತ್ತಿದೆ. ಎಸ್.ಸುಪ್ರೀತ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

ಪಳನಿ ಡಿ.ಸೇನಾಪತಿ ಸಂಗೀತ, ಕೆ.ಎಸ್.ಚಂದ್ರಶೇಖರ್ ಛಾಯಾಚಿತ್ರಗ್ರಹಣದಲ್ಲಿ ಲಡಾಖ್‌ನ ರಮಣೀಯ ಪರಿಸರದಲ್ಲಿ ಈ ಹಾಡನ್ನು ಸೆರೆ ಹಿಡಿಯಲಾಗಿದೆ. ಶ್ರೇಯಾ ಘೋಷಾಲ್ ಹಾಡಿಗೆ ಧ್ವನಿಯಾಗಿದ್ದಾರೆ. ಎಸ್.ಎಂ.ಪ್ರೊಡಕ್ಷನ್ಸ್ ಲಾಂಛನದಲ್ಲಿ ಹೆಚ್.ಎಸ್. ನಾಗಶ್ರೀ ಬಂಡವಾಳ ಹೂಡಿದ್ದು, ರಿಶ್ವಿನ್‌ಗೆ ರಾಶಿಕಾ ಶೆಟ್ಟಿ ಜೋಡಿಯಾಗಿದ್ದಾರೆ.

‘ಪ್ರೀತಿ, ಪ್ರೇಮದ ಕಥೆಯ ಜತೆಗೆ ತಂದೆ ಮಗಳ ನಡುವಿನ ಭಾವನಾತ್ಮಕ ಸಂಬಂಧವನ್ನೂ ತೆರೆದಿಡುವಂಥ ಚಿತ್ರ. ರವಿಚಂದ್ರನ್ ನಾಯಕಿ ತಂದೆ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕಾಶ್ಮೀರ, ರಾಜಸ್ಥಾನ, ಅಂಡಮಾನ್ ಅಲ್ಲದೆ ಮಂಗಳೂರು, ಚಿಕ್ಕಮಗಳೂರು, ಮೈಸೂರು ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ’ ಎಂದಿದ್ದಾರೆ ನಿರ್ದೇಶಕ.

‘ಒಂದೇ ಮಾತಲಿ’ ಎಂಬ ಸಾಲು ಕೊಟ್ಟಿದ್ದೇ ನಿರ್ದೇಶಕರು. ಇದನ್ನು ನಾಗೇಂದ್ರ ಪ್ರಸಾದ್ ಅವರಿಂದ ಬರೆಸಿದರೆ ಚೆನ್ನಾಗಿರುತ್ತದೆ ಎಂದು ಬರೆಸಿದೆವು. ಉಳಿದ ಹಾಡುಗಳು ಇದಕ್ಕಿಂತ ಚೆನ್ನಾಗಿ ಬಂದಿವೆ’ ಎಂದರು ಸಂಗೀತ ನಿರ್ದೇಶಕ.

ಚಿತ್ರದಲ್ಲಿ ಏಳು ಹಾಡುಗಳಿದ್ದು, ಸೋನು ನಿಗಮ್, ಕುನಾಲ್ ಗಾಂಜಾವಾಲಾ, ವಿಜಯಪ್ರಕಾಶ್, ರಾಜೇಶ್ ಕೃಷ್ಣನ್ ಹಾಗೂ ಪಲಕ್ ಮಚ್ಚಲ್ ಉಳಿದ ಹಾಡುಗಳನ್ನು ಹಾಡಿದ್ದಾರೆ. ಹಿರಿಯ ನಟ ಶ್ರೀನಿವಾಸಮೂರ್ತಿ, ವಿಜಯ ಸೂರ್ಯ, ಶಂಕರ್ ಅಶ್ವಥ್ ಮುಂತಾದವರು ಚಿತ್ರದಲ್ಲಿದ್ದಾರೆ.

ರಾಶಿಕಾ ಶೆಟ್ಟಿ

ವಿದ್ಯಾರ್ಥಿ ಕೊರತೆ; ಭರ್ತಿಗೆ ತೊಡಕು

ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ 1.33 ಲಕ್ಷ ಸೀಟು ಉಳಿಕೆ

813	7,275	4,291	3,580
ಅನುದಾನಿತ ಕಾಲೇಜುಗಳು	ಮಂಜೂರಾದ ಹುದ್ದೆಗಳು	ಖಾಲಿ ಹುದ್ದೆಗಳು	ಭರ್ತಿಗೆ ಅನುಮೋದನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಪ್ರತಿ ವರ್ಷವೂ ಗಣನೀಯವಾಗಿ ಕುಸಿಯುತ್ತಿರುವುದು ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ತೊಡಕಾಗಿದೆ.

ವಿವಿಧ ಶಿಕ್ಷಣ ಸಂಸ್ಥೆಗಳ ಅಧೀನದಲ್ಲಿ 813 ಅನುದಾನಿತ ಪದವಿಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರ ನಿಗದಿಪಡಿಸಿದ ಅನುಪಾತದ ಪ್ರಕಾರ 2.25 ಲಕ್ಷ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದಾಗಿದೆ. ಆದರೆ, ಪ್ರತಿ ವರ್ಷವೂ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಕ್ಷೀಣಿಸುತ್ತಾ ಬಂದಿದ್ದು, 2025–26ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 91,957 ಮಾತ್ರ. ಅಂದರೆ ದಾಖಲಾತಿ ಅನುಮತಿಗಿಂತ ಪ್ರವೇಶದ ಪ್ರಮಾಣ ಶೇ 40ಕ್ಕೆ ಕುಸಿದಿದೆ. 1,33,243 ಸೀಟುಗಳು ಖಾಲಿ ಉಳಿದಿವೆ.

ಪದವಿಪೂರ್ವ ಶಿಕ್ಷಣ ಇಲಾಖೆ 2022-23, 2023–24 ಹಾಗೂ 2024–25ನೇ ಸಾಲಿನಲ್ಲಿ ಸರ್ಕಾರ 393 ಖಾಸಗಿ ಪಿಯು ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಿದೆ. ಅನುಮತಿ ಪಡೆದ ಶೇ 99ರಷ್ಟು ಕಾಲೇಜುಗಳು ಆರಂಭವಾಗಿದ್ದು, ಖಾಸಗಿ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಳವಾಗಿದೆ. ಅತ್ತ ಅನುದಾನಿತ ಪಿಯು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಕುಸಿತವಾಗುತ್ತಿದ್ದು, ಈಗಾಗಲೇ ಏಳು ಕಾಲೇಜುಗಳು ಶಾಶ್ವತವಾಗಿ ಬಾಗಿಲು ಮುಚ್ಚಿವೆ.

ಉಪನ್ಯಾಸಕರಿಗೂ ಸಂಕಷ್ಟ: ಸರ್ಕಾರದ ನಿಯಮದಂತೆ ಅನುದಾನಿತ ಕಾಲೇಜುಗಳ ಕಾಯಂ ಉಪನ್ಯಾಸಕರಿಗೆ ಸರ್ಕಾರ ವೇತನ ನೀಡಬೇಕಾದರೆ, ಆಯಾ ವಿಷಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಠ 40 ಇರಬೇಕು. ಬಹುತೇಕ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಕೆಲ ವಿಷಯಗಳಲ್ಲಿ ವಿದ್ಯಾರ್ಥಿಗಳೇ ಇಲ್ಲ. ಅಂತಹ ಕಾಲೇಜುಗಳಲ್ಲಿ ಅನುದಾನಿತ ವೇತನ ಪಡೆಯುತ್ತಿರುವ ಉಪನ್ಯಾಸಕರು ಕೆಲಸ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ.

ಮಂಜೂರಾದ 7,275 ಉಪನ್ಯಾಸಕರ ಹುದ್ದೆಗಳಲ್ಲಿ 4,291 ಹುದ್ದೆಗಳು ಖಾಲಿ ಇವೆ. 1995–96ನೇ ಶೈಕ್ಷಣಿಕ ಸಾಲಿನ ಪೂರ್ವದಲ್ಲಿ ಆರಂಭವಾಗಿ ವೇತನಾನುದಾನಕ್ಕೆ ಒಳಪಟ್ಟಿರುವ ಶಾಲಾ–ಕಾಲೇಜುಗಳಲ್ಲಿ ಜನವರಿ 2016ರಿಂದ ಡಿಸೆಂಬರ್ 2020ರವರೆಗಿನ ಅವಧಿಯಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತಿತರ ಕಾರಣಗಳಿಂದ ಖಾಲಿ ಇರುವ ಎಲ್ಲ ವಿಷಯಗಳ ಒಟ್ಟು 3,580 ಹುದ್ದೆಗಳು ಹಾಗೂ 1,520 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ. ಆದರೆ, ವಿದ್ಯಾರ್ಥಿಗಳ ಸಂಖ್ಯೆ ಕುಸಿದಿರುವುದು ಖಾಲಿ ಹುದ್ದೆಗಳ ಭರ್ತಿಗೆ ಅಡ್ಡಿಯಾಗಿದೆ.

> **'ಖಾಸಗಿ ಕಾಲೇಜುಗಳಿಗೆ ಸರ್ಕಾರ ಪ್ರತಿ ವರ್ಷವೂ ಅನುಮತಿ ನೀಡುತ್ತಿದೆ. ಇದು ಸರ್ಕಾರಿ, ಅನುದಾನಿತ ಕಾಲೇಜುಗಳ ಅವನತಿಗೆ ಕಾರಣವಾಗುತ್ತಿದೆ. ವಿಜ್ಞಾನ ಕಾಲೇಜುಗಳು ಬಾಗಿಲು ಮುಚ್ಚುತ್ತಿವೆ'**
> **ನಿಂಗೇಗೌಡ ಎ.ಎಚ್‌., ಅಧ್ಯಕ್ಷ,** ಕರ್ನಾಟಕ ಅನುದಾನಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ

ಖಾಸಗಿ ಕಾಲೇಜುಗಳಿಗೆ ಕಡಿವಾಣ ಹಾಕಲು ಒತ್ತಾಯ

'ಸೇವೆಯ ಹೆಸರಿನಲ್ಲಿ ಶಿಕ್ಷಣವನ್ನು ವ್ಯಾಪಾರದ ಸರಕಾಗಿಸಿಕೊಂಡಿರುವ ಖಾಸಗಿ ಕಾಲೇಜುಗಳಿಗೆ ತಡೆ ಹಾಕಬೇಕು' ಎಂದು ಅನುದಾನಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

'ಅಧಿಕ ಶುಲ್ಕ ವಸೂಲಿ ಮಾಡುವ ಮೂಲಕ ಪೋಷಕರನ್ನು ಸಾಲದ ಸುಳಿಗೆ ತಳ್ಳುತ್ತಿರುವ, ವೈದ್ಯಕೀಯ–ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ ತರಬೇತಿ ನೀಡುವ ನೆಪದಲ್ಲಿ ಅಧಿಕ ಅಂಕಗಳಿಕೆಗಾಗಿ ಒತ್ತಡ ಹಾಕುವ, ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ಲಾಭಕ್ಕಾಗಿ ಕೆಲಸ ಮಾಡುತ್ತಾ ಸಾಮಾಜಿಕ ಮತ್ತು ಶೈಕ್ಷಣಿಕ ಅಸಮಾನತೆಗೆ ಕಾರಣವಾಗಿರುವ ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡಬಾರದು' ಎಂದು ಪತ್ರ ಬರೆದಿದ್ದಾರೆ.

ಮುಖ್ಯಾಂಶಗಳು
- ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆ ಆರಂಭ
- ರೋಸ್ಟರ್ ಬಿಂದುವಿನ ಆಧಾರದಲ್ಲಿ ನೇಮಕ

ಎಲ್‌.ಎನ್‌. ಮುಕುಂದರಾಜ್‌ ಮಾಹಿತಿ

'ದಲಿತ ಚಳವಳಿ ಹುಟ್ಟು, ಬೂಸಾ ಚಳವಳಿ, ದಲಿತ ಆತ್ಮಕತೆಗಳು, ದಲಿತ ಸಾಹಿತ್ಯ ಸೇರಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಒಟ್ಟು 14 ಗೋಷ್ಠಿಗಳಿರಲಿವೆ'

'ದಲಿತ ಸಾಹಿತ್ಯ–ಚಳವಳಿ' ಅಧ್ಯಯನ ಶಿಬಿರ ಇಂದಿನಿಂದ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಜ.2ರಿಂದ ಜ.4ರವರೆಗೆ 'ದಲಿತ ಸಾಹಿತ್ಯ ಮತ್ತು ಚಳವಳಿ-50' ಶೀರ್ಷಿಕೆಯಡಿ ಅಧ್ಯಯನ ಶಿಬಿರ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌.ಮುಕುಂದರಾಜ್‌ ಈ ಬಗ್ಗೆ ಮಾಹಿತಿ ನೀಡಿದರು.



ಮುಕುಂದರಾಜ್‌

'ಈ ಶಿಬಿರವು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ವೆಂಕಟಗಿರಿಗೌಡ ಸಭಾಂಗಣದಲ್ಲಿ ನಡೆಯಲಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು 250 ಮಂದಿ ಅರ್ಜಿ ಸಲ್ಲಿಸಿದ್ದರು. ಅವರಲ್ಲಿ 60 ಮಂದಿಯನ್ನು ಆಯ್ಕೆ ಮಾಡಲಾಗಿದೆ. ರಾಜ್ಯದಲ್ಲಿ ನಡೆದ ದಲಿತ ಚಳವಳಿಯ ಪರಿಣಾಮ ಮತ್ತು ಅದರ ಪ್ರಭಾವ ಪರಿಚಯಿಸಲಾಗುತ್ತದೆ' ಎಂದರು.

'ಜ.2ರಂದು ಉದ್ಘಾಟನಾ ಸಮಾರಂಭ ನಡೆಯಲಿದ್ದು, ಕವಿ ಹಾಗೂ ಹೋರಾಟಗಾರ ಎಚ್‌. ಗೋವಿಂದಯ್ಯ ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್‌.ಎಂ. ಅಧ್ಯಕ್ಷತೆ ವಹಿಸುತ್ತಾರೆ. ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರು ಶಿಬಿರದ ನಿರ್ದೇಶಕರಾಗಿದ್ದಾರೆ' ಎಂದು ಮಾಹಿತಿ ನೀಡಿದರು.

'ದಲಿತ ಚಳವಳಿಯ ಹುಟ್ಟು, ಬೂಸಾ ಚಳವಳಿ, ದಲಿತ ಆತ್ಮಕತೆಗಳು, ದಲಿತ ಕಾವ್ಯ, ದಲಿತ ಸಾಹಿತ್ಯ ಸೇರಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಒಟ್ಟು 14 ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ವಿಷಯ ತಜ್ಞರು ವಿಚಾರ ಮಂಡಿಸುತ್ತಾರೆ. ಶಿಬಿರಾರ್ಥಿಗಳ ಜತೆಗೆ ಸಾರ್ವಜನಿಕರೂ ಪಾಲ್ಗೊಳ್ಳಬಹುದು' ಎಂದು ಹೇಳಿದರು.

ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್‌., ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ನಿರ್ದೇಶಕ ಡಿ. ಡೊಮಿನಿಕ್ ಹಾಗೂ ಅಕಾಡೆಮಿ ಸದಸ್ಯರೂ ಆಗಿರುವ ಶಿಬಿರದ ಸಂಚಾಲಕ ರವಿಕುಮಾರ್ ಬಾಗಿ ಉಪಸ್ಥಿತರಿದ್ದರು.

ಸ್ಥಳೀಯ ಸಂಸ್ಥೆಗಳಿಗೆ ಈ ವರ್ಷವೇ ಚುನಾವಣೆ: ಡಿಸಿಎಂ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ನಗರ ಪಾಲಿಕೆಗಳು ಸೇರಿದಂತೆ ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಈ ವರ್ಷವೇ ಚುನಾವಣೆ ನಡೆಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಹೆಬ್ಬಾಳ ಮೇಲ್ಸೇತುವೆಯಲ್ಲಿ ಹೊಸ ಲೂಪ್‌ಗೆ ಗುರುವಾರ ಅಧಿಕೃತವಾಗಿ ಚಾಲನೆ ನೀಡಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'2026 ಶುಭ ಲಗ್ನದಲ್ಲಿ ಆರಂಭವಾಗಿದೆ. 2025ರಲ್ಲಿ ನಾವು ಉತ್ತಮ ಆಡಳಿತ ನೀಡಿದ್ದೇವೆ' ಎಂದರು.

'ನೀರಾವರಿ ಇಲಾಖೆಯಲ್ಲಿ ಐತಿಹಾಸಿಕ ತೀರ್ಮಾನ ಮಾಡಿದ್ದೇವೆ. ಯುಕೆಪಿ, ತುಂಗಭದ್ರಾ ಯೋಜನೆಯಲ್ಲಿ ಕೈಗೊಂಡ ತೀರ್ಮಾನ, ಮೇಕೆದಾಟು ಯೋಜನೆಯಲ್ಲಿ ನ್ಯಾಯಾಲಯದ ತೀರ್ಮಾನ ಇತಿಹಾಸದ ಪುಟ ಸೇರಿವೆ. ಜನರು ನಮ್ಮ ಮೇಲೆ ಇಟ್ಟಿರುವ ವಿಶ್ವಾಸ, ನಮ್ಮ ಆತ್ಮವಿಶ್ವಾಸ ಹೆಚ್ಚಿಸಿದೆ. ಅವರ ನಂಬಿಕೆ ಉಳಿಸಿಕೊಳ್ಳಲು, ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ' ಎಂದರು.

ಪುಸ್ತಕ ಖರೀದಿ: ಶೇ 50ರಷ್ಟು ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಜನವರಿ ತಿಂಗಳು ಪೂರ್ತಿ ಪುಸ್ತಕಗಳ ಖರೀದಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿವೆ.

'ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಪ್ರಾಧಿಕಾರದಿಂದ ತೆರೆಯಲಾದ ಎಲ್ಲ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಇರಲಿದೆ. ಪ್ರಾಧಿಕಾರದ ಜಾಲತಾಣ https://kpp.karnataka.gov.in ಮೂಲಕವೂ ಖರೀದಿಸಬಹುದು' ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಹೇಳಿದ್ದಾರೆ.

'ಪ್ರಾಧಿಕಾರದ ಪುಸ್ತಕಗಳನ್ನು ಆಸಕ್ತರು kuvempubhashabharathi.karnataka.gov.in ಮೂಲಕ ಶೇ 50ರಷ್ಟು ರಿಯಾಯಿತಿಯಲ್ಲಿ ಖರೀದಿಸಬಹುದು' ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ತಿಳಿಸಿದ್ದಾರೆ.

ರಾಜಕೀಯ ಪದೋನ್ನತಿಯ ಆಕಾಂಕ್ಷೆ: ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕಮಾಂಡ್ ತೀರ್ಮಾನಿಸಿದರೆ ರಾಜಕೀಯ ಪದೋನ್ನತಿ ಆಗುತ್ತದೆ. ಎಲ್ಲರಂತೆ ನನಗೂ ಆಕಾಂಕ್ಷೆ ಇದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ನಿಮಗೆ ರಾಜಕೀಯ ಪದೋನ್ನತಿ ಸಿಗಲಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಅದು ನಮ್ಮ ಹೈಕಮಾಂಡ್‌ಗೆ ಬಿಟ್ಟಿದ್ದಾಗಿದೆ. ನಾನು ಈವರೆಗೂ ಆಶಾವಾದಿಯಾಗಿಯೇ ಬದುಕಿದ್ದೇನೆ. ಅದೇನು ಹೊಸದಾಗಿ ಆಗಬೇಕು ಎಂದೇನೂ ಇಲ್ಲ' ಎಂದರು.

'ಎಲ್ಲರಿಗೂ ಜೀವನದಲ್ಲಿ ಏನೇನೊ ಆಗಬೇಕು ಎಂದಿರುತ್ತದೆ. ಮನುಷ್ಯನಿಗೆ ಆಕಾಂಕ್ಷೆ ಎನ್ನುವುದು ಇರಲೇಬೇಕು. ಅದಿಲ್ಲದಿದ್ದರೆ ಮನುಷ್ಯ ಎನಿಸಿಕೊಳ್ಳುವುದಿಲ್ಲ' ಎಂದರು.

'ಅದಕ್ಕೆ ವಾತಾವರಣ ಪೂರಕ ಆಗಿದೆಯೇ ಇಲ್ಲವೇ ಎಂದು ನೀವೇ (ಮಾಧ್ಯಮ) ಗಮನಿಸುತ್ತಿದ್ದೀರಲ್ಲ. ಯಾರಿಗೆ ವಾತಾವರಣ ಪೂರಕವಾಗಿದೆ, ಯಾರಿಗೆ ಇಲ್ಲ ಎಂದು ನೀವು ಸೂಕ್ಷ್ಮವಾಗಿ ಗಮನಿಸುತ್ತಿದ್ದೀರಲ್ಲ' ಎಂದರು.

> **'ಹೊಸ ವರ್ಷಾಚರಣೆಯನ್ನು ಜನ ಈ ಬಾರಿ ಜವಾಬ್ದಾರಿಯಿಂದ ಆಚರಿಸಿದ್ದಾರೆ. ಎಲ್ಲೂ ಅಹಿತಕರ ಘಟನೆ ಆಗಿಲ್ಲ. ಸಂಚಾರ ದಟ್ಟಣೆಯೂ ಆಗಿಲ್ಲ'**
> **ಜಿ. ಪರಮೇಶ್ವರ,** ಗೃಹ ಸಚಿವ

ಹೊಸ ವರ್ಷ: ಮದ್ಯ ಮಾರಾಟ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷದ ಸಂಭ್ರಮಾಚರಣೆ ದಿನ (ಡಿ. 31) ಮದ್ಯ ಮಾರಾಟದಲ್ಲಿ ಇಳಿಕೆಯಾಗಿದೆ. ಅಬಕಾರಿ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಭಾರತೀಯ ತಯಾರಿಕಾ ಮದ್ಯ (ಐಎಂಎಲ್) ಮಾರಾಟ ಶೇ 5.16, ಬಿಯರ್ ಮಾರಾಟ ಶೇ 57.59 ಕುಸಿತವಾಗಿದೆ.

ಕ್ರಿಸ್‌ಮಸ್ ರಜಾ ದಿನಗಳ ಆರಂಭದ ನಂತರ ವಹಿವಾಟಿನಲ್ಲಿ ಏರಿಕೆ ಕಂಡಿತ್ತು. ಹಿಂದಿನ ವರ್ಷದ ಕ್ರಿಸ್‌ಮಸ್ ರಜಾ ದಿನಗಳಿಗೆ ಹೋಲಿಸಿದರೆ ಅಬಕಾರಿ ಆದಾಯದಲ್ಲಿ ಶೇ 10.19 ಹೆಚ್ಚಳವಾಗಿದೆ. ಬಿಯರ್ ಮಾರಾಟದಲ್ಲಿ ಶೇ 1.80 ಹೆಚ್ಚಳವಾಗಿದೆ. ಆದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಡಿ. 31ರ ಮಾರಾಟ ನಿರೀಕ್ಷೆಯಂತೆ ಏರಿಕೆ ಕಂಡಿಲ್ಲ ಎಂದು ಅಬಕಾರಿ ಇಲಾಖೆ ಮೂಲಗಳು ಹೇಳಿವೆ.

ಡಿಸೆಂಬರ್‌ನಲ್ಲಿ ಐಎಂಎಲ್ ಮಾರಾಟ ಶೇ 1.89 ಹೆಚ್ಚಳವಾಗಿದ್ದರೆ, ಬಿಯರ್ ಮಾರಾಟ ಶೇ 1.48 ಇಳಿಕೆಯಾಗಿದೆ. ಡಿಸೆಂಬರ್ ತಿಂಗಳ ಒಟ್ಟು ಮದ್ಯ ಮಾರಾಟದಿಂದ ₹3,559.08 ಕೋಟಿ ಆದಾಯ ಬಂದಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ₹454.58 ಕೋಟಿ ಹೆಚ್ಚಳವಾಗಿದೆ. ಆದರೆ, 2024ಕ್ಕೆ ಹೋಲಿಸಿದರೆ 2025ರ ಐಎಂಎಲ್ ವಾರ್ಷಿಕ ಮಾರಾಟ ಶೇ 186.19 ಹಾಗೂ ಬಿಯರ್ ಮಾರಾಟ ಶೇ 156.89 ಕುಸಿತವಾಗಿದೆ.

2025ರ ಮೇನಲ್ಲಿ ರಾಜ್ಯ ಸರ್ಕಾರ ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಶೇ 195ರಿಂದ ಶೇ 200ಕ್ಕೆ, ಐಎಂಎಲ್ ಬ್ರ್ಯಾಂಡ್‌ಗಳ ಬೆಲೆಯನ್ನು ಕ್ವಾರ್ಟರ್‌ಗೆ ₹15ರಿಂದ ₹20ರವರೆಗೆ ಹೆಚ್ಚಿಸಿತ್ತು.

ಕೋಗಿಲು: 167 ಮನೆ ನೆಲಸಮ • ದಾಖಲೆ ಪರಿಶೀಲಿಸುತ್ತಿರುವ ಅಧಿಕಾರಿಗಳು

ಸಲ್ಲಿಕೆಯಾದ ಅರ್ಜಿ 250ಕ್ಕೂ ಅಧಿಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಬಂಡೆ ಕ್ವಾರಿ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ 167 ಮನೆ ಮತ್ತು ಶೆಡ್‌ಗಳನ್ನು ನೆಲಸಮಗೊಳಿಸಲಾಗಿದೆ. ಆದರೆ, ಮನೆ ನೀಡುವಂತೆ ಕೋರಿ 250ಕ್ಕೂ ಹೆಚ್ಚು ಅರ್ಜಿ ಸಲ್ಲಿಕೆಯಾಗಿವೆ.

ಬೆಂಗಳೂರು ಉತ್ತರ ನಗರ ಪಾಲಿಕೆಯ ಯಲಹಂಕ ಹೋಬಳಿಯ ಕೋಗಿಲು ಬಂಡೆ ಕ್ವಾರಿ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಮನೆಗಳನ್ನು ಈಚೆಗೆ ನೆಲಸಮಗೊಳಿಸಲಾಗಿತ್ತು. ಮನೆ ಕಳೆದುಕೊಂಡವರ ದಾಖಲೆಗಳ ಪರಿಶೀಲನೆ ಬಳಿಕ ಅವರಲ್ಲಿ ಅರ್ಹರಿದ್ದರೆ ಬೈಯಪ್ಪನಹಳ್ಳಿಯಲ್ಲಿ ನಿರ್ಮಿಸಿರುವ ವಸತಿ ಸಮುಚ್ಚಯದಲ್ಲಿ ಮನೆ ನೀಡಲು ಸರ್ಕಾರ ತೀರ್ಮಾನಿಸಿತ್ತು. ದಾಖಲೆ ಪರಿಶೀಲನೆ ನಡೆದಿದೆ.

ನೆಲಸಮಗೊಂಡ ಒಂದೇ ಮನೆಯ ಇಬ್ಬರು ಮತ್ತು ಮೂವರಿಂದ ಅರ್ಜಿ ಸಲ್ಲಿಕೆಯಾಗಿದೆ. ಅಲ್ಲದೇ ಹೊರಗಿನವರು ಸಹ ಅರ್ಜಿ ಸಲ್ಲಿಸಿರುವ ಸಾಧ್ಯತೆ ಇದೆ ಎನ್ನಲಾಗಿದೆ.

ಈಗಾಗಲೇ ಪ್ರತಿ ಮನೆಯಿಂದ ಐದು ದಾಖಲೆಗಳನ್ನು ಅಧಿಕಾರಿಗಳು ಸಂಗ್ರಹಿಸಿದ್ದಾರೆ. ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ವಿದ್ಯುತ್ ಬಿಲ್, ತಾತ್ಕಾಲಿಕ ಆದೇಶ ಪ್ರತಿ, ಪಡಿತರ ಚೀಟಿಯನ್ನು ಸಂಗ್ರಹಿಸಿದ್ದು, ಅವುಗಳ ನೈಜತೆಯನ್ನು ಜಿಬಿಎ, ಕಂದಾಯ, ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

ಶುಕ್ರವಾರದ ವೇಳೆಗೆ ಪರಿಶೀಲನಾ ಕಾರ್ಯ ಅಂತಿಮಗೊಳ್ಳುವ ಸಾಧ್ಯತೆ ಇದೆ. ಕನ್ನಡಿಗರು ಮತ್ತು ಪರಭಾಷಿಕರು ಎಂಬ ಎರಡು ಪಟ್ಟಿಯನ್ನು ಅಧಿಕಾರಿಗಳು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಿದ್ದಾರೆ.

ಜನವರಿ 2ರೊಳಗೆ ಮನೆಗಳನ್ನು ಸಂತ್ರಸ್ತರಿಗೆ ಹಸ್ತಾಂತರ ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. ಬೈಯಪ್ಪನಹಳ್ಳಿಯ ವಸತಿ ಸಮುಚ್ಚಯದಲ್ಲಿ ತಲಾ ₹11.20 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಮನೆಗಳನ್ನು ಹಂಚಿಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದರು. ಆದರೆ, 2023–24ರಲ್ಲಿ ಹೊರಡಿಸಲಾದ ಆದೇಶದ ಪ್ರಕಾರ, ಈ ಫ್ಲ್ಯಾಟ್‌ನ ವೆಚ್ಚವನ್ನು ₹13.20 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಈ ಪರಿಷ್ಕೃತ ದರವನ್ನು ಪುನರ್ವಸತಿ ಪ್ಯಾಕೇಜ್‌ನಲ್ಲಿ ಸೇರಿಸಿಲ್ಲ. ಹಾಗಾಗಿ ಹಿಂದಿನ ಆದೇಶವನ್ನು ತಿದ್ದುಪಡಿ ಮಾಡದೆ ಹಂಚಿಕೆ ಸಾಧ್ಯವೇ ಎಂಬ ಆತಂಕವೂ ವ್ಯಕ್ತವಾಗಿದೆ.

'ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಾಯಧನ ಲಭ್ಯವಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವತಿಯಿಂದ ಪ್ರತಿ ಮನೆಗೆ ₹5 ಲಕ್ಷ ನೀಡಲಾಗುತ್ತದೆ. ಸಾಮಾನ್ಯ ವರ್ಗದವರಿಗೆ ಸಹಾಯಧನ ಸೇರಿ ₹8.70 ಲಕ್ಷ ಸಿಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ₹9.50 ಲಕ್ಷ ಸಿಗುತ್ತದೆ. ಸಾಮಾನ್ಯ ವರ್ಗದವರಿಗೆ ₹2.50 ಲಕ್ಷ ಸಾಲದ ರೂಪದಲ್ಲಿ ನೀಡಲಾಗುತ್ತದೆ. ಎಸ್‌ಸಿ ಮತ್ತು ಎಸ್‌ಟಿಗೆ ₹1.70 ಲಕ್ಷ ಸಾಲ ನೀಡಲಾಗುತ್ತದೆ' ಎಂದು ಮುಖ್ಯಮಂತ್ರಿ ಹೇಳಿದ್ದರು.

ಮುಖ್ಯಾಂಶಗಳು
- ಒಂದೇ ಮನೆಯಿಂದ ಇಬ್ಬರು ಅರ್ಜಿ ಸಲ್ಲಿಕೆ
- ಹೊರಗಿನವರು ಅರ್ಜಿ ಸಲ್ಲಿಸಿರುವ ಸಾಧ್ಯತೆ
- ಅಂತಿಮಗೊಳ್ಳದ ಅರ್ಹ ಫಲಾನುಭವಿಗಳ ಪಟ್ಟಿ

'ಶೇ 95ರಷ್ಟು ದಾಖಲೆ ಕ್ರಮಬದ್ಧ'

'ಕೋಗಿಲು ಕ್ವಾರಿ ಪ್ರದೇಶದಲ್ಲಿ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಮನೆ ನೀಡುವಂತೆ 250ಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದಾರೆ. ದಾಖಲೆಗಳ ಪರಿಶೀಲನೆ ನಡೆದಿದೆ. ಶೇಕಡ 95ರಷ್ಟು ದಾಖಲೆಗಳು ಕ್ರಮಬದ್ಧವಾಗಿವೆ' ಎಂದು ಯಲಹಂಕ ತಹಶೀಲ್ದಾರ್ ಶ್ರೇಯಸ್ ತಿಳಿಸಿದರು.

ಕೋಗಿಲು ಬಡಾವಣೆ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕಾನೂನು ಅಡೆತಡೆ ಎದುರಾಗಿದ್ದು, ಫ್ಲ್ಯಾಟ್‌ನ ಪರಿಷ್ಕೃತ ವೆಚ್ಚ, ಯೋಜನೆಯ ನಿಯಮಗಳು ಹಾಗೂ ಅರ್ಹ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವಲ್ಲಿ ಸಮಸ್ಯೆ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org
ಸಂಖ್ಯೆ: ಎ1/ಬಬಪಾ/ಪ್ರಾಣಿ ಪಾಲಕರು/2025–26 ದಿನಾಂಕ: 30–12–2025

ನೇರ ಸಂದರ್ಶನ

ಬನ್ನೇರುಘಟ್ಟ ಜೈವಿಕ ಉದ್ಯಾನವನ (ಬಬಪಾ), ಬೆಂಗಳೂರು ಇವರು **ಹೊರ ಗುತ್ತಿಗೆ** ಆಧಾರದಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಯನ್ನು ತೊಡಗಿಸಿಕೊಳ್ಳಲು ಉದ್ದೇಶಿಸಿದ್ದಾರೆ.

ಕ್ರ. ಸಂ.	ವಿವರಗಳು	ಅರ್ಹತೆ	ಸಂಖ್ಯೆ	ಸಂಬಳ / ತಿಂಗಳು
1	ಪ್ರಾಣಿ ಪಾಲಕ	B.Sc. in Life Science	05	Semi-skilled Wages as per Karnataka Forest Department SSR (revised every year)

ಆಸಕ್ತ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಮಾಣಪತ್ರಗಳು ಹಾಗೂ ಅವರ ವ್ಯಕ್ತಿಗತ ವಿವರದೊಂದಿಗೆ ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ ಇಲ್ಲಿ **09–01–2026** ರಂದು ಬೆಳಿಗ್ಗೆ **11.30** ಗಂಟೆಗೆ ಸಂದರ್ಶನಕ್ಕೆ ಹಾಜರಾಗಲು ಕೋರಿದೆ. ಅಭ್ಯರ್ಥಿಯು ಅವರ ವ್ಯಕ್ತಿಗತ ವಿವರವನ್ನು ದಿನಾಂಕ: **08–01–2026** ಕ್ಕಿಂತಲೂ ಮುಂಚಿತವಾಗಿ **ed@bannerughattabiopark.org** ಇಲ್ಲಿಗೆ ಕಳುಹಿಸತಕ್ಕದ್ದು.
ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ವಾಸಾಸಂಇ/ವಾ.ಪ್ರ/4776/ಅಡ್ವರ್ಟೋರ್/2025–26

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್‌.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210
ಸಂಖ್ಯೆ:ಕಾಅ/ಕವಿ.1/ಎಇ–3/ಎಇ–ಎಲ್‌ಹೆಚ್/2025–26/65 ದಿನಾಂಕ: 30.12.2025

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು **ಬೆಂಗಳೂರಿನ ಸೂಚಿತ ಸ್ಥಳಗಳಲ್ಲಿ ರಸ್ತೆ – ಪೀಠೋಪಕರಣಗಳನ್ನು ಒದಗಿಸುವುದು, ಒಳಚರಂಡಿ ನಿರ್ಮಿಸುವುದು, ಪೇಂಟಿಂಗ್, ರೈನ್ ವಾಟರ್ ಹಾರ್ವೆಸ್ಟಿಂಗ್ ಪೈಪ್ ಒದಗಿಸುವುದು, ಕೋರ್ ಕಟ್ಟಿಂಗ್, ಸಸಿಗಳನ್ನು ಒದಗಿಸುವುದು, ಶೌಚಾಲಯ ನವೀಕರಣ, ಫ್ಲೋರ್ ಮ್ಯಾಟ್ ಒದಗಿಸುವುದು, ಪಾಲಿಷಿಂಗ್, ಶೌಚಾಲಯ ಹಾಗೂ ವಾರ್ಡ್‌ರೋಬ್‌ಗಳ ದುರಸ್ತಿ, ವಿನೈಲ್ ಫ್ಲೋರಿಂಗ್, ಅಲ್ಯೂಮಿನಿಯಂ ಪಾರ್ಟಿಷನ್‌ಗಳ ದುರಸ್ತಿ, ಪಿಯುಎಫ್ ಶೀಟ್ ಒದಗಿಸುವುದು, ಫ್ಯಾಬ್ರಿಕೇಷನ್ ಕೆಲಸಗಳು, ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು, ಯುಪಿಎಸ್‌ಗಳು, ಕಾರ್ಟ್ರಿಡ್ಜ್‌ಗಳ ನಿರ್ವಹಣೆ, ಟೋನರ್‌ಗಳು, ಕಾಪಿಯರ್/ಸ್ಕ್ಯಾನರ್ ಮೆಷಿನ್‌ಗಳ ಖರೀದಿ, ಇಂಟರ್‌ನೆಟ್, ಎಲ್‌ಎಎನ್ ಕೆಲಸಗಳು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 23 ಕಾಮಗಾರಿಗಳಿಗೆ** ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.2.82 ಲಕ್ಷಗಳು, ಗರಿಷ್ಠ ರೂ.17.83 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.5,100/–, ಗರಿಷ್ಠ ರೂ.44,600/–.** ಪ್ರತೀ ಕಾಮಗಾರಿಯ ಕಾಲಾವಧಿ: **02 ರಿಂದ 10 ತಿಂಗಳು.** ಕಾಮಗಾರಿಯ ದಸ್ತಾವೇಜು ಬೆಲೆ: **ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **07.01.2026, ಸಂಜೆ 5.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ–ಸಿ.ಪಿ/4770/ಕೆಎಸ್‌ಎಂಸಿಎ/2025–26

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗಾಂಧಿನಗರ ವಿಭಾಗ,
2ನೇ ಮಹಡಿ, ಬಿಬಿಎಂಪಿ ಸಂಕೀರ್ಣ, ಧನ್ವಂತರಿ ರಸ್ತೆ, ಬೆಂಗಳೂರು – 560009.
ಸಂಖ್ಯೆ: ಕಾಅ/ಜಿಎನ್‌ಆರ್/ಟೆಂಡರ್/ಕೆಪಿಪಿಪಿ/008/2025–26 ದಿನಾಂಕ: 31–12–2025

ತಿದ್ದುಪಡಿ

ವಿಷಯ: ಟೆಂಡರ್ ಅಧಿಸೂಚನೆಯ ತಿದ್ದುಪಡಿ.
ಉಲ್ಲೇಖ: ಕಾಅ/ಜಿಎನ್‌ಆರ್/ಟೆಂಡರ್/ಕೆಪಿಪಿಪಿ/008/2025–26, ದಿನಾಂಕ: 29–12–2025.

ಕ್ರ. ಸಂ.	ಕಾಮಗಾರಿಯ ಹೆಸರು
1	ಗಾಂಧಿನಗರ ವಿಭಾಗದ ವಾರ್ಡ್ ಸಂಖ್ಯೆ. 122, 123, 124 ಮತ್ತು 125 ರಲ್ಲಿ ಗುಂಡಿಗಳನ್ನು ಮುಚ್ಚುವ ಕಾಮಗಾರಿ. (2ನೇ ಕರೆ) – **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 80.00, ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 64.39, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,28,880/–**
2	ಗಾಂಧಿನಗರ ಮತಕ್ಷೇತ್ರದ ಪ್ರಮುಖ ರಸ್ತೆಗೆ ಸಂಪರ್ಕ ಕಲ್ಪಿಸುವ ಮತ್ತು ಆರ್ಟಿರಿಯಲ್ ಸಬ್ ಆರ್ಟಿರಿಯಲ್ ರಸ್ತೆಗಳಲ್ಲಿನ ಪಾದಚಾರಿಮಾರ್ಗ ಹಾಗೂ ಚರಂಡಿಗಳ ಮರು ನಿರ್ಮಾಣ ಮತ್ತು ಸುಧಾರಣೆಗಳನ್ನು ಒದಗಿಸುವ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 4000.00, ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 3202.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 32,02,000/–**

ಎಲ್ಲಾ ಇತರೆ ನಿಬಂಧನೆಗಳಲ್ಲಿ ಬದಲಾವಣೆಗಳು ಇರುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬೆಂಕೇನಪಾ.

NATIONAL INSTITUTE OF MENTAL HEALTH & NEURO SCIENCES
INSTITUTE OF NATIONAL IMPORTANCE
Post Box No. 2900, Hosur Road, Bengaluru - 29.
Ph: 080-2699 5708, 5323, 5290. Website: http://www.nimhans.ac.in
No. NIMH/RECT/ADVT-3/DEPT-CNO&NS/2025-26 Date: 23.12.2025

NOTIFICATION

NIMHANS Bengaluru invites applications in the prescribed pro-forma from suitable / eligible Officers of Central / State Govt/UT Administration / Autonomous / Statutory Bodies holding analogous posts on regular basis for filling up of the following **Group "A" - Nursing Posts on Deputation basis.**

Sl. No	Name of the Posts	Number of posts	Pay Level as per 7th CPC	Mode	Important point for candidature
1	Chief Nursing Officer	1	Level-12 (Rs.78,800-2,09,200/-)	Deputation for 3 years	Applications are to be duly forwarded by the Cadre Controlling Authority with NOC Vigilance clearance and enclosing minimum 5 years latest APARs. Officials / Candidates are advised to send an advance copy of the application with relevant enclosures, for intimation purposes only, on the following email on or before the closing date of receipt of applications: **dirstaff@nimhans.ac.in**
2	Nursing Superintendent	1	Level-11 (Rs.67,700 – 2,08,700/-)	Deputation for 3 years	

Eligibility and Other Criteria:

Sl. No	Name of the Posts	Essential Eligibility Criteria for deputation
1	Chief Nursing Officer	Officers of Central/State Govt/UT Administration/Autonomous/Statutory Bodies holding analogous posts on regular basis with 5 years of regular service in the grade of Nursing Superintendent or in similar capacity in nursing administration and not less than 17 years experience in the Nursing Cadre and possessing the following qualifications:- i. B.Sc in Nursing or equivalent qualification from recognized University/Institutes. ii. DPN/DNN OR M.Sc in Psychiatric/Neuro Nursing from recognized University/Institutes. **Desirable:** Should have published once in every two years a research paper in journal of national standing and repute. (Period of deputation shall not ordinarily exceed 3 years).
2	Nursing Superintendent	Officers of Central/State Govt/UT Administration/Autonomous/Statutory Bodies holding analogous posts on regular basis with 3 years of regular service in the grade of Deputy Nursing Superintendent or in similar capacity in nursing administration and not less than 12 years' experience in the Nursing Cadre and possessing the following qualifications:- i. B.Sc in Nursing or equivalent qualification from recognized University/Institutes. ii. DPN/DNN OR M.Sc in Psychiatric/Neuro Nursing from recognized University/Institutes. **Desirable:** Should have published once in every two years a research paper in journal of national standing and repute. (Period of deputation shall not ordinarily exceed 3 years).

Detailed Notification, including proforma and application form is available at this Institute's website **http://nimhans.ac.in** for further more details.
The duly filled in application along with its necessary enclosures, NOC, Vigilance Clearance and previous year 5 years APARs should reach the Director, NIMHANS, P.B.No.2900, Hosur Road, Bengaluru-560029, Karnataka, India on or before **24.01.2026.**
Sd/-
DIRECTOR

(Govt of Karnataka)
KARNATAKA MEDICAL COLLEGE AND RESEARCH INSTITUTE, HUBBALLI
OfficePhone : 0836-2374624 E-mail ID : kimspmb@gmail.com
ಸಂ:ಕೆಎಂಸಿಆರ್‌ಐ/ಎಹೆಚ್‌ಎಸ್/03/2025-26 dated 01.01.2026

ಪತ್ರಿಕಾ ಪ್ರಕಟಣೆ

ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ : DME/MCS/180/2025-26, Dtd:30.12.2025 ರಲ್ಲಿ ಅನುಮತಿಸಿದಂತೆ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ ಇಲ್ಲಿ 2025–26ನೇ ಸಾಲಿನಲ್ಲಿ ಕೆಇಎ ಮೂಲಕ ಎಲ್ಲಾ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಕೆಯಾಗಿರುವ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ನ ಸೀಟುಗಳನ್ನು Walk-in Admission ಮೂಲಕ Merit ಆಧಾರ ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಹ ವಿದ್ಯಾರ್ಥಿಗಳು ಅಗತ್ಯ ಮೂಲ ದಾಖಲಾತಿಗಳೊಂದಿಗೆ **ದಿನಾಂಕ 07–01–2026 ರಂದು ಬೆಳಿಗ್ಗೆ 10–00 ಗಂಟೆಯಿಂದ ಸಾಯಂಕಾಲ 05–00 ಗಂಟೆಯೊಳಗೆ ನಿರ್ದೇಶಕರ ಕಾರ್ಯಾಲಯ, ಆಡಳಿತ ಭವನ, ಕೆಎಂಸಿಆರ್‌ಐ, ಹುಬ್ಬಳ್ಳಿ** ಇಲ್ಲಿಗೆ ಖುದ್ದಾಗಿ ಹಾಜರಾಗುವುದು. ಹೆಚ್ಚಿನ ವಿವರಗಳನ್ನು ಈ ಸಂಸ್ಥೆಯ ಜಾಲತಾಣ **https://kmcrihubballi.karnataka.gov.in/english** ದಲ್ಲಿ ಪಡೆಯಬಹುದು.
ಸಹಿ/– (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ,
ಕ್ಯಾನ್ಸರ್ ಸಂಶೋಧನೆ ಮತ್ತು ತರಬೇತಿ ಕೇಂದ್ರ (ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಪ್ರಾದೇಶಿಕ ಅರ್ಬುದ ಸಂಶೋಧಣಾ ಮತ್ತು ಚಿಕಿತ್ಸಾ ಕೇಂದ್ರ
ಡಾ|| ಎಂ.ಎಚ್‌. ಮರೀಗೌಡ ರಸ್ತೆ, ಬೆಂಗಳೂರು–560029
ದೂ: +91 080-2656 0722/2656 0723, 080-6669 7999
No:KMIO/SME(1)/TENDER/M.EQUIP/DMO/469/2025-26 Date: 01-01-2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಇವರು, ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡವುಗಳಿಗಾಗಿ ದ್ವಿಲಕೋಟೆ ಬಿಡ್ ಪದ್ಧತಿಯಲ್ಲಿ ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

Sl No.	Tender No. & Date	Name of the Items
1	KMIO/SME(1)/TENDER/M.EQUIP/DMO /469/2025-26, Dt: 01.01.2026 (Call 2)	Supply and Installation of Medical Equipments to the Dept. of Medical Oncology at KMIO (Estimated Budget: 88 lakh)
2	KMIO/SME(1)/TENDER/M.EQUIP/GYNAEC /470/2025-26, Dt: 01.01.2026 (Call 2)	Supply and Installation of Medical Equipments to the Dept. of Gynaec Oncology at KMIO(Estimated Budget: 1.63 Cr)
3	KMIO/SME(1)/TENDER/M.EQUIP/DBC/471/2025-26 Dt:01.01.2026 (Call 2)	Supply and Installation of Medical Equipments to the Dept. of Biochemistry at KMIO (Estimated Budget: 25 Lakh)
4	KMIO/SME(1)/TENDER/M.EQUIP/Anaesthesia/464/2025-26 Dt:01.01.2026 (Call 2)	Supply Installation and Commissi-oning of Medical Equipment to the Dept. of Anaesthesia (Estimated Cost: 57 Lakh)
5	KMIO/SME(1)/TENDER/CPT/443/2025-26 Dt:01.01.2026 (Call 2)	Providing Cost per test Services to the dept. of Pathology, Microbiology and Biochemistry at KMIO. (Estimated Budget:4.9Cr)
6	KMIO/MNT/Juice Center /488/2025-26 Dt:01.01.2026	Right to Run the Juice Centre at KMIO Campus
7	KMIO/MNT/Nandini Milk Booth/489/2025-26 Dt:01.01.2026	Right to Run the Nandini Milk Booth at KMIO Campus

ಬಿಡ್ ದಾಖಲೆಗಳು ಕ್ರಮ ಸಂಖ್ಯೆ: **01** ರಿಂದ **07**ರ ವರಗೆ ದಿನಾಂಕ: **05–01–2026** ರಿಂದ **20–01–2026**ರ ವರೆಗೆ, ಆನ್‌ಲೈನ್‌ನಲ್ಲಿ ಲಭ್ಯವಿರುತ್ತದೆ. ಬಿಡ್ಡರುಗಳು ಬಿಡ್‌ದಾಖಲೆಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ನೋಡಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಗಳನ್ನು ಮತ್ತು ಶುಲ್ಕಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಬಹುದು. ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **20–01–2026**ರ ಸಂಜೆ **4:00** ಗಂಟೆಯವರೆಗೆ. ಟೆಂಡರ್ ಅಂಗೀಕಾರ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕಾರ/ತಿರಸ್ಕಾರ/ರದ್ದುಗೊಳಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.
ಸಹಿ/–
ಆರ್ಥಿಕ ಸಲಹೆಗಾರರು
ಡಿಐಪಿಆರ್/ಎಸ್‌ಐ/4778/2025–26

ಕರ್ನಾಟಕ ರಾಜ್ಯ ಆದಿ ಜಾಂಬವಾಭಿವೃದ್ಧಿ ಸಂಘ
ನಂ.143, ಗೋಪಾಲಪುರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು–560 023.
ಸಂಖ್ಯೆ: ಕರಾಆಜಾಸಂ/ಚುನಾವಣೆ/01/2025–26 ದಿನಾಂಕ: 01–01–2026

–: ಪತ್ರಿಕಾ ಪ್ರಕಟಣೆ :–

ಸಂಘದ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ ಸಂಘದ ಕಾರ್ಯನಿರ್ವಾಹಕ ಸಮಿತಿಯ ಚುನಾವಣೆಯನ್ನು **ದಿನಾಂಕ: 18–01–2026ರ ಭಾನುವಾರದಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಬಾಪೂಜಿ ವಿದ್ಯಾರ್ಥಿ ನಿಲಯ ಕಟ್ಟಡ. ನಂ–143. ಗೋಪಾಲಪುರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು 560 023** ಇದರ ಆವರಣದಲ್ಲಿ ನಡೆಸಲು ನಿಗಧಿಪಡಿಸಿ ಚುನಾವಣಾಧಿಕಾರಿಗಳು ಚುನಾವಣಾ ವೇಳಾ ಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅರ್ಹ ಮತದಾರರಿಗೆ ಈಗಾಗಲೇ ಅಂಚೆ ಮೂಲಕ ಚುನಾವಣಾ ವೇಳಾ ಪಟ್ಟಿಯನ್ನು ರವಾನಿಸಲಾಗಿರುತ್ತದೆ. ವೇಳಾಪಟ್ಟಿಯಂತೆ ನಾಮಪತ್ರ ಸಲ್ಲಿಸಲು **ದಿನಾಂಕ: 10–01–2026ರಂದು** ಕಡೆಯ ದಿನವಾಗಿರುತ್ತದೆ. ಚುನಾವಣಾ ವೇಳಾಪಟ್ಟಿ ತಲುಪದ ಸದಸ್ಯರು ಇದನ್ನೇ ಚುನಾವಣೆ ವೇಳಾಪಟ್ಟಿಯೆಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ.
ಸಹಿ/– (ಆಂಜನಮೂರ್ತಿ) **ಆಡಳಿತಾಧಿಕಾರಿಗಳು**
ಕರ್ನಾಟಕ ರಾಜ್ಯ ಆದಿ ಜಾಂಬವಾಭಿವೃದ್ಧಿ ಸಂಘ,
ನಂ.143, ಗೋಪಾಲಪುರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು–560 023

ಕರ್ನಾಟಕ ಗೃಹ ಮಂಡಳಿ
ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009

ಸಾರ್ವಜನಿಕ ಪ್ರಕಟಣೆ

ಕೆರಗಳ್ಳಿ–ಕೆಮ್ಮಣ್ಣಪುರ ಹಾಗೂ ಇತರೆ ಗ್ರಾಮಗಳ ಜಮೀನುಗಳಲ್ಲಿ ನಡೆಯುತ್ತಿರುವ ಜಂಟಿ ಅಭಿವೃದ್ಧಿ ಯೋಜನೆ ("ಸುಬ್ರಹ್ಮಣ್ಯ ನಗರ" & ಕಾವೇರಿ ನಗರ) ಕುರಿತು, ಮೈಸೂರು ಅಡ್ವೊಕೇಟ್ಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ. ಹಾಗೂ ಇತರ ಖಾಸಗಿ ಸಂಸ್ಥೆಗಳ ಮೂಲಕ ಹೊರಡಿಸಲಾದ ಪ್ರಕಟಣೆಗಳು, ಹೇಳಿಕೆಗಳು ಹಾಗೂ ಹಕ್ಕು–ದಾವೆಗಳ ಕುರಿತು ಸಾರ್ವಜನಿಕರನ್ನು ತಪ್ಪುಮಾರ್ಗಕ್ಕೆ ದೂಡಬಹುದಾದ ಹಲವಾರು ಅಂಶಗಳು ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಗೃಹ ಮಂಡಳಿ (ಕೆಹೆಚ್‌ಬಿ) ಈ ಸಾರ್ವಜನಿಕ ಸ್ಪಷ್ಟೀಕರಣ ಘೋಷಣೆಯನ್ನು ಹೊರಡಿಸುತ್ತಿದೆ.

ಕರ್ನಾಟಕ ಗೃಹ ಮಂಡಳಿ ಹಾಗೂ M/s Subramanya Construction and Development Company Ltd. (SCDCL) ಇವರುಗಳ ನಡುವೆ 23.01.2004 ರಂದು ಕಾರ್ಯಗತಗೊಂಡ ಮೆಮೊರೆಂಡಂ ಆಫ್ ಅಗ್ರಿಮೆಂಟ್ ಹಾಗೂ 12.08.2004 ರ ಅಡೇಂಡಮ್ ಅಗ್ರಿಮೆಂಟ್‌ಗಳಲ್ಲಿರುವ ನಿಯಮಗಳು ಹಾಗೂ ಷರತ್ತುಗಳ ಪ್ರಕಾರ, ಈ ಯೋಜನೆಯಲ್ಲಿ ಕರ್ನಾಟಕ ಗೃಹ ಮಂಡಳಿಯ ಪಾತ್ರವು ಯೋಜನಾ ನಿರ್ವಹಣಾ ಸಲಹೆಗಾರಿಕೆ, ದಾಖಲೆ ಪರಿಶೀಲನೆ, ಅನುಮೋದನೆಗಳ ತಪಾಸಣೆ ಹಾಗೂ ಸಂಪೂರ್ಣ ಅಭಿವೃದ್ಧಿಯಾದ ಜಾಗಗಳ ಮಾರಾಟಕ್ಕೆ ಮರ್ಯಾದಿತವಾಗಿದೆ. ಕರ್ನಾಟಕ ಗೃಹ ಮಂಡಳಿಯು ಭೂಮಿ ಖರೀದಿ, ಅಭಿವೃದ್ಧಿ ಕಾಮಗಾರಿಗಳು, ವೆಚ್ಚಗಳು ಅಥವಾ ಹಣಕಾಸು ಬಾಧ್ಯತೆಗಳಲ್ಲಿ ಯಾವುದೇ ರೀತಿಯ ಹೂಡಿಕೆ ಮಾಡಿಲ್ಲ ಮತ್ತು ಯಾವುದೇ ಖಾಸಗಿ ವ್ಯಕ್ತಿ, ಸಂಘ, ಅಥವಾ ಸಂಸ್ಥೆಗೆ ಹಕ್ಕು, ಆದ್ಯತೆ, ಭರವಸೆ ಅಥವಾ ನಿವೇಶನ ಮೀಸಲಾತಿ ನೀಡಿಲ್ಲ.

SCDCL ಇವರು ಮೈಸೂರು ಅಡ್ವೊಕೇಟ್ಸ್ ಹೌಸಿಂಗ್ ಸೊಸೈಟಿ ಸೇರಿದಂತೆ ಬೇರೆ ಯಾವುದೇ ಸಂಸ್ಥೆಗಳೊಂದಿಗೆ 31.05.2013, 14.01.2019, 03.03.2022 ಅಥವಾ ಇತರ ದಿನಾಂಕಗಳಲ್ಲಿ ಮಾಡಿಕೊಂಡಿರುವ ಒಪ್ಪಂದಗಳು ಪೂರ್ಣವಾಗಿ ಖಾಸಗಿಯಾಗಿದ್ದು ಆ ಒಪ್ಪಂದಗಳಿಗೆ ಕರ್ನಾಟಕ ಗೃಹ ಮಂಡಳಿಯ ಅನುಮೋದನೆ ಇಲ್ಲ, ಕರ್ನಾಟಕ ಗೃಹ ಮಂಡಳಿಯ ಮೇಲೆ ಯಾವುದೇ ಕಾನೂನುಬದ್ಧ ಅಥವಾ ಆರ್ಥಿಕ ಹೊಣೆಗಾರಿಕೆ ಉಂಟಾಗುವುದಿಲ್ಲ, ಮತ್ತು ಆ ಒಪ್ಪಂದಗಳ ಆಧಾರದ ಮೇಲೆ ಕರ್ನಾಟಕ ಗೃಹ ಮಂಡಳಿಗೆ ವಿರುದ್ಧವಾಗಿ ಯಾವುದೇ ಹಕ್ಕು, ಇಚ್ಛಿತ ನಿವೇಶನ, ಅಥವಾ ಆದ್ಯತೆ ದಾವೆ ಮಾಡಲಾಗುವುದಿಲ್ಲ.

ಈ ಹಿಂದೆ MUDA ಪ್ರಸ್ತುತ MDA ರವರು ಪ್ರಾಥಮಿಕ ಅನುಮೋದನೆ ನೀಡಿರುವ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿಲ್ಲ ಮತ್ತು ಯೋಜನೆಗೆ ಮಂಡಳಿಯಿಂದ DPR ಅನುಮೋದನೆ ಪಡೆದಿರುವುದಿಲ್ಲ ಹಾಗೂ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ದೊರಕುವವರೆಗೆ ಹಾಗೂ ಎಲ್ಲಾ ಕಾನೂನುಬದ್ಧ ಪ್ರಕ್ರಿಯೆಗಳು ಪೂರ್ಣಗೊಳ್ಳುವವರೆಗೆ ಯಾವುದೇ ನಿವೇಶನ ಹಂಚಿಕೆ ಪ್ರಕ್ರಿಯೆ ಪ್ರಾರಂಭವಾಗುವುದಿಲ್ಲ. ಕೆಎಚ್‌ಬಿ ಇದುವರೆಗೆ ಯಾವುದೇ ವ್ಯಕ್ತಿ/ಸಂಸ್ಥೆಗೆ ನಿವೇಶನ ಮೀಸಲಾತಿ, ಆದ್ಯತೆ, ಹಕ್ಕು, ಅಥವಾ ಭರವಸೆ ನೀಡಿಲ್ಲ, ಮತ್ತು ಈ ಯೋಜನೆಗಾಗಿ ಸಾರ್ವಜನಿಕರಿಂದ ಅಥವಾ ಪಕ್ಷಗಳಿಂದ ಹಣ ಸಂಗ್ರಹಿಸಲು ಯಾರಿಗೂ ಅಧೀನತೆ ನೀಡಿರುವುದಿಲ್ಲ ಹಾಗೂ ಸಾರ್ವಜನಿಕರಿಂದ ಯಾವುದೇ ಅರ್ಜಿ ಆಹ್ವಾನಿಸಿರುವುದಿಲ್ಲ.

ಕರ್ನಾಟಕ ಗೃಹ ಮಂಡಳಿಯ ಹೆಸರಿನಲ್ಲಿ ತಪ್ಪು ಜಾಹೀರಾತು, ತಪ್ಪು ಹೇಳಿಕೆ, ಅಥವಾ ತಪ್ಪು ಭರವಸೆ ನೀಡುವ ಯಾವುದೇ ಸಂಸ್ಥೆ, ವ್ಯಕ್ತಿಗಳ ವಿರುದ್ಧ ಕರ್ನಾಟಕ ಗೃಹ ಮಂಡಳಿ ಅದರ ಕಾನೂನು ಹಕ್ಕುಗಳನ್ನು ಬಳಸಿಕೊಳ್ಳುವ ಹಕ್ಕು ಕಾಯ್ದಿರಿಸಿಕೊಂಡಿದೆ. ಸಾರ್ವಜನಿಕರು ಯಾವುದೇ ಖಾಸಗಿ ಒಪ್ಪಂದಗಳು, ಜಾಹೀರಾತುಗಳು, ಅಥವಾ ಹೇಳಿಕೆಗಳ ಮೇಲೆ ಭರವಸೆ ಇಟ್ಟು ಹಣ ಪಾವತಿಸಿದಲ್ಲಿ, ಅದು ಅವರ ಸ್ವಂತ ಜವಾಬ್ದಾರಿಯಲ್ಲಿ ಮಾತ್ರ, ಕರ್ನಾಟಕ ಗೃಹ ಮಂಡಳಿಯ ಜವಾಬ್ದಾರಿ ಅಲ್ಲ ಹಾಗೂ ಈ ಸಂಬಂಧ ಜಮೀನುಗಳ ಮೇಲೆ ಅನೇಕ ನ್ಯಾಯಾಲಯ ಪ್ರಕರಣಗಳಿದ್ದು ಯಾವುದೇ ವ್ಯತಿರಿಕ್ತ ಆದೇಶಕ್ಕೆ ಮಂಡಳಿ ಜವಾಬ್ದಾರರಲ್ಲ.

ಈ ಘೋಷಣೆಯನ್ನು ಸಾರ್ವಜನಿಕರಲ್ಲಿ ತಪ್ಪುಧಾರಣೆಯನ್ನು ತಪ್ಪಿಸಲು, ಜನರ ಹಿತರಕ್ಷಣೆಗಾಗಿ ಹಾಗೂ ಕರ್ನಾಟಕ ಗೃಹ ಮಂಡಳಿಯ ಕಾನೂನು ಹಕ್ಕುಗಳನ್ನು ರಕ್ಷಿಸಲು ಪ್ರಕಟಿಸಲಾಗಿದೆ. ಯೋಜನೆಗೆ ಸಂಬಂಧಿಸಿದ ಎಲ್ಲಾ ಅಧಿಕೃತ ಮಾಹಿತಿಯನ್ನು ಕೆಎಚ್‌ಬಿ ಮಾತ್ರ ತನ್ನ ಅಧಿಕೃತ ಪ್ರಕಟಣೆಗಳ ಮೂಲಕವೇ ಪ್ರಕಟಿಸುತ್ತದೆ.
ಸಹಿ/–
(ಗೃಹ ಆಯುಕ್ತರು)
ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ,
ಕೆ.ಜಿ.ರೋಡ್, ಬೆಂಗಳೂರು–560009
ವಾ.ಸಾ.ಸಂ.ಇ/ಮೈಸೂರು/1458/ಶಿರಡಿ ಸಾಯಿ/2025–26

‘ದೇವದಾರಿ’ಗೆ ಕೇಂದ್ರ ಸರ್ಕಾರದ ಜೀವದಾನ

ನಿಗದಿತ ಅವಧಿಯಲ್ಲಿ ಆರಂಭವಾಗದ ಗಣಿಗಾರಿಕೆ • ರಾಷ್ಟ್ರದ ಹಿತಾಸಕ್ತಿ ಮುಂದಿಟ್ಟು ಗಣಿ ಗುತ್ತಿಗೆ ಎರಡು ವರ್ಷ ವಿಸ್ತರಣೆ

• ಹರಿಶಂಕರ್ ಆರ್.

ಬಳ್ಳಾರಿ: ಕುದುರೆಮುಖ ಕಬ್ಬಿಣದ ಅದಿರು ಕಂಪನಿಯ (ಕೆಐಒಸಿಎಲ್) ‘ದೇವದಾರಿ’ ಗಣಿ ಗುತ್ತಿಗೆ ರದ್ದಾಗುವುದನ್ನು ತಡೆದಿರುವ ಕೇಂದ್ರ ಸರ್ಕಾರ, ಗುತ್ತಿಗೆಯನ್ನು ಎರಡು ವರ್ಷಗಳವರೆಗೆ ವಿಸ್ತರಿಸಿದೆ.

ಸಂಡೂರಿನ ದಟ್ಟ ಅರಣ್ಯದ (ವರ್ಜಿನ್ ಫಾರೆಸ್ಟ್) 470.4 ಹೆಕ್ಟೇರ್ ಪ್ರದೇಶದಲ್ಲಿ ಕೆಐಒಸಿಎಲ್ ‘ದೇವದಾರಿ’ ಹೆಸರಿನ ಗಣಿ ಗುತ್ತಿಗೆ ಪಡೆದಿದೆ. ಆದರೆ, ಈವರೆಗೆ ಗಣಿ ಕಾರ್ಯಾಚರಣೆಯನ್ನು ಕಂಪನಿ ಆರಂಭಿಸಿಲ್ಲ. ಹೀಗಾಗಿ ಕಾಯ್ದೆಯ ಸೆಕ್ಷನ್ 4ಎ(4)ರ ಪ್ರಕಾರ, ಗುತ್ತಿಗೆ ಅವಧಿ 2026ರ ಜ. 01ರಂದು ಅಂತ್ಯಗೊಳ್ಳಲಿತ್ತು.

ಆದರೆ, ಗುತ್ತಿಗೆಯ ಅವಧಿಯನ್ನು 2028ರ ಜನವರಿ 1ರವರೆಗೆ ವಿಸ್ತರಣೆ ಮಾಡಿ, 2025ರ ನವೆಂಬರ್ 27ರಂದು ಕೇಂದ್ರ ಸರ್ಕಾರ (ಗಣಿ ಸಚಿವಾಲಯ) ಆದೇಶ ಹೊರಡಿಸಿದೆ. ಗುತ್ತಿಗೆ ರದ್ದಾಗುವುದನ್ನು ತಡೆದಿದೆ. ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) (ಎಂಎಂಡಿಆರ್) ಕಾಯ್ದೆ –1957ರ ಸೆಕ್ಷನ್ 20ಎ ಅಡಿಯಲ್ಲಿ ತನಗಿರುವ ಪರಮಾಧಿಕಾರ ಬಳಸಿರುವುದಾಗಿ ಕೇಂದ್ರ ಸರ್ಕಾರ ಹೇಳಿದೆ.

ನಿಯಂತ್ರಣಕ್ಕೆ ನಿಲುಕದ ಕಾರಣಗಳು: ದೇವದಾರಿ ಗಣಿ ಗುತ್ತಿಗೆಯ ಕರಾರನ್ನು 2023ರ ಜನವರಿ 2ರಂದು ಮಾಡಿಕೊಳ್ಳಲಾಗಿತ್ತು. ಎಂಎಂಡಿಆರ್ ಕಾನೂನಿನ ಪ್ರಕಾರ, 2025ರ ಜ.1ರ ಒಳಗಾಗಿ ಕೆಐಒಸಿಎಲ್ ಗಣಿಗಾರಿಕೆ ಆರಂಭಿಸಬೇಕಿತ್ತು. ಆದರೆ, ಅದು ಸಾಧ್ಯವಾಗಿರಲಿಲ್ಲ. ಆದ್ದರಿಂದ 2026ರ ಜ. 1ರ ವರೆಗೆ, ಒಂದು ವರ್ಷಕ್ಕೆ, ಒಂದು ಬಾರಿಗೆ ಮಾತ್ರ ಗಣಿ ಗುತ್ತಿಗೆ ವಿಸ್ತರಣೆ ಮಾಡಲಾಗಿತ್ತು. ಆದರೂ ಕಂಪನಿಗೆ ಈವರೆಗೆ ಉತ್ಪಾದನೆ ಆರಂಭಿಸಲು ಸಾಧ್ಯವಾಗಿಲ್ಲ.

ಇದರ ಬಗ್ಗೆ ಕೇಂದ್ರ ಗಣಿ ಸಚಿವಾಲಯಕ್ಕೆ ಸಮಜಾಯಿಷಿ ನೀಡಿರುವ ಕೇಂದ್ರ ಉಕ್ಕು ಸಚಿವಾಲಯ ‘ತನ್ನ ನಿಯಂತ್ರಣಕ್ಕೆ ನಿಲುಕದ ಬೆಳವಣಿಗೆಗಳಿಂದ ಗಣಿಗಾರಿಕೆ ನಡೆಸಲು ಈವರೆಗೆ ಸಾಧ್ಯವಾಗಿಲ್ಲ’ ಎಂದು ಹೇಳಿಕೊಂಡಿದೆ.

‘ಮರಗಳ ಎಣಿಕೆ, ಮರ ಕಡಿತಲೆ, ಅರಣ್ಯ ಭೂಮಿ ಪರಿವರ್ತನೆ ಮತ್ತು ರಸ್ತೆಗೆ ಸಂಬಂಧಿಸಿದ ಹಲವು ಅನುಮತಿಗಳು ರಾಜ್ಯ ಸರ್ಕಾರದಿಂದ ಸಿಕ್ಕಿಲ್ಲ. ಜತೆಗೆ, ಚಿಕ್ಕಮಗಳೂರಿನ ಕುದುರೆಮುಖದಲ್ಲಿನ ಗಣಿಗಾರಿಕೆಗೆ ಸಂಬಂಧಿಸಿದ ಸಮಸ್ಯೆಗಳು ದೇವದಾರಿಯಲ್ಲಿ ಗಣಿಗಾರಿಕೆ ನಡೆಸಲು ಅಡ್ಡಿಯಾದವು’ ಎಂದು ಉಕ್ಕು ಸಚಿವಾಲಯ ಹೇಳಿಕೊಂಡಿದೆ.

ಈ ಕಾರಣಗಳನ್ನು ಪರಿಗಣಿಸಿರುವ ಕೇಂದ್ರ ಗಣಿ ಇಲಾಖೆ, ಸಾರ್ವಜನಿಕ ವಲಯದ ಉದ್ದಿಮೆಯ ರಕ್ಷಣೆ, ಸಂಡೂರು–ಬಳ್ಳಾರಿ ಭಾಗದಲ್ಲಿ ಉದ್ಯೋಗ ಸೃಷ್ಟಿ, ರಾಜ್ಯ ಸರ್ಕಾರಕ್ಕೆ ಗಣಿಯಿಂದ ಬರಬಹುದಾದ ರಾಯಧನವನ್ನು ಗಮನದಲ್ಲಿ ಇಟ್ಟುಕೊಂಡು ಕೆಐಒಸಿಎಲ್‌ನ ದೇವದಾರಿ ಗಣಿಯ ಗುತ್ತಿಗೆಯನ್ನು ಎರಡು ವರ್ಷ ವಿಸ್ತರಿಸಿದೆ.

ಕೇಂದ್ರದ ಆದೇಶಕ್ಕಿದೆಯೇ ಮಾನ್ಯತೆ?

ಎಂಎಂಡಿಆರ್ ಕಾಯಿದೆಯ ಸೆಕ್ಷನ್ 20 (ಎ) ಅಡಿಯಲ್ಲಿ ತನಗಿರುವ ಅಧಿಕಾರ ಬಳಸಿ ದೇವದಾರಿ ಗಣಿ ಗುತ್ತಿಗೆ ಅವಧಿ ವಿಸ್ತರಿಸಿರುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಆದರೆ, ಸೆಕ್ಷನ್ 20 (ಎ) ಹೇಳುವುದೇ ಬೇರೆ.

‘ಖನಿಜ ಸಂಪನ್ಮೂಲಗಳ ಸಂರಕ್ಷಣೆ, ರಾಷ್ಟ್ರೀಯ ಹಿತಾಸಕ್ತಿಗೆ ಸಂಬಂಧಿಸಿದ ನೀತಿ, ಖನಿಜ ಸಂಪನ್ಮೂಲಗಳ ವೈಜ್ಞಾನಿಕ ಮತ್ತು ಸುಸ್ಥಿರ ಅಭಿವೃದ್ಧಿ ಮತ್ತು ಉತ್ಖನನಕ್ಕಾಗಿ ಅಗತ್ಯವಿರುವ ನಿರ್ದೇಶನಗಳನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನೀಡಬಹುದು’ ಎಂದು ಸೆಕ್ಷನ್ 20(ಎ) ಹೇಳಿದೆ. ಆದರೆ, ಗಣಿಯೊಂದರ ಗುತ್ತಿಗೆ ವಿಸ್ತರಿಸಬಹುದು ಎಂದು ಹೇಳಿಲ್ಲ. ಸದ್ಯ ಗುತ್ತಿಗೆ ವಿಸ್ತರಿಸಿರುವುದನ್ನು ನಿರ್ದೇಶನ ಎಂದು ಪರಿಗಣಿಸಿದರೂ, ಇಲ್ಲಿ ಮತ್ತೆ ರಾಜ್ಯ ಸರ್ಕಾರದ ತೀರ್ಮಾನವೇ ಅಂತಿಮವಾಗಲಿದೆ ಎಂದು ಹೇಳಲಾಗುತ್ತಿದೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ವಾಣಿಜ್ಯ ಮತ್ತು ಕೈಗಾರಿಕಾ (ಗಣಿ) ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಅವರನ್ನು ಸಂಪರ್ಕಿಸಲಾಯಿತಾದರೂ, ಸಾಧ್ಯವಾಗಲಿಲ್ಲ.

ಭಾರತದ್ದು ಒಕ್ಕೂಟ ವ್ಯವಸ್ಥೆ. ರಾಜ್ಯಗಳಿಗಿರುವ ಅಧಿಕಾರವನ್ನು ಕೇಂದ್ರ ಮೊಟಕು ಮಾಡುವುದು ಸರಿಯಲ್ಲ. ಏಕಾಏಕಿ ಗಣಿ ಗುತ್ತಿಗೆಯನ್ನು ವಿಸ್ತರಣೆ ಮಾಡಿರುವುದು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದ ನಡೆ
ಎಸ್.ಆರ್.ಹಿರೇಮಠ, ಸಂಸ್ಥಾಪಕ, ಸಮಾಜ ಪರಿವರ್ತನಾ ಸಮುದಾಯ

99 ಸಾವಿರ ಮರಗಳಿಗೆ ಆಪತ್ತು

ದೇವದಾರಿ ಗಣಿಗಾರಿಕೆಗೆ ಮಂಜೂರಾಗಿರುವ 470.4 ಹೆಕ್ಟೇರ್ ದಟ್ಟಾರಣ್ಯ. ಹಲವು ಬಗೆಯ ವನ್ಯಜೀವಿಗಳಿಗೆ ಆಶ್ರಯ ತಾಣವಾಗಿದೆ. ಝರಿ, ಜಲಪಾತಗಳು ಇಲ್ಲಿವೆ. ಗಣಿಗಾರಿಕೆಗಾಗಿ 99 ಸಾವಿರ ಮರಗಳನ್ನು ಕಡಿಯಬೇಕಾಗುತ್ತದೆ. ಇದು ಸ್ಥಳೀಯ ಪ್ರಾಕೃತಿಕ ವಿನಾಶಕ್ಕೆ ಕಾರಣವಾಗಲಿದೆ ಎಂದು ಅರಣ್ಯ ಇಲಾಖೆ ತನ್ನ ವರದಿಯಲ್ಲಿ ಹೇಳಿದೆ. ಈ ವಿಷಯವು ವಿರೋಧಗಳಿಗೆ ಕಾರಣವಾಗಿದೆ.

ಸುದ್ದಿ 2 ನಿಮಿಷ

ಎಸ್‌ಡಿಐ 28ನೇ ರಾಜ್ಯಮಟ್ಟದ ಸಮ್ಮೇಳನ ನಾಳೆಯಿಂದ

ಹುಬ್ಬಳ್ಳಿ: ‘ಸುನ್ನಿ ದಾವತೆ ಇಸ್ಲಾಮಿ (ಎಸ್‌ಡಿಐ) 28ನೇ ರಾಜ್ಯಮಟ್ಟದ ವಾರ್ಷಿಕ ಸಮ್ಮೇಳನ ‘ಸುನ್ನಿ ಇಜ್ತೆಮಾ’ ಅನ್ನು ಜ.3 ಮತ್ತು 4ರಂದು ನಗರದ ಕಾರವಾರ ರಸ್ತೆಯ ಈದ್ಗಾ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ’ ಎಂದು ಹುಬ್ಬಳ್ಳಿ ಸುನ್ನಿ ದಾವತೆ ಇಸ್ಲಾಮಿ ಅಧ್ಯಕ್ಷ ಮೆಹಬೂಬ್ ಕಲ್ಯೆಗಾರ ಹೇಳಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜ.3ರಂದು ಮಹಿಳೆಯರ ಸಮ್ಮೇಳನ, ‘ಜ.4ರಂದು ಪುರುಷರ ಸಮ್ಮೇಳನ ನಡೆಯಲಿದೆ. ಶಿಕ್ಷಣ ಜಾಗೃತಿ, ವೃತ್ತಿ ಕೌಶಲಾಭಿವೃದ್ಧಿ ಹಾಗೂ ಮಾನವೀಯ ಮೌಲ್ಯಗಳ ಅರಿವು ಮೂಡಿಸುವ ಉದ್ದೇಶದಿಂದ ಸಮ್ಮೇಳನ ಆಯೋಜಿಸಲಾಗಿದೆ. ಸಮ್ಮೇಳನದಲ್ಲಿ ಸುಮಾರು 2 ಸಾವಿರಕ್ಕೂ ಅಧಿಕ ಜನ ಸೇರುವ ನಿರೀಕ್ಷೆ ಇದೆ’ ಎಂದು ತಿಳಿಸಿದರು.

ಅಧಿಕಾರಿಗಳ ನಿರ್ಲಕ್ಷ್ಯ: ತನಿಖೆ ನಡೆಸಿ ಕ್ರಮ– ಮಹದೇವಪ್ಪ

ಹುಬ್ಬಳ್ಳಿ: ‘ತಾಲ್ಲೂಕಿನ ಇನಾಂ ವೀರಾಪುರದಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಪ್ರಕರಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದರೆ, ಅವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು.

ಇನಾಂ ವೀರಾಪುರ ಗ್ರಾಮಕ್ಕೆ ಗುರುವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಸಂತ್ರಸ್ತರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಂತ್ರಸ್ತ ಕುಟುಂಬಕ್ಕೆ ಅಗತ್ಯ ನೆರವು ನೀಡಲಾಗುವುದು. ಪ್ರಕರಣದಲ್ಲಿ ಭಾಗಿಯಾದವರು ಮತ್ತು ಇದಕ್ಕೆ ಪ್ರಚೋದಿಸಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಏಳು ತಿಂಗಳ ಗರ್ಭಿಣಿಯನ್ನು ಅವರ ಕುಟುಂಬಸ್ಥರೇ ಕೊಲೆ ಮಾಡಿದ್ದು ಮೃಗೀಯ ಘಟನೆ. ಸರ್ಕಾರ ಇದನ್ನು ಸಹಿಸಲ್ಲ. ಮನುವಾದದ ಮನಸ್ಸುಗಳನ್ನು ಹತ್ತಿಕ್ಕಬೇಕು’ ಎಂದು ಹೇಳಿದರು.

ನಗರದ ವಿವೇಕಾನಂದ ಆಸ್ಪತ್ರೆಗೆ ಭೇಟಿ ನೀಡಿದ ಎಚ್.ಸಿ. ಮಹದೇವಪ್ಪ, ಮಾನ್ಯಾ ಅವರ ಅತ್ತೆ ರೇಣವ್ವ ದೊಡ್ಡಮನಿ ಅವರ ಆರೋಗ್ಯ ವಿಚಾರಿಸಿದರು. ಪ್ರಕರಣದಲ್ಲಿ ಎಂಟು ಸಂತ್ರಸ್ತರಿಗೆ ತಲಾ ₹2 ಲಕ್ಷದ ಪರಿಹಾರ ಚೆಕ್ ಅನ್ನು ಕುಟುಂಬಸ್ಥರಿಗೆ ನೀಡಲಾಯಿತು.

ಗ್ರಾಮದಲ್ಲಿ ಸುರಕ್ಷತೆ ದೃಷ್ಟಿಯಿಂದ ಗ್ರಾಮ ಪಂಚಾಯಿತಿಯಿಂದ 8 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ನಿಗಾ ವಹಿಸಲಾಗಿದೆ.

ಚಿಟಿಕೆ ಸುದ್ದಿ

ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆ

ಫಾತಿಮಾ ಸಜ್ಲಾ ಬೈತ್ತಡ್ಕ

ಪುತ್ತೂರು (ದಕ್ಷಿಣ ಕನ್ನಡ): ಶಾಯಿಯಲ್ಲಿ ಅದ್ದುವ ಪೆನ್ ಬಳಸಿ, ಕುರ್ ಆನ್ ಬರೆದು ದಾಖಲೆ ಮಾಡಿದ್ದ ಪುತ್ತೂರು ತಾಲ್ಲೂಕಿನ ಕುಂಬ್ರ ಮರ್ಕಝ್ ಪದವಿ ವಿಭಾಗದ ವಿದ್ಯಾರ್ಥಿನಿ ಸಜ್ಲಾ ಇಸ್ಮಾಯಿಲ್ ಬೈತ್ತಡ್ಕ ಅವರು ಇದೀಗ ‘ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್’ನಲ್ಲಿ ‘ವರ್ಲ್ಡ್ ರೆಕಾರ್ಡ್ಸ್ ಆಫ್ ಎಕ್ಸಲೆಂಟ್’ ದಾಖಲೆಯೊಂದಿಗೆ ವಿಶ್ವ ಮಟ್ಟದ ಪ್ರತಿಭೆ ಎಂಬ ಮನ್ನಣೆಗೆ ಭಾಜನರಾಗಿದ್ದಾರೆ. ಸಜ್ಲಾ ಇಸ್ಮಾಯಿಲ್ ಅವರು ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿದ್ದು, ‘ಐಬಿಆರ್ ಅಚೀವರ್’ ಪ್ರಶಸ್ತಿ ಪಡೆದಿದ್ದಾರೆ. ಇವರು ಬೈತ್ತಡ್ಕ ನಿವಾಸಿಯಾದ ಇಸ್ಮಾಯಿಲ್, ಝುಹ್ರಾ ಜಾಸ್ಮಿನ್ ದಂಪತಿಯ ಪುತ್ರಿ.

‘ಹೊಸಬರಿಗೆ ಅವಕಾಶ ನೀಡಿ’

ಹುಬ್ಬಳ್ಳಿ: ‘ಜನವರಿ 15ರ ಬಳಿಕ ಸಚಿವ ಸಂಪುಟದ ಪುನರ್‌ರಚನೆ ಆಗುವ ಸಾಧ್ಯತೆಯಿದ್ದು, ಅದರಲ್ಲಿ ಶೇ 50ರಷ್ಟು ಹೊಸಬರಿಗೆ ಅವಕಾಶ ನೀಡಲು ಪಕ್ಷದ ಹೈಕಮಾಂಡ್ ಅನ್ನು ಕೋರಲಾಗಿದೆ’ ಎಂದು ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು.

‘ಮುಂಬರುವ ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆ ಮತ್ತು ರಾಜ್ಯದಲ್ಲಿ 2028ಕ್ಕೆ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ತರುವ ದೃಷ್ಟಿಯಿಂದ ಸಚಿವ ಸಂಪುಟ ಪುನರ್‌ರಚನೆ ಮಹತ್ವದಿಂದ ಕೂಡಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ಅಪಘಾತ ಮೂವರ ಸಾವು

ಹಾಸನ: ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಬಾಣಾವರ ಸಮೀಪದ ಚಿಕ್ಕಾರಹಳ್ಳಿ ಗೋಶಾಲೆ ಬಳಿ ರಾಷ್ಟ್ರೀಯ ಹೆದ್ದಾರಿ 69ರಲ್ಲಿ ಗುರುವಾರ ಹಸಿ ಅಡಿಕೆ ಸಾಗಿಸುತ್ತಿದ್ದ ಬೊಲೆರೊ ವಾಹನದ ಟೈರ್ ಸಿಡಿದು, ಪಲ್ಟಿಯಾಗಿ ಮೂವರು ಸ್ಥಳದಲ್ಲೇ ಮೃತಪಟ್ಟರು.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ತಂಗ್ಲಿ ಗ್ರಾಮದ ಶಬ್ಬೀರ್ (55), ತಿಮ್ಮಣ್ಣ (53), ಸಂಜಯ್ (45) ಮೃತರು. ಗಾಯಗೊಂಡಿರುವ ಹಾಸನದ ನೌಶಾದ್ ಅವರನ್ನು ಕಡೂರು ಆಸ್ಪತ್ರೆಗೆ ದಾಖಲಿಸಲಾಗಿದೆ..

ಜೈಲು: ನಿಷೇಧಿತ ವಸ್ತು ಎಸೆದ ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಹಿಂಡಲಗಾ ಕೇಂದ್ರ ಕಾರಾಗೃಹದ ಹೊರಗಡೆಯಿಂದ ಜೈಲಿನೊಳಗೆ ಮೊಬೈಲ್ ಫೋನ್, ಮಾದಕವಸ್ತು ಮತ್ತು ಇತರೆ ವಸ್ತುಗಳನ್ನು ಎಸೆಯುತ್ತಿರುವ ವಿಡಿಯೊ ಗುರುವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ವಿಡಿಯೊ ಹರಿದಾಡಿದ ಬಳಿಕ ಹಿಂಡಲಗಾ ಕಾರಾಗೃಹಕ್ಕೆ ಭೇಟಿ ನೀಡಿದ ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ, ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ(ಕೆಎಸ್‌ಐಎಸ್‌ಎಫ್) ಅಧಿಕಾರಿಗಳೊಂದಿಗೆ ಅಲ್ಲಿಯೇ ಸಭೆ ನಡೆಸಿದರು. ಈ ಘಟನೆಗಳು ಮತ್ತು ವಿಡಿಯೊಗಳ ದಿನಾಂಕಗಳ ಬಗ್ಗೆ ಮಾಹಿತಿ ಪಡೆದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾರಾಗೃಹದ ಹೊರಗಡೆ ಭದ್ರತೆಯನ್ನು ಕೆಎಸ್‌ಐಎಸ್‌ಎಫ್ ಮತ್ತು ಒಳಗಡೆಯದ್ದನ್ನು ಕಾರಾಗೃಹ ಮತ್ತು ಸೇವಾ ಸುಧಾರಣಾ ಸೇವೆಗಳ ಇಲಾಖೆ ನಿರ್ವಹಿಸುತ್ತದೆ. ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊಗಳ ದಿನಾಂಕಗಳ ಕುರಿತು ಮಾಹಿತಿ ಕೇಳಿದ್ದೇವೆ’ ಎಂದರು.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಉತ್ತರ ವಲಯ ಐಜಿಪಿ ಟಿ.ಪಿ.ಶೇಷ ಮಾತನಾಡಿ, ‘ಈಚೆಗೆ ನಾವು ಕಾರಾಗೃಹದಲ್ಲಿ ಕಾರ್ಯಾಚರಣೆ ಹೆಚ್ಚಿಸಿದ್ದೇವೆ. ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊಗಳನ್ನು ಗಮನಿಸಿದರೆ, ಕೆಎಸ್‌ಐಎಸ್‌ಎಫ್ ಸಿಬ್ಬಂದಿ ಪ್ರಾಥಮಿಕವಾಗಿ ಲೋಪ ಎಸಗಿರುವುದು ಕಂಡುಬಂದಿದೆ’ ಎಂದರು.

ಹಿಂಡಲಗಾದ ಕೇಂದ್ರ ಕಾರಾಗೃಹಕ್ಕೆ ಭೂಷಣ ಬೊರಸೆ ಗುರುವಾರ ಭೇಟಿ ನೀಡಿ, ನಿಷೇಧಿತ ವಸ್ತುಗಳನ್ನು ಜೈಲಿನೊಳಗೆ ಎಸೆದಿರುವ ಕುರಿತು ಮಾಹಿತಿ ಸಂಗ್ರಹಿಸಿದರು

ಕೈದಿಗಳಿಗೆ ರಾಜಾತಿಥ್ಯ: ತನಿಖೆಗೆ ಸೂಚನೆ

ಕಲಬುರಗಿ: ಇಲ್ಲಿನ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಪದೇಪದೆ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳ ಕುರಿತು ತನಿಖೆ ನಡೆಸಲು ಕಾರಾಗೃಹಗಳ ಇಲಾಖೆಯ ಹೆಚ್ಚುವರಿ ಮಹಾನಿರೀಕ್ಷಕ ಪಿ.ವಿ.ಆನಂದ ರೆಡ್ಡಿ ಅವರನ್ನು ನೇಮಿಸಲಾಗಿದೆ.

ಕಲಬುರಗಿ ಸೆಂಟ್ರಲ್ ಜೈಲಿನಲ್ಲಿ ಕೈದಿಗಳು ಮದ್ಯ ಕುಡಿಯುತ್ತ, ಇಸ್ಪೀಟ್ ಆಡುತ್ತಿರುವ ವಿಡಿಯೊ ಬುಧವಾರ ಹರಿದಾಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

‘ಜೈಲಿನಲ್ಲಿ ಅಕ್ರಮ ಚಟುವಟಿಕೆಗಳ ನಡೆದಿರುವ ಆರೋಪ ಕುರಿತು ಕುರಿತ ತನಿಖೆ ಕೈಗೊಳ್ಳಲು ಪಿ.ವಿ.ಆನಂದ ರೆಡ್ಡಿ ಅವರನ್ನು ನೇಮಿಸಲಾಗಿದೆ. ಅವರು ಜನವರಿ 2ರಿಂದಲೇ ಪೂರ್ವಭಾವಿ ವಿಚಾರಣೆ ಆರಂಭಿಸಲಿದ್ದಾರೆ. ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಜನವರಿ 3ರಂದು ಕಲಬುರಗಿ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಲಿದ್ದಾರೆ’ ಎಂದು ಕಾರಾಗೃಹಗಳ ಇಲಾಖೆಯ ಪ್ರಕಟಣೆ ತಿಳಿಸಿದೆ.

ಪ್ರಕರಣ ದಾಖಲು: ಕೈದಿಗಳು ಮದ್ಯ ಕುಡಿಯುತ್ತ, ಇಸ್ಪೀಟ್ ಆಡುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಬುಧವಾರ ಹರಿದಾಡಿರುವುದಕ್ಕೆ ಸಂಬಂಧಿಸಿದಂತೆ ಕಲಬುರಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಆರ್. ಅನಿತಾ ಅವರ ದೂರಿನನ್ವಯ ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ನಾಲ್ವರ ಮೇಲೆ ಪ್ರಕರಣ ದಾಖಲಾಗಿದೆ.

ರಾಯರ ಸನ್ನಿಧಿಗೆ ಭಕ್ತರ ದಂಡು

ಪ್ರಜಾವಾಣಿ ಚಿತ್ರ

ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಹೊಸ ವರ್ಷದ ಮೊದಲ ದಿನವಾದ ಗುರುವಾರದಂದು ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು

106 ದಿನ ಪೂರೈಸಿದ ಸರ್ಕಾರಿ ವೈದ್ಯಕೀಯ ಕಾಲೇಜು ಹೋರಾಟ

ಸಚಿವರ ಮನೆಗೆ ಮುತ್ತಿಗೆ ಯತ್ನಕ್ಕೆ ತಡೆ

ಪ್ರಜಾವಾಣಿ ವಾರ್ತೆ

ವಿಜಯಪುರ: ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಆಗ್ರಹಿಸಿ ಮತ್ತು ಸಾರ್ವಜನಿಕ– ಖಾಸಗಿ ಸಹಭಾಗಿತ್ವವನ್ನು(ಪಿಪಿಪಿ) ವಿರೋಧಿಸಿ 106 ದಿನಗಳಿಂದ ಇಲ್ಲಿ ನಡೆದಿರುವ ಅನಿರ್ದಿಷ್ಟಾವಧಿ ಹೋರಾಟ ಗುರುವಾರ ತೀವ್ರಸ್ವರೂಪ ಪಡೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರ ಮನೆಗೆ ಮುತ್ತಿಗೆ ಹಾಕಲು ಹೋರಾಟಗಾರರು ಮುಂದಾದಾಗ ಪೊಲೀಸರು ಮಾರ್ಗ ಮಧ್ಯೆ ತಡೆಯೊಡ್ಡಿದರು. ಆಗ ಪೊಲೀಸರು ಮತ್ತು ಹೋರಾಟಗಾರರ ನಡುವೆ ನೂಕಾಟ ನಡೆಯಿತು.

ಹೋರಾಟದಲ್ಲಿ ಪಾಲ್ಗೊಂಡಿದ್ದ ಬಸವನಬಾಗೇವಾಡಿ ತಾಲ್ಲೂಕಿನ ಪಿ.ಬಿ. ಹುಳಶ್ಯಾಳ ಮಠದ ಸಂಗನಬಸವ ಸ್ವಾಮೀಜಿಯವರನ್ನು ಪೊಲೀಸರು ತಡೆಯಲು ಯತ್ನಿಸಿದರು. ಆಗ ತಳ್ಳಾಟ ನಡೆದು, ಸ್ವಾಮೀಜಿ ಬಳಿ ಇದ್ದ ಮೊಬೈಲ್ ಫೋನ್ ಅನ್ನು ಪೊಲೀಸ್ ಸಿಬ್ಬಂದಿ ಕಿತ್ತುಕೊಂಡರು. ಆಗ ಸ್ವಾಮೀಜಿ ಸಿಬ್ಬಂದಿಯ ಕಪಾಳಕ್ಕೆ ಹೊಡೆದರು.

ದೂರು: ‘ಜಾಥಾ ವೇಳೆ ನನಗೆ ಕಪಾಳಕ್ಕೆ ಹೊಡೆದು, ಕೊಲೆ ಯತ್ನ ಹಾಗೂ ಜೀವ ಬೆದರಿಕೆ ಹಾಕಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ’ ಎಂದು ಆದರ್ಶನಗರ ಪೊಲೀಸ್ ಠಾಣೆ ಪಿಎಸ್‌ಐ ಸೀತಾರಾಮ ಲಮಾಣಿ ಹಾಗೂ ಪೊಲೀಸ್ ಸಿಬ್ಬಂದಿ ಶ್ರೀನಿವಾಸ ಬಿರಾದಾರ ದೂರು ದಾಖಲಿಸಿದ್ದಾರೆ.

‘ಸಚಿವರ ಮನೆ ಮುತ್ತಿಗೆ ಹಾಕುವಾಗ ಜನರಿಗೆ ತೊಂದರೆ ಮಾಡಬೇಡಿ ಎಂದು ಹೇಳಿ ನಾವಿಬ್ಬರೂ ಕರ್ತವ್ಯ ನಿಭಾಯಿಸುತ್ತಿದ್ದ ವೇಳೆ ಹುಣಶ್ಯಾಳದ ಸಂಗನಬಸವೇಶ ಸ್ವಾಮೀಜಿ ಸೇರಿ 27 ಜನರು ಮೇಲೆ ಹಲ್ಲೆ ಮಾಡಿ ಜೀವದ ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರೋಪ: ‘ಪೊಲೀಸರು ಪ್ರತಿಭಟನಕಾರರನ್ನು ಕರೆದೊಯ್ಯುವಾಗ ಎಬಿಡಿಎಸ್‌ಒ ನಾಯಕಿ ಕಾವೇರಿ ರಜಪೂತ ಅವರ ಜಡೆ ಎಳೆದು, ಅಮಾನವೀಯವಾಗಿ ನಡೆದುಕೊಂಡಿದ್ದಾರೆ’ ಎಂದು ಹೋರಾಟಗಾರ್ತಿ ಲಲಿತಾ ಬಿಜ್ಜರಗಿ ಆರೋಪಿಸಿದರು.

ಹೋರಾಟ ಸಮಿತಿ ಸದಸ್ಯರಾದ ಅನಿಲ ಹೊಸಮನಿ, ಅರವಿಂದ ಕುಲಕರ್ಣಿ, ಭಗವಾನ್ ರೆಡ್ಡಿ, ಸಿದ್ದಲಿಂಗ ಬಾಗೇವಾಡಿ, ಭರತ್ ಎಚ್.ಟಿ., ಬೋಗೇಶ ಸೋಲಾಪುರ, ಶಿವಬಾಳಮ್ಮ ಕೊಂಡಗುಳಿ, ಸುರೇಖಾ ರಜಪೂತ, ಅಕ್ರಂ ಮಾಶಾಳಕರ ಸೇರಿ 27 ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡದಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ

ನೈರುತ್ಯ ರೈಲ್ವೆ: ಸರಕು ಸಾಗಣೆಯಲ್ಲಿ ದಾಖಲೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 2025ರ ಡಿಸೆಂಬರ್‌ನಲ್ಲಿ ನೈರುತ್ಯ ರೈಲ್ವೆಯು ಒಟ್ಟು 50,70,000 ಟನ್ ಮೂಲ ಸರಕುಗಳನ್ನು ಸಾಗಣೆ ಮಾಡಿದ್ದು, ಒಂದೇ ತಿಂಗಳಲ್ಲಿ ಅತ್ಯಧಿಕ ಸರಕು ಸಾಗಿಸಿರುವುದು ನೈರುತ್ಯ ರೈಲ್ವೆ ಇತಿಹಾಸದಲ್ಲೇ ಮೊದಲು.

2024ರ ಮಾರ್ಚ್‌ನಲ್ಲಿ 50,40,000 ಟನ್ ಸರಕು ಸಾಗಿಸಿದ್ದ ದಾಖಲೆಯನ್ನು ಮೀರಿಸಿದೆ. ಕಬ್ಬಿಣದ ಅದಿರು 21 ಲಕ್ಷ ಟನ್, ಕಲ್ಲಿದ್ದಲು 11 ಲಕ್ಷ ಟನ್, ಉಕ್ಕು 9,10,000 ಟನ್, ಕಚ್ಚಾ ವಸ್ತು 1.5 ಲಕ್ಷ ಟನ್, ಖನಿಜ ತೈಲ 2.20 ಲಕ್ಷ ಟನ್, ರಸಗೊಬ್ಬರ 1 ಲಕ್ಷ ಟನ್ ಸಾಗಣೆ ಮಾಡಲಾಗಿದೆ.

2025–26ನೇ ಹಣಕಾಸು ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ 3.80 ಕೋಟಿ ಟನ್ ಸರಕು ಸಾಗಿಸಿರುವುದು ದಾಖಲೆಯಾಗಿದೆ. 2023–24ನೇ ಹಣಕಾಸು ವರ್ಷದಲ್ಲಿ 3.6 ಕೋಟಿ ಟನ್ ಸರಕು ಸಾಗಣೆ ಮಾಡಲಾಗಿತ್ತು.

ಡಿಸೆಂಬರ್‌ನಲ್ಲಿ ಸರಕು ಸಾಗಣೆಯಿಂದ ₹503.84 ಕೋಟಿ, ಪ್ರಯಾಣಿಕರ ಆದಾಯ ₹296.18 ಕೋಟಿ, ವಿವಿಧ ಮೂಲಗಳಿಂದ ₹10.31 ಕೋಟಿಗೆ ಸೇರಿ ಒಟ್ಟು ₹839.70 ಕೋಟಿ ಆದಾಯ ಗಳಿಸಿದೆ. ಸುಮಾರು 1.46 ಕೋಟಿ ಪ್ರಯಾಣಿಕರು ನೈರುತ್ಯ ರೈಲ್ವೆಯ ರೈಲುಗಳಲ್ಲಿ ಪ್ರಯಾಣಿಸಿದ್ದಾರೆ.

2025ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಒಟ್ಟು ₹6,922.94 ಕೋಟಿ ಆದಾಯ ಗಳಿಸಿದ್ದು, ಪ್ರಯಾಣಿಕರ ಆದಾಯ ₹2,543.44 ಕೋಟಿ, ಸರಕು ಸಾಗಣೆ ಆದಾಯ ₹3,969.81 ಕೋಟಿ ಮತ್ತು ವಿವಿಧ ಮೂಲಗಳಿಂದ ₹157.70 ಕೋಟಿ ಆದಾಯ ಸಂಗ್ರಹವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕನ್ನಡಿಗರಿಗೆ ಮೀಸಲು: ಮಸೂದೆ ಅಂತಿಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಉದ್ಯಮ ಮತ್ತು ಸಂಸ್ಥೆಗಳ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಉದ್ದೇಶದ ಮಸೂದೆ ಅಂತಿಮಗೊಂಡಿದೆ.

ಯಾವುದೇ ಕಂಪನಿಯ ಆಡಳಿತಾತ್ಮಕ ಹುದ್ದೆಗಳ ಪೈಕಿ ಶೇ 50ರಷ್ಟು, ಸಿ ಮತ್ತು ಡಿ ದರ್ಜೆಯ ಹುದ್ದೆಗಳಲ್ಲಿ ಶೇ 75ರಷ್ಟು ಮೀಸಲಾತಿ ನೀಡಲು ಈ ಮಸೂದೆ ರೂಪಿಸಲಾಗಿದೆ. ಈ ಹಿಂದೆ ಸಚಿವ ಸಂಪುಟ ಸಭೆಯಲ್ಲಿ ಮಸೂದೆಯ ಕುರಿತು ಸಚಿವರ ಮಧ್ಯೆ ಒಮ್ಮತ ಮೂಡದ ಕಾರಣ ತಡೆ ಹಿಡಿಯಲಾಗಿತ್ತು.

‘ಈ ಮಸೂದೆಯ ಬಗ್ಗೆ ಇನ್ನಷ್ಟು ವಿಸ್ತೃತ ಚರ್ಚೆ ನಡೆಯಬೇಕಾಗಿದ್ದ ಕಾರಣ ತಡೆ ಹಿಡಿಯಲಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಮಸೂದೆಗಳ ವಿಚಾರದಲ್ಲಿ ಸಚಿವರ ಮಧ್ಯೆ ಸಮನ್ವಯಕ್ಕಾಗಿ ಸಮಿತಿಯನ್ನೂ ರಚಿಸಲಾಗಿತ್ತು. ಮಸೂದೆಯಲ್ಲಿ ಸಣ್ಣಪುಟ್ಟ ಮಾರ್ಪಾಡುಗಳನ್ನು ಮಾಡಲಾಗಿದೆ. ಸದ್ಯವೇ ಸಚಿವ ಸಂಪುಟ ಸಭೆ ಒಪ್ಪಿಗೆಗೆ ಮಂಡಿಸಲಾಗುವುದು ಎಂದು ಮೂಲಗಳು ಹೇಳಿವೆ.

ಹಳೆ ಮಸೂದೆಯಲ್ಲೇನಿದೆ: ಖಾಸಗಿ ಉದ್ಯಮ ಮತ್ತು ಸಂಸ್ಥೆಯು ನಿಗದಿಪಡಿಸಿದ ಶೇಕಡಾವಾರು ಪ್ರಮಾಣದಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡದಿದ್ದರೆ ಅಥವಾ ಅದಕ್ಕಿಂತ ಕಡಿಮೆ ಮೀಸಲಾತಿ ನೀಡಿದ್ದರೆ ಅಂತಹ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ಭೂಮಿ, ತೆರಿಗೆ ರಿಯಾಯಿತಿ ಅಥವಾ ತೆರಿಗೆಯ ಮುಂದೂಡಿಕೆ, ಸಹಾಯಧನ ಮತ್ತು ಇತರ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲ.

ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಬಗ್ಗೆ ಸರ್ಕಾರಕ್ಕೆ ಲಿಖಿತ ಭರವಸೆ ನೀಡಿಯೂ ಆ ಪ್ರಕಾರ ನಡೆದುಕೊಳ್ಳದ ಉದ್ಯಮಗಳಿಗೆ ಸರ್ಕಾರ ನೀಡಿದ್ದ ತೆರಿಗೆ ರಿಯಾಯಿತಿ ಅಥವಾ ತೆರಿಗೆಯ ಮುಂದೂಡಿಕೆ, ಸಹಾಯಧನ ಮತ್ತು ಇತರ ಸೌಲಭ್ಯಗಳನ್ನು ಮುಂದುವರಿಸಬಾರದು. ದಂಡ ವಿಧಿಸಬಹುದು ಎಂಬ ಅಂಶವನ್ನೂ ಸೇರಿಸಲಾಗಿತ್ತು.

ಯಾದಗಿರಿಯ ದುರ್ಗಾ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ದುಃಸ್ಥಿತಿ

ಅತ್ತ ಕೆರೆ, ಇತ್ತ ಕೊಚ್ಚೆ, ಭಯದಲ್ಲಿ ಮಕ್ಕಳು!

• ಮಲ್ಲಿಕಾರ್ಜುನ ನಾಲವಾರ

ಯಾದಗಿರಿ: ಇಲ್ಲಿನ ದುರ್ಗಾ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಅಂಗಳವನ್ನು ದೊಡ್ಡ ಕೆರೆಯ ನೀರು ಹಾಗೂ ಕೊಳಚೆ ನೀರು ಆವರಿಸಿಕೊಂಡಿದ್ದು, ಮಕ್ಕಳು ಜೀವ ಭಯದಲ್ಲಿ ಪಾಠ ಕಲಿಯುವಂತಾಗಿದೆ. ಮಕ್ಕಳಿಗೆ ಖುಷಿಯಿಂದ ಆಟವಾಡುವ ಭಾಗ್ಯವೂ ಇಲ್ಲ.

1ರಿಂದ 5ನೇ ತರಗತಿವರೆಗಿನ ಈ ಶಾಲೆಯಲ್ಲಿ 29 ಮಕ್ಕಳು ದಾಖಲಾಗಿದ್ದಾರೆ. ಒಂದು ಕೋಣೆಯಲ್ಲಿ 1ರಿಂದ 3ನೇ ತರಗತಿ, ಮತ್ತೊಂದು ಕೋಣೆಯಲ್ಲಿ 4ರಿಂದ 5ನೇ ತರಗತಿಗಳು ನಡೆಯುತ್ತಿವೆ. ಆದರೆ ಕೆರೆ ನೀರಿನ ಭಯದಿಂದ ಮಕ್ಕಳನ್ನು ಮುಕ್ತಗೊಳಿಸಲು ಆಗಿಲ್ಲ.

ಶಾಲೆಯ ಒಂದು ಬದಿಯಲ್ಲಿ ಕೆರೆ ನೀರಿದೆ. ಎದುರಿನಲ್ಲಿ ಗಟಾರದ ನೀರು ಹರಿದು ಗಬ್ಬು ನಾರುತ್ತಿದೆ. ನೀರಿನೊಂದಿಗೆ ಕೊಚ್ಚಿಕೊಂಡ ಬಂದ ಹಳೇ ಬಟ್ಟೆಗಳು, ಪ್ಲಾಸ್ಟಿಕ್, ಕಸ-ಕಡ್ಡಿಗಳು ಶಾಲೆಯ ಸುತ್ತಲೂ ಆವರಿಸಿಕೊಂಡಿವೆ. ಈ ಕಸದ ರಾಶಿಯ ನಡುವೆ ಆಗಾಗ ವಿಷ ಜಂತುಗಳು ಶಾಲೆಗೆ ನುಗ್ಗುತ್ತವೆ. ಇಂಥ ಅಪಾಯದ ಪರಿಸರದ ನಡುವೆಯೂ ಅಕ್ಷರ ಕಲಿಯುವುದನ್ನು ಮಕ್ಕಳು ರೂಢಿಸಿಕೊಂಡಿದ್ದಾರೆ.

‘ಮೂರು ವರ್ಷಗಳಿಂದ ಕೆರೆ ನೀರಿನ ಅಪಾಯದ ಎದುರು ಕುಳಿತು ಮಕ್ಕಳಿಗೆ ಪಾಠ ಮಾಡುತ್ತಿದ್ದೇವೆ. ಮಕ್ಕಳಿಗಿಂತ ಮುಂಚಿತವಾಗಿ ಶಾಲೆಗೆ ಬಂದು ನೀರಿನ ಬದಿಯಲ್ಲಿ ಕಾವಲಿಗೆ ನಿಲ್ಲುತ್ತೇವೆ. ಒಮ್ಮೆ ಪ್ರಾರ್ಥನೆ ಮಾಡಿಸಿ ತರಗತಿಯಲ್ಲಿ ಕೂರಿಸಿದರೆ ಮಕ್ಕಳನ್ನು ಆಟಕ್ಕೂ ಬಿಡುವಂತಿಲ್ಲ’ ಎನ್ನುತ್ತಾರೆ ಶಾಲೆಯ ಮುಖ್ಯ ಶಿಕ್ಷಕಿ ಇಂದಿರಾ.

‘ತಡೆಗೋಡೆ ನಿರ್ಮಾಣ ಮಾಡಿ ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸುವಂತೆ ಹಲವು ಬಾರಿ ಬಿಇಒ, ಡಿಡಿಪಿಐಗೆ ಪತ್ರ ಬರೆದರೂ ಸ್ಪಂದನೆ ಸಿಕ್ಕಿಲ್ಲ. ನಗರಸಭೆಯ ಅಧ್ಯಕ್ಷರು, ಅಧಿಕಾರಿಗಳೂ ಸಮಸ್ಯೆ ಪರಿಹರಿಸುವ ಭರವಸೆ ಕೊಟ್ಟಿದ್ದರು. ಅದು ಇನ್ನೂ ಈಡೇರಿಲ್ಲ. ಮಳೆಗಾಲದಲ್ಲಿ ಎರಡು ತಿಂಗಳು ಕೆರೆ ನೀರು ಶಾಲೆ ಸುತ್ತಲೂ ಆವರಿಸಿಕೊಂಡಾಗ ಮಕ್ಕಳನ್ನು ಅಂಗನವಾಡಿ ಕೇಂದ್ರಗಳಿಗೆ ತೆರಳಿ ಕಲಿಸುವುದು ತಪ್ಪಿಲ್ಲ’ ಎಂದು ಅವರು ಬೇಸರದಿಂದ ನುಡಿದರು.

ಮುಖ್ಯಾಂಶಗಳು

- ಅಪಾಯದ ಎದುರು ಪಾಠ ಕೇಳುವ ಸ್ಥಿತಿ
- ಮಕ್ಕಳಿಗೆ ಆಟವಾಡುವ ಭಾಗ್ಯವೂ ಇಲ್ಲ
- ಮಳೆಗಾಲದಲ್ಲಿ ಶಾಲೆ ಸ್ಥಳಾಂತರಿಸುವ ಪರಿಸ್ಥಿತಿ

ಯಾದಗಿರಿಯ ದುರ್ಗಾ ನಗರದಲ್ಲಿನ ದೊಡ್ಡ ಕೆರೆ ದಡದಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ

ಶಾಲಾ ತಡೆಗೋಡೆಗಾಗಿ ₹ 8 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ನೀರು ನಿಂತಿದ್ದರಿಂದ ಗೋಡೆ ನಿರ್ಮಾಣಕ್ಕೆ ಅಡ್ಡಿಯಾಗಿದೆ. ನೀರು ತಗ್ಗಿದ ಬಳಿಕ ಕಾಮಗಾರಿ ಶುರುವಾಗಲಿದೆ
ಚನ್ನಬಸಪ್ಪ ಮುಧೋಳ, ಡಿಡಿಪಿಐ

ನಿಟ್ಟೆ ಶಿಕ್ಷಣ ಸಂಸ್ಥೆಯ ವಿನಯ ಹೆಗ್ಡೆ ನಿಧನ

ಮಂಗಳೂರು: ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದ, ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಮತ್ತು ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಾಧಿಪತಿ ಎನ್. ವಿನಯ ಹೆಗ್ಡೆ (86) ನಗರದ ಶಿವಭಾಗ್‌ನಲ್ಲಿರುವ ಸ್ವಗೃಹದಲ್ಲಿ ಹೃದಯಾಘಾತದಿಂದ ಗುರುವಾರ ನಿಧನರಾದರು.

ಅವರಿಗೆ ಪತ್ನಿ ಸುಜಾತಾ ಹೆಗ್ಡೆ, ಪುತ್ರ ನಿಟ್ಟೆ ವಿವಿಯ ಸಹ ಕುಲಾಧಿಪತಿ ವಿಶಾಲ್ ಹೆಗ್ಡೆ ಹಾಗೂ ಪುತ್ರಿ ಅಶ್ವಿತಾ ಪೂಂಜ, ಸಹೋದರರಾದ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ವಾಯುಸೇನೆ ನಿವೃತ್ತ ಕ್ಯಾಪ್ಟನ್ ಪ್ರಸನ್ನ ಹೆಗ್ಡೆ ಮತ್ತು ಇಬ್ಬರು ಸಹೋದರಿಯರು ಇದ್ದಾರೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮತ್ತು ಲೋಕಸಭೆಯ ಮಾಜಿ ಸ್ಪೀಕರ್ ಕೆ.ಎಸ್ ಹೆಗ್ಡೆ ಹಾಗೂ ಮೀನಾಕ್ಷಿ ಹೆಗ್ಡೆ ಅವರ ಪುತ್ರನಾಗಿ ಜನಿಸಿದ ವಿನಯ ಹೆಗ್ಡೆ ಅವರು ಉದ್ಯಮದಲ್ಲಿ ಯಶಸ್ಸು ಗಳಿಸಿದ ನಂತರ ಶಿಕ್ಷಣ ಕ್ಷೇತ್ರದಲ್ಲೂ ತೊಡಗಿಸಿ ಕೊಂಡವರು. ವಾಹನಗಳ ಬಿಡಿಭಾಗಗಳನ್ನು ತಯಾರಿಸುವ ಲೆಮಿನಾ ಕಂಪನಿಯನ್ನು ಆರಂಭಿಸಿದ ಅವರು ನಂತರ ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಆರೋಗ್ಯ ಮತ್ತು ಸಾಮಾಜಿಕ ಸಬಲೀಕರಣ ಕಾರ್ಯಗಳತ್ತಲೂ ಚಿತ್ತ ಹರಿಸಿದರು. 1979ರಲ್ಲಿ ನಿಟ್ಟೆ ಶಿಕ್ಷಣ ಟ್ರಸ್ಟ್ ಸ್ಥಾಪಿಸಿ ನಿಟ್ಟೆ ಗ್ರಾಮದಲ್ಲಿ ಕನ್ನಡ ಮಾಧ್ಯಮ ಶಾಲೆ ಆರಂಭಿಸಿದರು. ವೃತ್ತಿಶಿಕ್ಷಣ ಕಾಲೇಜು, ಆಸ್ಪತ್ರೆ, ವಿಶ್ವವಿದ್ಯಾಲಯ ಸೇರಿ ಈಗ ಒಟ್ಟು 43 ಸಂಸ್ಥೆಗಳಿವೆ.

ಕರ್ನಾಟಕ ಮತ್ತು ಉತ್ತರ ಕೇರಳದ 23 ಗ್ರಾಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮೀಣ ಆರೋಗ್ಯ ಕೇಂದ್ರಗಳು ಉಚಿತ ಆರೋಗ್ಯ ಸೇವೆ ನೀಡುತ್ತಿವೆ. ಸೀಳುತುಟಿ (ಕ್ಲೆಫ್ಟ್ ಪ್ಯಾಲೆಟ್) ಶಸ್ತ್ರಚಿಕಿತ್ಸೆ, ಹಿರಿಯ ನಾಗರಿಕರಿಗೆ ನೆರವಾಗುವ ಜೀರಿಯಾಟಿಕ್ ಕೇರ್, ಸಮುದಾಯ ಮಾನಸಿಕ ಆರೋಗ್ಯ ಸೇವೆ ಮತ್ತು ಅಂಗವಿಕಲರ ಪುನರ್ವಸತಿ ವ್ಯವಸ್ಥೆ ಅವರ ಆಶಯದ ಪ್ರಮುಖ ಸಂಸ್ಥೆಗಳು.

ಈಶಾನ್ಯ ರಾಜ್ಯದವರಿಗಾಗಿ ಆರಂಭಿಸಿದ ‘ನಮಸ್ತೆ’ ಯೋಜನೆ ಆ ಭಾಗದ ಯುವಜನತೆಗೆ ಉಚಿತ ಶಿಕ್ಷಣ ನೀಡುತ್ತಿದ್ದು ಸಾಂಸ್ಕೃತಿಕ ವಿನಿಮಯಕ್ಕೂ ಕಾರಣವಾಗಿದೆ. ವೈದ್ಯಕೀಯ ಮತ್ತು ಪರಿಸರ ಆರೋಗ್ಯದ ಸಂಶೋಧನೆಗೂ ಅವರು ಆದ್ಯತೆ ನೀಡಿದ್ದರು.

ಮಂಗಳೂರಿನ ನಿವಾಸದಲ್ಲಿ ಮಧ್ಯಾಹ್ನದವರೆಗೆ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇರಿಸಲಾಗಿತ್ತು. ಸಂಜೆ ನಿಟ್ಟೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಾರ್ವಜನಿಕ ದರ್ಶನಕ್ಕೆ ಇರಿಸಿದ ನಂತರ ಕಾಲೇಜಿನ ಆವರಣದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಎತ್ತಿನಹೊಳೆ ಅಕ್ರಮ: ಅರಣ್ಯ ಇಲಾಖೆ ಲೋಪ

ಕೇಂದ್ರ ಪರಿಸರ ಸಚಿವಾಲಯದ ಸ್ವತಂತ್ರ ವರದಿಯಲ್ಲಿ ಬೊಟ್ಟು

• ಮಂಜುನಾಥ ಹೆಬ್ಬಾರ್

ನವದೆಹಲಿ: ಹಾಸನ ಜಿಲ್ಲೆಯಲ್ಲಿ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗಾಗಿ 267 ಎಕರೆ (107 ಹೆಕ್ಟೇರ್) ಅರಣ್ಯದಲ್ಲಿ ನಿಯಮಬಾಹಿರವಾಗಿ ಕಾಮಗಾರಿಗಳನ್ನು ತಡೆಯದೇ ಅರಣ್ಯ ಇಲಾಖೆ ಗಂಭೀರ ಲೋಪ ಎಸಗಿದೆ. ಈ ಪ್ರಕರಣದಲ್ಲಿ 1980ರ ಅರಣ್ಯ ಸಂರಕ್ಷಣಾ ಕಾಯ್ದೆಯ ಸ್ಪಷ್ಟ ಉಲ್ಲಂಘನೆ ಆಗಿದೆ ಎಂದು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯದ ವರದಿ ಬೊಟ್ಟು ಮಾಡಿದೆ.

ಯೋಜನೆಯಲ್ಲಿನ ನಿಯಮ ಉಲ್ಲಂಘನೆಗಳ ಬಗ್ಗೆ ಪರಿಶೀಲನೆ ನಡೆಸಿ ಸಚಿವಾಲಯದ ಪ್ರಾದೇಶಿಕ ಕಚೇರಿ ಹಾಗೂ ಕರ್ನಾಟಕ ಅರಣ್ಯ ಇಲಾಖೆ ಜಂಟಿ ವರದಿ ಸಲ್ಲಿಸಬೇಕು ಎಂದು ಕೇಂದ್ರ ಅರಣ್ಯ ಸಲಹಾ ಸಮಿತಿ ನಿರ್ದೇಶನ ನೀಡಿತ್ತು. ಪ್ರಾದೇಶಿಕ ಕಚೇರಿಯು ಪ್ರತ್ಯೇಕವಾಗಿ ವರದಿ ಸಲ್ಲಿಸಬಹುದು ಎಂದೂ ಸಮಿತಿ ತಿಳಿಸಿತ್ತು. ಅರಣ್ಯ ಇಲಾಖೆಯು ಡಿಸೆಂಬರ್ 12ರಂದು ವರದಿ ಸಲ್ಲಿಸಿ, 'ನಿಯಮಬಾಹಿರವಾಗಿ ಕಾಮಗಾರಿ ನಡೆದಿರುವುದು ನಿಜ' ಎಂದು ಒಪ್ಪಿಕೊಂಡಿತ್ತು. ಪ್ರಾದೇಶಿಕ ಕಚೇರಿಯು ಡಿಸೆಂಬರ್ 29ರಂದು 124 ಪುಟಗಳ ಪ್ರತ್ಯೇಕ ವರದಿ ಸಲ್ಲಿಸಿದೆ. ಸಚಿವಾಲಯದ ಸಹಾಯಕ ಮಹಾನಿರ್ದೇಶಕರಿಗೆ (ಅರಣ್ಯ) ವರದಿ ಸಲ್ಲಿಸಿರುವ ಉಪ ಮಹಾ ನಿರ್ದೇಶಕಿ ಪ್ರಣಿತಾ ಪೌಲ್, 'ಮುಂದಿನ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ತಿಳಿಸಿದ್ದಾರೆ.

ಅರಣ್ಯ ಸಚಿವಾಲಯಕ್ಕೆ ಅಕ್ಟೋಬರ್ 8ರಂದು ಸಮಜಾಯಿಷಿ ನೀಡಿದ್ದ ರಾಜ್ಯ ಸರ್ಕಾರ, '107.87 ಹೆಕ್ಟೇರ್‌ನಲ್ಲಿ ನಿಯಮ ಉಲ್ಲಂಘನೆ ಆಗಿದೆ ಎಂದು ಕೇಂದ್ರದ ಸ್ಥಳ ಪರಿಶೀಲನಾ ವರದಿ ತಿಳಿಸಿದೆ. ಆದರೆ, ಕಂದಾಯ ದಾಖಲೆಗಳಲ್ಲಿ 107.83 ಹೆಕ್ಟೇರ್ ಪ್ರದೇಶವನ್ನು ಅರಣ್ಯ ಎಂದು ದಾಖಲಿಸಿಲ್ಲ. 107.83 ಹೆಕ್ಟೇರ್‌ಗಳಲ್ಲಿ ಹೆಚ್ಚಿನವು ಕೃಷಿ ಜಮೀನು. ಈ ಪ್ರದೇಶ ಸ್ಥಳೀಯ ರೈತರ ಸ್ವಾಧೀನದಲ್ಲಿದೆ' ಎಂದು ತಿಳಿಸಿತ್ತು. '10 ಸಾವಿರ ಎಕರೆ ಜಾಗವು ಐದಳ್ಳ ಅಮೃತ ಕಾವಲ್‌ಗೆ ಸೇರಿದ್ದು ಎಂದು 1898ರ ಮೇ 13ರ ಗಜೆಟ್ ಅಧಿಸೂಚನೆಯಲ್ಲೇ ಇದೆ. ಆದರೂ, ವಿಶ್ವೇಶ್ವರಯ್ಯ ಜಲ ನಿಗಮವು ಕಾಡಿನಲ್ಲಿ ಕಾಮಗಾರಿ ನಡೆಸಲು ಅನುವು ಮಾಡಿಕೊಟ್ಟು ಅರಣ್ಯ ಇಲಾಖೆ ಲೋಪ ಎಸಗಿದೆ. ಈ ಬಗ್ಗೆ ಇಲಾಖೆಯಿಂದ ವಿವರಣೆ ಕೇಳಲಾಗಿದೆ' ಎಂದು ಪೌಲ್ ಅವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ಪರಿಸರ ಸಚಿವಾಲಯದ ವರದಿಯಲ್ಲೇನಿದೆ?

- ಬೇಲೂರು ತಾಲ್ಲೂಕಿನ ಐದಳ್ಳ ಅಮೃತ ಕಾವಲ್‌ನಲ್ಲಿ 84.46 ಹೆಕ್ಟೇರ್ ಅರಣ್ಯ ಭೂ ಉಲ್ಲಂಘನೆ ಸಂಭವಿಸಿದೆ. ಅದರಲ್ಲಿ 19.11 ಹೆಕ್ಟೇರ್ ಅನ್ನು ಜಲ ನಿಗಮವು ಅರಣ್ಯ ಇಲಾಖೆಗೆ ಹಿಂತಿರುಗಿಸಬೇಕು ಎಂದು ಸೂಚಿಸಲಾಗಿದೆ.
- ಸೀಗೆಗುಡ್ಡ ಮೀಸಲು ಅರಣ್ಯದಲ್ಲಿ 21.93 ಹೆಕ್ಟೇರ್‌ನಲ್ಲಿ ಉಲ್ಲಂಘನೆ ನಡೆದಿದ್ದು, ಅದರಲ್ಲಿ 2.397 ಹೆಕ್ಟೇರ್ ಪ್ರದೇಶವನ್ನು ನಿಗಮವು ಅರಣ್ಯ ಇಲಾಖೆಗೆ ಹಿಂತಿರುಗಿಸಲು ಒಪ್ಪಿದೆ. 2,072 ಹೆಕ್ಟೇರ್ ಹೊಂದಿರುವ ಈ ಪ್ರದೇಶವು 1895ರಲ್ಲೇ ಮೀಸಲು ಅರಣ್ಯವೆಂದು ಘೋಷಣೆಯಾಗಿದೆ. ಇಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆಯಿಂದ ಜಂಟಿ ಸರ್ವೆ ನಡೆದಿಲ್ಲ.
- ರಾಮದೇವರಹಳ್ಳ ಕಾವಲ್ ಅರಣ್ಯದಲ್ಲಿ 0.132 ಹೆಕ್ಟೇರ್ ಉಲ್ಲಂಘನೆ ನಡೆದಿದ್ದು, ಅದರಲ್ಲಿ 0.018 ಹೆಕ್ಟೇರ್ ಪ್ರದೇಶವನ್ನು ನಿಗಮವು ಅರಣ್ಯ ಇಲಾಖೆಗೆ ಮರಳಿಸಲು ಒಪ್ಪಿದೆ. ಈ ಪ್ರದೇಶವು 1898ರಲ್ಲೇ ಮೀಸಲು ಅರಣ್ಯವೆಂದು ಘೋಷಣೆಯಾಗಿದೆ.
- ಮುಧುಡಿ ಪರಿಭಾವಿತ ಅರಣ್ಯದಲ್ಲಿ 1.33 ಹೆಕ್ಟೇರ್ ಉಲ್ಲಂಘನೆ ನಡೆದಿದ್ದು, ಅದರಲ್ಲಿ 0.051 ಹೆಕ್ಟೇರ್ ಪ್ರದೇಶವನ್ನು ನಿಗಮವು ಅರಣ್ಯ ಇಲಾಖೆಗೆ ಹಿಂತಿರುಗಿಸಲಿದೆ. 38.80 ಹೆಕ್ಟೇರ್ ಪ್ರದೇಶವನ್ನು ಡೀಮ್ಡ್ ಅರಣ್ಯವೆಂದು 2022ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಡೀಮ್ಡ್ ಅರಣ್ಯವೆಂದು ಘೋಷಿಸುವ ಮುನ್ನವೇ 2018 ಹಾಗೂ 2019ರಲ್ಲಿ ಕಾಮಗಾರಿ ನಡೆಸಲಾಗಿತ್ತು ಎಂದು ರಾಜ್ಯ ಸರ್ಕಾರ ಸಮಜಾಯಿಷಿ ನೀಡಿತ್ತು. ಆದರೆ, ಅದಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಒದಗಿಸಿಲ್ಲ.

ಉಪಗ್ರಹ ಚಿತ್ರಗಳಿಂದ ಅಕ್ರಮ ಬಯಲು

'ಹೆಚ್ಚಿನ ನಿಯಮ ಉಲ್ಲಂಘನೆ ಪ್ರಕರಣಗಳು 2018ರ ಮಾರ್ಚ್ ಹಾಗೂ 2019ರ ಡಿಸೆಂಬರ್ ನಡುವೆ ಘಟಿಸಿತ್ತು. 0.04 ಹೆಕ್ಟೇರ್ ಉಲ್ಲಂಘನೆ ಪ್ರಕರಣದಲ್ಲಿ 2019ರಲ್ಲೇ ಎಫ್‌ಐಆರ್ ದಾಖಲಿಸಲಾಗಿತ್ತು ಎಂದು ರಾಜ್ಯ ಸರ್ಕಾರವು ಈ ಹಿಂದೆ ಉತ್ತರ ನೀಡಿತ್ತು. ಆದಾಗ್ಯೂ, ಸಚಿವಾಲಯವು 2019ರ (ಎಫ್‌ಐಆರ್ ದಾಖಲಿಸಿದ ವರ್ಷ) ಮೊದಲು ಮತ್ತು ನಂತರದ ಉಪಗ್ರಹ ಚಿತ್ರಗಳ ಪರಿಶೀಲನೆ ನಡೆಸಿತು. ಹೆಚ್ಚಿನ ಉಲ್ಲಂಘನೆಗಳು 2019-2022ರ ಅವಧಿಯಲ್ಲಿ ಸಂಭವಿಸಿವೆ ಎಂದು ಉಪಗ್ರಹ ಚಿತ್ರಗಳಿಂದ ಗೊತ್ತಾಗಿದೆ' ಎಂದು ಪೌಲ್ ಹೇಳಿದ್ದಾರೆ.

ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಕಂದಾಯ ಇಲಾಖೆಯು ಸಣ್ಣ ಭೂಪ್ರದೇಶಗಳನ್ನು ಗುರುತಿಸಿರುವುದು ಕಂದಾಯ, ಭೂಮಾಪನಾ ಹಾಗೂ ಅರಣ್ಯ ಇಲಾಖೆಗಳ ಜಂಟಿ ಸಮೀಕ್ಷೆಯಲ್ಲಿ ಸ್ಪಷ್ಟವಾಗಿ ಗೋಚರವಾಗಿದೆ ಎಂದೂ ಅವರು ಉಲ್ಲೇಖಿಸಿದ್ದಾರೆ.

7 ಬಿಎಂಡಬ್ಲ್ಯು ಕಾರು ಖರೀದಿ ಟೆಂಡರ್ ರದ್ದು

ನವದೆಹಲಿ (ಪಿಟಿಐ): ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಲೋಕಪಾಲ ಅಂದಾಜು ₹5 ಕೋಟಿ ಮೌಲ್ಯದ ಏಳು ಐಷಾರಾಮಿ ಬಿಎಂಡಬ್ಲ್ಯು ಕಾರುಗಳನ್ನು ಖರೀದಿಸುವ ವಿವಾದಾತ್ಮಕ ಟೆಂಡರ್ ಅನ್ನು ಎರಡು ತಿಂಗಳ ನಂತರ ರದ್ದುಗೊಳಿಸಿದೆ.

ಬಿಎಂಡಬ್ಲ್ಯು 3 ಸರಣಿಯ 330ಎಲ್‌ಐ ಮಾದರಿಯ ಕಾರುಗಳ ಪೂರೈಕೆಗಾಗಿ ಪ್ರತಿಷ್ಠಿತ ಏಜೆನ್ಸಿಗಳಿಂದ ಅಕ್ಟೋಬರ್ 16ರಂದು ಬಿಡ್‌ಗಳನ್ನು ಆಹ್ವಾನಿಸಿತ್ತು. ದುಬಾರಿ ಬೆಲೆಯ ವಾಹನಗಳ ಖರೀದಿ ನಿರ್ಧಾರವನ್ನು ವಿರೋಧ ಪಕ್ಷಗಳು ಮತ್ತು ನಾಗರಿಕರು ಟೀಕಿಸಿದ್ದರು. 'ಲೋಕಪಾಲ ಸಂಸ್ಥೆಯು ಖರೀದಿ ಪ್ರಸ್ತಾಪವನ್ನು ರದ್ದುಗೊಳಿಸುವ ನಿರ್ಧಾರ ತೆಗೆದುಕೊಂಡಿದ್ದು, ಡಿಸೆಂಬರ್ 16ರಂದು ಆದೇಶ ಹೊರಡಿಸಲಾಗಿದೆ' ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಲೋಕಪಾಲದ ಮುಖ್ಯಸ್ಥರು ಮತ್ತು ಆರು ಸದಸ್ಯರಿಗೆ ತಲಾ ಒಂದು ವಾಹನ ಒದಗಿಸುವ ಉದ್ದೇಶ ಇತ್ತು. ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಲೋಕಪಾಲ ಮುಖ್ಯಸ್ಥರಾಗಿದ್ದಾರೆ.

2 ತಿಂಗಳಿಗೊಮ್ಮೆ ಪೋಷಕರು–ಶಿಕ್ಷಕರ ಮಹಾಸಭೆ ಕಡ್ಡಾಯ

ಬೆಂಗಳೂರು: ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಇನ್ನು ಮುಂದೆ ಎರಡು ತಿಂಗಳಿಗೆ ಒಮ್ಮೆ ಪೋಷಕರು–ಶಿಕ್ಷಕರ ಮಹಾಸಭೆ ಆಯೋಜನೆ ಮಾಡುವುದು ಕಡ್ಡಾಯ.

ರಾಜ್ಯದ 56 ಸಾವಿರ ಶಾಲಾ–ಕಾಲೇಜುಗಳಲ್ಲಿ ನ.14ರಂದು ಪೋಷಕರು–ಶಿಕ್ಷಕರ ಮಹಾಸಭೆ ಆಯೋಜಿಸಲಾಗಿತ್ತು. ಸಭೆಯು ಸಾಕಷ್ಟು ಯಶಸ್ಸು ಕಂಡಿತ್ತು. ಹೀಗಾಗಿ, ಪ್ರತಿ ಎರಡು ತಿಂಗಳಿಗೆ ಒಂದು ಸಭೆ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. 2025–26ನೇ ಸಾಲಿನಲ್ಲಿ ಜ.3 ಹಾಗೂ ಫೆ.28ರಂದು ಮಹಾಸಭೆಗಳನ್ನು ನಿಗದಿ ಮಾಡಲಾಗಿದೆ. 2026–27ನೇ ಶೈಕ್ಷಣಿಕ ಸಾಲಿನಿಂದ ಪ್ರತಿ ಎರಡು ತಿಂಗಳಿಗೆ ಒಂದು ಸಭೆ ನಡೆಸಲಾಗುತ್ತದೆ. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಅಧ್ಯಕ್ಷರು ಮತ್ತು ಸದಸ್ಯರು ಸಭೆ ಯಲ್ಲಿ ಭಾಗವಹಿ ಸುವರು ಎಂದು ಮಾಹಿತಿ ನೀಡಿ ದ್ದಾರೆ.

ಮಧು ಬಂಗಾರಪ್ಪ

ಪೋಷಕರು ಮತ್ತು ಶಿಕ್ಷಕರ ಸಹಭಾಗಿತ್ವದಲ್ಲಿ ಶಿಕ್ಷಣದ ಗುಣಮಟ್ಟ ವೃದ್ಧಿಸಲು, ಮಕ್ಕಳ ಕಲಿಕಾ ಪ್ರಗತಿ, ಹಾಜರಾತಿ ಮಾಹಿತಿ ವಿನಿಮಯ, ಹಾಜರಾತಿ ಹೆಚ್ಚಳಕ್ಕಾಗಿ ಪೋಷಕ-ಶಿಕ್ಷಕರ ಸಭೆ ಆಯೋಜಿಸಲಾಗುತ್ತಿದೆ. ಸಭೆಗಳ ಆರಂಭದಲ್ಲಿ ಸಂವಿಧಾನ ಪೀಠಿಕೆಯ ಓದು ಕಡ್ಡಾಯ ಮಾಡಲಾಗಿದೆ. ಶಾಲೆಗಳ ಅಭಿವೃದ್ಧಿ, ಮಕ್ಕಳ ಕಲಿಕಾ ಪ್ರಗತಿಯಲ್ಲಿ ಪೋಷಕರ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಡಲಾಗುತ್ತದೆ. ಉತ್ತಮ ಸಾಧನೆ ತೋರಿದ ಮಕ್ಕಳನ್ನು ಅಭಿನಂದಿಸಲಾಗುತ್ತದೆ ಎಂದರು.

ಜನಾರ್ದನ ರೆಡ್ಡಿ ಅವರ ಮನೆ ಎದುರು ಜಮಾಯಿಸಿದ್ದ ಜನರು

ಘರ್ಷಣೆ: 'ಕೈ' ಕಾರ್ಯಕರ್ತ ಬಲಿ

ಒಂದನೇ ಪುಟದಿಂದ...

ಘಟನೆ ಕುರಿತು ಸುದ್ದಿಗಾರರ ಜೊತೆ ಜನಾರ್ದನ ರೆಡ್ಡಿ ಮಾತನಾಡಿ, 'ಬ್ಯಾನರ್ ವಿಷಯಕ್ಕೆ ಗಲಾಟೆ ಆಗುತ್ತಿರುವ ಸುದ್ದಿ ಗೊತ್ತಾದ ಕೂಡಲೇ ಮನೆಗೆ ಬಂದೆ. ಆಗ ನನ್ನ ಮೇಲೆ ಗುಂಡು ಹಾರಿಸುವ ಪ್ರಯತ್ನ ನಡೆಯಿತು' ಎಂದು ಆರೋಪಿಸಿದರು.

'ಭರತ್ ರೆಡ್ಡಿ ಅವರ ವಿರುದ್ಧ ಆಡಳಿತ ವಿರೋಧಿ ಅಲೆ ಇರುವುದರಿಂದ ವಾಲ್ಮೀಕಿ ಪ್ರತಿಮೆಯನ್ನು ಸ್ಥಾಪಿಸುವ ಮೂಲಕ ವೋಟ್ ಬ್ಯಾಂಕ್ ರಾಜಕಾರಣ ಮಾಡಲು ಪ್ರಯತ್ನ ನಡೆಸಿದ್ದಾರೆ' ಎಂದರು. 'ಶಾಸಕ ಭರತ್ ರೆಡ್ಡಿ ಅವರ ತಂದೆ ನಾರಾಯಣ ರೆಡ್ಡಿ ದೊಡ್ಡ ಕ್ರಿಮಿನಲ್. ಇಂಥ ಶಾಸಕರನ್ನು ಕಟ್ಟಿಕೊಂಡು ರಾಜ್ಯ ಕಾಂಗ್ರೆಸ್ ಸರ್ಕಾರ ರೌಡಿಗಳ ಸಾಮ್ರಾಜ್ಯ ಕಟ್ಟುತ್ತಿದೆ. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಪಾಲಿಸಲು ಕಷ್ಟವಾಗುತ್ತಿರುವ ಕಾರಣಕ್ಕೆ ಎಸ್ಪಿ ಶೋಭಾರಾಣಿ ಸ್ವತಃ ವರ್ಗಾವಣೆ ಮಾಡಿಸಿಕೊಂಡು ಬೇರೆ ಜಿಲ್ಲೆಗೆ ಹೋಗಿದ್ದಾರೆ ಎಂದು ಹೇಳಿದರು.

ಧರಣಿ ಕುಳಿದ ಶಾಸಕ

ಒಂದನೇ ಪುಟದಿಂದ...

'ಜನಾರ್ದನ ರೆಡ್ಡಿ ಕಡೆಯವರ ಗುಂಡಿನ ದಾಳಿಯಿಂದಾಗಿ ಕಾಂಗ್ರೆಸ್ ಕಾರ್ಯಕರ್ತನೊಬ್ಬ ಮೃತಪಟ್ಟಿದ್ದಾನೆ. ಹೀಗಾಗಿ ಅವರನ್ನು ಬಂಧಿಸಲೇಬೇಕು' ಎಂದು ಭರತ್ ರೆಡ್ಡಿ ಪಟ್ಟು ಹಿಡಿದು ಧರಣಿ ಕುಳಿತರು.

ಅವರ ಮನವೊಲಿಸಲು ಪೊಲೀಸರು ಹರಸಾಹಸಪಟ್ಟರು. ಸ್ವತಃ ಗೃಹ ಸಚಿವ ಪರಮೇಶ್ವರ ಅವರೇ ಕರೆ ಮಾಡಿ ಸ್ಥಳದಿಂದ ತೆರಳುವಂತೆ ಮನವಿ ಮಾಡಿದರೂ ಅವರು ಜಗ್ಗಲಿಲ್ಲ ಎಂದು ಮೂಲಗಳು ತಿಳಿಸಿವೆ.

ಘಟನಾ ಸ್ಥಳಕ್ಕೆ ವಿಧಿ ವಿಜ್ಞಾನ ತಜ್ಞರು ಆಗಮಿಸಿ ಪರಿಶೀಲನೆ ನಡೆಸಿದರು.

ಮರ್ಯಾದೆಗೇಡು ಹತ್ಯೆಗೆ ಜೈಲು

ಒಂದನೇ ಪುಟದಿಂದ...

ಮಸೂದೆಯಲ್ಲಿ ಏನಿದೆ?: ವೈಯಕ್ತಿಕ ಜೀವನದ ವಿಷಯದಲ್ಲಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಗಾತಿ ಆಯ್ಕೆ ಮತ್ತು ಸಂಬಂಧದ ಹಕ್ಕುಗಳೂ ಸೇರಿವೆ. ತಮ್ಮ ಕುಟುಂಬದ ಸದಸ್ಯರು ಸೇರಿದಂತೆ ಯಾರಿಂದಲೂ ಅಡೆತಡೆ ಇಲ್ಲದೆ, ತಮ್ಮ ಆಯ್ಕೆಯಂತೆ ಮದುವೆಯಾಗುವ ಹಕ್ಕು ವಯಸ್ಕರಿಗೆ ಇದೆ.

ಮದುವೆ ಅಥವಾ ಸಂಬಂಧವು ಜಾತಿ, ಬುಡಕಟ್ಟು, ಸಮುದಾಯ, ಧರ್ಮ, ಸಂಪ್ರದಾಯಕ್ಕೆ ಅಗೌರವ ತಂದಿದೆ ಅಥವಾ ಕುಟುಂಬದ ಇಚ್ಛೆಗೆ ವಿರುದ್ಧವಾಗಿದೆ ಎಂಬ ಕಾರಣಕ್ಕೆ ವಿರೋಧಿಸುವುದು ಕಾನೂನುಬಾಹಿರ ಹಾಗೂ ಅಪರಾಧ ಎನಿಸಲಿದೆ. ಈ ರೀತಿಯ ವಿರೋಧ ವ್ಯಕ್ತವಾಗುವ ಆತಂಕ ಇರುವವರು ನ್ಯಾಯಾಲಯದ ಮೂಲಕ ಪೊಲೀಸರ ರಕ್ಷಣೆ ಪಡೆಯಬಹುದು. ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಪೊಲೀಸರ ಜವಾಬ್ದಾರಿ. ಆದೇಶ, ಉಲ್ಲಂಘಿಸಿದರೆ ಎರಡು ವರ್ಷಗಳವರೆಗೆ ಜೈಲು ಅಥವಾ ₹1 ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು. ಮಹಿಳೆಯರಿಗೆ ಜೈಲು ಶಿಕ್ಷೆ ಇರುವುದಿಲ್ಲ. ಇಂತಹ ಕೃತ್ಯದ ಪುರಾವೆ ನಾಶ, ಕೃತ್ಯಕ್ಕೆ ಪ್ರೇರೇಪಿಸುವುದು, ಸಂಚು ರೂಪಿಸುವುದು ಅಥವಾ ಆತ್ಮಹತ್ಯೆಗೆ ಪ್ರೋತ್ಸಾಹಿಸುವುದೂ ಅಪರಾಧ. ಇಂತಹ ಅಪರಾಧಗಳಲ್ಲಿ ಸಂಜ್ಞೇಯ, ಜಾಮೀನುರಹಿತ ಮತ್ತು ರಾಜೀ ಸಂಧಾನಕ್ಕೆ ಅವಕಾಶ ಇರುವುದಿಲ್ಲ.

ಬಾಧಿತ ದಂಪತಿ ರಕ್ಷಣೆ ಕೋರಿ ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿ, ಪೊಲೀಸರಿಗೆ ದೂರು ನೀಡಬಹುದು. ದಂಪತಿಗೆ ಸುರಕ್ಷಿತ ಸ್ಥಳದಲ್ಲಿ ಮನೆ, ನಗದು ಅಥವಾ ವಸ್ತುವಿನ ರೂಪದಲ್ಲಿ ಪರಿಹಾರ ಒದಗಿಸುವುದು ರಾಜ್ಯ ಸರ್ಕಾರದ ಕರ್ತವ್ಯ. ದೂರಿನ ಮೇಲೆ 60 ದಿನಗಳ ಒಳಗೆ ತನಿಖೆ ನಡೆಸಿ ವಿಶೇಷ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಬೇಕು.

ಜಿಲ್ಲಾಧಿಕಾರಿ ಅಥವಾ ಎಸ್‌ಪಿಗಳು ದೂರನ್ನು ಸೂಕ್ಷ್ಮವಾಗಿ ನಿರ್ವಹಿಸಬೇಕು. ಮದುವೆಯನ್ನು ಶಾಸ್ತ್ರೋಕ್ತವಾಗಿ ನಡೆಸಲು ಮತ್ತು ಅವರು ಬಯಸಿದರೆ ಪೊಲೀಸ್ ರಕ್ಷಣೆಯಲ್ಲಿ ನೋಂದಾಯಿಸಲು ನೆರವು ನೀಡಬಹುದು. ಮದುವೆಯ ನಂತರ ದಂಪತಿ ಬಯಸಿದರೆ, ನೆಪ ಮಾತ್ರದ ಶುಲ್ಕ ಪಾವತಿಸಿ ಒಂದು ತಿಂಗಳ ಅವಧಿಗೆ ವಸತಿ ಒದಗಿಸಬಹುದು. ನಂತರ ತಿಂಗಳ ಆಧಾರದಲ್ಲಿ ವಿಸ್ತರಿಸಬಹುದು.

ಮೇಲ್ವಿಚಾರಣೆಗೆ ಸಮಿತಿ: ಇಂತಹ ಅಪರಾಧಗಳನ್ನು ತಡೆಗಟ್ಟಲು ಪ್ರತಿ ಜಿಲ್ಲೆಯಲ್ಲಿ ವಿಶೇಷ ಕೋಶವನ್ನು ಸರ್ಕಾರ ರಚಿಸಬೇಕು. ಈ ಕೋಶಗಳು ದೂರು ಸ್ವೀಕರಿಸಲು, ಸಹಾಯ ಮತ್ತು ರಕ್ಷಣೆ ನೀಡಲು 24 ಗಂಟೆಗಳ ಸಹಾಯವಾಣಿ ಸ್ಥಾಪಿಸಬೇಕು.

ಕಾಯ್ದೆಯ ಅನುಷ್ಠಾನಕ್ಕೆ ಜಿಲ್ಲಾಧಿಕಾರಿ ಮೇಲ್ವಿಚಾರಣಾ ಸಮಿತಿ ರಚಿಸಬೇಕು. ಈ ಸಮಿತಿಯು ಶಾಸಕರು, ಎಸ್‌ಪಿ, ಮೂವರು ಗ್ರೂಪ್ 'ಎ' ಅಧಿಕಾರಿಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಮೂವರು ಸದಸ್ಯರನ್ನು ಒಳಗೊಂಡಿರುತ್ತದೆ. ಸಮಿತಿಯು ಕನಿಷ್ಠ 3 ತಿಂಗಳಿಗೊಮ್ಮೆ ಸಭೆ ಸೇರಬೇಕು. ಪ್ರಕರಣಗಳ ವಿಚಾರಣೆಗೆ ವಿಶೇಷ ತ್ವರಿತ ಗತಿ ನ್ಯಾಯಾಲಯವನ್ನು ರಚಿಸಬಹುದು ಎಂದೂ ಮಸೂದೆ ಹೇಳಿದೆ.

ಏನೆಲ್ಲ ಶಿಕ್ಷೆ?

- ಮರ್ಯಾದೆಗೇಡು ಹತ್ಯೆ ಮಾಡಿದವರಿಗೆ ಜೀವಾವಧಿ ಜೈಲು ಶಿಕ್ಷೆ ಮತ್ತು ₹5 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ
- ದಂಪತಿ ಅಥವಾ ಅವರಲ್ಲಿ ಒಬ್ಬರಿಗೆ ಗಂಭೀರವಾದ ಗಾಯ ಉಂಟು ಮಾಡಿದವರಿಗೆ 10 ವರ್ಷಗಳಿಗಿಂತ ಕಡಿಮೆಯಿಲ್ಲದ, ಜೀವಾವಧಿವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹3 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ
- ಸಾಮಾನ್ಯ ಗಾಯ ಉಂಟು ಮಾಡಿದವರಿಗೆ 3 ವರ್ಷಗಳಿಗಿಂತ ಕಡಿಮೆಯಿಲ್ಲದ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಮತ್ತು ₹2 ಲಕ್ಷವರೆಗೆ ವಿಸ್ತರಿಸಬಹುದಾದ ದಂಡ
- ಹತ್ಯೆ ಅಥವಾ ಗಂಭೀರವಾದ ಗಾಯಕ್ಕೆ ಹೊರತಾದ ಅಪರಾಧ ಮಾಡಿದವರಿಗೆ 2 ವರ್ಷಗಳಿಗಿಂತ ಕಡಿಮೆಯಿಲ್ಲದ, 5 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹1 ಲಕ್ಷವರೆಗೆ ವಿಸ್ತರಿಸಬಹುದಾದ ದಂಡ
- ಬೆದರಿಕೆ ಒಡ್ಡಿದರೆ 3 ವರ್ಷಗಳಿಗಿಂತ ಕಡಿಮೆಯಿಲ್ಲದ, 5 ವರ್ಷಗಳವರೆಗೆಡ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹2 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ
- ಅಪರಾಧ ಕೃತ್ಯಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸಿದವರಿಗೆ ಆರು ತಿಂಗಳಿಗಿಂತ ಕಡಿಮೆಯಿಲ್ಲದ, 5 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹1 ಲಕ್ಷವರೆಗೆ ವಿಸ್ತರಿಸಬಹುದಾದ ದಂಡ

'ಇವಿಎಂ' ವಿಶ್ವಾಸಾರ್ಹ: ಸಮೀಕ್ಷೆ

102 ವಿಧಾನಸಭಾ ಕ್ಷೇತ್ರಗಳ 5,100 ಮಂದಿ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಡೆದ ಸಮೀಕ್ಷೆಯಲ್ಲಿ ಭಾಗವಹಿಸಿದ್ದ 5,100 ಜನರ ಪೈಕಿ ಶೇ 83.61ರಷ್ಟು ಜನರು 'ವಿದ್ಯುನ್ಮಾನ ಮತ ಯಂತ್ರಗಳು (ಇವಿಎಂ) ನಿಖರ ಫಲಿತಾಂಶ ನೀಡುತ್ತವೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಸಮೀಕ್ಷಾ ವರದಿಯನ್ನು ಪ್ರಕಟಿಸಿದೆ. ವರದಿಯಲ್ಲಿ ಈ ಮಾಹಿತಿಗಳಿವೆ. ಪ್ರಾಧಿಕಾರವು 'ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ' ಅಧೀನದಲ್ಲಿದೆ. ಮೈಸೂರು ಮೂಲದ 'ಗ್ರಾಸ್‌ರೂಟ್ಸ್ ರಿಸರ್ಚ್ ಆ್ಯಂಡ್ ಅಡ್ವೊಕಸಿ ಮೂವ್‌ಮೆಂಟ್' (ಜಿಆರ್‌ಎಎಂ) ಸಂಸ್ಥೆಯು 2025ರ ಮೇ ತಿಂಗಳಿನಲ್ಲಿ ಈ ಸಮೀಕ್ಷೆ ನಡೆಸಿತ್ತು.

ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ಕಂದಾಯ ವಿಭಾಗಗಳ 102 ವಿಧಾನಸಭಾ ಕ್ಷೇತ್ರಗಳಲ್ಲಿ ಸಮೀಕ್ಷೆ ನಡೆದಿತ್ತು.

'ಭಾರತದಲ್ಲಿ ಚುನಾವಣೆಗಳು ಮುಕ್ತ ಮತ್ತು ನ್ಯಾಯ ಸಮ್ಮತವಾಗಿ ನಡೆಯುತ್ತವೆ ಎಂದು ಬಹುತೇಕ ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಇವಿಎಂಗಳ ಮೇಲಿನ ನಂಬಿಕೆ ಜನರಲ್ಲಿ ಹೆಚ್ಚಾಗಿದೆ' ಎಂದೂ ವರದಿ ಹೇಳಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡ 5,100 ಜನರಲ್ಲಿ ಶೇ 95.75 ರಷ್ಟು ಮಂದಿ 2024ರ ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದ್ದೇವೆ ಎಂದು ಹೇಳಿದ್ದಾರೆ. ಶೇ 95.44ರಷ್ಟು ಜನರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳ ವಿವರ ಸರಿ ಇರುವುದಾಗಿ ದೃಢಪಡಿಸಿದ್ದಾರೆ ಎಂದು ವರದಿ ಹೇಳಿದೆ.

ಚುನಾವಣೆಗಳು ಮುಕ್ತ ಮತ್ತು ನ್ಯಾಯ ಸಮ್ಮತವಾಗಿ ನಡೆಯುತ್ತವೆ ಎಂದು ಸರಾಸರಿ ಶೇ 84.55 ಜನರು ಹೇಳಿದ್ದಾರೆ. ಅದರಲ್ಲೂ ಕಲಬುರಗಿ ವಿಭಾಗದಲ್ಲಿ ಅತೀ ಹೆಚ್ಚು ಶೇ 84.67ರಷ್ಟು ಜನರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದು, ಆ ಪೈಕಿ ಶೇ 10.19ರಷ್ಟು ಜನರು ಈ ಅಭಿಪ್ರಾಯವನ್ನು ಬಲವಾಗಿ ಪ್ರತಿಪಾದಿಸಿದ್ದಾರೆ. ಬೆಳಗಾವಿ ವಿಭಾಗದ ಶೇ 69.62ರಷ್ಟು ಜನರು ಚುನಾವಣೆಗಳು ಮುಕ್ತ ಮತ್ತು ನ್ಯಾಯಯುತವಾಗಿ ನಡೆಯುತ್ತವೆ ಎಂದಿದ್ದಾರೆ. ಈ ಪೈಕಿ, ಶೇ 19.24ರಷ್ಟು ಜನರು ಈ ಅಭಿಪ್ರಾಯವನ್ನು ಬಲವಾಗಿ ಸಮರ್ಥಿಸಿದ್ದಾರೆ ಎಂದೂ ವರದಿಯಲ್ಲಿದೆ.

ಇವಿಎಂಗಳು 'ನಿಖರ' ಫಲಿತಾಂಶಗಳನ್ನು ನೀಡುತ್ತವೆ ಎಂದು ಶೇ 83.61ರಷ್ಟು ನಾಗರಿಕರು ನಂಬಿದ್ದಾರೆ. ಕಲಬುರಗಿ ವಿಭಾಗದಲ್ಲಿ ಈ ನಂಬಿಕೆ ಅತೀ ಹೆಚ್ಚಾಗಿದ್ದು, ಅಲ್ಲಿ ಶೇ 83.24ರಷ್ಟು ಜನರು ಈ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅದರಲ್ಲೂ ಶೇ 11.24 ಜನರು ಬಲವಾಗಿ ಒಪ್ಪಿಕೊಂಡಿದ್ದಾರೆ. ಮೈಸೂರು ವಿಭಾಗದಲ್ಲಿ ಶೇ 70.67ರಷ್ಟು ಜನರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದು, ಶೇ 17.92ರಷ್ಟು ಜನರು ಬಲವಾಗಿ ಸಮರ್ಥಿಸಿದ್ದಾರೆ.

ಕಾಂಗ್ರೆಸ್‌ಗೆ ಕಪಾಳ ಮೋಕ್ಷ: ಅಶೋಕ

'ಇವಿಎಂಗಳು ವಿಶ್ವಾಸಾರ್ಹವಲ್ಲ. ಭಾರತದ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ರಾಹುಲ್ ಗಾಂಧಿ ಕಥೆ ಹೇಳುತ್ತಿದ್ದರೆ, ಈ ಸಮೀಕ್ಷೆಯು ಕಾಂಗ್ರೆಸ್‌ಗೆ ಕಪಾಳ ಮೋಕ್ಷ ಮಾಡಿದೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರತಿಕ್ರಿಯಿಸಿದ್ದಾರೆ.

'ಎಕ್ಸ್' ಮಾಡಿರುವ ಅವರು, 'ನೂರಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸಾವಿರಾರು ಮತದಾರರಿಂದ ಸಂಗ್ರಹಿಸಿದ ಅಭಿಪ್ರಾಯವು ಸರಳ, ಪ್ರಬಲ ಸತ್ಯವನ್ನು ಬಹಿರಂಗಪಡಿಸಿದೆ. ಜನರು ಚುನಾವಣೆಗಳನ್ನು, ಇವಿಎಂಗಳನ್ನು, ಭಾರತದ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ನಂಬುತ್ತಾರೆ. ಮತದಾರರು ಪ್ರಬುದ್ಧತೆ ಪ್ರದರ್ಶಿಸಿದಾಗ, ಕಾಂಗ್ರೆಸ್ ಅಭದ್ರತೆ ಪ್ರದರ್ಶಿಸುತ್ತದೆ. ನಾಗರಿಕರು ವಿಶ್ವಾಸ ತೋರಿಸಿದಾಗ, ಕಾಂಗ್ರೆಸ್ ಅನುಮಾನ ತೋರಿಸುತ್ತದೆ' ಎಂದಿದ್ದಾರೆ.

ಅರಣ್ಯ ಭೂಮಿ ಆದೇಶ ವಾಪಸ್‌ಗೆ ಮೀನಮೇಷ

ಒಂದನೇ ಪುಟದಿಂದ...

ಸಮುದಾಯಗಳಿಗೆ ತಾನೇ ಹಂಚಿಕೆ ಮಾಡಿರುವ ಭೂಮಿಯನ್ನು ವಾಪಸ್ ಪಡೆದರೆ ಮುಜುಗರ, ಟೀಕೆಗೆ ಗುರಿಯಾಗಬೇಕಾಗುತ್ತದೆ ಎಂಬ ಕಾರಣಕ್ಕೆ ಸರ್ಕಾರ ಈ ವಿಷಯದಲ್ಲಿ ಹಿಂದೇಟು ಹಾಕುತ್ತಿದೆ. ಹೀಗಾಗಿ, ಪ್ರತಿಬಾರಿಯೂ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳದೇ ಮುಂದೂಡಲಾಗುತ್ತಿದೆ ಎನ್ನಲಾಗಿದೆ.

ಚರ್ಚೆಗೆ ಕಾರಣವಾಗಿದ್ದ ಹಂಚಿಕೆ: ಮಾಗಡಿ ರಸ್ತೆಗೆ ಹೊಂದಿಕೊಂಡಿರುವ ಮಾಚೋಹಳ್ಳಿ ಗ್ರಾಮದ ಸರ್ವೆ ನಂಬರ್ 81ರಲ್ಲಿ ಇರುವ ಜಮೀನನನ್ನು ಪ್ರತಿ ಎಕರೆಗೆ ₹1 ಲಕ್ಷದಂತೆ 2017ರಲ್ಲಿ ಸರ್ಕಾರ ಲೀಸ್‌ಗೆ ನೀಡಿತ್ತು. 2018ರಲ್ಲಿ ನಡೆದ ವಿಧಾನಸಭಾ ಚುನಾವಣೆಗೆ ಒಂದು ವರ್ಷ ಮೊದಲು, ಬಹುಕೋಟಿ ಬೆಲೆಬಾಳುವ ಜಮೀನನ್ನು ಅತ್ಯಂತ ಕಡಿಮೆ ಮೊತ್ತಕ್ಕೆ ನೀಡಿದ್ದು ಸಾಕಷ್ಟು ಚರ್ಚೆಗೂ ಗ್ರಾಸವಾಗಿತ್ತು.

ಜಾತಿ ಆಧಾರಿತ ಸಂಘಟನೆಗಳು, ಮಠ ಸೇರಿ 36 ಸಂಸ್ಥೆಗಳಿಗೆ ತಲಾ ಎರಡೂವರೆ ಎಕರೆ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹಂಚಿಕೆ ಮಾಡಲಾಗಿತ್ತು. ಕೆಲ ಸಂಸ್ಥೆಗಳಿಗೆ 1ರಿಂದ 2 ಎಕರೆ ನೀಡಲಾಗಿತ್ತು. ಒಟ್ಟು 58.5 ಎಕರೆ ಭೂಮಿಯನ್ನು ಇಂತಹ ಸಂಘಟನೆಗಳಿಗೆ ಮಂಜೂರು ಮಾಡಲಾಗಿದೆ. 19.5 ಎಕರೆಯನ್ನು ಸಾರ್ವಜನಿಕ ಉದ್ದೇಶಗಳಿಗೆ ಹಂಚಿಕೆ ಮಾಡಲಾಗಿತ್ತು. ನೈಸ್ ರಸ್ತೆ ವೃತ್ತದಿಂದ ಸುಮಾರು 1 ಕಿ.ಮೀ ದೂರದಲ್ಲಿರುವ ಈ ಭೂಮಿ, ವೇಗವಾಗಿ ಬೆಳೆಯುತ್ತಿರುವ ರಿಯಲ್ ಎಸ್ಟೇಟ್ ಮಾರುಕಟ್ಟೆಯಲ್ಲಿ ಅತ್ಯಂತ ಲಾಭದಾಯಕ ಪ್ರದೇಶವಾಗಿದೆ.

ಹೀಗೆ ಜಮೀನು ಹಂಚಿಕೆ ಮಾಡಿದ ಪ್ರಕರಣ 2018ರ ಜನವರಿಯಲ್ಲಿ ಹೈಕೋರ್ಟ್ ಮೆಟ್ಟಿಲೇರಿತ್ತು. ಸರ್ಕಾರದ ಆದೇಶವನ್ನು ಪ್ರಶ್ನಿಸಿದ್ದ ಅರ್ಜಿದಾರರು, '1896ರಲ್ಲೇ ಆಗಿನ ಮೈಸೂರು ಮಹಾರಾಜರು ಈ ಭೂಮಿಯನ್ನು ಅರಣ್ಯವೆಂದು ಘೋಷಿಸಿದ್ದು, ಅದು ಮೀಸಲು ಅರಣ್ಯವಾಗಿದೆ. ಸಾವಿರಾರು ಮರಗಳು ನಿಗದಿತ ಸರ್ವೆ ನಂಬರ್‌ನಲ್ಲಿ ಇವೆ' ಎಂದು ಕೋರ್ಟ್ ಗಮನಕ್ಕೆ ತಂದಿದ್ದರು. ಪ್ರಕರಣದ ವಿಚಾರಣೆಯ ಪರಿಣಾಮವಾಗಿ, ಸಂಸ್ಥೆಗಳು ಹಂಚಿಕೆಯಾಗಿದ್ದ ಭೂಮಿಯನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ.

'2019ರಲ್ಲಿ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ, ವಿಷಯವನ್ನು ಸಂಪುಟ ಸಭೆಯಲ್ಲಿ ಚರ್ಚಿಸಿತ್ತು. ನಂತರ 'ಮಾಚೋಹಳ್ಳಿ ಗ್ರಾಮದ ಸರ್ವೆ ನಂಬರ್ 81ರ ಭೂಮಿ ಇನ್ನೂ ಅರಣ್ಯವಾಗಿಯೇ ಉಳಿದಿದೆ. 46.31 ಎಕರೆಯನ್ನು ಕೆಲವರು ಒತ್ತುವರಿ ಮಾಡಿದ್ದಾರೆ' ಎಂದು ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿತ್ತು. 2023ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ತಾನು ಹಿಂದೆ ಗುತ್ತಿಗೆ ನೀಡಿದ್ದ ಆದೇಶವನ್ನು ರದ್ದುಪಡಿಸುವ ಕುರಿತು ಹೈಕೋರ್ಟ್‌ಗೆ ಖಚಿತ ಮಾಹಿತಿ ನೀಡಿಲ್ಲ. ಹೈಕೋರ್ಟ್ ಪ್ರಶ್ನೆಗಳಿಗೆ ಉತ್ತರಿಸದೆ ಮೌನ ಕಾಯ್ದುಕೊಂಡಿದೆ' ಎಂದು ಆರೋಪಿಸಲಾಗಿದೆ. 'ಗೋದಾವರ್ಮನ್ ಪ್ರಕರಣ ಸೇರಿದಂತೆ ಅರಣ್ಯ ಭೂಮಿಯ ವಿಚಾರ ದಲ್ಲಿ ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನಗಳಿಗೆ ವಿರುದ್ಧವಾಗಿ ಗುತ್ತಿಗೆ ನೀಡಲಾಗಿದೆ. ಈ ಪ್ರದೇಶದ ಸುತ್ತಲ ಭೂಮಿ ಬಡಾವಣೆಗಳಾಗಿ ಅಭಿವೃದ್ಧಿಯಾಗಿವೆ. ಭೂಮಿಯನ್ನು ಇದುವರೆಗೂ ಸರ್ಕಾರ ಡಿನೋಟಿಫೈ ಮಾಡಿಲ್ಲ. ಇಂತಹ ಹಸಿರು ಪ್ರದೇಶವನ್ನು ಕಳೆದುಕೊಳ್ಳಬಾರದು' ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಇಚ್ಛಿಸದ ಅರಣ್ಯಾಧಿಕಾರಿ.

ಹಿಂದೆಯೂ ಬೇಡಿಕೆ ತಿರಸ್ಕರಿಸಲಾಗಿತ್ತು

ವಿವಿಧ ಸಂಸ್ಥೆಗಳಿಗೆ ಅರಣ್ಯ ಭೂಮಿಯನ್ನು ಗುತ್ತಿಗೆ ನೀಡುವ ಒಂದು ವರ್ಷದ ಹಿಂದೆಯಷ್ಟೇ, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ 'ಇದು ಅರಣ್ಯ ಭೂಮಿ, ಬೆಲೆ ಬಾಳುವ ಭೂಮಿಯನ್ನು ಯಾವುದೇ ಸಂಸ್ಥೆಗಳಿಗೆ ನೀಡಲು ಅವಕಾಶ ಇಲ್ಲ' ಎಂದು ಲಿಖಿತ ಉತ್ತರ ನೀಡಿದ್ದರು.

ಭೂ ಮಂಜೂರಾತಿಗೆ ಸಂಸ್ಥೆಯೊಂದು ಸಲ್ಲಿಸಿದ್ದ ಅರ್ಜಿಯನ್ನು 2009ರಲ್ಲಿ ತಿರಸ್ಕರಿಸಿದ್ದ ಬೆಂಗಳೂರು ವಿಶೇಷ ಉಪ ಆಯುಕ್ತರು, 'ಮಾಚೋಹಳ್ಳಿಯ ಜಮೀನು ಅರಣ್ಯ ಭೂಮಿ. ಡಿನೋಟಿಫಿಕೇಷನ್ ಆಗಿಲ್ಲ' ಎಂದು ಸ್ಪಷ್ಟಪಡಿಸಿದ್ದರು.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ,
ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ, ಜಿ. ಕಲಬುರಗಿ

ಸಂ.ಕಾನಿಇಂ/ಲೋಇ/ಸೇವಿ/ತಾಶಾ–1/2025–26/2516 ದಿನಾಂಕ : 30.12.2025

ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

1) ಕಾಮಗಾರಿ ವಿವರ : 1. ಸೇಡಂ ತಾಲೂಕಿನ 06 ಕಾಮಗಾರಿಗಳ ಇಂಡೆಂಟ್ ಸಂ : 30021, 29821, 29755, 29341, 0656, 0654 2. ಚಿಂಚೋಳಿ ತಾಲೂಕಿನ 03 ಕಾಮಗಾರಿ ಇಂಡೆಂಟ್ ಸಂ : 29481, 0652, 0648, 2. ಚಿತ್ತಾಪೂರ ತಾಲೂಕಿನ 07 ಕಾಮಗಾರಿ ಇಂಡೆಂಟ್ ಸಂ : 31501, 31500, 31499, 31497, 31496, 0682, 0861 2) ಲೆಕ್ಕ ಶೀರ್ಷಿಕೆ : 2025–26ನೇ ಸಾಲಿನ ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ ಹಾಗೂ 3054 ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ನಿರ್ವಾಹಣೆಯಲ್ಲಿನ ಕಾಮಗಾರಿಗಳು 3) ಟೆಂಡರಿಗಿಟ್ಟ ಮೊತ್ತ : **ಕನಿಷ್ಠ ರೂ. 12.97 ಲಕ್ಷಗಳು** ಮತ್ತು **ಗರಿಷ್ಠ ರೂ. 995.00 ಲಕ್ಷಗಳು**, 4) ಗುತ್ತಿಗೆದಾರರ ಅರ್ಹತೆ : 1ನೇ ದರ್ಜೆ ಮತ್ತು ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ : **17.01.2026 ಬೆಳಿಗ್ಗೆ 11.30** ಗಂಟೆಯವರೆಗೆ, 6) ಟೆಂಡರ್ ಸ್ಪಷ್ಟಿಕರಣ ಪಡೆಯುವ ದಿನಾಂಕ: **19.01.2026 ಸಾಯಂಕಾಲ 17.30 ಗಂಟೆವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇಎಂಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ. ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ ಸಲ್ಲಿಸುವ ಅಂತಿಮ ದಿನಾಂಕ : **20.01.2026 ರ ಸಾಯಂಕಾಲ 16.00 ಗಂಟೆವರೆಗೆ,** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **21.01.2026 ರ ಸಾಯಂಕಾಲ 16.30 ಗಂಟೆವರೆಗೆ** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : **23.01.2026 ರ ಸಾಯಂಕಾಲ 16.30 ಗಂಟೆವರೆಗೆ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರ್ಜಾಲ ತಾಣದ ವಿಳಾಸ : www.kppp.karnataka.gov.in 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ :ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯನ್ನು ಮಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮೂಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ, ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜೀನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ

ವಾ.ಸಾ.ಸಂ.ಇ.ಕಲಬುರಗಿ/921/ದೇಶಪಾಂಡೆ ಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಪೊಲೀಸ್ ಇಲಾಖೆ

ಪೊಲೀಸ್ ಅಧೀಕ್ಷಕರವರ ಕಛೇರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಸಂಖ್ಯೆ : CKM/STOR/CRSF/3/2025/COMP No.506361 ದಿನಾಂಕ:31.12.2025

ಇ–ಟೆಂಡರ್ ನೋಟೀಸ್

2025–26ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ಘಟಕಕ್ಕೆ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯನ್ವಯ ಚಿಕ್ಕಮಗಳೂರು ಜಿಲ್ಲೆಯ 06 ಸ್ಥಳಗಳಲ್ಲಿ ಸಂಚಾರ ವ್ಯವಸ್ಥೆಯ ಮೇಲೆ ನಿಗಾ ಇರಿಸುವ ಕುರಿತು ಕೆ.ಟಿ.ಪಿ.ಪಿ. ಕಾಯಿದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ **https://kppp.karnataka.gov.in** ಪೋರ್ಟಲ್ ಮುಖಾಂತರ ಇ–ಟೆಂಡರ್ ಪ್ರಕ್ರಿಯೆ ಮೂಲಕ ಎ.ಎನ್.ಪಿ.ಆರ್ ಕ್ಯಾಮೆರಾ ಹಾಗೂ ಪರಿಕರಗಳನ್ನು ಖರೀದಿಸಿ ಅಳವಡಿಸಲು ಅರ್ಜಿಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್‌ನ ಸಂಕ್ಷಿಪ್ತ ವಿವರ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2025-26/ IND0481	TENDER FOR SUPPLY, INSTALLATION AND MAINTENANCE OF ANPR CAMERA SYSTEM FOR TRAFFIC MONITORING AT TWO DIFFERENT LOCATIONS IN CHIKKAMAGALURU DISTRICT	15-01-2026 at 1730 Hrs.

ಮೇಲಿನ ಎ.ಎನ್.ಪಿ.ಆರ್. ಕ್ಯಾಮೆರಾ ಹಾಗೂ ಅದಕ್ಕೆ ಸಂಬಂಧಿಸಿದ ಪರಿಕರಗಳನ್ನು ಸರಬರಾಜು ಮಾಡಿ ಅಳವಡಿಸಲು ಇಚ್ಛಿಸುವವರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಇ–ಪ್ರಕ್ಯೂರ್‌ಮೆಂಟ್ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂ–ಖ್ಯೆ: 91–9240214000, 91–9240214001 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಅಥವಾ ಸಹಾಯವಾಣಿ 91–9240214000, 91–9240214001 ಗೆ ಸಂಪರ್ಕಿಸತಕ್ಕದ್ದು.

ಸಹಿ/– **ಪೊಲೀಸ್ ಅಧೀಕ್ಷಕರು,**
ಚಿಕ್ಕಮಗಳೂರು ಜಿಲ್ಲೆ

ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560001.
ಫೋನ್: 080–22223906, ಇ–ಮೇಲ್: dce.tenders2017@gmail.com

ಸಂಖ್ಯೆ: DCE/ITS/PUR/25/2025-INFO (Computer No.201039) ದಿನಾಂಕ : 01.01.2026

ಇ–ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಟೆಂಡರ್‌ಗಾಗಿ ಅರ್ಹ ಬಿಡ್‌ದಾರರಿಂದ ಇ–ಸಂಗ್ರಹಣೆ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ವಿವರಗಳಿಗಾಗಿ https://kppp.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀ–ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	ಟೆಂಡರ್ ಸಂಖ್ಯೆ: DCE/2025-26/IND0072 "ರೂಸಾ 2.0 ಯೋಜನೆಯ ಕಾಂಪೋನೆಂಟ್–8 ಮತ್ತು ಕಾಂಪೋನೆಂಟ್–9 ರಡಿ ಆಯ್ಕೆಯಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಐಸಿಟಿ ಉಪಕರಣಗಳ ಪೂರೈಕೆ, ಸ್ಥಾಪನೆ ಮತ್ತು ನಿರ್ವಹಣೆ"	01/01/2026	05/01/2026 ಬೆಳಿಗ್ಗೆ 11.00 ಗಂಟೆಗೆ	12/01/2026 ಸಂಜೆ 5.30 ಗಂಟೆಯವರೆಗೆ
2	ಟೆಂಡರ್ ಸಂಖ್ಯೆ: DCE/2025-26/IND0073 "ರೂಸಾ 1.0 ಮತ್ತು 2.0 ಯೋಜನೆಯ ಕಾಂಪೋನೆಂಟ್–8 ಮತ್ತು ಕಾಂಪೋನೆಂಟ್–9 ರಡಿ ಆಯ್ಕೆಯಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಯುಪಿಎಸ್ ಪೂರೈಕೆ, ಸ್ಥಾಪನೆ ಮತ್ತು ನಿರ್ವಹಣೆ"	01/01/2026	05/01/2026 ಬೆಳಿಗ್ಗೆ 11.00 ಗಂಟೆಗೆ	12/01/2026 ಸಂಜೆ 5.30 ಗಂಟೆಯವರೆಗೆ

ಸಹಿ/–
ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು

DIPR/CP/4780/NR/2025-26

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ,
16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560 052 ಇವರ ಮುಂದೆ

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003 ರ ಪರಿಚ್ಛೇದ 62 ಮತ್ತು 64 ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್ ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರಿಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024 ರ ಪ್ರಕಾರ ಆರ್ಥಿಕ ವರ್ಷ 2024-25ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ (ಎ.ಪಿ.ಆರ್) ಪ್ರಸರಣ ಜಕಾತಿಯ ಅರ್ಜಿಯನ್ನು ಅನುಮೋದನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿಯ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು–560 009. ..... ಅರ್ಜಿದಾರರು

ಅಧಿಸೂಚನೆ
ಕವಿಪ್ರನಿನಿಯ ಎಪಿಆರ್ 2024–25ರ ಅಧಿಸೂಚನೆ.

1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್ ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರಿಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024 ರ ಪ್ರಕಾರ ಆರ್ಥಿಕ ವರ್ಷ 2024-25ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಮತ್ತು ಅನುಮೋದನೆಗಾಗಿ ಅರ್ಜಿ ಸಲ್ಲಿಸಿರುತ್ತದೆ. ಕವಿಪ್ರನಿನಿಯ ಅರ್ಜಿಯು ಗೌರವಾನ್ವಿತ ಆಯೋಗದ ಪರಿಗಣನೆಯಲ್ಲಿರುತ್ತದೆ.

2.0 ಆರ್ಥಿಕ ವರ್ಷ 2024-25ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಅರ್ಜಿಯಲ್ಲಿ, ಕವಿಪ್ರನಿನಿಯು ಪರಿಷ್ಕೃತ ವಾರ್ಷಿಕ ಆದಾಯದ ಅಗತ್ಯತೆ ರೂ.6504.05 ಕೋಟಿಯಾಗಿರುತ್ತದೆ. ಅಧಿಕ/ಹೆಚ್ಚುವರಿ ಆದಾಯ ರೂ. 71.78 ಕೋಟಿಗಳಾಗಿರುತ್ತದೆ. ಈ ಅಧಿಕ/ಹೆಚ್ಚುವರಿ ಆದಾಯವನ್ನು ಆರ್ಥಿಕ ವರ್ಷ 2026-27 ರ ಅವಧಿಯ ಜಕಾತಿಯಲ್ಲಿ ಹೊಂದಾಣಿಕೆ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.

3.0 ವಿದ್ಯುಚ್ಛಕ್ತಿ ಕಾಯಿದೆ 2003 ರ ನಿಬಂಧನೆಗಳಿಗೆ ಅನುಸಾರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್ ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರಿಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024 ರ ಪ್ರಕಾರ, ಮೇಲಿನ ಅರ್ಜಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ (ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಥಮವಾಗಿ ಪ್ರಕಟವಾದ ದಿನಾಂಕದಿಂದ **ಮೂವತ್ತು ದಿನಗಳ ಒಳಗಾಗಿ ಸ್ವೀಕರಣಾಧಿಕಾರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, 16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560 052 ಅವರಿಗೆ ಸಲ್ಲಿಸಬಹುದು.**

4.0 ಆಸಕ್ತಿಯುಳ್ಳವರು ಕವಿಪ್ರನಿನಿಯ ಎ.ಪಿ.ಆರ್. ಮತ್ತು ಎ.ಆರ್.ಆರ್. ಅರ್ಜಿಗಳ ಪ್ರತಿಗಳನ್ನು ಪರಾಮರ್ಶಿಸಲು ಅಥವಾ ಖರೀದಿಸಲು ಈ ಕೆಳಗೆ ತಿಳಿಸಿದ ಕಛೇರಿಗಳಲ್ಲಿ ಲಭ್ಯವಿರುತ್ತದೆ.

1. **ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.**
3. **ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯಗಳು, ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**

5.0 ಎ.ಪಿ.ಆರ್. ಪ್ರತಿಗಳನ್ನು ಖರೀದಿಸಲು ಇಚ್ಛಿಸುವವರು ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ ರೂ.111/- ಹಾಗು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ ರೂ.108/- ರಂತೆ ನಗದು / ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ ರೂ. 1/- ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ನಲ್ಲಿ ಸಹ ಲಭ್ಯವಿರುತ್ತದೆ.

6.0 ಆಕ್ಷೇಪಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮಾತ್ರ ಸಲ್ಲಿಸಬೇಕು. ಆದರೆ, ಕವಿನಿ ಆಯೋಗದ ನಿರ್ದೇಶನದಂತೆ, ಆಕ್ಷೇಪಣೆ ಸಲ್ಲಿಕೆ ಮತ್ತು ಅದಕ್ಕೆ ಪ್ರತ್ಯುತ್ತರ ಸಲ್ಲಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು, ಆಕ್ಷೇಪಣಾದಾರರು ಏಕಕಾಲದಲ್ಲಿ ತಮ್ಮ ಆಕ್ಷೇಪಣೆಯ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009** ಇವರಿಗೂ ಕಳುಹಿಸಲು ಕೋರಲಾಗಿದೆ. ಸಾರ್ವಜನಿಕ ಆಕ್ಷೇಪಣೆಗಳನ್ನು ಮೊದಲ ಪ್ರಕಟಣೆಯನ್ನು ಹೊರಡಿಸಿದ **ದಿನಾಂಕದಿಂದ 30 ದಿನದೊಳಗೆ** ಸ್ವೀಕರಿಸಲಾಗುವುದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಂಬಿಕೆ ಕುಂಟಿದರೆ ವಿಚಾರ ತಲೆದೋರುತ್ತದೆ; ವಿಚಾರ ನಿರುಪಾಯವಾದರೆ ನಂಬಿಕೆಯೇಳುತ್ತದೆ.

–ಪು.ತಿ. ನರಸಿಂಹಾಚಾರ್

ಸಂಪಾದಕೀಯ

ಗ್ರಂಥಾಲಯ ವ್ಯವಸ್ಥೆಗೆ ಸಂಕಷ್ಟ ಸರ್ಕಾರದ ನಿರ್ಲಕ್ಷ್ಯ ಸರಿಯಲ್ಲ

ಸಮಾಜದಲ್ಲಿ ಡಿಜಿಟಲ್ ಮಾಧ್ಯಮದ ಒಲವು ಹೆಚ್ಚುತ್ತಿರುವುದರಿಂದಾಗಿ 'ಪುಸ್ತಕ ಸಂಸ್ಕೃತಿ' ದುರ್ಬಲಗೊಳ್ಳುತ್ತಿದೆ ಎನ್ನುವ ಆತಂಕ ಸಾಂಸ್ಕೃತಿಕ ವಲಯದಲ್ಲಿದೆ. ಈ ದುಗುಡವನ್ನು ಹೆಚ್ಚಿಸುವಂತೆ ರಾಜ್ಯ ಸರ್ಕಾರ, ಗ್ರಂಥಾಲಯ ವ್ಯವಸ್ಥೆಯ ಬುನಾದಿ ಶಿಥಿಲಗೊಳಿಸುವಂತೆ ನಡೆದುಕೊಳ್ಳುತ್ತಿದೆ. 2022ರಿಂದ ಪುಸ್ತಕ ಖರೀದಿ ಪ್ರಕ್ರಿಯೆ ನನೆಗುದಿಗೆ ಬಿದ್ದಿರುವುದರ ಜೊತೆಗೆ, 2021ರಲ್ಲಿ ಸಗಟು ಪುಸ್ತಕ ಖರೀದಿಯನ್ನು ನಿಲ್ಲಿಸಿರುವುದು ಪುಸ್ತಕ ಖರೀದಿಗೆ ಬಹು ದೊಡ್ಡ ಹಿನ್ನಡೆಯಾಗಿ ಪರಿಣಮಿಸಿದೆ. ಪುಸ್ತಕ ಖರೀದಿಗೆ ಸರ್ಕಾರ ಸೂಕ್ತ ಅನುದಾನ ಬಿಡುಗಡೆ ಮಾಡಬೇಕು ಹಾಗೂ ಆಯಾ ವರ್ಷವೇ ಖರೀದಿ ನಡೆಯಬೇಕು ಎಂದು 'ಕನ್ನಡ ಲೇಖಕರ ಮತ್ತು ಪ್ರಕಾಶಕರ ಒಕ್ಕೂಟ' ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದೆ. ಪುಸ್ತಕೋದ್ಯಮವನ್ನು ನಿರ್ಲಕ್ಷಿಸುತ್ತಿರುವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ನೆರವಿಗೆ ಸರ್ಕಾರ ಕಡಿವಾಣ ಹಾಕಿರುವುದರ ಬಗ್ಗೆ ಹಾವೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ದೊಡ್ಡರಂಗೇಗೌಡರು ಅಸಮಾಧಾನ ವ್ಯಕ್ತಪಡಿಸಿದ್ದರು. ಗ್ರಂಥಾಲಯಗಳಿಗೆಂದು ಸಂಗ್ರಹಿಸಿದ ಕರವನ್ನು ಬಾಕಿ ಉಳಿಸಿಕೊಳ್ಳುವುದು ಅನ್ಯಾಯ ಎಂದವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದ್ದರು. ಆದರೆ, ಭರವಸೆಗಳಿಗೆ ಮಾತ್ರ ಸರ್ಕಾರದ ಪ್ರತಿಕ್ರಿಯೆ ಸೀಮಿತವಾಗಿದೆ. ಸಾರ್ವಜನಿಕ ಗ್ರಂಥಾಲಯಗಳಿಗೆ ಕನ್ನಡ ಪುಸ್ತಕಗಳನ್ನು ಸಗಟು ಖರೀದಿ ಮಾಡಬೇಕು ಎಂದು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪತ್ರ ಬರೆದಿರುವುದಕ್ಕೂ ಸರ್ಕಾರ ಸ್ಪಂದಿಸಿಲ್ಲ. 2020ರ ಸಾಲಿನಲ್ಲಿ ಆಯ್ಕೆಗೊಂಡ ಪುಸ್ತಕಗಳ ಸರಬರಾಜು ಆಗಿದ್ದರೂ, ಗ್ರಂಥಾಲಯ ಇಲಾಖೆಯಿಂದ ಪ್ರಕಾಶಕರಿಗೆ ಇದುವರೆಗೂ ಪೂರ್ಣ ಹಣ ಪಾವತಿಯಾಗಿಲ್ಲ.

ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕ ಖರೀದಿ ಪ್ರಕ್ರಿಯೆಯನ್ನು ಪ್ರಕಾಶಕರಿಗೆ ಲಾಭ ಮಾಡಿಕೊಡುವ ದೃಷ್ಟಿಯಿಂದ ಎಂದು ನೋಡುವುದು ಸರಿಯಲ್ಲ. ಇದರಲ್ಲಿ ಸ್ವಲ್ಪ ಮಟ್ಟಿಗೆ ಸತ್ಯಾಂಶವೂ ಇದೆ. ಆದರೆ, ಗ್ರಂಥಾಲಯಗಳ ಸಬಲೀಕರಣವನ್ನು ಬಹು ದೊಡ್ಡ ಓದುಗ ವರ್ಗವನ್ನು, ವಿಶೇಷವಾಗಿ ಗ್ರಾಮೀಣ ಓದುಗರನ್ನು ಗಮನದಲ್ಲಿರಿಸಿಕೊಂಡು ನೋಡಬೇಕು. ಪುಸ್ತಕಗಳನ್ನು ನೇರವಾಗಿ ಖರೀದಿಸಲಾಗದ ಓದುಗರು ಹಾಗೂ ವಿದ್ಯಾರ್ಥಿಗಳು ಸಮಕಾಲೀನ ಕೃತಿಗಳ ಓದಿನಿಂದ ವಂಚಿತರಾಗಬಾರದು. ಆಹಾರ, ವಸತಿಯಂತೆಯೇ ಸಮಾಜದ ಸ್ವಾಸ್ಥ್ಯಕ್ಕೆ ಅಗತ್ಯವಾದ ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸುವುದೂ ಸರ್ಕಾರದ ಹೊಣೆಗಾರಿಕೆಯಾಗಿದೆ. ಅಲ್ಲದೆ, ಸಾರ್ವಜನಿಕರಿಂದ 'ಗ್ರಂಥಾಲಯ ಕರ' ಸಂಗ್ರಹಿಸುವ ಸರ್ಕಾರ, ಪುಸ್ತಕೋದ್ಯಮವನ್ನು ಪೊರೆಯುವ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ಹಾಗೂ ಗ್ರಂಥಾಲಯಗಳಿಗಾಗಿ ಸಂಗ್ರಹಿಸಿದ ಸಂಪನ್ಮೂಲವನ್ನು ಬೇರೆ ಉದ್ದೇಶಗಳಿಗೆ ಬಳಸುವುದು ಸರಿಯಲ್ಲ. ಕಳೆದ ಐದು ವರ್ಷಗಳ ಅವಧಿಯಲ್ಲಿ ಗ್ರಂಥಾಲಯ ಕರದ ಹೆಸರಿನಲ್ಲಿ ಸಂಗ್ರಹಿಸಿದ ₹700 ಕೋಟಿಗಿಂತಲೂ ಹೆಚ್ಚಿನ ಮೊತ್ತ ಸ್ಥಳೀಯ ಸಂಸ್ಥೆಗಳ ಬಳಿ ಉಳಿದಿದೆ. ಅದರಲ್ಲಿ ₹600 ಕೋಟಿಗಿಂತಲೂ ಹೆಚ್ಚು ಮೊತ್ತ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಬಳಿಯಿದೆ. ಕೆರೆಯ ನೀರನ್ನು ಕೆರೆಗೆ ಚೆಲ್ಲುವ ಅಭ್ಯಾಸವನ್ನು ಸ್ಥಳೀಯ ಸಂಸ್ಥೆಗಳು ರೂಢಿಸಿಕೊಂಡರೆ ಗ್ರಂಥಾಲಯಗಳು ಹಾಗೂ ಪುಸ್ತಕೋದ್ಯಮದ ಬಹುತೇಕ ಸಮಸ್ಯೆಗಳು ಬಗೆಹರಿಯುತ್ತವೆ.

ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸುವ ಪ್ರಕ್ರಿಯೆ ನನೆಗುದಿಗೆ ಬಿದ್ದಿರುವುದು ಪುಸ್ತಕೋದ್ಯಮದ ಜೊತೆಗೆ, ಕನ್ನಡ ಸಂಸ್ಕೃತಿಗೆ ಆಗುತ್ತಿರುವ ಹಾನಿಯೂ ಹೌದು.

ಮುನ್ನೂರು ಪುಸ್ತಕಗಳ ಸಗಟು ಖರೀದಿ ಯೋಜನೆ 2021ರವರೆಗೂ ಜಾರಿಯಲ್ಲಿತ್ತು. ಆ ಯೋಜನೆ ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸಿಕೊಳ್ಳುವ ಲೇಖಕರಿಗೆ ಬಹು ಉಪಯುಕ್ತವಾಗಿತ್ತು. 2021ರಲ್ಲಿ ಸಗಟು ಖರೀದಿ ಪ್ರಕ್ರಿಯೆ ನಿಲ್ಲಿಸಿ, ಪುಸ್ತಕ ಖರೀದಿಯ ಅಧಿಕಾರವನ್ನು ವಲಯ ಗ್ರಂಥಾಲಯಗಳಿಗೆ ಹಾಗೂ ಜಿಲ್ಲಾ ಗ್ರಂಥಾಲಯಗಳಿಗೆ ನೀಡಲಾಗಿದೆ. ಹೆಚ್ಚು ಶ್ರಮ ಹಾಗೂ ಸಮಯವನ್ನು ಬಯಸುವ ಹಾಗೂ ನಿರ್ದಿಷ್ಟ ಸಂಖ್ಯೆಯ ಪುಸ್ತಕಗಳ ಖರೀದಿಯ ಖಾತರಿಯೂ ಇಲ್ಲದ ಈ ಯೋಜನೆ ಲೇಖಕ–ಪ್ರಕಾಶಕರನ್ನು ನಿರುತ್ಸಾಹಗೊಳಿಸುವಂತಹದ್ದು. ಹಾಗೆಯೇ, ಕನ್ನಡ ಪುಸ್ತಕಗಳ ಪುಟವಾರು ದರ ಪರಿಷ್ಕರಣೆ ಆಗದಿರುವುದೂ ಪುಸ್ತಕೋದ್ಯಮಕ್ಕೆ ಸಮಸ್ಯೆಯಾಗಿ ಪರಿಣಮಿಸಿದೆ. ಈ ಪರಿಷ್ಕರಣೆ ಕೊನೆಯ ಬಾರಿ ನಡೆದದ್ದು 2017ರಲ್ಲಿ. ಕಳೆದ ನಾಲ್ಕೈದು ವರ್ಷಗಳಲ್ಲಿ ಮುದ್ರಣ ಮತ್ತು ಕಚ್ಚಾವಸ್ತುಗಳ ಬೆಲೆಯಲ್ಲಿ ಏರಿಕೆಯಾಗಿದೆ; ಜಿಎಸ್‌ಟಿ, ಸಾಗಣೆ ಖರ್ಚುಗಳೂ ಸೇರಿ ಪುಸ್ತಕ ತಯಾರಿಕೆಯ ವೆಚ್ಚ ಹೆಚ್ಚಾಗಿದೆ. ಹಾಗಾಗಿ, ಪುಟವಾರು ದರ ಪರಿಷ್ಕರಣೆ ಜರೂರಾಗಿ ಆಗಬೇಕಾಗಿದೆ. ಬಾಕಿ ಉಳಿದಿರುವ ಮೂರು ವರ್ಷಗಳ ಪುಸ್ತಕ ಆಯ್ಕೆ ಮತ್ತು ಖರೀದಿಯನ್ನು 6 ತಿಂಗಳಲ್ಲಿ ಮುಗಿಸುವ ಭರವಸೆಯನ್ನು ಗ್ರಂಥಾಲಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ನೀಡಿದ್ದಾರೆ. ಹೊಸ ವರ್ಷದಲ್ಲಿ ನೀಡಿರುವ ಈ ಭರವಸೆ ಬಾಯಿಮಾತಿಗೆ ಸೀಮಿತವಾಗದೆ ಕಾರ್ಯರೂಪಕ್ಕೆ ಬರಲಿ. ಕನ್ನಡ ಶಾಲೆಗಳ ಸಂರಕ್ಷಣೆಯಂತೆಯೇ, ಸಾರ್ವಜನಿಕ ಗ್ರಂಥಾಲಯಗಳ ಸಬಲೀಕರಣವೂ ಕನ್ನಡ ಸಂಸ್ಕೃತಿಯನ್ನು ಬಲಗೊಳಿಸುವ ಕೆಲಸ.

ಬಾಂಗ್ಲಾ, ಬೇಗಂ, ಭಾರತ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಕಳೆದ ಮೂರು ದಶಕಗಳ ಬಾಂಗ್ಲಾದೇಶದ ರಾಜಕೀಯ ಇತಿಹಾಸದಲ್ಲಿ ಮುಖ್ಯವಾಗಿ ಕಾಣಿಸುವುದು ಇಬ್ಬರು ಮಹಿಳೆಯರು. 2025ರ ಡಿಸೆಂಬರ್ 30ರಂದು ತೀರಿಕೊಂಡ ಬೇಗಂ ಖಾಲಿದಾ ಜಿಯಾ ಹಾಗೂ ಐದು ಬಾರಿ ಪ್ರಧಾನಿಯಾಗಿ ಇದೀಗ ಆ ದೇಶದಿಂದ ಗಡಿಪಾರಾಗಿ ಭಾರತದಲ್ಲಿರುವ ಶೇಖ್ ಹಸೀನಾ!

ಆಗಸ್ಟ್ 2024ರ ನಂತರ ಬಾಂಗ್ಲಾದಲ್ಲಿ ಉಂಟಾಗಿರುವ ರಾಜಕೀಯ ಅಸ್ಥಿರತೆ, ಅರಾಜಕತೆ ಮತ್ತು ಇತ್ತೀಚಿನ ಉದ್ವಿಗ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ– ಬಾಂಗ್ಲಾದೇಶದ ರಚನೆಯ ಬಳಿಕ ಅಲ್ಲಿ ನಡೆದ ಸೇನಾದಂಗೆಗಳು, ಖಾಲಿದಾ ಹಾಗೂ ಹಸೀನಾರ ಆಡಳಿತದ ಜೊತೆಗೆ ಅಲ್ಲಿ ಗುಪ್ತವಾಹಿನಿಯಾಗಿರುವ ಮತೀಯತೆ ಮತ್ತು ಪಾಕಿಸ್ತಾನ ಪರ ಒಲವನ್ನು ಗಮನಿಸಬೇಕು.

ಬೇಗಂ ಖಾಲಿದಾ ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಿ. 1991 ಮತ್ತು 2001ರಲ್ಲಿ ಎರಡು ಪೂರ್ಣ ಅವಧಿಗೆ ಪ್ರಧಾನಿಯಾಗಿದ್ದರು. 1990ರಲ್ಲಿ ಸೇನಾ ಆಡಳಿತಗಾರ ಹೊಸೈನ್ ಮೊಹಮ್ಮದ್ ಎರ್ಷಾದ್ ಅವರನ್ನು ಪದಚ್ಯುತಗೊಳಿಸಿದ, ಪ್ರಜಾಪ್ರಭುತ್ವಕ್ಕಾಗಿ ಆಗ್ರಹಿಸಿದ ಹೋರಾಟದಲ್ಲಿ ಖಾಲಿದಾ ಹಾಗೂ ಶೇಖ್ ಹಸೀನಾ ಜೊತೆಯಾಗಿ ಭಾಗವಹಿಸಿದ್ದರು. 1991ರಲ್ಲಿ ಜನಾಭಿಪ್ರಾಯ ಸಂಗ್ರಹದ ಮೂಲಕ ದೇಶದ ರಾಜಕೀಯ ವ್ಯವಸ್ಥೆಯನ್ನು ಅಧ್ಯಕ್ಷೀಯ ಪ್ರಜಾಪ್ರಭುತ್ವ ಮಾದರಿಯಿಂದ ಸಂಸದೀಯ ಮಾದರಿಗೆ ಬದಲಾಯಿಸಲಾಯಿತು. ಬಿಎನ್‌ಪಿ ಹೆಚ್ಚಿನ ಸ್ಥಾನ ಗಳಿಸಿದ್ದರಿಂದ ಖಲೀದಾ ಪ್ರಧಾನಿಯಾದರು. 1996ರ ಚುನಾವಣೆಯಲ್ಲಿ ಗೆದ್ದು ಹಸೀನಾ ಬಾಂಗ್ಲಾದ ಚುಕ್ಕಾಣಿ ಹಿಡಿದರು. 2009ರ ಬಳಿಕ ದೇಶದ ರಾಜಕೀಯದ ಮೇಲೆ ಹಿಡಿತ ಸಾಧಿಸಿದ ಹಸೀನಾ 15 ವರ್ಷಗಳ ಕಾಲ ಆಡಳಿತ ನಡೆಸಿದರು.

1991ರಿಂದ 2024ರ ಅವಧಿಯಲ್ಲಿ ಈ ಬೇಗಂ ದ್ವಯರ ರಾಜಕೀಯ ಕದನದಿಂದಾಗಿ ಬಾಂಗ್ಲಾ ದೇಶದಲ್ಲಿ ಪ್ರಜಾಪ್ರಭುತ್ವದ ಆಶಯಗಳು ಅರಳದೇ, ವಿರೋಧಿಗಳನ್ನು ಮಟ್ಟ ಹಾಕುವ ಮನಃಸ್ಥಿತಿಯ ಅರೆ ಸರ್ವಾಧಿಕಾರದ ಆಡಳಿತ ಸ್ಥಾಪನೆಗೊಂಡಿತು.

ಬಾಂಗ್ಲಾದೇಶದ ನಿರ್ಮಾತೃ ಶೇಖ್ ಮುಜಿಬುರ್ ರೆಹಮಾನ್ ಅವರ ಮಗಳು ಹಸೀನಾ ತಂದೆಯ ವಾರಸುದಾರಳಾಗಿ ಅವಾಮಿ ಲೀಗ್ ಪಕ್ಷದ ನೇತೃತ್ವ ವಹಿಸಿಕೊಂಡು ರಾಜಕೀಯಕ್ಕೆ ಧುಮುಕಿದಂತೆಯೇ, 1977ರಿಂದ 1981ರವರೆಗೆ ಬಾಂಗ್ಲಾ ಅಧ್ಯಕ್ಷನಾಗಿ ಆಡಳಿತ ನಡೆಸಿದ ಸೇನಾ ಹಿನ್ನೆಲೆಯ ಜಿಯಾವುರ್ ರೆಹಮಾನ್ ಪತ್ನಿಯಾಗಿ ಖಾಲಿದಾ ಅವರು, ಪತಿಯ ಹತ್ಯೆಯ ಬಳಿಕ ಬಿಎನ್‌ಪಿ ಸಾರಥ್ಯ ವಹಿಸಿಕೊಂಡರು. ಜಿಯಾವುರ್ 'ರಾಷ್ಟ್ರೀಯತೆ'ಯನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಂಡು ಬಾಂಗ್ಲಾವನ್ನು ಭಾರತದ ಸಾಂಸ್ಕೃತಿಕ ಕಕ್ಷೆಯಿಂದ ಪ್ರತ್ಯೇಕಿಸುವ ಕೆಲಸ ಮಾಡಿದ್ದರು. ಬಾಂಗ್ಲಾದೇಶದ ಸಾರ್ವಭೌಮತ್ವಕ್ಕೆ ಆದ್ಯತೆ ನೀಡಿದ್ದರು. ಪತಿ ಹಾಕಿಕೊಟ್ಟ ಹಾದಿಯಲ್ಲಿ ಖಾಲಿದಾ ಮುಂದುವರಿದರು.

ಖಾಲಿದಾ ಪ್ರಧಾನಿಯಾದಾಗ ಭಾರತದ ಈಶಾನ್ಯ ರಾಜ್ಯಗಳಿಗೆ ಬಾಂಗ್ಲಾ ಮೂಲಕ ಸರಕು ಗಳನ್ನು ಸಾಗಿಸುವುದನ್ನು ಆಕ್ಷೇಪಿಸಿದ್ದರು. ಇದು ಬಾಂಗ್ಲಾ ದೇಶದ ಭದ್ರತೆ ಮತ್ತು ಸಾರ್ವಭೌಮತ್ವವನ್ನು ಉಲ್ಲಂಘಿಸುತ್ತದೆ ಎಂದು ವಾದಿಸಿದ್ದರು. ಭಾರತೀಯ ಟ್ರಕ್‌ಗಳು ರಸ್ತೆ ಸುಂಕ ನೀಡದೇ ಬಾಂಗ್ಲಾದೇಶದ ರಸ್ತೆಗಳನ್ನು ಬಳಸುವುದನ್ನು ಅವರು ಒಪ್ಪಿರಲಿಲ್ಲ.

ಭಾರತದ ಈಶಾನ್ಯ ರಾಜ್ಯಗಳ ಪತ್ಯೇಕತಾವಾದಿ ಗುಂಪುಗಳನ್ನು 'ಸ್ವಾತಂತ್ರ್ಯ ಹೋರಾಟಗಾರರು' ಎಂದು ಚಿತ್ರಿಸುವ ಪ್ರಯತ್ನವೂ ನಡೆದಿತ್ತು. ಖಾಲಿದಾ ಅವರ ಎರಡನೇ ಅವಧಿಯುಲ್ಲಿ ಇಸ್ಲಾಮಿಕ್ ಉಗ್ರರ ಚಟುವಟಿಕೆಗಳು ಬಾಂಗ್ಲಾದಲ್ಲಿ ಹೆಚ್ಚಾದವು. ಭಾರತ ವಿರೋಧಿ ನಿಲುವು ಬೆಳೆಯತೊಡಗಿತು. 2002ರಲ್ಲಿ ಅವರು ಭಾರತವನ್ನು ನಿರ್ಲಕ್ಷಿಸಿ ಚೀನಾದೊಂದಿಗೆ ರಕ್ಷಣಾ ಒಪ್ಪಂದ ಮಾಡಿಕೊಂಡರು. 2004ರಲ್ಲಿ ಹಸೀನಾ ಭಾಷಣ ಮಾಡುತ್ತಿದ್ದ ಸಭೆಯ ಮೇಲೆ ಗ್ರೆನೇಡ್ ದಾಳಿ ನಡೆಯಿತು. ಈ ಪ್ರಕರಣದ ಆರೋಪ ಖಾಲಿದಾ ಅವರ ಪುತ್ರ ತಾರಿಕ್ ರೆಹಮಾನ್ ಅವರ ಮೇಲೆ ಬಂತು. ಖಾಲಿದಾ ಅವರು

ರಾಷ್ಟ್ರೀಯತೆಯನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಿದ ಬಾಂಗ್ಲಾದ ನಾಯಕಿ ಬೇಗಂ ಖಾಲಿದಾ ಜಿಯಾ ಅವರು ರಾಜಕೀಯ ಉತ್ತುಂಗದ ಜೊತೆಗೆ ಅಧಃಪತನವನ್ನೂ ಕಂಡವರು. ಬಾಂಗ್ಲಾದೇಶ ತೀವ್ರ ಬಿಕ್ಕಟ್ಟು ಎದುರಿಸುತ್ತಿರುವ ಸಂದರ್ಭದಲ್ಲಿ ಖಾಲಿದಾ ಇತಿಹಾಸಕ್ಕೆ ಸಂದಿದ್ದಾರೆ.

ಇಸ್ಲಾಮಿಕ್ ಮೂಲಭೂತವಾದಿ ಗುಂಪುಗಳನ್ನು ನಿಗ್ರಹಿಸಲು ಪ್ರಯತ್ನಿಸಿದರು. ಆದರೆ, ರಾಜಕೀಯ ಅಸ್ಥಿರತೆ ಮತ್ತು ಹಿಂಸಾಚಾರ ವ್ಯಾಪಕಗೊಂಡಿತು. ಸೇನಾದಂಗೆ ನಡೆದು ಮಧ್ಯಂತರ ಸರ್ಕಾರ ಅಧಿಕಾರ ವಹಿಸಿಕೊಂಡಿತು. ತಾರಿಕ್ ದೇಶ ತೊರೆದರು. ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗದ ಆರೋಪದ ಮೇಲೆ ಖಾಲಿದಾ ಮತ್ತು ಹಸೀನಾ ಇಬ್ಬರನ್ನೂ ಜೈಲಿಗೆ ಹಾಕಲಾಯಿತು. 2008ರಲ್ಲಿ ಸಾರ್ವತ್ರಿಕ ಚುನಾವಣೆಗೆ ಮುನ್ನ ಬಿಡುಗಡೆ ಮಾಡಲಾಯಿತು. ಹಸೀನಾ ಹೆಚ್ಚಿನ ಹಿಡಿತ ಸಾಧಿಸಿ ಸತತವಾಗಿ ಚುನಾವಣೆಗಳನ್ನು ಗೆದ್ದರು.

ಟ್ರಸ್ಟ್ ಮೂಲಕ ಪಡೆದ ವಿದೇಶಿ ದೇಣಿಗೆ ದುರುಪಯೋಗದ ಆರೋಪದಲ್ಲಿ 2018ರಲ್ಲಿ ಖಾಲಿದಾ ಅವರನ್ನು ಬಂಧಿಸಲಾಯಿತು. ಆಗಸ್ಟ್ 2024ರಲ್ಲಿ ಹಸೀನಾ ಪದಚ್ಯುತರಾದ ಮೇಲೆ ಖಾಲಿದಾ ಅವರನ್ನು ಬಂಧನದಿಂದ ಮುಕ್ತಗೊಳಿಸಲಾಯಿತು.

ಹಸೀನಾ ಅವರು ತಮ್ಮ ಅವಧಿಯಲ್ಲಿ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರದ ಆರ್ಥಿಕತೆಯನ್ನು ಬೆಳೆಸುವ, ಬೃಹತ್ ಉಡುಪು ಉದ್ಯಮವನ್ನು ಕಟ್ಟುವ ಕೆಲಸ ಮಾಡಿದರು. ಮ್ಯಾನ್ಮಾರ್‌ನ ರೋಹಿಂಗ್ಯಾ ಮುಸ್ಲಿಮರಿಗೆ ಆಶ್ರಯ ನೀಡಲು ಮುಂದಾದರು. ಅಭಿವೃದ್ಧಿ ಮತ್ತು ಮತೀಯ ಭಾವನೆಯನ್ನು ಸರಿದೂಗಿಸುವ ಯತ್ನ ಅದಾಗಿತ್ತು. 1990ರ ದಶಕದ ಉತ್ತರಾರ್ಧದಲ್ಲಿ ಮತ್ತು 2000ರ ದಶಕದ ಆರಂಭದಲ್ಲಿ, ಯುನೈಟೆಡ್ ಲಿಬರೇಶನ್ ಫ್ರಂಟ್ ಆಫ್ ಅಸ್ಸಾಮ್ (ಉಲ್ಫಾ) ರೀತಿಯ ಪ್ರತ್ಯೇಕತಾವಾದಿ ಗುಂಪುಗಳಿಗೆ ಬಾಂಗ್ಲಾದೇಶ ಆಶ್ರಯ ನೀಡಿದ್ದಲ್ಲದೇ, ಅತ್ಯಾಧುನಿಕ ಶಸ್ತ್ರಾಸ್ತ್ರಗಳು ದೊರಕುವಂತೆ ನೋಡಿಕೊಳ್ಳುತ್ತಿತ್ತು. ಹಸೀನಾ ಅಧಿಕಾರಾವಧಿಯಲ್ಲಿ ಬಾಂಗ್ಲಾದೇಶದಲ್ಲಿನ ಭಾರತ ವಿರೋಧಿ ಜಾಲಗಳನ್ನು ಹತ್ತಿಕ್ಕಲಾಯಿತು.

ಹಸೀನಾರ ಆಡಳಿತ ಆರೋಪಗಳಿಂದ ಮುಕ್ತ ಆಗಿರಲಿಲ್ಲ. ಹಿಂಸಾಚಾರ, ಬೆದರಿಕೆ ಹಾಗೂ ಚುನಾವಣಾ ಅಕ್ರಮದ ಆರೋಪಗಳು ಇದ್ದವು. ಖಾಲಿದಾ ಅವರ ಬಂಧನ ಹಾಗೂ ತಾರಿಕ್ ಅವರ ಪಲಾಯನದಿಂದಾಗಿ ಬಿಎನ್‌ಪಿ ಚುನಾವಣೆ ಎದುರಿಸಲಿಲ್ಲ. ಬಾಂಗ್ಲಾ ಚುನಾವಣಾ ಪ್ರಕ್ರಿಯೆಯ ಕುರಿತು ಪಾಶ್ಚಿಮಾತ್ಯ ರಾಷ್ಟ್ರಗಳು ಆಕ್ಷೇಪ ವ್ಯಕ್ತಪಡಿಸಿದವು. ಆದರೆ ಭಾರತ, ಚುನಾವಣಾ ಫಲಿತಾಂಶವನ್ನು ಅನುಮೋದಿಸಿತು. ಇದರಿಂದಾಗಿ ಪ್ರಜಾಪ್ರಭುತ್ವದ ಮೌಲ್ಯವನ್ನು ಲೆಕ್ಕಿಸದೆ ಹಸೀನಾ ಅವರನ್ನು ಭಾರತ ಬೆಂಬಲಿಸುತ್ತದೆ ಎಂಬ ಭಾವನೆ ಗಟ್ಟಿಗೊಂಡಿತು.

ವಿದ್ಯಾರ್ಥಿ ಚಳವಳಿ 2024ರಲ್ಲಿ ವ್ಯಾಪಕಗೊಂಡು ಹಸೀನಾ ಅವರನ್ನು ಪದಚ್ಯುತಿಗೊಳಿಸುವ ಹಂತಕ್ಕೆ ಬೆಳೆಯಿತು. ಹಸೀನಾ ಬಾಂಗ್ಲಾ ತೊರೆದು ಭಾರತದಲ್ಲಿ ಆಶ್ರಯ ಪಡೆದಾಗ ಭಾರತ ವಿರೋಧಿ ಭಾವನೆ ಮತ್ತಷ್ಟು ಹಿಗ್ಗಿತು.

ಭಾರತ ವಿರೋಧಿ ಭಾವನೆ ಬಲಿಯಲು ಹಸೀನಾ ಆಡಳಿತದೊಂದಿಗೆ ಭಾರತ ನಿಕಟವಾಗಿ ಸ್ಪಂದಿಸಿದ್ದೊಂದೇ ಕಾರಣವಲ್ಲ. ಭಾರತ ವಿರೋಧಿ ನಿಲುವು ಹಲವು ವರ್ಷಗಳಿಂದ ಬಾಂಗ್ಲಾದಲ್ಲಿ ವ್ಯಕ್ತವಾಗುತ್ತಾ, ಶಕ್ತಗೊಳ್ಳುತ್ತಾ ಬಂದಿದೆ. ಅವಾಮೀ ಲೀಗ್ ಮತ್ತು ಬಿಎನ್‌ಪಿ ಹೊರತಾಗಿ ಬಾಂಗ್ಲಾದಲ್ಲಿ ಜಮಾತ್–ಎ–ಇಸ್ಲಾಮಿ ತರಹದ ಭಾರತ ವಿರೋಧಿ ನೀತಿಯನ್ನು ಮುಖ್ಯವಾಗಿ ಇರಿಸಿಕೊಂಡ ಪಕ್ಷಗಳು ಸಕ್ರಿಯವಾಗಿವೆ. ಜಮಾತ್ 1971ರ ಬಾಂಗ್ಲಾ ವಿಮೋಚನಾ ಯುದ್ಧವನ್ನು ವಿರೋಧಿಸಿತ್ತು; ದಕ್ಷಿಣ ಏಷ್ಯಾದಲ್ಲಿ ಮುಸ್ಲಿಂ ಶಕ್ತಿಯನ್ನು ದುರ್ಬಲಗೊಳಿಸುವ ಭಾರತದ ಪಿತೂರಿ ಇದೆಂದು ಬಣ್ಣಿಸಿತ್ತು. ಭಾರತದ ಸಪ್ತ ಸಹೋದರಿ ರಾಜ್ಯಗಳನ್ನು ನಾವು ವಶಪಡಿಸಿಕೊಳ್ಳಬೇಕು ಎಂದಿತ್ತು.

ಕಳೆದ ವರ್ಷ ಮೀಸಲಾತಿ ವಿರೋಧಿ ವಿದ್ಯಾರ್ಥಿ ಚಳವಳಿಗೆ ಬೆಂಬಲವಾಗಿ ಜಮಾತ್ ನಿಂತಿತು. ಇದೀಗ ಹಸೀನಾ ವಿರೋಧಿ ಭಾವನೆಯನ್ನು ಭಾರತ ವಿರೋಧಿ ಭಾವನೆಯಾಗಿ ಬದಲಿಸಿ, ಅರಾಜಕತೆಯ ನೆಪದಲ್ಲಿ ಹಿಂಸೆಯನ್ನು ಪ್ರಚೋದಿಸುತ್ತಿದೆ. ಈ ಹಿಂಸಾಚಾರದ ಹಿಂದೆ ಪಾಕಿಸ್ತಾನದ ಐಎಸ್‌ಐ ಪಾತ್ರವನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಫೆಬ್ರುವರಿಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಸುವುದಾಗಿ ಘೋಷಿಸಿದೆ. ರಾಜಕೀಯ ಸ್ಥಿರತೆಯ ಜೊತೆಗೆ ಭಾರತ ವಿರೋಧಿ ನಿಲುವನ್ನು ಪ್ರೋತ್ಸಾಹಿಸದ ಸರ್ಕಾರ ಅಲ್ಲಿ ರಚನೆಯಾಗಬೇಕಿದೆ. ಹಿಂದೂಗಳನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಹಿಂಸಾಚಾರಗಳು ನಿಲ್ಲಬೇಕಿದೆ. ಇಲ್ಲವಾದರೆ ಭಾರತ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹಿಂಸಾಚಾರ ಮುಂದುವರೆದರೆ, ವಲಸೆ ಸಮಸ್ಯೆ ಉದ್ಭವಿಸುತ್ತದೆ. ಮತೀಯ ಶಕ್ತಿಗಳು ಮೇಲುಗೈ ಸಾಧಿಸಿದರೆ, ಭಾರತದ ಈಶಾನ್ಯ ರಾಜ್ಯಗಳಲ್ಲಿ ಪ್ರತ್ಯೇಕತಾವಾದಿ ಚಟುವಟಿಕೆಗಳಿಗೆ ಪ್ರೋತ್ಸಾಹ ಹೆಚ್ಚುತ್ತದೆ.

ನಿಗದಿಯಾಗಿರುವ ಚುನಾವಣೆಯಲ್ಲಿ ಅವಾಮಿ ಲೀಗ್ ಸ್ಪರ್ಧಿಸದಂತೆ ನಿರ್ಬಂಧ ಹೇರಲಾಗಿದೆ. ಭಾರತ ವಿರೋಧಿ ನಿಲುವಿನ ಜಮಾತ್ ಮತ್ತು ವಿದ್ಯಾರ್ಥಿ ಚಳವಳಿಯ ಉಪಉತ್ಪನ್ನವಾಗಿ ಹೊರಹೊಮ್ಮಿರುವ ಎನ್‌ಸಿಪಿ ಜೊತೆಯಾಗಿ ಸ್ಪರ್ಧಿಸಲು ನಿರ್ಧರಿಸಿವೆ. 17 ವರ್ಷಗಳ ಕಾಲ ಬಾಂಗ್ಲಾದಿಂದ ಹೊರಗಿದ್ದ ತಾರಿಕ್ ರೆಹಮಾನ್ ಚುನಾವಣೆಯಲ್ಲಿ ಬಿಎನ್‌ಪಿ ಮುನ್ನಡೆಸಲು ಬಾಂಗ್ಲಾಕ್ಕೆ ಹಿಂದಿರುಗಿದ್ದಾರೆ. ಭಾರತ ಮತ್ತು ಬಾಂಗ್ಲಾ ನಡುವಿನ ಐತಿಹಾಸಿಕ ಸಂಬಂಧದ ಅರಿವು ಅವರಿಗಿದೆ.

ಈ ಹಿಂದೆ ಖಾಲಿದಾ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನವನ್ನು ಭಾರತ ಮಾಡಿತ್ತು. ಪ್ರಧಾನಿ ಮೋದಿ ಅವರು ಜೂನ್ 2015ರಲ್ಲಿ ಬಾಂಗ್ಲಾದೇಶಕ್ಕೆ ಭೇಟಿಯಿತ್ತಾಗ, ವಿರೋಧ ಪಕ್ಷದ ನಾಯಕಿಯಾಗಿದ್ದ ಖಾಲಿದಾರನ್ನು ಭೇಟಿಯಾಗಿದ್ದರು. ಇದೀಗ ಖಾಲಿದಾ ಅವರ ಅಂತ್ಯಸಂಸ್ಕಾರದಲ್ಲಿ ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರು ಭಾಗವಹಿಸಿದ್ದು ಸಮಯೋಚಿತ. 1971ರಲ್ಲಿ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಭಾರತ ನಿರ್ವಹಿಸಿದ ಪಾತ್ರವನ್ನು ನೆನೆದು ಬಾಂಗ್ಲಾದೇಶ ಸದಾಕಾಲ ಭಾರತದ ಪರ ಇರಬೇಕು ಎಂದು ಆಗ್ರಹಿಸುವುದರಲ್ಲಿ ಅರ್ಥವಿಲ್ಲ. ಬಾಂಗ್ಲಾದೇಶದ ಸಾರ್ವಭೌಮತೆಯನ್ನು ಗೌರವಿಸುತ್ತಲೇ, ನಮ್ಮ ನೆರೆಯ ಪ್ರಮುಖ ರಾಷ್ಟ್ರವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಭಾರತ ಚತುರೋಪಾಯಗಳನ್ನು ಬಳಸಬೇಕು.

ವಾಚಕರ ವಾಣಿ

ಶುಭಾಶಯಕ್ಕೆ ಧರ್ಮವಿಲ್ಲ, ಜಾತಿಯಿಲ್ಲ...

ಪರಿಚಯದ ವ್ಯಕ್ತಿಯೊಬ್ಬರಿಗೆ 'ಹೊಸ ವರ್ಷದ ಶುಭಾಶಯಗಳು' ಎಂದು ಹೇಳಿದೆ. 'ನಮಗೆ ಯಾವ ಹೊಸ ವರ್ಷ? ನಮಗೆ ಯುಗಾದಿಯೇ ಹೊಸ ವರ್ಷ. ನೀವು ಯಾವಾಗ ಕ್ರಿಶ್ಚಿಯನ್ ಆದಿರಿ?' ಎಂಬ ಅವರ ಕೊಂಕು ಪ್ರತಿಕ್ರಿಯೆ ನನ್ನನ್ನು ಅಚ್ಚರಿಗೊಳಿಸಿತು. ಶುಭಾಶಯ ಹೇಳುವ ನನ್ನ ಮಾತಿನಲ್ಲಿ ಧರ್ಮವಿರಲಿಲ್ಲ, ಆಚರಣೆಯ ಹೋಲಿಕೆಯಿರಲಿಲ್ಲ. ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಿಗೆ ಕೋರಬಹುದಾದ ಒಳಿತಿನ ಹಾರೈಕೆಯನ್ನು ಧರ್ಮದ ಕಣ್ಣಿನಿಂದ ನೋಡಿ ತಳ್ಳಿಹಾಕುವ ಮನೋಭಾವ ನೋವು ತಂದಿತು.

'ಇದು ನಮ್ಮದಲ್ಲ, ನಮ್ಮದು ಬೇರೆ, ನಾವು ಇದನ್ನು ಆಚರಿಸ ಬಾರದು' ಎಂಬ ಸಂಕುಚಿತ ಚಿಂತನೆ ಸಾಮಾಜಿಕ ಚಾಳಿಯಾಗಿ ಬೆಳೆಯುತ್ತಿರುವುದು ವಿಷಾದಕರ. ಶುಭಾಶಯಕ್ಕೆ ಧರ್ಮವಿಲ್ಲ, ಜಾತಿಯಿಲ್ಲ, ಭಾಷೆಯಿಲ್ಲ. ಅದು ಮಾನವೀಯತೆಯ ಅಭಿವ್ಯಕ್ತಿ. ಅದನ್ನೂ ಅಳೆಯುವ, ತೂಕ ಹಾಕುವ, ತಳ್ಳಿಹಾಕುವ ಮನಸ್ಸು ಸಮಾಜವನ್ನು ಇನ್ನಷ್ಟು ಕಿರಿದಾಗಿಸುವುದಷ್ಟೇ ಹೊರತು, ಸಂಸ್ಕೃತಿಯನ್ನು ಉಳಿಸುವುದಿಲ್ಲ.

ಎಂ.ಎಸ್. ಅಲ್ಲಮಪ್ರಭು, ಬೆಂಗಳೂರು

'ಕೆಡಿ'ಗೆ ಹೆಣ್ಣಿನ ಘನತೆಯ ಚಿಂತೆಯಿಲ್ಲವೆ?

ಇನ್ನೂ ತೆರೆಕಾಣಬೇಕಿರುವ 'ಕೆಡಿ' ಸಿನಿಮಾದ 'ಅಣ್ತಮ್ಮ ಜೋಡೆತ್ತು ಕಣೊ' ಗೀತೆ ಬಿಡುಗಡೆಯಾಗಿ ಕೇಳುಗರ ಮನಮುಟ್ಟಿದೆ. ಗೀತೆಯಲ್ಲಿ ಒಳ್ಳೆಯ ಸಂದೇಶ ಇದೆ. ಆದರೆ, ಹಾಡಿನಲ್ಲಿ ಬಳಸಿರುವ 'ರಂಡೆ, ಮುಂಡೆ' ಪದಗಳು ಬೇಕಿರಲಿಲ್ಲ. ಗ್ರಾಮ್ಯ ಭಾಷೆಯಲ್ಲಿ ಈ ಪದಗಳು ಸಹಜವೇ ಇರಬಹುದು. ಆದರೆ, ಇವು ಮಹಿಳೆಯನ್ನು ಅವಮಾನಿಸುವ ಬೈಗುಳವಾಗಿವೆ. ಗೀತರಚನೆಕಾರರು ಸೂಕ್ಷ್ಮತೆ ಮೆರೆಯಬೇಕಿತ್ತು. ಸಿನಿಮಾ ನಿರ್ದೇಶಕ ಪ್ರೇಮ್ ತಮ್ಮ ಪ್ರತಿ ಸಿನಿಮಾದಲ್ಲೂ ತಾಯಿ ಬಗ್ಗೆ ಅಪಾರವಾದ ಪ್ರೀತಿ, ಗೌರವ ತೋರಿಸಿರುವುದನ್ನು ನೋಡಿದ್ದೇವೆ. ಅವರಾದರೂ ಯೋಚನೆ ಮಾಡಬೇಕಿತ್ತು. ನಿರ್ದೇಶಕ ತನ್ನ ಸಾಮಾಜಿಕ ಜವಾಬ್ದಾರಿ ಮರೆಯಬಾರದು. ಈಗಲೂ ಕಾಲ ಮಿಂಚಿಲ್ಲ. ಆ ಪದಗಳಿಗೆ ಕತ್ತರಿ ಹಾಕಿ ಸಿನಿಮಾ ಬಿಡುಗಡೆ ಮಾಡಲಿ.

ಲೋಕೇಶ ಬೆಕ್ಕಳಲೆ, ಬಸರಾಳು

ಗುರುಗಳ ವಿಚಾರದಲ್ಲಿ ಹಸ್ತಕ್ಷೇಪ ಸಲ್ಲದು

ಕೇರಳದ ವರ್ಕಳದಲ್ಲಿನ ಶಿವಗಿರಿ ಮಠಕ್ಕೆ ಭೇಟಿ ಕೊಟ್ಟಿರುವ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, 'ಮಠವು ಆಧುನಿಕ ಭಾರತದ ನೈತಿಕ ವಿಶ್ವವಿದ್ಯಾಲಯವಾಗಿದೆ' ಎಂದಿದ್ದಾರೆ (ಪ್ರ.ವಾ., ಡಿ. 31). ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿಯಬೇಕಿದೆ: ಈ ಸಭೆ ಏರ್ಪಡಿಸಿದ ಟ್ರಸ್ಟ್ ಹಾಗೂ 'ನಾರಾಯಣ ಧರ್ಮ ಪರಿಪಾಲನ ಯೋಗಂ'ಗೂ (ಎಸ್‌ಎನ್‌ಡಿಪಿ) ವ್ಯತ್ಯಾಸವಿದೆ. 'ಎಸ್‌ಎನ್‌ಡಿಪಿ' ಒಂದು ಚಳವಳಿ ಆಗಿತ್ತು. ಅದಕ್ಕೆ ಸ್ಥಾವರ ರೂಪ ಬಂದಿದ್ದು 1903ರಲ್ಲಿ. ನಾರಾಯಣ ಗುರುಗಳು ಅದರ ಪ್ರಥಮ ಅಧ್ಯಕ್ಷರು. ಈಗ ಅದು ಹಲವು ಯೂನಿಯನ್ ಹಾಗೂ ಸಬ್ ಯೂನಿಟ್‌ಗಳನ್ನು ಹೊಂದಿದೆ. 'ಒಂದು ಜಾತಿ, ಒಂದು ಧರ್ಮ, ಒಂದು ದೇವರು' ಎಂಬ ಮೂಲತತ್ತ್ವ ಈಗ ಬೇರೆ ರೂಪದಲ್ಲಿ ಪಾಲನೆಯಾಗಿದೆ. ಯಾತ್ರಾಕೇಂದ್ರ, ತೀರ್ಥಯಾತ್ರೆ ಇವೆಲ್ಲ ಈಗಿನ ಪರಿಕಲ್ಪನೆ. ಹಾಗೆಯೇ ನೈತಿಕ ವಿಶ್ವವಿದ್ಯಾಲಯ ಎಂಬ ಗ್ರಹಿಕೆಯೂ. ನಾರಾಯಣ ಗುರುಗಳ ವಿಚಾರಗಳಲ್ಲಿ ಏನೇನನ್ನೋ ಸೇರಿಸಲು ರಾಜಕಾರಣಿಗಳು ಹೋಗಬಾರದು.

ಎಚ್.ಎಸ್. ಮಂಜುನಾಥ, ಗೌರಿಬಿದನೂರು

ಹೆಮ್ಮೆ

ಭಾರತ ಮಾತೆಗೆ
ಈಗ ಬಲು ಸಾರ್ಥಕತೆ!
ಕಾರಣ, ನಾವು
ವಿಶ್ವದ ನಾಲ್ಕನೇ
ದೊಡ್ಡ ಆರ್ಥಿಕತೆ!

ಮಹಾಂತೇಶ, ಮಾಗನೂರ

ನ್ಯಾಕ್: ಕನ್ನಡದಲ್ಲಿ ಸಂವಹನ ಸ್ವಾಗತಾರ್ಹ

ಸರ್ಕಾರಿ ಪ್ರಥಮ ದರ್ಜೆ, ಖಾಸಗಿ ಅನುದಾನಿತ ಹಾಗೂ ಬಿ.ಎಡ್. ಕಾಲೇಜುಗಳಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ 'ನ್ಯಾಕ್' (ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿ) ಮೌಲ್ಯಮಾಪನ ನಡೆಸಿ ಶ್ರೇಣಿ ನೀಡುತ್ತದೆ. ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕಾಲೇಜುಗಳ ಎಲ್ಲ ವ್ಯವಹಾರ ಇದುವರೆಗೆ ಇಂಗ್ಲಿಷ್‌ನಲ್ಲಿ ನಡೆಯುತ್ತಿತ್ತು. ರಾಜ್ಯದಲ್ಲಿ ಕನ್ನಡವೇ ಸಾರ್ವಭೌಮ ಹಾಗೂ ಆಡಳಿತ ಭಾಷೆ ಆಗಿರುವುದರಿಂದ, 'ನ್ಯಾಕ್'ಗೆ ಸಂಬಂಧಿಸಿದಂತೆ ನಡೆಸುವ ದೈನಂದಿನ ಪತ್ರ ವ್ಯವಹಾರಗಳನ್ನು ಇನ್ನುಮುಂದೆ ಕನ್ನಡದಲ್ಲಿ ನಡೆಸುವಂತೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಈ ಸೂಚನೆ ಸ್ವಾಗತಾರ್ಹ.

ಜಯವೀರ ಎ.ಕೆ., ಖೇಮಲಾಪುರ

ಎಂ.ಜಿ. ರಸ್ತೆ: ಹೆಸರು ಬದಲಿಸಬಾರದೇಕೆ?

ಹೊಸವರ್ಷದ ಸಂಭ್ರಮಾಚರಣೆಗೆ ಯುವಕ ಯುವತಿಯರು ಬೆಂಗಳೂರಿನ ಎಂ.ಜಿ. ರಸ್ತೆ ಮತ್ತು ಅದರ ಸಮೀಪದ ರಸ್ತೆಗಳಲ್ಲಿ ಸೇರುವುದು ವಾಡಿಕೆಯಾಗಿದೆ. ಮಹಾತ್ಮ ಗಾಂಧೀಜಿಯವರು ತಮ್ಮ ಜೀವನದುದ್ದಕ್ಕೂ ಮದ್ಯಪಾನ ನಿಷೇಧಕ್ಕೆ ಹೋರಾಟ ಮಾಡಿದ್ದರು. ಅಂತಹವರ ಹೆಸರಿರುವ ರಸ್ತೆಯಲ್ಲಿ ಸಂಭ್ರಮದ ಹೆಸರಿನಲ್ಲಿ ಕುಡಿದು ತೂರಾಡುವ ಹಾಗೂ ಅನುಚಿತವಾಗಿ ವರ್ತಿಸುವ ಘಟನೆಗಳು ನಡೆಯುತ್ತವೆ. ಹಾಗಾಗಿ, ಆ ರಸ್ತೆಯ ಹೆಸರನ್ನು ಬದಲಿಸುವುದೇ ಒಳ್ಳೆಯದು. ಇಲ್ಲವಾದರೆ, 'ಎಂ.ಜಿ.' ಎಂದರೆ ಮಹಾತ್ಮಾ ಗಾಂಧಿ ಎಂಬರ್ಥ ಅಳಿದು 'ಮದ್ಯದ ಗಮ್ಮತ್ತು' ಎಂದು ಉಳಿಯಬಹುದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅಭಿರುಚಿಹೀನ ಸಾಹಿತ್ಯವನ್ನು ನಿಯಂತ್ರಿಸಿ

ಹೊಸ ವರ್ಷದ ಸಂಭ್ರಮದ ಹೆಸರಿನಲ್ಲಿ ನಡೆಯುತ್ತಿರುವ ಉತ್ತರ ಕರ್ನಾಟಕ ಭಾಗದ ಸ್ವಘೋಷಿತ ಜಾನಪದ ಕಲಾವಿದರ ಹುಚ್ಚಾಟಗಳು ಬೇಸರ ತರಿಸಿವೆ. ಇವರಿಂದ ನಡೆಯುವ ಜಾನಪದ ಹಾಡು, ರಸಮಂಜರಿಗಳಲ್ಲಿ ಅಶ್ಲೀಲ ಪದ ಬಳಕೆ ನಿಲ್ಲಿಸಬೇಕಾಗಿದೆ. ಮಕ್ಕಳಾದಿಯಾಗಿ ಲಕ್ಷಾಂತರ ಜನ ಈ ಹಾಡುಗಳಿಂದ ಪ್ರಭಾವಿತ-ರಾಗುತ್ತಿದ್ದಾರೆ. ಈ ಬೆಳವಣಿಗೆ ಸಮಾಜದ ಹಿತಕ್ಕೆ ಪೂರಕವಲ್ಲ. ಈ ಅನಪೇಕ್ಷಿತ ಬೆಳವಣಿಗೆಯನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿ.

ಮಾದಪ್ಪ ಎಸ್. ಕಠಾರಿ, ವಿಜಯಪುರ

ಜಾಲಾಡಿ

ರಾಜಕಾರಣಿಗಳ ದ್ವಂದ್ವ

ಕರ್ನಾಟಕದ ರಾಜಕೀಯ ನಾಯಕರು ವ್ಯಕ್ತಿಪ್ರತಿಷ್ಠೆಗೆ ಕುಂದುಂಟಾದಾಗ, ಅಧಿಕಾರಕ್ಕೆ ಕುತ್ತು ಬಂದಾಗ ಪ್ರತಿಭಟಿಸುತ್ತಾರೆ; ಹೈಕಮಾಂಡನ್ನೂ ಬೆರಳ ತುದಿಯಲ್ಲಿ ಕುಣಿಸುತ್ತಾರೆ. ದ್ವಿಭಾಷಾ ಸೂತ್ರ ಜಾರಿಯಂತಹ ನಾಡು–ನುಡಿಗೆ ಸಂಬಂಧಿಸಿದ ಬದ್ಧತೆಯ ವಿಷಯದಲ್ಲಿ ಮಾತ್ರ, ಧ್ವನಿ ಇಲ್ಲದವರಂತೆ, ಹೈಕಮಾಂಡ್ ಮುಂದೆ ಅಸಹಾಯಕರಂತೆ ವರ್ತಿಸುತ್ತಾರೆ.

ಸವಿರಾಜ್ ಆನಂದೂರು, ಕಥೆಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ

ರಾಜೀವಗಾಂಧಿ ವಸತಿ ಯೋಜನೆಯಡಿ 6 ವರ್ಷಗಳ ಹಿಂದೆ ₹1 ಲಕ್ಷ ಹಣ ಕಟ್ಟಿದವರಿಗೆ ಇನ್ನೂ ಮನೆ ಕೊಟ್ಟಿಲ್ಲ. ಶೇ 50 ಮನೆಗಳ ಮಂಜೂರಾತಿ ಪ್ರಕ್ರಿಯೆ ಆನ್‌ಲೈನ್‌ನಲ್ಲಿಯೇ ನಡೆದಿದೆ. ಈಗ ಮನೆ ಇಲ್ಲದವರಿಗೆ ಒಂದೇ ವಾರದಲ್ಲಿ ಮನೆ ಕೊಡಲು ಹೇಗೆ ಸಾಧ್ಯ? ಇದು ಅಕ್ರಮವಾಗಿ ಮನೆ ಕೊಟ್ಟಂತಾಗುತ್ತದೆ.

ಎಸ್.ಆರ್. ವಿಶ್ವನಾಥ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 2-1-2001

• ನದಿಯಲ್ಲಿ ತೆಪ್ಪ ಮುಳುಗಿ ಏಳು ಮಂದಿ ಜಲಸಮಾಧಿ

ಬೀದರ್, ನ. 1– ಕರ್ನಾಟಕ–ಆಂಧ್ರ ಗಡಿ ಗ್ರಾಮ ಕಾರಾಮುಂಗಿ ಬಳಿ ಮಾಂಜ್ರಾ ನದಿಯಲ್ಲಿ ತೆಪ್ಪ ಮುಳುಗಿ ಒಂದೇ ಕುಟುಂಬಕ್ಕೆ ಸೇರಿದ ಏಳು ಜನರು ನೀರುಪಾಲಾಗಿದ್ದಾರೆ. ನಿನ್ನೆ ಮಧ್ಯಾಹ್ನ ನಡೆದ ದುರಂತದಲ್ಲಿ ಒಟ್ಟು 9 ಮಂದಿ ತೆಪ್ಪದಲ್ಲಿ ಪ್ರಯಾಣಿಸುತ್ತಿದ್ದು, ಇಬ್ಬರು ಈಜಿ ಪಾರಾಗಿದ್ದಾರೆ.

ಮೃತಪಟ್ಟವರಲ್ಲಿ ಮಾಣಿಕಪ್ಪ ಎಂಬುವರು ಜಿಲ್ಲೆಯ ಬಸವಕಲ್ಯಾಣದ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎನ್ನಲಾಗಿದೆ. ತೆಪ್ಪದಲ್ಲಿದ್ದ ಗೋವಿಂದ, ನರಸಿಂಗ್ ಈಜಿ ದಡ ಸೇರಿದ್ದಾರೆ.

• ಕಲ್ಕತ್ತ ಈಗ ಕೊಲ್ಕತ

ಕೊಲ್ಕತ, ಜ. 1– ಪಶ್ಚಿಮ ಬಂಗಾಳದ ರಾಜಧಾನಿ 'ಕಲ್ಕತ್ತ'ದ ಹೆಸರನ್ನು ಇಂದಿನಿಂದ ಅಧಿಕೃತವಾಗಿ 'ಕೊಲ್ಕತ' ಎಂದು ಬದಲಾಯಿಸ-ಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಅವರು ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 2-1-1951

• ಪ್ರಧಾನಿ ನೆಹರೂಗೆ ಬೆಂಗಳೂರಿನ ಪ್ರೇಮಭರಿತ ಸ್ವಾಗತ

ಬೆಂಗಳೂರು, ಜ. 1– ಪ್ರಧಾನಿ ಜವಾಹರಲಾಲ್ ನೆಹರೂ ಅವರು ಈ ದಿನ ಮಧ್ಯಾಹ್ನ 3 ಗಂಟೆ 25 ನಿಮಿಷಕ್ಕೆ ದೆಹಲಿಯಿಂದ ಮುಂಬಯಿ ಮೂಲಕ ಬೆಂಗಳೂರಿನ ಹಿಂದೂಸ್ತಾನ್ ವಿಮಾನ ನಿಲ್ದಾಣದಲ್ಲಿ ಬಂದಿಳಿದರು.

ವಿಮಾನ ನಿಲ್ದಾಣದಿಂದ ರೆಸಿಡೆನ್ಸಿ-ವರೆಗಿನ ಸುಮಾರು 6 ಮೈಲಿ ಉದ್ದಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ಲಕ್ಷಾಂತರ ಜನ ಗಂಡಸರು, ಹೆಂಗಸರು, ಮಕ್ಕಳು, ಮಧ್ಯಾಹ್ನ ಎರಡು ಗಂಟೆಯಿಂದ ಬಿಸಿಲಿನಲ್ಲಿ ಕಾದು ನಿಂತಿದ್ದು, ಜವಾಹರರ ದರ್ಶನ ಲಾಭಕ್ಕಾಗಿ ಕಾತರಭರಿತರಾಗಿದ್ದರು. ಬೆಂಗಳೂರಿನ ಈಚಿನ ಇತಿಹಾಸ ದಲ್ಲಿ ಹಿಂದೆ ಒಂದೇ ಒಂದು ಬಾರಿಇಷ್ಟು ಅಗಾಧ ಜನಸಂದಣಿ ಕಂಡು ಬಂದಿತ್ತು. ಅದು ಯಾವಾಗ ಎಂದರೆ ಕಳೆದ ಸಾರಿ– ಒಂದು ವರ್ಷದ ಕೆಳಗೆ– ನೆಹರೂ ಬೆಂಗಳೂರಿಗೆ ಬಂದಿದ್ದಾಗ... ಅಷ್ಟೆ.

ಚುರುಮುರಿ

ಬೇಡುವೆನು ವರವನ್ನು...

• ಬಿ.ಎನ್. ಮಲ್ಲೇಶ್

ಹೊಸ ವರ್ಷದ ಸಂಭ್ರಮಾಚರಣೆಯ ವರದಿ ಮಾಡಿ ಸುಸ್ತಾಗಿ ಮಲಗಿದ್ದ ಟೀವಿ ಪತ್ರಕರ್ತ ತೆಪರೇಸಿಗೆ ಕನಸಲ್ಲಿ ದೇವರು ಪ್ರತ್ಯಕ್ಷನಾಗಿ, 'ಅಯ್ಯಾ ತೆಪರೇಸಿ, ಹೊಸ ವರ್ಷದಲ್ಲಿ ನಿನಗೇನು ವರ ಬೇಕು ಕೇಳಿಕೋ' ಎಂದಿತು.

'ನನಗೇನೂ ಬೇಡ ತಂದೆ, ದಿನಾ ಟೀವೀಲಿ ಹೇಳಿದ್ದೇ ಹೇಳಿ ಸಾಕಾಗಿದೆ. ಈ ಸಿಎಂ ಕುರ್ಚಿ ಸಮಸ್ಯೆ ಯಾವಾಗ ಬಗೆಹರಿಸ್ತೀಯ? ವಿಜಯೇಂದ್ರ, ಯತ್ನಾಳ್ ಸಾಹೇಬ್ರನ್ನ ಯಾವಾಗ ಒಂದು ಮಾಡ್ತೀಯ? ರಷ್ಯಾ–ಉಕ್ರೇನ್ ಯುದ್ಧ ಯಾವಾಗ ನಿಲ್ಲಿಸ್ತೀಯ?' ಎಂದು ಕೇಳಿದ ತೆಪರೇಸಿ.

'ಜಗಳ ಬಗೆಹರಿಸೋಕೆ, ಯುದ್ಧ ನಿಲ್ಸೋಕೆ ನಾನು ಟ್ರಂಪ್ ಅಲ್ಲ, ಬೇರೇನಾದ್ರು ಕೇಳು...'

'ಅಯ್ತು, ಈ ಮತ ಚೋರಿ ಆಗಿರೋದು ನಿಜಾನಾ?'

'ಗೊತ್ತಿಲ್ಲ...'

'ಡಿಕೆಶಿ ಸಾಹೇಬ್ರಿಗೆ ಎಷ್ಟು ದೇವರ ಬೆಂಬಲ ಇದೆ?'

'ಗೊತ್ತಿಲ್ಲ...'

'ಸಂಪುಟ ವಿಸ್ತರಣೆ ಯಾವಾಗ ಆಗಬಹುದು?'

'ಗೊತ್ತಿಲ್ಲ...'

'ಈ ರಾಜಕಾರಣಿಗಳು ಈಗ ಹೇಳಿದ್ದನ್ನ ಸ್ವಲ್ಪ ಹೊತ್ತಿಗೆ ನಾನಂಗೆ ಹೇಳೇ ಇಲ್ಲ, ನನ್ನ ಹೇಳಿಕೆ ತಿರುಚಿದಾರೆ ಅಂದುಬಿಡ್ತಾರೆ. ಅವರ ಮಾತಿನ ಒಳಾರ್ಥ, ಗೂಢಾರ್ಥ ತಿಳಿಯೋದು ಹೇಗೆ?' ಎಂದು ತೆಪರೇಸಿ ಐನಾತಿ ಪ್ರಶ್ನೆ ಕೇಳಿದ.

'ಅದು ನಿನಗಲ್ಲ, ನನಗೂ ಗೊತ್ತಾಗಲ್ಲ...' ದೇವರು ಮಾರ್ಮಿಕವಾಗಿ ನಕ್ಕಿತು.

'ಏನ್ ಕೇಳಿದ್ರೂ ಗೊತ್ತಿಲ್ಲ ಅಂತೀಯ. ಸರಿ, ನನ್ನ ಸ್ವಂತಕ್ಕೊಂದು ಮನೆ ಬೇಕು, ಕೊಡಿಸ್ತೀಯ?' ತೆಪರೇಸಿ ಬೇಡಿಕೆ ಇಟ್ಟ.

'ತಥಾಸ್ತು... ಮನೆ ಅರ್ಜೆಂಟ್ ಬೇಕಾ, ನಿಧಾನಕ್ಕಾದ್ರೂ ನಡೆಯುತ್ತಾ?'

'ಅಂದ್ರೆ? ಏನ್ ನಿನ್ ಮಾತಿನ ಅರ್ಥ?'

'ಅರ್ಜೆಂಟ್ ಬೇಕಾದ್ರೆ ಕೇಸಿಎಂ ಹತ್ರ ಹೋಗು, ಫಟ್ ಅಂತ ಸಿಗುತ್ತೆ...'

'ನಂಗೆ ಡಿಸಿಎಂ ಗೊತ್ತು, ಇದ್ಯಾರು ಕೇಸಿಎಂ?'

'ಕೇರಳ ಸಿಎಂ ಕಣಯ್ಯ, ದಡ್ಡ...'

ತೆಪರೇಸಿಗೆ ಫಕ್ಕನೆ ಎಚ್ಚರವಾಯಿತು.

ಸಂಗತ

ಪಾಪಕೃತ್ಯ: ಸಮುದಾಯಕ್ಕೆ ಹೊಣೆ ಇಲ್ಲವೆ?

ಜಾತಿ ಕಾರಣಕ್ಕಾಗಿ ನಡೆದ ಕೊಲೆ ಆ ಸಮುದಾಯವನ್ನು ಬಾಧಿಸಬೇಕಲ್ಲವೆ? ಆ ಪಾಪಕೃತ್ಯವನ್ನು ಸಮುದಾಯ ಖಂಡಿಸದೆ ಹೋದರೆ ಅದು ಅಧರ್ಮ ಅಲ್ಲವೆ?

• ಕುಸುಮಾ ಆಯರಹಳ್ಳಿ

ಅನ್ಯಜಾತಿಯ ಹುಡುಗನನ್ನು ಮದುವೆಯಾದ ಬಸುರಿ ಮಗಳನ್ನು ತವರಿನವರೇ ಕೊಚ್ಚಿ, ಕೊಂದು ಹಾಕಿದ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಹಿಂದೆ ನಡೆದ ಹೀನಕೃತ್ಯಗಳೇ ಈಗಲೂ ನಡೆಯುತ್ತಿದ್ದರೆ, ನಾಗರಿಕರಾಗಿ ನಮ್ಮ ನಡಿಗೆ ಹಿಮ್ಮುಖವಾಗಿದೆ ಎಂದರ್ಥ.

ಕೊಲೆ, ಅತ್ಯಾಚಾರ, ಯಾರದೇ ಮೇಲಾಗುವ ದೌರ್ಜನ್ಯವನ್ನು ಜಾತಿ–ಧರ್ಮದ ಹಿನ್ನೆಲೆಯಲ್ಲಿ ನೋಡದೆ, ಮಾನವಧರ್ಮದ ಆಧಾರದಿಂದಲೇ ಎಲ್ಲರೂ ಯೋಚಿಸಬೇಕು. ಸಮಾಜದ ಸ್ಥಿತಿ ಹೇಗಾಗಿದೆ ಅಂದರೆ, ಕೊಂದವನ ಜಾತಿ ಯಾವುದು? ನೊಂದವನ ಜಾತಿ ಯಾವುದು? ಎಂಬುದರ ಆಧಾರದ ಮೇಲೆ ಕ್ರಿಯೆ ಪ್ರತಿಕ್ರಿಯೆ ಮತ್ತು ಪ್ರತಿಭಟನೆ ನಿರ್ಧಾರವಾಗುತ್ತಿದೆ. ಕೃತ್ಯಕ್ಕೆ ಸಂಬಂಧಿಸಿದ ವ್ಯಕ್ತಿಗಳು ಭಿನ್ನ ಧರ್ಮದವರಾದರೆ, ಆಗ ಪ್ರತಿಭಟನೆಯ ಸ್ವರೂಪವೇ ಬೇರೆ.

ಸಮಾಜದಲ್ಲಿ ದಿನಬೆಳಗಾದರೆ ಅಪರಾಧ ಕೃತ್ಯಗಳು ನಡೆಯುತ್ತವೆ. ಅದು ವ್ಯಕ್ತಿಗಳ ತಪ್ಪು. ಅದಕ್ಕೆ ಯಾವುದೇ ಸಮುದಾಯ ಹೊಣೆಯಲ್ಲ. ಆದರೆ, ಜಾತಿಕಾರಣಕ್ಕಾಗಿಯೇ ನಡೆದ ಕೊಲೆಗಳ ಹೊಣೆಯನ್ನು ಸಂಬಂಧಿಸಿದ ಸಮುದಾಯ ಹೊರಬೇಕಾಗುತ್ತದೆ. ಇಂತಹ ಕೃತ್ಯಗಳಾದಾಗ ಆಯಾ ಜಾತಿಮುಖಂಡರು, ಮಠಾಧೀಶರು ಮಾತಾಡಬೇಕಾಗುತ್ತದೆ. ನಿಜವಾದ ಬಸವ ಧರ್ಮಪಾಲಕರಿಗೆ, ಹುಬ್ಬಳ್ಳಿಯ ಘಟನೆ ನೋವು, ನಾಚಿಕೆ ಉಂಟುಮಾಡಬೇಕಾಗಿತ್ತು. ಇದು ಅಮಾನವೀಯ, ಶರಣ ಸಂಸ್ಕೃತಿಗೆ ವಿರುದ್ಧವಾದ ನಡೆ ಎಂದವರು ಹೇಳಬೇಕಿತ್ತು. ಆದರೆ, ಯಾರೂ ಬಾಯಿ ಬಿಡುತ್ತಿಲ್ಲ.

ಧಾರ್ಮಿಕ ಮುಖಂಡರು ಈ ಘಟನೆಯನ್ನು ಖಂಡಿಸಿದರೆ ಪರೋಕ್ಷವಾಗಿ ಅವರು ಅಂತರ್ಜಾತಿ ವಿವಾಹಕ್ಕೆ ಪರವಾನಗಿ ಕೊಟ್ಟಂತೆ ಆಗುವುದಿಲ್ಲವೆ? ಮಕ್ಕಳಿಗೆ ಯಾರನ್ನು ಬೇಕಾದರೂ ಪ್ರೇಮಿಸಲು ಉತ್ತೇಜನ ಕೊಟ್ಟಂತಾಗುವುದಿಲ್ಲವೆ? ಎನ್ನುವುದು ಬಸವಧರ್ಮದವರೆಂದು ಹೇಳಿಕೊಳ್ಳುವ ಕೆಲವರ ಜಿಜ್ಞಾಸೆ. ಶತಮಾನಗಳ ಹಿಂದೆಯೇ ಜಾತಿ ತೊಡೆಯಲು ಹೇಳಿದ್ದ ಬಸವಣ್ಣ, ಅಂತರ್ಜಾತಿ ಮದುವೆ ಮಾಡಿಸಿದ್ದ. ಕಡೆಗೆ ಅದೇ ಒಂದು ಜಾತಿಯಾದದ್ದು ಕರ್ನಾಟಕಕ್ಕೆ ಮಾತ್ರವಲ್ಲ, ವಿಶ್ವಕ್ಕೇ ಆದ ನಷ್ಟ. ಈಗ ಜಾತಿಗಾಗಿ ಗರ್ಭಿಣಿ ಜೀವ, ಅವಳ ಹೊಟ್ಟೆಯ ಪುಟ್ಟ ಜೀವ ಎರಡನ್ನೂ ತೆಗೆದ ಘಟನೆಗೆ ಬಸವ ನೋಯಲಾರನೆ?

ಅನೇಕ ಜಾತಿ ಜನಾಂಗಗಳನ್ನು ಕೂಡಿಸಿಯೇ ಹುಟ್ಟಿದ ಧರ್ಮದ ಮೂಲತತ್ತ್ವವನ್ನೇ ಮೂಲೆಗೆ ತಳ್ಳಿದರೆ ಹೇಗೆ? ಬಸವನ ಸಮಾನತೆಯ ತತ್ವವನ್ನೇ ನಿರಾಕರಿಸಿದ ಮೇಲೆ ಸಮುದಾಯಕ್ಕಾಗಲೀ, ಸಮುದಾಯದ ಮುಖಂಡರಿಗಾಗಲೀ, ಮಠಪೀಠಗಳಿಗಾಗಲೀ ಬಸವನ ಹೆಸರೇಕೆ? ಧರ್ಮವೇಕೆ? ಭಾಷಣಕ್ಕೆ, ಸಾಮಾಜಿಕ ಮತ್ತು ರಾಜಕೀಯ ಸಂಘಟನೆಗೆ ಒಂದು ಟೂಲ್ ಆಗಿ ಮಾತ್ರ ಬಳಕೆಯಾಗಲು ಇರುವುದೇ ಆ ಹೆಸರು? ಜನರು ಒಪ್ಪುವುದಿಲ್ಲ ಎಂದು ಸತ್ಯವನ್ನು ಮಾತನಾಡದೆ ಹೋದರೆ, ಜಾತಿ ಹೆಸರಲ್ಲಿ ಜೀವಹಾನಿಯಾದಾಗಲೂ ಮೌನವಹಿಸಿ ಕೂತರೆ, ಮಠ–ಪೀಠಗಳು ಇರುವುದು ಏಕೆ ಎಂಬ ಪ್ರಶ್ನೆ ಹುಟ್ಟುವುದಿಲ್ಲವೆ?

ನಮ್ಮ ಸಮಾಜದ ಯೋಚನೆಗಳೇ ವಿಚಿತ್ರ. ಸ್ವಂತ ಸಮುದಾಯದವರೇ ಆ ಹುಡುಗಿಯ ಕೊಲೆಗೆ ನ್ಯಾಯ ಕೇಳುವುದಿಲ್ಲ. ಯಾಕೆಂದರೆ, ಕೊಂದವನು ನಮ್ಮದೇ ಜಾತಿಯವನು. ಅಂದರೆ, ಹೊಟ್ಟೆಯ ಕೂಸಿನ ಸಮೇತ ಕೊಲೆಗೀಡಾದ ಹೆಣ್ಣುಮಗಳ ಜೀವ ಇಲ್ಲಿ ಏನೂ ಅಲ್ಲ. ಅತ್ಯಾಚಾರ, ಅನ್ಯಾಯ, ಕೊಲೆ, ಏನಾದರೂ ನ್ಯಾಯ ಕೇಳಲು ಇಲ್ಲಿ ಜಾತಿ ಬಾವುಟ ಬೇಕು. ಮನುಷ್ಯರಾಗಿ ನಾವದನ್ನು ಪ್ರಶ್ನಿಸುವುದಿಲ್ಲ.

ದೊಡ್ಡ ನಗರಗಳ, ಶ್ರೀಮಂತರ, ಗಣ್ಯರ ಸಮಾಜದಲ್ಲಿ ಅಂತರ್ಜಾತಿ, ದೇಶ–ಖಂಡಾಂತರ ಮದುವೆಗಳೂ ಆಗುತ್ತವೆ. ಆಯ್ಕೆಯ ಅವಕಾಶವಿರದೆ, ಕೊಲೆಯ ಹಂತಕ್ಕೆ ಹೋಗುವುದು, ಹಳ್ಳಿ ಮತ್ತು ಬಡ–ಮಧ್ಯಮವರ್ಗದ ಮನೆಗಳಲ್ಲಿ. ಅಲ್ಲಿ ಜಾತಿಯ ಜೊತೆಗೆ ಮಗಳನ್ನು ನಿಯಂತ್ರಿಸಲು ಆಗದಂತಹ ಅಹಂ, ಅವಮಾನಕ್ಕೊಳಗಾದ ಭಾವನೆಯೂ ಕೆಲಸ ಮಾಡುತ್ತದೆ. ಇದು ಸಮಾಜದ ಮಾನಸಿಕ ಸಮಸ್ಯೆಗಳಲ್ಲೊಂದು ಎನಿಸುತ್ತಿದೆ.

ಹಿಂದೆ ಕುಟುಂಬದವರೇ ಗಂಡು ಹೆಣ್ಣುಗಳನ್ನು ನೋಡುತ್ತಿದ್ದರು. ಒಂದೇ ಸಂಸ್ಕೃತಿ, ಆಚರಣೆ ಇದ್ದಾಗ ಹೊಂದಾಣಿಕೆ ಸುಲಭ ಎಂಬ ಕಾರಣಕ್ಕೆ ತಮ್ಮದೇ ಜಾತಿಯಲ್ಲಿ ಮದುವೆಗಳಾಗುತ್ತಿದ್ದಿರಬಹುದು. ಈಗ ಎಲ್ಲರ ಕೈಯಲ್ಲೂ ಮೊಬೈಲಿದೆ. ನಮ್ಮದು ಈಗ ತೆರೆದ ಮತ್ತು ಸಂಪರ್ಕಾಧಾರಿತ ಸಮಾಜ. ಮುಂದೆ ಇಂತಹ ಅಂತರ್ಜಾತಿ ವಿವಾಹಗಳು ಇನ್ನೂ ಹೆಚ್ಚಾಗುತ್ತವೆ. ಆಗ ಇಷ್ಟವಿಲ್ಲದಿದ್ದರೆ ಬಿಟ್ಟು ಸುಮ್ಮನಿರಬಹುದೇ ಹೊರತು ಕೊಲ್ಲುವ ಹಂತಕ್ಕೆ ಹೋಗಬಾರದು.

'ಹಲವು ಜಾತಿ ಕಟ್ಟಿಗೆಯ ಸುಟ್ಟಲ್ಲಿ ಅಗ್ನಿಯೊಂದಲ್ಲದೆ ಅಲ್ಲಿ ಕಟ್ಟಿಗೆಗಳ ಕುರುಹು ಕಾಂಬುದೆ? ಶಿವಭಕ್ತರಲ್ಲಿ ಪೂರ್ವಜಾತಿಯನರಸುವ ಅರೆಮರುಳರನೇನೆಂಬೆ?' ಎಂದು ಕೇಳುತ್ತಾನೆ ಚೆನ್ನಬಸವಣ್ಣ. ಇಂತಹ ಶರಣಪರಂಪರೆಯ ಹೆಸರಿನಲ್ಲಿ, ಕೃತಕ ಬುದ್ಧಿಮತ್ತೆಯ ಹೊಚ್ಚ ಹೊಸ ಕಾಲದಲ್ಲಿ, ತಂದೆಯೊಬ್ಬ ಮಗಳನ್ನು ಕೊಂದಿದ್ದಾನೆ ಅಂದರೆ, ನಾವು 12ನೇ ಶತಮಾನದಿಂದ ಹಿಂದೆ ಚಲಿಸಿದ್ದೇವೆಯೆ?

ಭವಿಷ್ಯದ ಸಾವಿರ ಕನಸಿನೊಂದಿಗೆ ನಗುತ್ತಿರುವ ಆ ಸೀಮಂತಿನಿಯ ಫೋಟೋ ಎಂತಹವರ ಹೃದಯವನ್ನೂ ಕಲಕುವಂತಿದೆ. ಅಪ್ಪನೇ ಬೀಸಿದ ಜಾತಿಕೊಡಲಿಯ ಪೆಟ್ಟಿಗೆ, ಅವಳ ಹೊಟ್ಟೆಯ ಹಸುಳೆಯೂ ಇಲ್ಲವಾಗಿದೆ. ಏನು ತಪ್ಪು ಮಾಡಿದ್ದವು ಆ ಜೀವಗಳು?

ಪೂರ್ಣಚಂದ್ರ ತೇಜಸ್ವಿ ಅವರು ಅಂದಂತೆ, 'ಕೊಂದು ಉಳಿಸಿಕೊಳ್ಳಬೇಕಾದ ಧರ್ಮ ಯಾವುದಿದೆ?'

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಂಗಾಲ ಹೊರಸೂಸುವಿಕೆ ಅಧಿಕವಾಗಿರುವ ಲೋಹಗಳ ಉತ್ಪನ್ನಗಳ ಮೇಲೆ ಐರೋಪ್ಯ ಒಕ್ಕೂಟ (ಇಯು) ಇಂಗಾಲದ ತೆರಿಗೆ (ಕಾರ್ಬನ್ ಟ್ಯಾಕ್ಸ್) ವಿಧಿಸಿದ್ದು, ಅದು ಗುರುವಾರದಿಂದ (ಜ.1) ಜಾರಿಗೆ ಬಂದಿದೆ. ಹಸಿರುಮನೆ ಅನಿಲಗಳನ್ನು ಕಡಿಮೆ ಮಾಡುವಲ್ಲಿ ಇಂಗಾಲದ ತೆರಿಗೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಇಯು ಪ್ರತಿಪಾದಿಸಿದೆ. ಆದರೆ, ಈ ತೆರಿಗೆಯು ಭಾರತದ ಉಕ್ಕು, ಅಲ್ಯೂಮಿನಿಯಂ ಸೇರಿದಂತೆ ಕೆಲವು ಲೋಹಗಳ ಉತ್ಪನ್ನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಸಣ್ಣ ರಫ್ತುದಾರರನ್ನು ಇಯು ಮಾರುಕಟ್ಟೆಯಿಂದಲೇ ಹೊರತಳ್ಳುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ

ಇಂಗಾಲದ ತೆರಿಗೆ
ಭಾರತದ ಮೇಲೆ ಏನು ಪರಿಣಾಮ?

ಪ್ರಜಾವಾಣಿ ವಾರ್ತೆ

ಸುಂಕಗಳನ್ನು ವಿಧಿಸುವ ಮೂಲಕ ಸಮರ ಸಾರುವ, ಸುಂಕಗಳನ್ನು ವಿಧಿಸುವ ಮೂಲಕವೇ ಇನ್ನೊಂದು ದೇಶದ ಮೇಲೆ ಒತ್ತಡ ಹೇರುವ ಕಾಲಘಟ್ಟದಲ್ಲಿ ಕೆಲವು ಸರಕುಗಳಿಗೆ ಐರೋಪ್ಯ ಒಕ್ಕೂಟ ವಿಧಿಸಿರುವ ಹೊಸ ಬಗೆಯ ಸುಂಕವೊಂದು ಜಾರಿಗೆ ಬಂದಿದೆ. ಅದು ಭಾರತಕ್ಕೆ ಗುರುವಾರದಿಂದ ಅನ್ವಯವಾಗಿದೆ. ಆದರೆ ಇದು ಮೇಲ್ನೋಟಕ್ಕೆ ರಾಜಕೀಯ ಉದ್ದೇಶದ ಸುಂಕದಂತಿಲ್ಲ, ಪರಿಸರ ಕಾಳಜಿಯ ಸುಂಕದಂತೆ ಇದೆ.

ಐರೋಪ್ಯ ಒಕ್ಕೂಟವು 'ಇಂಗಾಲದ ತೆರಿಗೆ' ಹೆಸರಿನ ಸುಂಕವೊಂದನ್ನು ಜನವರಿ 1ರಿಂದ ಜಾರಿಗೆ ತಂದಿದೆ. ಇದು ಭಾರತದ ಕೆಲವು ರಫ್ತು ವಲಯಗಳ ಮೇಲೆ ಹೆಚ್ಚು ಪರಿಣಾಮ ಬೀರಲಿದೆ ಎಂಬುದು ತಜ್ಞರ ಅಂದಾಜು. ಅದರಲ್ಲೂ ಉಕ್ಕು ರಫ್ತಿನ ಮೇಲೆ ವ್ಯಾಪಕ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ತಯಾರಿಕಾ ಹಂತದಲ್ಲಿ ಇಂಗಾಲವನ್ನು ವಿಸರ್ಜಿಸುವ ಸರಕುಗಳ ಮೇಲೆ 27 ದೇಶಗಳ ಐರೋಪ್ಯ ಒಕ್ಕೂಟವು ಈ ತೆರಿಗೆ ವಿಧಿಸಲಾರಂಭಿಸಿದೆ.

ಬ್ಲಾಸ್ಟ್ ಫರ್ನೆಸ್ ಮೂಲಕ ಉಕ್ಕು ತಯಾರಿಸುವಾಗ ಇಂಗಾಲದ ಡೈ ಆಕ್ಸೈಡ್ ವಿಸರ್ಜನೆಯು ಅತಿಹೆಚ್ಚಿನ ಮಟ್ಟದಲ್ಲಿರುತ್ತದೆ. ಅದೇ ರೀತಿ, ಅಲ್ಯೂಮಿನಿಯಂ ತಯಾರಿಕೆಯ ಸಂದರ್ಭದಲ್ಲಿ ಕಲ್ಲಿದ್ದಲಿನಿಂದ ಉತ್ಪಾದಿಸಿದ ವಿದ್ಯುತ್ ಬಳಕೆ ಮಾಡಿದರೆ, ಆ ಪ್ರಕ್ರಿಯೆಯಲ್ಲಿ ಇಂಗಾಲದ ಡೈ ಆಕ್ಸೈಡ್ ವಿಸರ್ಜನೆ ಹೆಚ್ಚಿರುತ್ತದೆ. ಇದರಿಂದಾಗಿ ಪಾವತಿ ಮಾಡಬೇಕಾದ ಇಂಗಾಲದ ತೆರಿಗೆಯ ಮೊತ್ತವೂ ಹೆಚ್ಚಾಗುತ್ತದೆ ಎಂದು ಆರ್ಥಿಕತೆ ಕುರಿತ ಅಧ್ಯಯನ ವರದಿಗಳನ್ನು ಸಿದ್ಧಪಡಿಸುವ 'ಗ್ಲೋಬಲ್ ಟ್ರೇಡ್ ರಿಸರ್ಚ್ ಇನ್‌ಸ್ಟಿಟ್ಯೂಟ್' (ಜಿಟಿಆರ್‌ಐ) ಹೇಳಿದೆ.

ಭಾರತದಿಂದ ಐರೋಪ್ಯ ಒಕ್ಕೂಟದ ದೇಶಗಳಿಗೆ ಲೋಹಗಳನ್ನು ರಫ್ತು ಮಾಡುವ ಹಲವು ಕಂಪನಿಗಳು, ರಫ್ತುದಾರರು ತಮ್ಮ ಉತ್ಪನ್ನಗಳ ಬೆಲೆಯನ್ನು ಶೇಕಡ 15ರಿಂದ ಶೇ 22ರಷ್ಟು ಕಡಿಮೆ ಮಾಡಬೇಕಾಗುತ್ತದೆ. ಆಗ ಐರೋಪ್ಯ ಒಕ್ಕೂಟದಲ್ಲಿ ಆ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವವರು ಬೆಲೆ ಇಳಿಕೆಯ ಪ್ರಯೋಜನವನ್ನು ಬಳಸಿಕೊಂಡು, ಇಂಗಾಲದ ತೆರಿಗೆಯನ್ನು ಅಲ್ಲಿ ಪಾವತಿಸಲು ಸಾಧ್ಯವಾಗುತ್ತದೆ ಎಂದು ಜಿಟಿಆರ್‌ಐ ವಿವರಿಸಿದೆ.

ಸಂಕೀರ್ಣ ಪ್ರಕ್ರಿಯೆ: ಇಂಗಾಲದ ತೆರಿಗೆ ಪಾವತಿ ವ್ಯವಸ್ಥೆಯು ಬಹಳ ಸಂಕೀರ್ಣವಾದ ಪ್ರಕ್ರಿಯೆಗಳನ್ನು ಒಳಗೊಂಡಿದೆ ಎಂದು ಜಿಟಿಆರ್‌ಐ ಕಂಡುಕೊಂಡಿದೆ. ಸಂಕೀರ್ಣ ಪ್ರಕ್ರಿಯೆಯ ಕಾರಣದಿಂದಾಗಿ ಭಾರತದ ಕಂಪನಿಗಳ ಕೆಲವು ವೆಚ್ಚಗಳು ಹೆಚ್ಚುತ್ತವೆ. ಇದರಿಂದಾಗಿ ದೇಶದ ಕೆಲವು ಸಣ್ಣ ಕಂಪನಿಗಳು ಯುರೋಪಿನ ಮಾರುಕಟ್ಟೆಯಿಂದ ಪೂರ್ತಿಯಾಗಿ ಹೊರಬರಬೇಕಾದ ಸ್ಥಿತಿಯೂ ಎದುರಾಗಬಹುದು ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

'ಇಂಗಾಲದ ತೆರಿಗೆ ವ್ಯವಸ್ಥೆಯ ಅಡಿಯಲ್ಲಿ ಪ್ರತಿ ಘಟಕದ ಮಟ್ಟದಲ್ಲಿ ಇಂಗಾಲದ ವಿಸರ್ಜನೆ ಎಷ್ಟು ಎಂಬುದರ ಲೆಕ್ಕ ಇಡಬೇಕು. ಆ ಘಟಕದಲ್ಲಿ ನೇರವಾಗಿ ಬಳಕೆಯಾಗುವ ಇಂಧನದಿಂದ ಎಷ್ಟು ಇಂಗಾಲದ ವಿಸರ್ಜನೆ ಆಯಿತು, ವಿದ್ಯುತ್ ಬಳಕೆಯಿಂದ ಎಷ್ಟು ಇಂಗಾಲದ ವಿಸರ್ಜನೆ ಆಯಿತು ಎಂಬುದನ್ನು ಇದು ಒಳಗೊಳ್ಳಬೇಕು' ಎಂದು ಅವರು ವಿವರಿಸಿದ್ದಾರೆ.

ಇಂಧನದ ಬಳಕೆ, ವಿದ್ಯುತ್ ಬಳಕೆ, ತಯಾರಿಕಾ ಪ್ರಮಾಣದ ಬಗ್ಗೆ ರಫ್ತು ಉದ್ದೇಶಕ್ಕಾಗಿ ತಯಾರಿಕೆ ಮಾಡುವವರು ತ್ರೈಮಾಸಿಕದ ಆಧಾರದಲ್ಲಿ ಲೆಕ್ಕ ಇರಿಸಬೇಕಾಗುತ್ತದೆ. ಈ ಲೆಕ್ಕವು ಐರೋಪ್ಯ ಒಕ್ಕೂಟದ ವಿಧಾನಗಳಿಗೆ ಅನುಗುಣವಾಗಿ ಇರಬೇಕು, ಲೆಕ್ಕವು ತಪಾಸಣೆಗೆ ಲಭ್ಯವಿರುವಂತೆ ಇರಬೇಕು... ಇವೆಲ್ಲ ಹಣಕಾಸಿನ ಲೆಕ್ಕಪತ್ರಗಳ ಪರಿಶೀಲನೆಯನ್ನು ಹೋಲುತ್ತವೆ.

ಲಾಭ ಯಾರಿಗೆ?: ಇಂಗಾಲದ ಹೊರಸೂಸುವಿಕೆ ಕಡಿಮೆ ಇರುವ ತಯಾರಿಕಾ ಕಂಪನಿಗಳಿಗೆ, ಶುದ್ಧ ಇಂಧನವನ್ನು ಬಳಕೆ ಮಾಡುವವರಿಗೆ ಈ ವ್ಯವಸ್ಥೆಯು ಐರೋಪ್ಯ ಒಕ್ಕೂಟದ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಅನುಕೂಲಗಳನ್ನು ಕಲ್ಪಿಸಿಕೊಡುತ್ತದೆ ಎಂದು ಶ್ರೀವಾಸ್ತವ ಹೇಳಿದ್ದಾರೆ.

ಇಂಗಾಲದ ತೆರಿಗೆ ವಿಧಿಸುವ ಕ್ರಮವು ಈಗ ಐರೋಪ್ಯ ಒಕ್ಕೂಟದ ಜೊತೆ ಭಾರತ ನಡೆಸುತ್ತಿರುವ ವ್ಯಾಪಾರ ಒಪ್ಪಂದ ಕುರಿತ ಮಾತುಕತೆಯಲ್ಲಿಯೂ ಪ್ರಸ್ತಾಪ ಆಗಿದೆ.

ಕಡಿಮೆ ಆದಾಯದ ದೇಶಗಳಿಗೆ ಹೊಡೆತ

- ಇಂಧನಕ್ಕಾಗಿ ಹೆಚ್ಚು ವೆಚ್ಚ ಮಾಡುವ ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳ ಮೇಲೆ ಮತ್ತು ಸಿಮೆಂಟ್, ಉಕ್ಕು, ಅಲ್ಯೂಮಿನಿಯಂ, ವಿದ್ಯುತ್ ಮುಂತಾದ ಉದ್ಯಮಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ
- ಇಂಗಾಲದ ತೆರಿಗೆಯು ಜಾರಿಯಾದ ನಂತರ ಹಸಿರುಮನೆ ಅನಿಲಗಳ ಹೊರಸೂಸುವಿಕೆಯಲ್ಲಿ ಎಷ್ಟು ಕಡಿತ ಆಗಿದೆ ಎನ್ನುವುದನ್ನು ನಿಖರವಾಗಿ ಕಂಡುಕೊಳ್ಳುವುದು ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆಯಾಗಿದೆ. ಹೀಗಾಗಿ ಇಂಗಾಲದ ತೆರಿಗೆ ವಿಧಿಸುವುದಕ್ಕಿಂತ ಭಿನ್ನವಾದ, ನೇರವಾದ ಕ್ರಮಗಳನ್ನು ಅನುಸರಿಸುವುದು ಹೆಚ್ಚು ಫಲಪ್ರದ
- ಇಂಗಾಲದ ತೆರಿಗೆ ವಿಧಿಸುವುದಕ್ಕೆ ಫ್ರಾನ್ಸ್ ಸೇರಿದಂತೆ ಯುರೋಪ್‌ನ ಹಲವು ದೇಶಗಳಲ್ಲಿಯೂ ಪ್ರಬಲ ವಿರೋಧ ವ್ಯಕ್ತವಾಗಿದೆ. ಕೆಲವರು ನ್ಯಾಯಾಲಯದಲ್ಲಿಯೂ ಅದನ್ನು ಪ್ರಶ್ನಿಸಿದ್ದಾರೆ
- ಇಂಧನ ಬಳಸುವ ಬೃಹತ್ ಉದ್ಯಮಗಳು ಇಂಗಾಲದ ತೆರಿಗೆಯನ್ನು ವಿರೋಧಿಸಿವೆ. ಇದರಿಂದ ಉತ್ಪಾದನಾ ವೆಚ್ಚ ಹೆಚ್ಚಾಗಲಿದೆ. ಈ ತೆರಿಗೆ ನೀತಿಯಿಂದ ಹೊರತಾದ ದೇಶಗಳೊಂದಿಗೆ ಸ್ಪರ್ಧಿಸುವುದು ಕಷ್ಟವಾಗಲಿದೆ. ಉತ್ಪಾದಕರು ದೇಶ ತೊರೆಯುವ ಸಾಧ್ಯತೆಗಳೂ ಇವೆ
- ಸಮೂಹ ಬ್ಯಾಟರಿಚಾಲಿತ ವಾಹನಗಳ (ಇವಿ) ಅಳವಡಿಕೆ, ನವೀಕರಿಸಬಹುದಾದ ಇಂಧನಕ್ಕೆ ಹೆಚ್ಚು ಬಂಡವಾಳ ಹೂಡಿಕೆ, ಮೂಲಸೌಕರ್ಯ ವೃದ್ಧಿ, ಆರ್ಥಿಕ ಸಹಾಯ ನೀಡುವಂಥ ಪರೋಕ್ಷ ಕ್ರಮಗಳ ಮೂಲಕ ಅಲ್ಪ ಅವಧಿಯಲ್ಲೇ ಹಸಿರು ಅನಿಲಗಳ ಹೊರಸೂಸುವಿಕೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು



ಆಧಾರ: ಪಿಟಿಐ, ಎಎಫ್‌ಪಿ ವರದಿಗಳು, ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ (ಪಿಐಬಿ), ಅರ್ಥ್.ಒಆರ್‌ಜಿ

ಇಂಗಾಲದ ತೆರಿಗೆ ಅಂದರೆ ಏನು?

ಐರೋಪ್ಯ ಒಕ್ಕೂಟವು ಇದನ್ನು ತಾಂತ್ರಿಕವಾಗಿ 'ಇಂಗಾಲದ ಗಡಿ ಹೊಂದಾಣಿಕೆ ವ್ಯವಸ್ಥೆ' (ಸಿಬಿಎಎಂ) ಎಂದು ಕರೆದಿದೆ. ಇದನ್ನು ಆಡುಮಾತಿನಲ್ಲಿ ಇಂಗಾಲದ ತೆರಿಗೆ ಎಂದು ಕರೆಯಲಾಗುತ್ತಿದೆ. ಐರೋಪ್ಯ ಒಕ್ಕೂಟದಲ್ಲಿನ ವಿವಿಧ ಕಂಪನಿಗಳು ತಾವು ವಿಸರ್ಜಿಸುವ ಇಂಗಾಲಕ್ಕೆ ಪ್ರತಿಯಾಗಿ ಒಂದಿಷ್ಟು ಶುಲ್ಕವನ್ನು ಪಾವತಿಸುತ್ತವೆ. ಇದೇ ಬಗೆಯಲ್ಲಿ, ಐರೋಪ್ಯ ಒಕ್ಕೂಟಕ್ಕೆ ವಿವಿಧ ಉತ್ಪನ್ನಗಳನ್ನು ಬೇರೆ ದೇಶಗಳಿಂದ ರಫ್ತು ಮಾಡುವ ಕಂಪನಿಗಳೂ ತಾವು ವಿಸರ್ಜಿಸುವ ಇಂಗಾಲಕ್ಕೆ ಪ್ರತಿಯಾಗಿ ಶುಲ್ಕ ಪಾವತಿಸುವಂತೆ ಆಗಬೇಕು ಎಂಬ ಉದ್ದೇಶದಿಂದ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಇಂಗಾಲದ ವಿಸರ್ಜಿಸುವಿಕೆ ಹೆಚ್ಚಿನ ಪ್ರಮಾಣದಲ್ಲಿ ಇರುವ ಉಕ್ಕು, ಅಲ್ಯೂಮಿನಿಯಂ, ರಸಗೊಬ್ಬರ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವವರು, ಆ ಉತ್ಪನ್ನಗಳಿಂದ ಆಗುವ ಇಂಗಾಲದ ಡೈ ಆಕ್ಸೈಡಿನ ವಿಸರ್ಜನೆ ಎಷ್ಟು ಎಂಬುದನ್ನು ಘೋಷಿಸಬೇಕಾಗುತ್ತದೆ. ವಿಸರ್ಜನೆ ಪ್ರಮಾಣವು ಐರೋಪ್ಯ ಒಕ್ಕೂಟ ನಿಗದಿ ಮಾಡಿರುವ ಮಟ್ಟಕ್ಕಿಂತ ಹೆಚ್ಚಿದ್ದರೆ, ಅದಕ್ಕೆ ಶುಲ್ಕ ಪಾವತಿಸಬೇಕಾಗುತ್ತದೆ.

ಈ ನಿಯಮದ ಬಗ್ಗೆ ಟೀಕೆಗಳೂ ಇವೆ. ಇದು ಯುರೋಪಿನ ತಯಾರಕರಿಗೆ ಹೆಚ್ಚು ಅನುಕೂಲ ಮಾಡಿಕೊಡುವಂತೆ ಇದೆ ಎಂದು ಕೆಲವರು ಟೀಕಿಸಿದ್ದಾರೆ. ಆದರೆ ಈ ನಿಯಮವು ಪರಿಸರಕ್ಕೆ ಪೂರಕವಾಗುವ ಕ್ರಮಗಳನ್ನು ಉತ್ತೇಜಿಸುತ್ತದೆ ಎಂದು ಒಕ್ಕೂಟ ಪ್ರತಿಪಾದಿಸಿದೆ.

ಕಾಂಗ್ರೆಸ್ ಕಳವಳ

ಐರೋಪ್ಯ ಒಕ್ಕೂಟ ವಿಧಿಸಿರುವ ಇಂಗಾಲದ ತೆರಿಗೆಯಿಂದ ಕೆಲವು ಸರಕುಗಳ ರಫ್ತು ಬೆಲೆ ಹೆಚ್ಚಳವಾಗಲಿದ್ದು, ಈ ತೆರಿಗೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಹೇಳಿದೆ. ಈ ಕುರಿತು ಹೇಳಿಕೆ ನೀಡಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಜಿಟಿಆರ್‌ಐ ವರದಿಯಲ್ಲಿನ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಜತೆಗೆ, ದಾಖಲೀಕರಣ, ಇಂಗಾಲದ ಹೊರಸೂಸುವಿಕೆ ವರದಿ ಇತ್ಯಾದಿ ಪ್ರಕ್ರಿಯೆಗಳಿಂದ ದೇಶದ ರಫ್ತುದಾರರ ಹೊರೆ ಹೆಚ್ಚಾಗಲಿದೆ; ಈ ನಿಯಂತ್ರಣಾ ಕ್ರಮವನ್ನು ಇದೇ ತಿಂಗಳಲ್ಲಿ ಅಂತಿಮಗೊಳ್ಳಲಿರುವ ಭಾರತ–ಇಯು ಮುಕ್ತ ವ್ಯಾಪಾರ ಒಪ್ಪಂದದ ವೇಳೆ ಚರ್ಚಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ರಷ್ಯಾ ವಿರೋಧ: ಇಂಗಾಲದ ತೆರಿಗೆ ವ್ಯವಸ್ಥೆಯು ಅಂತರರಾಷ್ಟ್ರೀಯ ವ್ಯಾಪಾರದ ನಿಯಮಗಳಿಗೆ ವಿರುದ್ಧವಾಗಿದೆ ಎಂದು ರಷ್ಯಾ ಆಕ್ಷೇಪ ದಾಖಲಿಸಿದೆ. ಈ ವಿಚಾರವಾಗಿ ಅದು ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ಮೊರೆ ಹೋಗಿದೆ. ಐರೋಪ್ಯ ಒಕ್ಕೂಟದ ಕ್ರಮವನ್ನು ಚೀನಾ ಕೂಡ ವಿರೋಧಿಸಿದೆ. ಇದು 'ವ್ಯಾಪಾರದ ವಿಚಾರವಾಗಿ ಕೈಗೊಂಡಿರುವ ಏಕಪಕ್ಷೀಯ ಕ್ರಮ' ಎಂದು ಚೀನಾ ಹೇಳಿದೆ.

ಏನಿರಲಿದೆ ಭಾರತದ ನಡೆ?

ದೇಶದ ರಫ್ತು ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವ ಬಗೆಯಲ್ಲಿ ಬ್ರಿಟನ್ ದೇಶವು ಇಂಗಾಲದ ತೆರಿಗೆಯನ್ನು ವಿಧಿಸಿದ್ದೇ ಆದಲ್ಲಿ ಭಾರತವು 'ಪ್ರತಿಕ್ರಿಯಿಸಬೇಕಾಗುತ್ತದೆ, ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು 2024ರ ಜುಲೈನಲ್ಲಿ ಎಚ್ಚರಿಸಿದ್ದರು.

ಆದರೆ ಈಗ ಸಿಬಿಎಎಂ ನಿಯಮಗಳನ್ನು ಐರೋಪ್ಯ ಒಕ್ಕೂಟವು ಜಾರಿಗೆ ತಂದಿದೆ. ಕೇಂದ್ರವು ಈಗ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಗಮನಿಸಬೇಕಿದೆ.

ಬ್ರಿಟನ್ ದೇಶವು ಸಿಬಿಎಎಂ ನಿಯಮಗಳನ್ನು 2027ರಿಂದ ಜಾರಿಗೆ ತರುವ ನಿರೀಕ್ಷೆ ಇದೆ. ಐರೋಪ್ಯ ಒಕ್ಕೂಟದ ಸಿಬಿಎಎಂ ನಿಯಮಗಳ ಬಗ್ಗೆಯೂ ಪ್ರತಿಕ್ರಿಯೆ ನೀಡಿದ್ದ ಗೋಯಲ್ ಅವರು 'ಇದರಿಂದ ಒಕ್ಕೂಟಕ್ಕೇ ಹೆಚ್ಚಿನ ನಷ್ಟ ಆಗಲಿದೆ' ಎಂದು ಹೇಳಿದ್ದರು.

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದದ ವಿಚಾರವಾಗಿ ಮಾತುಕತೆ ನಡೆಯುತ್ತಿದೆ. ಸಿಬಿಎಎಂ ಬಗ್ಗೆಯೂ ಆ ಮಾತುಕತೆಗಳಲ್ಲಿ ಪ್ರಸ್ತಾಪ ಆಗುತ್ತದೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಗಳು ಈಚೆಗೆ ತಿಳಿಸಿದ್ದರು.

ರಾಷ್ಟ್ರೀಯ

'ಪರೀಕ್ಷಾ ಪೇ ಚರ್ಚಾ'ದ 9ನೇ ಆವೃತ್ತಿಗೆ 3 ಕೋಟಿ ನೋಂದಣಿ

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಾರ್ಷಿಕ 'ಪರೀಕ್ಷಾ ಪೇ ಚರ್ಚಾ'ದ ಒಂಬತ್ತನೇ ಆವೃತ್ತಿಯು ಈ ತಿಂಗಳಾಂತ್ಯದಲ್ಲಿ ನಡೆಯಲಿದ್ದು, ಇದರಲ್ಲಿ ಭಾಗವಹಿಸಲು ಇದುವರೆಗೆ ಮೂರು ಕೋಟಿಗೂ ಹೆಚ್ಚು ಮಂದಿ ನೋಂದಾಯಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಭಾಗ ವಹಿಸುವವರ ಆಯ್ಕೆಗಾಗಿ, ಡಿಸೆಂಬರ್ 1ರಿಂದ ಜನವರಿ 11ರವರೆಗೆ MyGov.in ಪೋರ್ಟಲ್‌ನಲ್ಲಿ ಬಹು ಆಯ್ಕೆಯ ಪ್ರಶ್ನೆಗಳೊಂದಿಗೆ ಆನ್‌ಲೈನ್‌ನಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ. 6ರಿಂದ 12ನೇ ತರಗತಿಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಸ್ಪರ್ಧೆಯಲ್ಲಿ ಭಾಗವಹಿಸಬಹುದು ಎಂದು ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪರೀಕ್ಷಾ ಪೇ ಚರ್ಚಾದ ಎಂಟನೇ ಆವೃತ್ತಿಯನ್ನು ಕಳೆದ ವರ್ಷ ಫೆಬ್ರುವರಿ 10ರಂದು ಪ್ರಸಾರ ಮಾಡಲಾಗಿತ್ತು. ರಾಷ್ಟ್ರ ರಾಜಧಾನಿಯ ಸುಂದರ್ ನರ್ಸರಿಯಲ್ಲಿ ಈ ಸಂವಾದವು ಹೊಸ ಸ್ವರೂಪದಲ್ಲಿ ನಡೆದಿತ್ತು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಿ ಶಾಲೆಗಳು, ಕೇಂದ್ರೀಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳು, ಸೈನಿಕ ಶಾಲೆಗಳು, ಏಕಲವ್ಯ ಮಾದರಿ ವಸತಿ ಶಾಲೆಗಳು ಮತ್ತು ಸಿಬಿಎಸ್‌ಇ ಶಾಲೆಗಳ 36 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ಆವೃತ್ತಿಯು ಕ್ರೀಡೆ, ಶಿಸ್ತು, ಮಾನಸಿಕ ಆರೋಗ್ಯ, ಪೋಷಣೆ, ತಂತ್ರಜ್ಞಾನ, ಹಣಕಾಸು, ಸೃಜನಶೀಲ ಮತ್ತು ಸಕಾರಾತ್ಮಕ ವಿಷಯಗಳನ್ನು ಒಳಗೊಂಡ ಏಳು ಪ್ರತ್ಯೇಕ ಸಂಚಿಕೆಗಳನ್ನು ಒಳಗೊಂಡಿದೆ. ಪ್ರಸಿದ್ಧ ವ್ಯಕ್ತಿಗಳಿಂದ ಸ್ಫೂರ್ತಿದಾಯಕ ಒಳನೋಟಗಳನ್ನು ನೀಡುತ್ತದೆ.

2025ರ 'ಪರೀಕ್ಷಾ ಪೇ ಚರ್ಚಾ'ದಲ್ಲಿ 245ಕ್ಕೂ ಹೆಚ್ಚು ದೇಶಗಳ ವಿದ್ಯಾರ್ಥಿಗಳು, 153 ದೇಶಗಳ ಶಿಕ್ಷಕರು ಮತ್ತು 149 ದೇಶಗಳ ಪೋಷಕರು ಭಾಗವಹಿಸಿದ್ದು, ಗಿನ್ನೆಸ್ ದಾಖಲೆ ನಿರ್ಮಿಸಿತ್ತು.

2018ರ ಮೊದಲ ಆವೃತ್ತಿಯಲ್ಲಿ 22 ಸಾವಿರ ಮಂದಿ ನೋಂದಾಯಿಸಿದ್ದರು. 2025ರ ಎಂಟನೇ ಆವೃತ್ತಿಯಲ್ಲಿ 3.56 ಕೋಟಿ ಮಂದಿ ನೋಂದಣಿ ಹಾಗೂ ದೇಶದಾದ್ಯಂತ ಜನಾಂದೋಲನ ಚಟುವಟಿಕೆಗಳಲ್ಲಿ 1.55 ಕೋಟಿ ಮಂದಿ ಭಾಗವಹಿಸಿದ್ದರು.

ವಯನಾಡ್: 300 ಮನೆ ಫೆಬ್ರುವರಿಯಲ್ಲಿ ಹಸ್ತಾಂತರ

ತಿರುವನಂತಪುರ (ಪಿಟಿಐ): ವಯನಾಡ್ ಭೂಕುಸಿತ ದುರಂತದ ಸಂತ್ರಸ್ತರಿಗೆ ಪುನರ್ವಸತಿ ಯೋಜನೆಯಡಿ ಸುಮಾರು 300 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಫೆಬ್ರುವರಿಯಲ್ಲಿ ಹಸ್ತಾಂತರಿಸುವ ಗುರಿ ಹೊಂದಲಾಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಗುರುವಾರ ತಿಳಿಸಿದರು.

ಇಲ್ಲಿನ ಮುಂಡಕ್ಕೈ ಮತ್ತು ಚೂರಲ್‌ಮಲ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿದ್ದರಿಂದ ಹಾನಿಗೊಳಗಾದ ಕುಟುಂಬಗಳಿಗೆ ಕಲ್ಪೆಟ್ಟ ಬೈಪಾಸ್ ಬಳಿಯ ಎಲ್‌ಸ್ಟನ್ ಎಸ್ಟೇಟ್ ಪ್ರದೇಶದಲ್ಲಿ 'ಟೌನ್‌ಶಿಪ್' ನಿರ್ಮಿಸಲಾಗುತ್ತಿದೆ. ಅದರ ಭಾಗವಾಗಿ ಈ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಈ ಯೋಜನೆಯು ತ್ವರಿತವಾಗಿ ಸಾಗುತ್ತಿದ್ದು, ಸುರಕ್ಷತೆ, ಗುಣಮಟ್ಟ ಮತ್ತು ದೀರ್ಘಕಾಲೀನ ಸುಸ್ಥಿರತೆಗೆ ಒತ್ತು ನೀಡಲಾಗಿದೆ. ಈ ಟೌನ್‌ಶಿಪ್‌ನಲ್ಲಿ 410 ಮನೆಗಳು ಬರಲಿದ್ದು, ಗೌರವಯುತ ಜೀವನ ನಡೆಸಲು ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಒಳಗೊಂಡಿರುತ್ತವೆ ಎಂದು ಅವರು ಸ್ಪಷ್ಟಪಡಿಸಿದರು.

ದೆಹಲಿ: 3ನೇ ತರಗತಿ ವಿದ್ಯಾರ್ಥಿಗಳಿಗೆ ಎಫ್‌ಎಲ್‌ಸಿ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಮೂರನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಮರ್ಥ್ಯ ಬಲಪಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ಮೂಲಭೂತ ಕಲಿಕಾ ಅಧ್ಯಯನ (ಎಫ್‌ಎಲ್‌ಸಿ) ನಡೆಸಲಿದೆ.

ಈ ಅಧ್ಯಯನವನ್ನು 2026ರ ಫೆಬ್ರುವರಿ–ಮಾರ್ಚ್‌ನಲ್ಲಿ ಆಯ್ದ ಮಾದರಿ ಶಾಲೆಗಳಲ್ಲಿ ನಡೆಸಲು ನಿರ್ಧರಿಸಲಾಗಿದೆ ಎಂದು ದೆಹಲಿ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎಸ್‌ಸಿಇಆರ್‌ಟಿ) ತಿಳಿಸಿದೆ.

ಮೂರನೇ ತರಗತಿ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಓದಲು, ಬರೆಯಲು ಮತ್ತು ಸಂಖ್ಯಾ ಕೌಶಲ್ಯಗಳನ್ನು ಅರ್ಥೈಸಿಕೊಂಡಿದ್ದಾರೆ, ಗ್ರಹಿಸಿದ್ದಾರೆ ಎಂಬುದನ್ನು ತಿಳಿಯಲು ಎಫ್‌ಎಲ್‌ಸಿಯನ್ನು ವಿನ್ಯಾಸಗೊಳಿಸಲಾಗಿದೆ. ಇದು ಎಸ್‌ಸಿಇಆರ್‌ಟಿ ಮತ್ತು ಎನ್‌ಸಿಇಆರ್‌ಟಿ ಸಹಯೋಗದ ಉಪಕ್ರಮವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನವಿಲೊಂದು ತನ್ನ ಕೊಕ್ಕಿನಲ್ಲಿ ಹೂವಿನ ಹಾರ ಹಿಡಿದಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅಯೋಧ್ಯೆಯ ರಾಮಮಂದಿರದಲ್ಲಿ ನವಿಲು ದೇವರ ವಿಗ್ರಹಕ್ಕೆ ಹೂವನ್ನು ಅರ್ಪಿಸಿತು ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಸಾಧನದೊಂದಿಗೆ ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಹಲವರು ಇದೇ ರೀತಿಯ ಪ್ರತಿಪಾದನೆಯೊಂದಿಗೆ ವಿಡಿಯೊ ಹಂಚಿಕೊಂಡಿರುವುದು ಕಂಡಿತು. ಜತೆಗೆ, ಆಶಿಶ್ ಸಕ್ಸೇನಾ (ash_saxena) ಎನ್ನುವವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ 2025ರ ಡಿ.29ರಂದು ಜಾಲತಾಣಗಳಲ್ಲಿರುವ ವಿಡಿಯೊವನ್ನೇ ಹೋಲುವ ವಿಡಿಯೊ ಹಂಚಿಕೊಂಡಿದ್ದರು. ಅದನ್ನು ಕೃತಕ ಬುದ್ಧಿಮತ್ತೆ (ಎಐ) ಮಾದರಿ ಅನುಸರಿಸಿ ಸೃಷ್ಟಿಸಿದ್ದಾಗಿ ಉಲ್ಲೇಖಿಸಿದ್ದರು. ಎಐ ನೆರವಿನಿಂದ ರೂಪಿಸಲಾದ ಇಂಥ ಹಲವು ವಿಡಿಯೊಗಳನ್ನು ಅವರು ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದರು. ಮುಂದುವರಿದು, ಎಐ ಪತ್ತೆ ಸಾಧನವಾದ ಹೈವ್ ಮಾಡರೇಷನ್ ಮೂಲಕ ಪರಿಶೀಲಿಸಿದಾಗ ವಿಡಿಯೊ ಎಐನಿಂದ ರೂಪಿಸಿರುವ ಸಾಧ್ಯತೆ ಶೇ 90ರಷ್ಟು ಇದೆ ಎನ್ನುವುದು ತಿಳಿಯಿತು. ಎಐ ವಿಡಿಯೊ ಅನ್ನು ವಾಸ್ತವಿಕ ಎಂದು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ತಿಳಿಸಿದೆ.

ನಾವೇ ಜವಾಬ್ದಾರರು

ನುಡಿ ಬೆಳಗು

ರೇಣುಕಾ ನಿಡಗುಂದಿ

ಕಾಲೇಜಿನಲ್ಲಿ ಓಶೋ ಹೊಸದಾಗಿ ಪ್ರಾಧ್ಯಾಪಕರಾಗಿ ನೇಮಕಗೊಂಡಾಗಿನ ಘಟನೆ. ಪಟ್ಟಣದಿಂದ ಕಾಲೇಜು ಸಾಕಷ್ಟು ದೂರದಲ್ಲಿದ್ದುದರಿಂದ ಪ್ರಾಧ್ಯಾಪಕರು ತಮ್ಮ ಊಟವನ್ನು ಜೊತೆಗೇ ತಂದು, ಉಣ್ಣಲು ಎಲ್ಲರೂ ಒಂದೇ ಮೇಜಿನ ಬಳಿ ಕುಳಿತುಕೊಳ್ಳುತ್ತಿದ್ದರು. ಅವರ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿ ತನ್ನ ಊಟದ ಡಬ್ಬಿಯನ್ನು ತೆರೆದು ಒಳಗೆ ನೋಡಿ, 'ಮತ್ತೆ ಆಲೂಗಡ್ಡೆ ಮತ್ತು ಚಪಾತಿ!' ಎಂದು ಸ್ವಗತದಲ್ಲಿ ಹೇಳಿಕೊಳ್ಳುತ್ತಾನೆ. ಇದನ್ನು ಕೇಳಿಸಿಕೊಂಡ ಓಶೋ ಬಹುಶಃ ಅವನಿಗೆ ಆಲೂಗಡ್ಡೆ ಮತ್ತು ಚಪಾತಿ ಇಷ್ಟವಿಲ್ಲ ಎಂದು ಭಾವಿಸುತ್ತಾರೆ.

ಆದರೆ, ಅವರು ಹೊಸಬರಾಗಿದ್ದರಿಂದ ಪ್ರತಿಕ್ರಿಯಿಸದೇ ಸುಮ್ಮನಿರುತ್ತಾರೆ. ಮರುದಿನ ಮತ್ತದೇ ಆಗುತ್ತದೆ. ಆ ಪ್ರಾಧ್ಯಾಪಕ ತನ್ನ ಊಟದ ಡಬ್ಬಿಯನ್ನು ತೆರೆದು ಒಳಗೆ ನೋಡಿ 'ಅದೇ ಆಲೂಗಡ್ಡೆ, ಅದೇ ಚಪಾತಿ!' ಎಂದು ನಿಟ್ಟುಸಿರು ಬಿಡುತ್ತಾನೆ.

ಹಾಗಾಗಿ ಓಶೋ ಆ ಪ್ರಾಧ್ಯಾಪಕರಿಗೆ, 'ನಿಮಗೆ ಆಲೂಗಡ್ಡೆ ಇಷ್ಟವಿಲ್ಲದಿದ್ದರೆ, ನಿಮ್ಮ ಹೆಂಡತಿಗೆ ಬೇರೆ ಏನಾದರೂ ಮಾಡಲು ಏಕೆ ಹೇಳಬಾರದು?' ಎಂದು ಕೇಳುತ್ತಾರಂತೆ.

ಆಗ ಅವರು, 'ಹೆಂಡತಿ! ಯಾವ ಹೆಂಡತಿ? ನನ್ನ ಅಡುಗೆಯನ್ನು ನಾನೇ ಮಾಡುತ್ತೇನೆ?' ಎಂದು ಉತ್ತರಿಸುತ್ತಾರೆ. ಅವರು ಬಯಸಿದ್ದರೆ ದಿನವೂ ಆಲೂಗಡ್ಡೆಯ ಬದಲು ಬೇರೆ ತರಕಾರಿಯನ್ನು ಮಾಡಬಹುದಿತ್ತು. ತಾವಾಗಿಯೇ ತಮ್ಮ ಅನುಕೂಲಕ್ಕೆ ತಕ್ಕಂತೆ ಬದುಕಿನ ನಿಯಮಗಳನ್ನು ರೂಪಿಸಿಕೊಂಡಿರುವಾಗ ದೂರುವುದಾದರೂ ಯಾರನ್ನು, ಅಲ್ಲವೇ?

ನಮ್ಮ ಆಫೀಸಿನಲ್ಲೊಬ್ಬ ಹರಿಂದರ್ ಎನ್ನುವ ಸಿಬ್ಬಂದಿ ಹಳ್ಳಿಯಿಂದ ಬರುತ್ತಿದ್ದ. ಬೇರೆಯವರೊಂದಿಗೆ ಹೆಚ್ಚು ಬೆರೆಯದ ಅವನು ಒಬ್ಬನೇ ಕುಳಿತು ಉಣ್ಣುತ್ತಿದ್ದ. ಸ್ವಲ್ಪ ಸಲುಗೆಯುಂಟಾದಾಗ ಅವನು ದಿನವೂ ಆಲೂಗಡ್ಡೆಯ ಪಲ್ಯವನ್ನೇ ತರುತ್ತಿದ್ದುದು ಗೊತ್ತಾಯಿತು. 'ಬೇರೆ ತರಕಾರಿ, ಸೊಪ್ಪು ತಿನ್ನಬೇಕು. ಬರೀ ಆಲೂಗಡ್ಡೆ ತಿನ್ನುವುದರಿಂದ ಏನು ಪೌಷ್ಟಿಕಾಂಶ ಸಿಗುತ್ತದೆ' ಎಂದು ಭಾಷಣ ಕೊರೆದಾಗ ಆತ ಅತ್ಯಂತ ದುಃಖಿತನಾಗಿ, 'ಹೌದು ಮೇಡಂ. ಆದರೆ ಏನು ಮಾಡುವುದು ನನ್ನ ಮಕ್ಕಳು ಆಲೂಗಡ್ಡೆ ಹೊರತಾಗಿ ಬೇರೆ ಯಾವ ತರಕಾರಿಯನ್ನೂ ತಿನ್ನುವುದಿಲ್ಲ. ಅವರಿಗಾಗಿ ನಾವೆಲ್ಲ ಆಲೂಗಡ್ಡೆಯನ್ನೇ ತಿನ್ನುತ್ತೇವೆ' ಎಂದು ಉತ್ತರಿಸಿದ. ಇದು ಆಲೂಗಡ್ಡೆಯ ಕತೆಯಷ್ಟೇ ಅಲ್ಲ; ನಮ್ಮ ಬದುಕಿನಲ್ಲಿ ನಾವು ಅನುಭವಿಸುವ ಸುಖದುಃಖಗಳೂ ಈ ಆಲೂಗಡ್ಡೆಯಂತೆ ನಾವೇ ಇಷ್ಟಪಟ್ಟು ಸೃಷ್ಟಿಸಿಕೊಂಡವೂ ಆಗಿರಬಹುದು. ಗೋಳಾಟ, ಗೊಣಗಾಟವೇ ಅಭ್ಯಾಸವಾಗಿಹೋಗಿರುವ ನಾವೇ ಅದರಿಂದ ಮುಕ್ತರಾಗಬಯಸುವುದಿಲ್ಲ.

ಶ್ರೀಕೃಷ್ಣ ಹೇಳುವಂತೆ, 'ಇದ್ದರೂ ಇಲ್ಲದಂತೆ, ಇಲ್ಲದಿದ್ದರೂ ಇದ್ದಂತೆ ಭಾವಿಸುತ್ತಾ ಪದ್ಮ ಪತ್ರಮಿವಾಂಬಸಿ– ತಾವರೆ ಎಲೆಯ ಮೇಲಿನ ನೀರ ಹನಿಯಂತಿರಬೇಕು'. ಅದು ಸಾಧ್ಯವೇ?

ಈ ಜೀವನ ನಿನ್ನದು. ಬೇರಾರೂ ಇಲ್ಲ. ನೀನು ನಗುತ್ತಿದ್ದರೆ, ನೀನು ನಗುತ್ತೀಯ; ಅಳುತ್ತಿದ್ದರೆ, ನೀನೊಬ್ಬನೇ ಅಳುತ್ತೀಯ. ಬೇರೆ ಯಾರೂ ಜವಾಬ್ದಾರರಲ್ಲ. ನಾವು ಏನೇ ಮಾಡಿದ್ದರೂ, ಏನೇ ಮಾಡುತ್ತಿದ್ದರೂ ಅಥವಾ ಏನೇ ಯೋಜನೆ ಹಾಕಿಕೊಂಡಿದ್ದರೂ ಅದು ನಮ್ಮಿಂದ ಹೊರತಾದದ್ದಲ್ಲ. ಅದು ನಮ್ಮದೇ ನಿರ್ಣಯ, ನಾವೇ ಸೃಷ್ಟಿಸಿಕೊಂಡ ಆಟ. ನಮ್ಮದೇ ಆಯ್ಕೆ. ನಾವು ಆನಂದದಿಂದಿದ್ದರೆ ಅದು ನಮ್ಮದೇ ಆಯ್ಕೆ. ನಾವು ನಮ್ಮ ಆಯ್ಕೆಯಿಂದ ದುಃಖಿಯಾಗಿದ್ದರೆ ಅಥವಾ ನಮ್ಮ ಆಯ್ಕೆಗಳಿಂದ, ನಿರ್ಣಯಗಳಿಂದ ಬೇಸತ್ತಿದ್ದರೆ, ಬಳಲಿದ್ದರೆ ಅದಕ್ಕೆಲ್ಲ ಜವಾಬ್ದಾರರು ನಾವೇ. ❖

ಗುಂಡಣ್ಣ

ಪದಬಂಧ 6272

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪುಷ್ಪದ ಸಿಹಿರಸದೊಡಗೂಡಿದ ತಿಂಗಳು (4)
3.ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು (4)
5.ಸಿರಿತನದ ವಿರುದ್ಧ ಪದ (4)
7.ಮಣ ಭಾರವಿರುವ ನಲ್ಲ! (3)
8.ಈತ ಅರಣ್ಯವನ್ನು ಕಾಪಾಡುವವ (5)
11.ಕದದ ಬಳಿಯಿರಿಸಿದ ನೀರು (3)
12.ದೇವಸ್ಥಾನದ ಸಭಾಮಂಟಪ (4)
14. ಒಂದೇ ಸಾಲಿನಲ್ಲಿರುವುದು (4)
15.ಈತ ಗುರುತುಳ್ಳವನು (4)

ಮೇಲಿಂದ ಕೆಳಕ್ಕೆ

1.ಮನಸ್ಸಿನ ಶಕ್ತಿಯಿದು (4)
2.ಗಜಪಡೆಯನ್ನು ನಡೆಸುವಾತ (3)
4.ನೀರಿನ ಅಧಿದೇವತೆ (3)
6.ನಯನಕ್ಕೆ ಕಂಡದ್ದು ಬಲು ಹೊಸತು! (3)
7.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
8.ವರ್ತಮಾನ ತಿಳಿಸಿದ ವ್ಯಾಪಾರಿ (3)
9.ಶುನಕ ಮೂಸಿದ ಬೆಳ್ಳುಳ್ಳಿ! (3)
10.ಅಜಗಜಾಂತರದಲ್ಲೇ ಮನ್ಮಥನಿದ್ದಾನೆ (4)
11.ಸಲ್ಲಾಪ ತೋರುವಾಗಿನ ಸಂತೋಷ (3)
13.ವೈರಿಯಲ್ಲಿಯೇ ಈಕೆ ಬಿಂಕ ತೋರುತ್ತಿಹಳಲ್ಲಾ? (3)



6271ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುಗಮ 3.ಮಹಾನವಮಿ 5.ದುಬಾರಿ 6.ವಿರಾಮ 7.ಸುರ 8.ಗಗನಕುಸುಮ 10.ಉತ್ತರಕನ್ನಡ 12.ಜಾಡು 13.ಕಾಯಕ 15.ಸಫಾಯಿ 16.ಪಡಿಯರ3 17.3ಕ್ಕಲು

ಮೇಲಿಂದ ಕೆಳಕ್ಕೆ:
1.ಸುಕವಿ 2.ಮದುಮಗ 3.ಮರಿ 4.ವನಸುಮ 9.ನಡುಕ 10.ಉಡುತಡಿ 11.ಡಕಾಯಿ3 14.ಕನಲು 15.ಸ3

ಸುಡೊಕು 6656

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	1				5	4		9
4		7	6				5	
	6				8	1		
	2				7			6
5		1		6			2	
			5				1	7
	3	9				6		
6			8		4		3	
		4		3		2		5

6655 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

2 ಜನವರಿ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಚತುರ್ದಶಿ ಗಂ 18-54 ನಕ್ಷತ್ರ: ಮೃಗಶಿರ ಗಂ 20-04 ಯೋಗ: ಶುಕ್ಲ (ಶುಕ್ರ) ಗಂ. 13-07 ಕರಣ: ಗರ ಗಂ. 8-38 ಧನು ಮಾಸದ 18 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-58 ಸೂರ್ಯಾಸ್ತ : 06-12, ಮುಸ್ಲಿಂ ದಿನಾಂಕ : 12 ರಜಬ್, ಅದೃಷ್ಟ ಸಂಖ್ಯೆ : 9, 7

ಮೇಷ: ಅಸಾಧ್ಯ ಕಾರ್ಯಗಳನ್ನೂ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಇಷ್ಟಮಿತ್ರರಿಂದ ಸಕಾಲದಲ್ಲಿ ಸಹಕಾರ ಒದಗಿ ಬರಲಿದೆ. ವರ್ತಕ ವರ್ಗಕ್ಕೆ ಬಿಡುವು ಸಿಕ್ಕೀತು. ದೇವತಾ ಕಾರ್ಯಗಳಿಗೆ ಪ್ರಯಾಣ ಮಾಡಲಿದ್ದೀರಿ.

ವೃಷಭ: ಉದ್ಯೋಗದಲ್ಲಿ ರಾಸಾಯನಿಕ ಪದಾರ್ಥಗಳ ಬಳಕೆ ಮಾಡುವವರು ಜಾಗ್ರತರಾಗಿರಿ. ಬುದ್ಧಿವಂತಿಕೆಯ ಬಲದಿಂದ ಶತ್ರುಗಳ ಬಾಧೆಯನ್ನು ಉಪ ಶಮನಗೊಳಿಸಿಕೊಳ್ಳುವ ಮಾರ್ಗವನ್ನು ಹುಡುಕಿರಿ.

ಮಿಥುನ: ನಾಟಕ ಹಾಗೂ ಸಿನಿಮಾ ರಂಗದಲ್ಲಿ ಕೆಲಸ ನಿರ್ವಹಿಸುವವರಿಗೆ ಯಶಸ್ಸು ಇದ್ದು ಪ್ರೋತ್ಸಾಹಗಳು ದೊರೆತು ಸಮಾಜದಲ್ಲಿ ಸ್ಥಾನಮಾನಗಳಿಂದ ಉನ್ನತ ಸ್ಥಿತಿಗೆ ಬರುವಿರಿ. ಕಾರ್ಮಿಕ ವರ್ಗದವರ ಬೇಡಿಕೆಗಳು ಈಡೇರಲಿವೆ.

ಕರ್ಕಾಟಕ: ಕ್ರಮಿಸಿ ಬಂದ ದಾರಿಯನ್ನು ಅವಲೋಕಿಸಿದಲ್ಲಿ ತಲುಪಬೇಕೆಂದಿರುವ ಗುರಿ ದೂರವಿಲ್ಲವೆಂಬ ವಿಚಾರದಿಂದ ಉತ್ಸಾಹ ಹೊಂದುವಿರಿ. ಸ್ವಶಕ್ತಿಯಿಂದ ಜೀವನದಲ್ಲಿ ಮುಂಬರುವ ದಾರಿಯನ್ನು ಆರಿಸಿಕೊಳ್ಳಿ.

ಸಿಂಹ: ಪ್ರೀತಿಸುವವರ ಮಾರ್ಗದರ್ಶನದಿಂದ ಜೀವನದಲ್ಲಿನ ನಿರುತ್ಸಾಹವು ದೂರಾಗಲಿದೆ. ವೈಯಕ್ತಿಕ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವ ಸಂಭವವಿದೆ. ಪ್ರಾಧ್ಯಾಪಕರಿಗೆ ಮತ್ತು ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಶುಭದಿನ.

ಕನ್ಯಾ: ಗೃಹ ನಿರ್ಮಾಣ ಕಾರ್ಯವು ಆಮೆಯ ವೇಗದಲ್ಲಿ ಸಾಗುವುದರಿಂದ ಮನಸ್ಸಿಗೆ ತುಸು ತಳವಳ, ಹೆದರಿಕೆ, ಆತಂಕ ಮೂಡಲಿವೆ. ಸಾಧು ಸಂತರ ಅಥವಾ ಪೀಠಾಧಿಪತಿಗಳ ದರ್ಶನ ಆಕಸ್ಮಿಕವಾಗಿ ಸಿಗಲಿದೆ.

ತುಲಾ: ಉತ್ತಮ ಸಂಸ್ಕೃತಿಯನ್ನು ಪಡೆದಿರುವ ಕೆಲಸ ಕಾರ್ಯಗಳಲ್ಲಿ ಖಂಡಿತವಾಗಿ ಜಯ ಸಿಗುವುದು. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರ ಪಠಣೆ ಶ್ರೇಯಸ್ಕರ.

ವೃಶ್ಚಿಕ: ಅಸಹಾಯಕ ಪರಿಸ್ಥಿತಿಯಲ್ಲಿರುವ ಪರಿಣತರ ಸಲಹೆಗಳೊಂದಿಗೆ ಗಣಪತಿಯ ಆರಾಧನೆಯಿಂದ ಮುಂದುವರಿದರೆ ಪರಿಸ್ಥಿತಿ ತಿಳಿಯಾಗುತ್ತದೆ. ಕೋರ್ಟು ವ್ಯವಹಾರಗಳನ್ನು ಶಾಂತ ರೀತಿಯಲ್ಲಿ ಬಗೆಹರಿಸಿಕೊಳ್ಳುವಿರಿ.

ಧನು: ಕಾರ್ಯಕ್ಷೇತ್ರದಲ್ಲಿ ಎಚ್ಚರ ವಹಿಸದೆ ಅತಿ ವಿಶ್ವಾಸದಿಂದ ಮುಂದುವರಿದರೆ ಮೇಲಧಿಕಾರಿಗಳಿಂದ ಮುಖಭಂಗವಾಗಬಹುದು. ಮನೆಯವರಿಗೆ ನಿರ್ಧಾರವನ್ನು ಸ್ಪಷ್ಟ ಹಾಗೂ ಮೃದು ಮಾತುಗಳಲ್ಲಿ ತಿಳಿಸಿ.

ಮಕರ: ಮಹಿಳೆಯರಿಗೆ ತವರಿನವರ ಆಗಮನವು ಅತೀವ ಸಂತೋಷಕ್ಕೆ ಕಾರಣವಾಗುವುದು. ಶತ್ರುಗಳ ಬಣ್ಣ ಬಯಲಾಗುವುದು. ಅಡಿಕೆ ಬೆಳೆಗಾರರು ದಾಸ್ತಾನು ಬೆಳೆಯಿಂದ ಲಾಭವನ್ನು ಹೊಂದುವಿರಿ. ಹಲ್ಲಿನ ಆರೋಗ್ಯ ಗಮನಿಸಿ.

ಕುಂಭ: ಸಾಂಸಾರಿಕ ಸಮಸ್ಯೆಗಳಿಂದ ವೃತ್ತಿಯಲ್ಲಿ ಬಿಡುವು ಮಾಡಿಕೊಳ್ಳಬೇಕಾದ ಸಂದರ್ಭ ಎದುರಾಗಬಹುದು. ಮಗನ ಮುಂದಿನ ಓದಿನ ವಿಷಯ ಕುಟುಂಬದಲ್ಲಿ ಚರ್ಚೆಗೆ ಬರುವುದು. ಅವಿವಾಹಿತರಿಗೆ ಕಂಕಣ ಭಾಗ್ಯ ಇದೆ.

ಮೀನ: ರಾಜಕಾರಣಿಗಳು ಸಮಯವನ್ನು ಸಾಮಾಜಿಕ ಹಿತಾಸಕ್ತಿಗಾಗಿ ಕಳೆಯಬೇಕಾಗುವುದು. ಅನ್ನದಾನ ಮಾಡುವ ಯೋಚನೆಗಳು ಬರಲಿವೆ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	26,129
ಇಂದಿನ ಅಂತ್ಯ:	26,146
ದಿನದ ಗರಿಷ್ಠ:	26,197
	16

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹705
12 ಕ್ಕೆ	₹96
ಮೈಸೂರು: 100 ಕ್ಕೆ	₹706

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹176
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹455-748
ದ್ವಿತಳಿ (ಬಿ.ವಿ)	₹280-899

ಮುದ್ರೆಮನೆ ಕಾಫಿ

ಎಪಿ	₹26700
ಎಸಿ	₹14560
ಆರ್‌ಪಿ	₹16500
ಆರ್‌ಸಿ	₹9675

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1580 (1590)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1485 (1490)
ಪಾಮೋಲಿನ್	₹1245 (1250)

ಜಿಎಸ್‌ಟಿ: ₹1.74 ಲಕ್ಷ ಕೋಟಿ ಸಂಗ್ರಹ

ಮರುಪಾವತಿಯಲ್ಲಿ ಶೇ 31ರಷ್ಟು ಹೆಚ್ಚಳ ● ಸೆಸ್ ಸಂಗ್ರಹದಲ್ಲಿ ಇಳಿಕೆ: ಕೇಂದ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಡಿಸೆಂಬರ್ ತಿಂಗಳಿನಲ್ಲಿ ₹1,74,550 ಕೋಟಿ ವರಮಾನ ಸಂಗ್ರಹವಾಗಿದೆ.

2024ರ ಡಿಸೆಂಬರ್‌ನಲ್ಲಿ ₹1.64 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ 2025ರ ಡಿಸೆಂಬರ್‌ನ ವರಮಾನ ಸಂಗ್ರಹ ಶೇ 6.1ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರದ ಅಂಕಿ–ಅಂಶಗಳು ಗುರುವಾರ ತಿಳಿಸಿವೆ. ನವೆಂಬರ್‌ನಲ್ಲಿ ₹1.70 ಲಕ್ಷ ಕೋಟಿ ಸಂಗ್ರಹವಾಗಿತ್ತು.

ಒಟ್ಟು ಜಿಎಸ್‌ಟಿ ಸಂಗ್ರಹದ ಪೈಕಿ, ದೇಶದ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನವು ಶೇ 1.2ರಷ್ಟು ಏರಿಕೆ ಕಂಡಿದ್ದು, ₹1.22 ಲಕ್ಷ ಕೋಟಿಯಾಗಿದೆ. ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನವು ₹51,977 ಕೋಟಿಯಾಗಿದ್ದು, ಶೇ 19.7ರಷ್ಟು ಏರಿಕೆಯಾಗಿದೆ.

ಜಿಎಸ್‌ಟಿ ಮರುಪಾವತಿಯಲ್ಲಿ ಶೇ 31ರಷ್ಟು ಹೆಚ್ಚಳವಾಗಿದ್ದು, ₹28,980 ಕೋಟಿಯಾಗಿದೆ. ನಿವ್ವಳ ಜಿಎಸ್‌ಟಿ ಸಂಗ್ರಹವು ₹1.45 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

2024ರ ಡಿಸೆಂಬರ್‌ನಲ್ಲಿ ಸೆಸ್ ಮೂಲಕ ₹12,003 ಕೋಟಿ ಸಂಗ್ರಹವಾಗಿತ್ತು. ಅದು ಕಳೆದ ಡಿಸೆಂಬರ್‌ನಲ್ಲಿ ₹4,238 ಕೋಟಿಗೆ ಇಳಿದಿದೆ.

ಜಿಎಸ್‌ಟಿ ಮಂಡಳಿಯು ಸೆಪ್ಟೆಂಬರ್ 22ರಂದು ಜಿಎಸ್‌ಟಿ ದರ ಪರಿಷ್ಕರಣೆ ಮಾಡಿತು. ಇದರಿಂದ ಹಲವು ಸರಕುಗಳ ಬೆಲೆ ಕಡಿಮೆ ಆಯಿತು. ಇದು ವರಮಾನ ಸಂಗ್ರಹ ಇಳಿಕೆಗೆ ಕಾರಣವಾಗಿದೆ. ನವೆಂಬರ್ ತಿಂಗಳಿಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ವರಮಾನ ಸಂಗ್ರಹದಲ್ಲಿ ಏರಿಕೆ ಕಂಡುಬಂದಿದೆ.

‘ಪ್ರಸಕ್ತ ಆರ್ಥಿಕ ವರ್ಷದ ಮೊದಲ ಆರು ತಿಂಗಳಿನಲ್ಲಿ ಜಿಎಸ್‌ಟಿ ಸಂಗ್ರಹವು ಸದೃಢವಾಗಿತ್ತು. ಆದರೆ, ಜಿಎಸ್‌ಟಿ ದರ ಪರಿಷ್ಕರಣೆಯ ಬಳಿಕ ಸಂಗ್ರಹದ ಪ್ರಮಾಣವು ಇಳಿಕೆ ಕಂಡಿದೆ’ ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ಎಂ.ಎಸ್. ಮಣಿ ಹೇಳಿದ್ದಾರೆ.

‘ಮಹಾರಾಷ್ಟ್ರ, ಗುಜರಾತ್, ಕರ್ನಾಟಕ ಮತ್ತು ಹರಿಯಾಣ ಜಿಎಸ್‌ಟಿ ಸಂಗ್ರಹಕ್ಕೆ ಹೆಚ್ಚಿನ ಕೊಡುಗೆ ನೀಡಿವೆ’ ಎಂದು ಗ್ರಾಂಟ್ ಥಾರ್ನ್‌ಟನ್ ಭಾರತ್ ಪಾಲುದಾರ ಮನೋಜ್ ಮಿಶ್ರಾ ಹೇಳಿದ್ದಾರೆ.

ದೇಶದಲ್ಲಿ ಜಿಎಸ್‌ಟಿ ಸಂಗ್ರಹ (₹ಲಕ್ಷ ಕೋಟಿಗಳಲ್ಲಿ)



ಕರ್ನಾಟಕದಲ್ಲಿ ಜಿಎಸ್‌ಟಿ ಸಂಗ್ರಹ (₹ ಕೋಟಿಗಳಲ್ಲಿ)



ಕರ್ನಾಟಕದಲ್ಲಿ ಶೇ 5ರಷ್ಟು ಬೆಳವಣಿಗೆ

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. 2024ರ ಡಿಸೆಂಬರ್‌ನಲ್ಲಿ ₹6,389 ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಇದು 2025ರ ಡಿಸೆಂಬರ್‌ನಲ್ಲಿ ₹6,716 ಕೋಟಿಗೆ ಏರಿಕೆಯಾಗಿದ್ದು, ಶೇ 5ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

ಮಹಾರಾಷ್ಟ್ರವು ಅತಿ ಹೆಚ್ಚು, ₹16,140 ಕೋಟಿ ಜಿಎಸ್‌ಟಿ ಸಂಗ್ರಹಿಸಿದ ರಾಜ್ಯ ಎನಿಸಿದೆ. ಜಿಎಸ್‌ಟಿ ಸಂಗ್ರಹ ಬೆಳವಣಿಗೆ ದರ ಶೇ 15ರಷ್ಟಿದೆ. ಉತ್ತರಪ್ರದೇಶದಲ್ಲಿ ₹6,671 ಕೋಟಿ ಮತ್ತು ಗುಜರಾತ್‌ನಲ್ಲಿ ₹6,351 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ.

ಸುದ್ದಿ 2 ನಿಮಿಷ

ವಾಣಿಜ್ಯ ಸಿಲಿಂಡರ್ ₹111 ಹೆಚ್ಚಳ

ನವದೆಹಲಿ (ಪಿಟಿಐ): ವಾಣಿಜ್ಯ ಉದ್ದೇಶಕ್ಕೆ ಬಳಸುವ ಎಲ್‌ಪಿಜಿ ಸಿಲಿಂಡರ್ ದರ ₹111 ಹೆಚ್ಚಳವಾಗಿದ್ದರೆ, ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ಬೆಲೆ ಶೇ 7.3ರಷ್ಟು ಇಳಿಕೆಯಾಗಿದೆ.

ಪರಿಷ್ಕೃತ ದರವು ಗುರುವಾರದಿಂದ ಜಾರಿಗೆ ಬಂದಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ.

ನವದೆಹಲಿಯಲ್ಲಿ 19 ಕೆ.ಜಿ ತೂಕದ ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ₹111 ಹೆಚ್ಚಳವಾಗಿದ್ದು, ₹1,691.50ಕ್ಕೆ ತಲುಪಿದೆ.

ದೆಹಲಿಯಲ್ಲಿ ವಿಮಾನ ಇಂಧನ ದರವು ಪ್ರತಿ ಕಿಲೋ ಲೀಟರ್‌ಗೆ (ಒಂದು ಸಾವಿರ ಲೀಟರ್) ₹7,353 ಕಡಿಮೆಯಾಗಿ ₹92,323 ಆಗಿದೆ.

ಸ್ಥಳೀಯ ಮಾರಾಟ ತೆರಿಗೆ ಅಥವಾ ವ್ಯಾಟ್‌ಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಮಾರಾಟ ದರದಲ್ಲಿ ವ್ಯತ್ಯಾಸ ಇರುತ್ತದೆ.

14.2 ಕೆ.ಜಿ ತೂಕದ ಗೃಹ ಬಳಕೆಯ ಅಡುಗೆ ಅನಿಲ ದರ ಯಥಾಸ್ಥಿತಿಯಲ್ಲಿದ್ದು, ₹853 ಇದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ದರ, ವಿದೇಶಿ ವಿನಿಮಯ ದರಕ್ಕೆ ಅನುಗುಣವಾಗಿ ತೈಲ ಮಾರಾಟ ಕಂಪನಿಗಳು ಪ್ರತಿ ತಿಂಗಳು ಈ ದರ ಪರಿಷ್ಕರಣೆ ಮಾಡುತ್ತವೆ.

ಸಿಎನ್‌ಜಿ ದರ ಇಳಿಕೆ: ಗೇಲ್ ಗ್ಯಾಸ್ ಲಿಮಿಟೆಡ್ ಸಾಂದ್ರೀಕೃತ ನೈಸರ್ಗಿಕ ಅನಿಲ (ಸಿಎನ್‌ಜಿ) ಮತ್ತು ಕೊಳವೆ ಮೂಲಕ ಅಡುಗೆ ಮನೆಗಳಿಗೆ ಪೂರೈಸುವ ಅನಿಲ (ಪಿಎನ್‌ಜಿ) ದರವನ್ನು ಪ್ರತಿ ಕೆ.ಜಿಗೆ ₹1ರಷ್ಟು ಇಳಿಕೆ ಮಾಡಿದೆ.

₹24,903 ಕೋಟಿ ಸಾಲ ವಿತರಣೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕೇತರ ಹಣಕಾಸು ಸಂಸ್ಥೆ ‘ಭಾರತೀಯ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಏಜೆನ್ಸಿ’ (ಐಆರ್‌ಇಡಿಎ) ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ₹24,903 ಕೋಟಿ ಸಾಲ ನೀಡಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಐಆರ್‌ಇಡಿಎ ₹17,236 ಕೋಟಿ ಸಾಲ ನೀಡಿತ್ತು. ಇದಕ್ಕೆ ಹೋಲಿಸಿದರೆ ಸಾಲ ನೀಡಿಕೆ ಪ್ರಮಾಣದಲ್ಲಿ ಶೇ 44ರಷ್ಟು ಹೆಚ್ಚಳವಾಗಿದೆ ಎಂದು ಅದು ಗುರುವಾರ ತಿಳಿಸಿದೆ. ಸಾಲದ ಮಂಜೂರಾತಿಯಲ್ಲಿ ಶೇ 29ರಷ್ಟು ಹೆಚ್ಚಳವಾಗಿದ್ದು, ₹40,100 ಕೋಟಿಯಾಗಿದೆ ಎಂದು ತಿಳಿಸಿದೆ.

‘ಐಆರ್‌ಇಡಿಎ ಸಾಲ ನೀಡಿಕೆ ಪ್ರಮಾಣವು ಡಿಸೆಂಬರ್ ವೇಳೆಗೆ ನವೀಕರಿಸಬಹುದಾದ ಇಂಧನ ವಲಯದಲ್ಲಿ ನಿರಂತರವಾಗಿ ಹೆಚ್ಚಳ ಕಂಡಿದೆ. ಇದು ದೇಶದ ಹಸಿರು ಇಂಧನ ಬೆಳವಣಿಗೆಯಲ್ಲಿ ಐಆರ್‌ಇಡಿಎ ವಹಿಸಿರುವ ಪ್ರಮುಖ ಪಾತ್ರವನ್ನು ಪ್ರತಿಬಿಂಬಿಸುತ್ತದೆ’ ಎಂದು ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಕುಮಾರ್ ದಾಸ್ ಹೇಳಿದ್ದಾರೆ.

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ
90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
https://bit.ly/40dPCqy

ಜೊಹ್ರಾನ್ ಮಮ್ದಾನಿ ಅಧಿಕಾರ ಸ್ವೀಕಾರ

ನ್ಯೂಯಾರ್ಕ್ ಮೇಯರ್ ಆಗಿ ಕುರಾನ್ ಮೇಲೆ ಕೈಯಿಟ್ಟು ಪ್ರಮಾಣವಚನ

ನ್ಯೂಯಾರ್ಕ್ (ಪಿಟಿಐ): ಭಾರತ ಸಂಜಾತ ಜೊಹ್ರಾನ್ ಮಮ್ದಾನಿ ಅವರು ಹೊಸ ವರ್ಷದ ಮೊದಲ ದಿನದಂದು ನ್ಯೂಯಾರ್ಕ್‌ನ 112ನೇ ಮೇಯರ್ ಆಗಿ ಪ್ರಮಾಣವಚನ ಸ್ವೀಕರಿಸಿದರು.

34 ವರ್ಷದ ಅವರು ಅಮೆರಿಕದ ಅತಿ ದೊಡ್ಡ ನಗರದ ‘ಪ್ರಥಮ ಪ್ರಜೆ’ಯಾಗಿ ಅಧಿಕಾರ ವಹಿಸಿಕೊಂಡ ಮೊದಲ ಮುಸ್ಲಿಂ ಹಾಗೂ ದಕ್ಷಿಣ ಏಷ್ಯಾದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಬುಧವಾರ ಮಧ್ಯರಾತ್ರಿ ನ್ಯೂಯಾರ್ಕ್ ನಗರದಲ್ಲಿ ಹೊಸ ವರ್ಷದ ಸಂಭ್ರಮ ಆರಂಭವಾಗುತ್ತಿದ್ದಂತೆಯೇ ಓಲ್ಡ್ ಸಿಟಿ ಹಾಲ್ ಸಬ್‌ವೇ ಸ್ಟೇಷನ್‌ನಲ್ಲಿ ನಡೆದ ಖಾಸಗಿ ಸಮಾರಂಭದಲ್ಲಿ ಅವರು ಕುರಾನ್ ಪ್ರತಿಯ ಮೇಲೆ ಕೈಯಿಟ್ಟು ಪ್ರಮಾಣ ವಚನ ಸ್ವೀಕರಿಸಿದರು.

ನ್ಯೂಯಾರ್ಕ್ ಅಟಾರ್ನಿ ಜನರಲ್ ಲೆಟಿಟಿಯಾ ಜೇಮ್ಸ್ ಪ್ರಮಾಣ ಬೋಧಿಸಿದರು. ಈ ಖಾಸಗಿ ಸಮಾರಂಭದಲ್ಲಿ ಮಮ್ದಾನಿ ಅವರ ಪತ್ನಿ ರಮಾ ದುವಾಜಿ, ಕುಟುಂಬ ಸದಸ್ಯರು ಮತ್ತು ಆಪ್ತರು ಪಾಲ್ಗೊಂಡರು.

ಜೊಹ್ರಾನ್ ಮಮ್ದಾನಿ ಅವರು ಮೇಯರ್ ಆಗಿ ಪ್ರಮಾಣ ವಚನ ಸ್ವೀಕರಿಸಿದರು. ಪತ್ನಿ ರಮಾ ದುವಾಜಿ (ಬಲ) ಹಾಗೂ ನ್ಯೂಯಾರ್ಕ್ ಅಟಾರ್ನಿ ಜನರಲ್ ಲೆಟಿಟಿಯಾ ಜೇಮ್ಸ್ (ಎಡ) ಪಾಲ್ಗೊಂಡಿದ್ದರು –ಎಎಫ್‌ಪಿ ಚಿತ್ರ

ಮೇಯರ್ ಅವರ ಕಚೇರಿಯಿರುವ ಸಿಟಿ ಹಾಲ್ ಹೊರಗೆ ಬೃಹತ್ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅಲ್ಲಿ ಅವರು ಎರಡನೇ ಬಾರಿಗೆ ಪದಗ್ರಹಣ ಮಾಡಿದರು.

ತಮ್ಮ ಪ್ರಮಾಣವಚನ ಸ್ವೀಕಾರ ಸಮಾರಂಭವು ‘ನಗರದ ಹೊಸ ಯುಗದ ಆರಂಭವನ್ನು ಸೂಚಿಸುತ್ತದೆ ಮತ್ತು ನ್ಯೂಯಾರ್ಕ್‌ನ ಕಾರ್ಮಿಕ ವರ್ಗವನ್ನು ಮುಂಚೂಣಿಗೆ ತಂದು ನಿಲ್ಲಿಸಲಿದೆ’ ಎಂದು ಮಮ್ದಾನಿ ಈ ಹಿಂದೆ ಹೇಳಿದ್ದರು.

ಜೊಹ್ರಾನ್ ಅವರು ಭಾರತದ ಸಿನಿಮಾ ನಿರ್ದೇಶಕಿ, ನಿರ್ಮಾಪಕಿ ಮೀರಾ ನಾಯರ್ ಮತ್ತು ಪ್ರೊ. ಮಹಮದ್ ಮಮ್ದಾನಿ ಅವರ ಪುತ್ರ. ಅವರು ಜನಿಸಿದ್ದು ಉಗಾಂಡಾದ ಕಂಪಾಲದಲ್ಲಿ. ಅವರಿಗೆ 7 ವರ್ಷ ಆಗಿದ್ದಾಗ ಕುಟುಂಬವು ನ್ಯೂಯಾರ್ಕ್‌ಗೆ ವಲಸೆ ಬಂದು ನೆಲಸಿತ್ತು. ಮಮ್ದಾನಿ ಅವರಿಗೆ 2018ರಲ್ಲಿ ಅಮೆರಿಕದ ಪೌರತ್ವ ಲಭಿಸಿತ್ತು.

ಮೇಯರ್ ಸ್ಥಾನಕ್ಕೆ ನವೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಅವರು ನ್ಯೂಯಾರ್ಕ್‌ನ ಮಾಜಿ ಗವರ್ನರ್, ಪ್ರಭಾವಿ ರಾಜಕೀಯ ಮುಖಂಡ ಆ್ಯಂಡ್ರ್ಯೂ ಕೌಮೊ, ರಿಪಬ್ಲಿಕನ್ ಅಭ್ಯರ್ಥಿ ಕರ್ಟಿಸ್ ಸ್ಲಿವಾ ಅವರನ್ನು ಸೋಲಿಸಿದ್ದರು.

ಮುಖ್ಯಾಂಶಗಳು

- ನ್ಯೂಯಾರ್ಕ್‌ನ 112ನೇ ಮೇಯರ್
- ಈ ಹುದ್ದೆಗೇರಿದ ದಕ್ಷಿಣ ಏಷ್ಯಾದ ಮೊದಲ ವ್ಯಕ್ತಿ
- ಸಮಾರಂಭದಲ್ಲಿ ಕುಟುಂಬ ಸದಸ್ಯರು, ಆಪ್ತರು ಭಾಗಿ

ಜನವರಿ ಅಂತ್ಯಕ್ಕೆ ‘ಭಾರತ್ ಟ್ಯಾಕ್ಸಿ’

ನವದೆಹಲಿ (ಪಿಟಿಐ): ‘ಜನವರಿ ಅಂತ್ಯದ ವೇಳೆಗೆ ‘ಭಾರತ್ ಟ್ಯಾಕ್ಸಿ’ ಸೇವೆಯನ್ನು ದೆಹಲಿ ಸೇರಿದಂತೆ ಇತರೆ ನಗರಗಳಲ್ಲಿ ಆರಂಭಿಸಲಾಗುವುದು’ ಎಂದು ಕೇಂದ್ರ ಸಹಕಾರ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಪಂಕಜ್ ಕುಮಾರ್ ಬನ್ಸಲ್ ಹೇಳಿದ್ದಾರೆ.

ಸಹಕಾರ ವ್ಯವಸ್ಥೆಯ ಅಡಿಯಲ್ಲಿ ಕೆಲಸ ನಿರ್ವಹಿಸುವ ‘ಭಾರತ್ ಟ್ಯಾಕ್ಸಿ’ ಆ್ಯಪ್ ಅನ್ನು ದೆಹಲಿಯಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿತ್ತು. ಸಹಕಾರ ಟ್ಯಾಕ್ಸಿ ಕೋ–ಆಪರೇಟಿವ್ ಲಿಮಿಟೆಡ್ ಈ ಆ್ಯಪ್ ಅನ್ನು ನಿರ್ವಹಿಸಲಿದೆ.

ಈ ಪ್ರಾಯೋಗಿಕ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೀಗಾಗಿ ಅಧಿಕೃತ ಸೇವೆಗೆ ಈ ತಿಂಗಳ ಅಂತ್ಯದ ವೇಳೆಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಈ ಆ್ಯಪ್‌ನಲ್ಲಿ ಈಗಾಗಲೇ 1.4 ಲಕ್ಷಕ್ಕೂ ಅಧಿಕ ಚಾಲಕರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1500-2700
ಮಧ್ಯಮ	₹1000-1500
ಸಣ್ಣ	₹200-1000

ಮುಂಬೈ ಧಾರಣೆ (ಶೇಂಗಾ) 01-01-2026

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1600)
ಒಂದು ವಾರದ ಡೆಲಿವರಿ	1585 (1595)
ಪಾಮ್ ವಾರದ ಡೆಲಿವರಿ	1243 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1425 (1430)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,32,900 (1,33,000)
ಬೆಳ್ಳಿ ಕೆ.ಜಿಗೆ	2,29,200 (2,31,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹15500-18000
ಬೆಂಗಳೂರು	₹29000-33000
ಹಿರಿಯೂರು	₹12366-12366
ತಿಪಟೂರು	₹26500-28626
ತುರುವೇಕೆರೆ	₹26500-28200
ವಿಜಯಪುರ	₹9000-9500

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ (ಮುಂದುವರಿದ)		ಯಲ್ಲಾಪುರ	
ಹೊಸಚಾಲಿ	36810-42800	ಕೆಂಪುಗೋಟು	12809-43591	ಚಾಲಿ	43288-50099
ಚಾಲಿ	40499-48539	ರಾಶಿ	42699-58049	ಕೆಂಪುಗೋಟು	21600-36218
ಚಿಪ್ಪು	18600-37879	ಸಿಪ್ಪೆಗೋಟು	8009-24139	ರಾಶಿ	53099-56698
ಕೋಕ	11060-30899	**ಶಿವಮೊಗ್ಗ**		**ಯಲ್ಲಾಪುರ**	
ಪುತ್ತೂರು		ಬೆಟ್ಟೆ	52029-64339	ಬಿಳಿಗೋಟು	13218-34599
ಕೋಕ	20000-35000	ಗೊರಬಲು	19000-44009	ಕೋಕ	13009-28699
ಹೊಸತು	26000-41500	ರಾಶಿ	44111-58796	ಹಳೆಚಾಲಿ	36892-48922
ಸಾಗರ		ಸರಕು	65269-98429	ಹೊಸಚಾಲಿ	32815-43599
ಬಿಳಿಗೋಟು	24099-35109	**ಶಿರಸಿ**		ಕೆಂಪುಗೋಟು	13329-38819
ಚಾಲಿ	28599-44056	ಬೆಟ್ಟೆ	30161-50699	ರಾಶಿ	50419-63379
ಕೋಕ	13991-35119	ಬಿಳಿಗೋಟು	20069-38899	ತಟ್ಟಿಬೆಟ್ಟೆ	40009-53689

8th Year Anniversary

B.R. Gopalakrishna Reddy (Bellandur)
21.09.1970 – 02.01.2018
Remembered by: Mother, Wife, Children, Brothers, Sisters, Relatives & Friends.

25ನೇ ವರ್ಷದ ಪುಣ್ಯಸ್ಮರಣೆ

ಬೋಜರೆಡ್ಡಿಯವರ
ಶ್ರೀಮತಿ ದೊಡ್ಡತಾಯಮ್ಮ W/o ಶ್ರೀ.ವೆಂಕಟಸ್ವಾಮಿ ರೆಡ್ಡಿ
ನಿಧನ: 02–01–2001 (ದೊಡ್ಡಬಾಣಸವಾಡಿ)
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾಹಸಿರು ಮತ್ತು ಸ್ಫೂರ್ತಿದಾಯಕ.
ಸದಾ ಸ್ಮರಿಸುವ
ಮಗ: ಬಿ.ವಿ.ಶ್ರೀನಿವಾಸರೆಡ್ಡಿ (ಮರಿ)
ಸೊಸೆ: ಶೈಲಜ,
ಮೊಮ್ಮಕ್ಕಳು: BS ವಿಜಯ್, BS ವಿನಯ್, ಶ್ವೇತ, BS ರೂಪಶ್ರೀ, BV ರಿಷಿಕಾ, BV ಅಂಶಿಕಾ & BV ಅನ್ವಿಕಾ ಮತ್ತು ಮರಿಮಕ್ಕಳು

ಫಾಸ್ಟ್ಯಾಗ್: ಫೆ.1ರಿಂದ ಕೆವೈವಿ ಇಲ್ಲ

ನವದೆಹಲಿ (ಪಿಟಿಐ): ಹೊಸ ಕಾರು, ಜೀಪ್, ವ್ಯಾನ್‌ಗಳ ಫಾಸ್ಟ್ಯಾಗ್‌ಗೆ ‘ನಿಮ್ಮ ವಾಹನವನ್ನು ತಿಳಿಯಿರಿ’ (ಕೆವೈವಿ) ಪ್ರಕ್ರಿಯೆಯನ್ನು ಫೆಬ್ರುವರಿ 1ರಿಂದ ಸ್ಥಗಿತಗೊಳಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ನಿರ್ಧರಿಸಿದೆ.

ಹೆದ್ದಾರಿ ಬಳಕೆದಾರರು ಫಾಸ್ಟ್ಯಾಗ್ ಸಕ್ರಿಯಗೊಳಿಸುವಿಕೆ ನಂತರ ಎದುರಿಸುವ ಕಿರುಕುಳವನ್ನು ತಡೆಯಲು ಇದು ನೆರವಾಗಲಿದೆ ಎಂದು ಎನ್‌ಎಚ್‌ಎಐ ಹೇಳಿದೆ. ಕಾರುಗಳಿಗೆ ಈಗಾಗಲೇ ನೀಡಲಾಗಿರುವ ಫಾಸ್ಟ್ಯಾಗ್‌ಗಳಿಗೆ ಕೆವೈವಿ ಕಡ್ಡಾಯವಲ್ಲ. ಫಾಸ್ಟ್ಯಾಗ್ ಕಳೆದುಕೊಂಡಿದ್ದರೆ, ತಪ್ಪಾದ ಫಾಸ್ಟ್ಯಾಗ್ ವಿತರಣೆ ಆಗಿದ್ದರೆ ಅಥವಾ ದುರುಪಯೋಗಕ್ಕೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿದ ಸಂದರ್ಭಗಳಲ್ಲಿ ಮಾತ್ರ ಕೆವೈವಿ ಅಗತ್ಯ ಎಂದು ಹೇಳಿದೆ.

ಹೊಸ ವರ್ಷಾಚರಣೆ ವೇಳೆ ಬಾರ್‌ನಲ್ಲಿ ಅಗ್ನಿ ಅವಘಡ

ಸ್ವಿಟ್ಜರ್ಲೆಂಡ್: 40 ಜನ ಸಜೀವ ದಹನ

ಕ್ರಾನ್ಸ್ –ಮೊಂಟಾನ/ಸ್ವಿಟ್ಜರ್ಲೆಂಡ್ (ಎಪಿ): ಇಲ್ಲಿನ ಸ್ವಿಸ್ ಆಲ್ಪ್ಸ್ ರೆಸಾರ್ಟ್ ಟೌನ್‌ನ ಬಾರ್‌ನಲ್ಲಿ ಹೊಸ ವರ್ಷಾಚರಣೆ ವೇಳೆ ಸಂಭವಿಸಿದ ಅಗ್ನಿ ಅವಘಡದಲ್ಲಿ 40 ಮಂದಿ ಮೃತಪಟ್ಟಿದ್ದು, 115ಕ್ಕೂ ಹೆಚ್ಚು ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ.

‘ಕಾನ್ಸ್ಟೆಲೇಷನ್ ಬಾರ್‌ನ ಒಳಗೆ ನಡೆದ ಅಗ್ನಿ ಆಕಸ್ಮಿಕಕ್ಕೆ ಕಾರಣ ತಿಳಿದುಬಂದಿಲ್ಲ. ಆದರೆ, ದುರ್ಘಟನೆ ನಡೆದಾಗ 15 ರಿಂದ 20 ವರ್ಷದೊಳಗಿನ 200ಕ್ಕೂ ಹೆಚ್ಚು ಮಂದಿ ಬಾರ್‌ನಲ್ಲಿದ್ದರು. ಭಾರಿ ಸಂಖ್ಯೆಯ ಜನರು ಸಜೀವ ದಹನವಾಗಿದ್ದಾರೆ’ ಎಂದು ದಕ್ಷಿಣ ಸ್ವಿಟ್ಜರ್ಲೆಂಡ್‌ನ ವಲೈಸ್ ಕ್ಯಾಂಟನ್‌ನ ಪೊಲೀಸ್ ಮುಖ್ಯಸ್ಥ ಫ್ರೆಡರಿಕ್ ಗಿಸ್ಲರ್ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಮೃತರ ಗುರುತು ಪತ್ತೆ ಕಾರ್ಯ ನಡೆಯುತ್ತಿದೆ. ಕುಟುಂಬ ಸದಸ್ಯರಿಗೆ ಮಾಹಿತಿ ನೀಡಲಾಗಿದೆ. ಈ ಪ್ರಕ್ರಿಯೆ ಪೂರ್ಣಗೊಳ್ಳಲು ದೀರ್ಘ ಸಮಯ ತೆಗೆದುಕೊಳ್ಳುತ್ತದೆ. ನಂತರವೇ ಸಾವು– ನೋವಿನ ಸಂಖ್ಯೆ ನಿಖರವಾಗಿ ತಿಳಿಯಲಿದೆ’ ಎಂದು ಗಿಸ್ಲರ್ ಹೇಳಿದರು.

ಹೊರಗಿನ ದಾಳಿ ಅಲ್ಲ: ‘ಅವಘಡಕ್ಕೆ ಕಾರಣ ಏನು ಎನ್ನುವುದನ್ನು ಇಷ್ಟು ಬೇಗ ಹೇಳಲಾಗದು. ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿಗೆ ಬಾರ್‌ನ ಒಳಗೆ ಹೋಗಲೂ ಸಾಧ್ಯವಾಗುತ್ತಿಲ್ಲ. ಖಂಡಿತ ಇದೊಂದು ಆಕಸ್ಮಿಕ ಘಟನೆ. ಹೊರಗಿನಿಂದ ನಡೆದ ದಾಳಿ ಅಲ್ಲ’ ಎಂದು ವಲೈಸ್ ಕ್ಯಾಂಟನ್‌ನ ಅಟಾರ್ನಿ ಜನರಲ್ ಬಿಟ್ರೇಸ್ ಪಿಲೌಡ್ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಮೋಂಬತ್ತಿಯಿಂದ ಬೆಂಕಿ: ಹೊಸ ವರ್ಷದ ಸಂಭ್ರಮಾಚರಣೆಗಾಗಿ, ಬಾರ್‌ನ ಸಿಬ್ಬಂದಿ ಶಾಂಪೇನ್ ಬಾಟಲಿಯ ಮುಚ್ಚಳದ ಮೇಲೆ ಮೋಂಬತ್ತಿಗಳನ್ನು ಹಚ್ಚಿಟ್ಟಿದ್ದರು. ವ್ಯಕ್ತಿಯೊಬ್ಬರು ಈ ಬಾಟಲಿಯನ್ನು ಬಾರ್‌ನ ಚಾವಣಿಗೆ ತುಂಬಾ ಹತ್ತಿರದಲ್ಲಿ ಹಿಡಿದಿದ್ದರಿಂದ ಬೆಂಕಿ ಹೊತ್ತಿಕೊಂಡಿತು. ಕಾನ್ಸ್ಟೆಲೇಷನ್ ಬಾರ್ ಇರುವ ಕಟ್ಟಡವನ್ನು ಸಂಪೂರ್ಣ ಮರದಿಂದ ನಿರ್ಮಿಸಲಾಗಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರ ಹೇಳಿಕೆ ಉಲ್ಲೇಖಿಸಿ ಬಿಎಫ್‌ಎಂ ಟಿವಿ ವರದಿ ಮಾಡಿದೆ.

ದುರ್ಘಟನೆ ನಡೆದ ಕ್ರಾನ್ಸ್– ಮೋಂಟಾನದ ಲೆ ಕಾನ್ಸ್ಟೆಲೇಷನ್ ಬಾರ್ ಕಟ್ಟಡವನ್ನು ಪೊಲೀಸರು ಪರಿಶೀಲಿಸಿದರು – ಎಪಿ ಚಿತ್ರ

> ಮೃತರು, ಗಾಯಗೊಂಡವರು ಮತ್ತು ಅವರ ಕುಟುಂಬ ಸದಸ್ಯರ ಜತೆಗೆ ಸರ್ಕಾರ ನಿಲ್ಲಲಿದೆ. ಅಗತ್ಯವಿರುವ ಎಲ್ಲ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ
> **ಗೈ ಪಾರ್ಮೆಲಿನ್** ಸ್ವಿಟ್ಜರ್ಲೆಂಡ್ ಅಧ್ಯಕ್ಷ

ಸಂಭ್ರಮದ ಬೆನ್ನಲ್ಲೇ ದುರಂತ

ಸ್ವಿಸ್ ಆಲ್ಪ್ಸ್‌ನ ಹೃದಯಭಾಗದಲ್ಲಿ ಸುಮಾರು 3 ಸಾವಿರ ಮೀಟರ್ ಎತ್ತರದಲ್ಲಿರುವ ಕ್ರಾನ್ಸ್ –ಮೊಂಟಾನ ಸ್ವಿಟ್ಜರ್ಲೆಂಡ್‌ನ ಪ್ರಮುಖ ಪ್ರವಾಸಿ ತಾಣ. ಚಳಿಗಾಲದ ಪ್ರಮುಖ ಕ್ರೀಡಾ ವಿನೋದ ಕೇಂದ್ರ. ಇಲ್ಲಿ ಹೊಸ ವರ್ಷಾಚರಣೆಗೆ ಜನರು ಕಿಕ್ಕಿರಿದು ಸೇರಿದ್ದರು. ಸಂಭ್ರಮದ ಹೊನಲು ಹರಿಯುತ್ತಿದ್ದ ಈ ಪ್ರದೇಶವು, ಕೆಲ ಕ್ಷಣಗಳಲ್ಲೇ ದುರಂತಕ್ಕೆ ಸಾಕ್ಷಿಯಾಯಿತು.

ಅಗ್ನಿಯ ಜ್ವಾಲೆಗಳು ಧಗಧಗಿಸುತ್ತಿದ್ದಂತೆ ಜನರು ಜೀವ ಉಳಿಸಿಕೊಳ್ಳಲು ಬಾರ್ ಒಳಗಿನಿಂದ ದಿಕ್ಕಾಪಾಲಾಗಿ ಓಡಿದರು. ಕೆಲವರು ಹೊರಬರಲಾಗದೆ ಅಲ್ಲೇ ದಹನವಾದರು. ಕಾಲ್ತುಳಿತದಲ್ಲಿ ಸಿಲುಕಿ ಹಲವು ಮಂದಿ ಗಂಭೀರವಾಗಿ ಗಾಯಗೊಂಡರು. ಘಟನಾ ಸ್ಥಳದಿಂದ ಸಾಕಷ್ಟು ಜನರನ್ನು ರಕ್ಷಿಸಿ, ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ದಾಖಲಿಸಲಾಯಿತು. ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಜೀವನ್ಮರಣ ಸ್ಥಿತಿಯಲ್ಲಿ ನೂರಾರು ಜನರು ಇದ್ದಾರೆ. ‘ನೋಡುನೋಡುತ್ತಿದ್ದಂತೆ ಸಂಭ್ರಮದ ಸಂಜೆಯು ದುಃಸ್ವಪ್ನವಾಗಿ ಬದಲಾಯಿತು’ ಎಂದು ಕ್ರಾನ್ಸ್ –ಮೊಂಟಾನದ ಪ್ರಾದೇಶಿಕ ಆಡಳಿತದ ಮುಖ್ಯಸ್ಥ ಮಥಿಯಾಸ್ ರೆನಾರ್ಡ್ ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Wanted

ತಕ್ಷಣ ಬೇಕಾಗಿದ್ದಾರೆ, ಮಾರ್ಕೆಟಿಂಗ್ ಅಲ್ಲ ಕರ್ನಾಟಕದಲ್ಲಿರುವ ಕಂಪನಿಗಳಿಗೆ ಹಳ್ಳಿಗಳಿಂದ ಬರುವ ಯುವಕರಿಗೆ ಯುವತಿಯರಿಗೆ ಸಂಬಳ 20000-35000 (ವಿದ್ಯಾರ್ಹತೆಯಿಲ್ಲದವರಿಗು) ವಸತಿಯೂಟವಿರುತ್ತದೆ. 9916788422

ಭವಿಷ್ಯ

Astrology

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2 ದಿನಗಳಲ್ಲಿ ಪರಿಹಾರ.9886755306

ಪ್ರವಾಸ

Travel

23-01-2026, 4 ದಿನಗಳು ಬೀದರ್ ಝರಣಿನರಸಿಂಹಸ್ವಾಮಿ, ಕೂಡಲಸಂಗಮ, ಗಾಣಗಾಪುರ, 108 ಅಡಿ ಬಸವೇಶ್ವರ ಪ್ರತಿಮೆ, ಅನುಭವಮಂಟಪ, ವೈಷ್ಣೋದೇವಿ ಇತ್ಯಾದಿ. 9481433157

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಚಿನ್ನದ ದರ ₹640 ಏರಿಕೆ, ಬೆಳ್ಳಿ ₹1,600 ಇಳಿಕೆ

ನವದೆಹಲಿ (ಪಿಟಿಐ): ಕ್ಯಾಲೆಂಡರ್ ವರ್ಷದ ಮೊದಲ ದಿನವಾದ ಗುರುವಾರ ಇಲ್ಲಿನ ಚಿನಿವಾರ ಪೇಟೆಯಲ್ಲಿ ನಡೆದ ವಹಿವಾಟಿನಲ್ಲಿ ಚಿನ್ನದ ದರ ಏರಿಕೆ ಆಗಿದೆ, ಬೆಳ್ಳಿ ಧಾರಣೆ ಇಳಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹640 ಹೆಚ್ಚಳವಾಗಿ, ₹1,38,340ರಂತೆ ಮಾರಾಟವಾಗಿದೆ. ಬೆಳ್ಳಿ ದರವು ₹1,600 ಕಡಿಮೆಯಾಗಿದ್ದು, ಕೆ.ಜಿ ಬೆಳ್ಳಿ ಬೆಲೆ ₹2,37,400ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಸಿಗರೇಟು ಬೆಲೆ ಏರಿಕೆ ಸಾಧ್ಯತೆ

ಒಂದನೇ ಪುಟದಿಂದ...

ಹೊಸ ವ್ಯವಸ್ಥೆಯ ಅಡಿಯಲ್ಲಿ ಪ್ರತಿ 1,000 ಸಿಗರೇಟುಗಳಿಗೆ ಹೆಚ್ಚುವರಿಯಾಗಿ ₹2,050ರಿಂದ ₹8,500ರವರೆಗೆ ಸುಂಕ ವಿಧಿಸಲಾಗುತ್ತದೆ.

ಸುಂಕದ ಪ್ರಮಾಣವು ಸಿಗರೇಟಿನ ಉದ್ದ ಹಾಗೂ ಅದಕ್ಕೆ ಫಿಲ್ಟರ್ ಇದೆಯೇ ಎಂಬುದನ್ನು ಆಧರಿಸಿ ನಿರ್ಧಾರವಾಗಲಿದೆ. ಕೇಂದ್ರ ಸರ್ಕಾರವು ಹೊಸ ನಿಯಮವನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದ ನಂತರದಲ್ಲಿ ದೇಶದ ಪ್ರಮುಖ ಸಿಗರೇಟು ತಯಾರಿಕಾ ಕಂಪನಿಗಳ ಷೇರುಮೌಲ್ಯವು ಭಾರಿ ಪ್ರಮಾಣದಲ್ಲಿ ಕುಸಿದಿದೆ. ಐಟಿಸಿ ಷೇರುಮೌಲ್ಯವು ಗುರುವಾರ ಶೇ 9.69ರಷ್ಟು ಕುಸಿದಿದೆ. ಗಾಡ್‌ಫ್ರೇ ಫಿಲಿಪ್ಸ್ ಕಂಪನಿಯ ಷೇರುಮೌಲ್ಯ ಶೇ 17.17ರಷ್ಟು ಕುಸಿದಿದೆ.

ತಂಬಾಕು ಸಂಬಂಧಿತ ಕಾಯಿಲೆಗಳಿಂದ ದೇಶದ ಮೇಲೆ ಆಗುವ ಆರ್ಥಿಕ ಹೊರೆಯು ವಾರ್ಷಿಕ ₹2.4 ಲಕ್ಷ ಕೋಟಿಗಿಂತ ಹೆಚ್ಚಾಗುವ ಅಂದಾಜು ಇದೆ. ಇಂತಹ ಸಂದರ್ಭದಲ್ಲಿ ಸಿಗರೇಟು ಬಹಳ ಅಗ್ಗವಾಗಬಾರದು ಎಂಬ ಉದ್ದೇಶದಿಂದ ಸುಂಕವನ್ನು ಹೆಚ್ಚಿಸುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ. ಬೇರೆ ಉತ್ಪನ್ನಗಳಿಗೆ ಹೋಲಿಸಿದರೆ ತಂಬಾಕಿನ ಮೇಲೆ ಭಾರಿ ಪ್ರಮಾಣದ ತೆರಿಗೆ ಇರಬೇಕು ಎಂಬ ಕೇಂದ್ರದ ನಿಲುವಿಗೆ ಇದು ಅನುಗುಣವಾಗಿದೆ ಎಂದು ಅದು ತಿಳಿಸಿದೆ.

ರಷ್ಯಾ ಮೇಲೆ ಉಕ್ರೇನ್ ಡ್ರೋನ್ ದಾಳಿ: 24 ಸಾವು, 54ಕ್ಕೂ ಹೆಚ್ಚು ಮಂದಿಗೆ ಗಾಯ

ಹೊಸ ವರ್ಷದ ಸಂಭ್ರಮ ಕಸಿದ ದುರಂತ

ಮಾಸ್ಕೊ (ಪಿಟಿಐ): ರಷ್ಯಾ ವಶಪಡಿಸಿಕೊಂಡಿರುವ, ಉಕ್ರೇನ್ ಬಂದರು ನಗರಿ ಖೆರ್ಸನ್ ಪ್ರದೇಶದ ಖೋರ್ಲಿ ಎಂಬಲ್ಲಿ ಕೆಫೆ ಮತ್ತು ಹೋಟೆಲ್‌ನಲ್ಲಿ ಹೊಸ ವರ್ಷಾಚರಣೆ ಸಂಭ್ರಮದಲ್ಲಿ ತೊಡಗಿದ್ದವರ ಮೇಲೆ ಉಕ್ರೇನ್ ನಡೆಸಿದ ರಹಸ್ಯ ಡ್ರೋನ್ ದಾಳಿಯಲ್ಲಿ ಕನಿಷ್ಠ 24 ಮಂದಿ ಮೃತಪಟ್ಟಿದ್ದು, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಬುಧವಾರ ಮಧ್ಯರಾತ್ರಿ ದಾಳಿ ನಡೆದಿದೆ. ಉಕ್ರೇನ್‌ನ ಮೂರು ಮಾನವ ರಹಿತ ವೈಮಾನಿಕ ವಾಹನಗಳು (ಯುಎವಿ) ಕಪ್ಪು ಸಮುದ್ರ ಕರಾವಳಿ ತೀರದ ಕೆಫೆ ಮತ್ತು ಹೋಟೆಲ್‌ಗಳಿಗೆ ಅಪ್ಪಳಿಸಿವೆ. ಪ್ರಾಥಮಿಕ ವರದಿಗಳ ಪ್ರಕಾರ 24 ಮಂದಿ ಮೃತಪಟ್ಟಿದ್ದಾರೆ. ಆದರೆ, ಸಾವಿನ ಸಂಖ್ಯೆ ಇನ್ನೂ ಸ್ಪಷ್ಟವಾಗಿಲ್ಲ.

> ಅಧ್ಯಕ್ಷರ ನಿವಾಸ ಸೇರಿ, ರಷ್ಯಾವನ್ನು ಗುರಿಯಾಗಿಸಿ ಉಕ್ರೇನ್ ನಡೆಸಿದ ದಾಳಿಯಲ್ಲಿ ಹೊಡೆದುರುಳಿಸಿದ ಡ್ರೋನ್‌ಗಳ ಡೀಕ್ರಿಪ್ಟ್ ಮಾಡಿದ ಡೇಟಾವನ್ನು ಅಮೆರಿಕಕ್ಕೆ ಹಸ್ತಾಂತರಿಸಲಾಗುವುದು
> **ರಷ್ಯಾ ರಕ್ಷಣಾ ಸಚಿವಾಲಯ**

> ರಷ್ಯಾ ಯುದ್ಧವನ್ನು ಹೊಸ ವರ್ಷಕ್ಕೆ ಕೊಂಡೊಯ್ಯುತ್ತಿದೆ. ಉದ್ದೇಶಪೂರ್ವಕವಾಗಿ ರಾಜತಾಂತ್ರಿಕ ಪ್ರಯತ್ನಗಳನ್ನು ಹಾಳು ಮಾಡುತ್ತಿದೆ
> **ವೊಲೊಡಿಮಿರ್ ಝೆಲೆನ್‌ಸ್ಕಿ** ಉಕ್ರೇನ್ ಅಧ್ಯಕ್ಷ

ಗಾಯಾಳುಗಳ ಸಂಖ್ಯೆಯೂ ಹೆಚ್ಚುವ ಸಾಧ್ಯತೆ ಇದೆ ಎಂದು ಖೆರ್ಸನ್ ಪ್ರದೇಶದ ಗವರ್ನರ್ ವ್ಲಾದಿಮಿರ್ ಸಾಲ್ಡೊ ಸುದ್ದಿವಾಹಿನಿಯೊಂದಕ್ಕೆ ತಿಳಿಸಿದ್ದಾರೆ.

ಖೆರ್ಸನ್ ಸೇರಿದಂತೆ ದಕ್ಷಿಣ ಕರಾವಳಿಯಲ್ಲಿ ಹೊಸ ವರ್ಷಾಚರಣೆಗೆ ಸೇರಿದ್ದವರ ಮೇಲೆ ರಹಸ್ಯ ದಾಳಿಗೆ ಮುಂದಾದ ಉಕ್ರೇನ್‌ನ 168ಕ್ಕೂ ಹೆಚ್ಚು ‘ಯುಎವಿ’ಗಳನ್ನು ರಷ್ಯಾದ ವೈಮಾನಿಕ ರಕ್ಷಣಾ ವ್ಯವಸ್ಥೆ ಪತ್ತೆಹಚ್ಚಿ ನಾಶಪಡಿಸಿದೆ. ಉಕ್ರೇನ್ ದಾಳಿಯ ಬೆದರಿಕೆ ಇದ್ದಿದ್ದರಿಂದ, ಬುಧವಾರ ರಾತ್ರಿ ದಕ್ಷಿಣ ಮತ್ತು ಮಧ್ಯ ರಷ್ಯಾದಲ್ಲಿನ ಹಲವು ವಿಮಾನ ನಿಲ್ದಾಣಗಳನ್ನು ಹಲವು ಗಂಟೆಗಳ ಕಾಲ ಮುಚ್ಚಲಾಗಿತ್ತು.

‘ಮಾಸ್ಕೊ, ಕ್ರಾಸ್ನೊಡರ್, ಕ್ರೈಮಿಯಾ ಗಣರಾಜ್ಯ, ಬ್ರಿಯಾನ್ಸ್ಕ್ ಸೇರಿದಂತೆ ಕರಾವಳಿಯ ಹಲವು ಪ್ರದೇಶಗಳಲ್ಲಿ ಹೊಸ ವರ್ಷಾಚರಣೆಯಲ್ಲಿ ತೊಡಗಿದ್ದವರ ಮೇಲೆ ದಾಳಿಗೆ ಮುಂದಾದ ಉಕ್ರೇನ್‌ನ 61 ಯುಎವಿಗಳನ್ನು ಹೊಡೆದುರುಳಿಸಲಾಗಿದೆ’ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಗುರುವಾರ ತಿಳಿಸಿದೆ.

‘ಉಕ್ರೇನ್ ನೇರ ಕಾರಣ’

ಹೊಸ ವರ್ಷದ ಸಂಭ್ರಮಾಚರಣೆ ಮೇಲೆ ನಡೆದ ಡ್ರೋನ್ ದಾಳಿಗೆ ಉಕ್ರೇನ್ ನೇರ ಕಾರಣ ಎಂದು ರಷ್ಯಾ ಆರೋಪಿಸಿದೆ. ಆದರೆ, ಉಕ್ರೇನ್ ಇದುವರೆಗೆ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ.

‘ರಷ್ಯಾದ ಜನರ ಮೇಲೆ ಉಕ್ರೇನ್ ಭಯೋತ್ಪಾದಕ ದಾಳಿ ನಡೆಸಿದೆ’ ಎಂದು ರಷ್ಯಾದ ವಿದೇಶಾಂಗ ವ್ಯವಹಾರಗಳ ವಕ್ತಾರೆ ಮಾರಿಯಾ ಜಖರೊವಾ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ನಡುವೆ ನಾಲ್ಕು ವರ್ಷಗಳಿಂದ ಮುಂದುವರಿದಿರುವ ಯುದ್ಧವನ್ನು ರಾಜತಾಂತ್ರಿಕತೆ ಮೂಲಕ ಕೊನೆಗಾಣಿಸುವ ಪ್ರಯತ್ನ ನಡೆದಿರುವ ಸಂದರ್ಭದಲ್ಲೇ ಈ ದಾಳಿ ನಡೆದಿದೆ. ‘ರಷ್ಯಾ ಡ್ರೋನ್ ದಾಳಿ ಮುಂದುವರಿಸಿರುವುದರಿಂದ ನಾವು ಶಾಂತಿ ಒಪ್ಪಂದದಿಂದ ಶೇ 10ರಷ್ಟು ಹಿಂದೆ ಸರಿದಿದ್ದೇವೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಇತ್ತೀಚೆಗೆ ಹೇಳಿದ್ದರು.

‘ದುಷ್ಟ ಶಕ್ತಿ’ಗಳಿಗೆ ತಲೆಬಾಗುವುದಿಲ್ಲ’

ಪ್ರಜಾಪ್ರಭುತ್ವದ ರಕ್ಷಣೆಗೆ ಬದ್ಧ: ಟಿಎಂಸಿ ಸಂಸ್ಥಾಪನಾ ದಿನದಲ್ಲಿ ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ‘ತೃಣಮೂಲ ಕಾಂಗ್ರೆಸ್ ಪಕ್ಷವು ಜನರಿಗಾಗಿ ಹೋರಾಟ ನಡೆಸುವುದನ್ನು ಮುಂದುವರಿಸಲಿದ್ದು, ಯಾವುದೇ ‘ದುಷ್ಟ ಶಕ್ತಿ’ಗಳಿಗೆ ತಲೆಬಾಗದು’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು.

ಟಿಎಂಸಿ ಸಂಸ್ಥಾಪನಾ ದಿನದ ಅಂಗವಾಗಿ ಗುರುವಾರ ಕಾರ್ಯಕರ್ತರಿಗೆ ಶುಭಾಶಯ ಕೋರಿದ ಅವರು, ‘ಮಾತೃಭೂಮಿಯ ಮೇಲಿನ ಗೌರವ, ಬಂಗಾಳದ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ತೋರಿರುವ ಬದ್ಧತೆಯಿಂದಾಗಿ ಪಕ್ಷಕ್ಕೆ ಈ ಐತಿಹಾಸಿಕ ಪಯಣ ಸಾಧ್ಯವಾಗಿದೆ’ ಎಂದು ಪ್ರತಿಪಾದಿಸಿದರು.

> **ತಳಮಟ್ಟದ ಕಾರ್ಯಕರ್ತರ ಶ್ರಮ, ಅವರ ಶಿಸ್ತು, ತ್ಯಾಗ ಹಾಗೂ ಪಕ್ಷದ ಮೇಲೆ ಇಟ್ಟಿರುವ ನಂಬಿಕೆಯಲ್ಲಿ ಟಿಎಂಸಿಯ ಶಕ್ತಿ ಅಡಗಿದೆ**
> **ಅಭಿಷೇಕ್ ಬ್ಯಾನರ್ಜಿ,** ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

‘ತಾಯಿ, ತಾಯ್ನೆಲ ಮತ್ತು ಜನರ ಸೇವೆ ಮಾಡುವ ಗುರಿಯೊಂದಿಗೆ ಪಕ್ಷವು 1998ರ ಜನವರಿ 1ರಂದು ತನ್ನ ಪಯಣ ಆರಂಭಿಸಿತು. ನಮ್ಮ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತ ಮತ್ತು ಬೆಂಬಲಿಗರು ಈ ಗುರಿಯ ಈಡೇರಿಕೆಗೆ ಈಗಲೂ ಬದ್ಧರಾಗಿದ್ದಾರೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಅಸಂಖ್ಯಾತ ಜನರ ಪ್ರೀತಿ ಮತ್ತು ಆಶೀರ್ವಾದವು ಪಕ್ಷಕ್ಕೆ ಚೈತನ್ಯ ತುಂಬಿದೆ’ ಎಂದ ಅವರು, ದ್ವೇಷ ಕಾರುವವರನ್ನು ನಿರ್ಲಕ್ಷಿಸಿ, ದೇಶದ ಪ್ರತಿಯೊಬ್ಬ ಪ್ರಜೆಗಾಗಿ ಹೋರಾಟ ನಡೆಸುವುದನ್ನು ಟಿಎಂಸಿ ಮುಂದುವರಿಸಲಿದೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಎಡರಂಗದ ಆಡಳಿತಕ್ಕೆ ಸವಾಲೆಸೆಯಲು ಮಮತಾ ಅವರು ಕಾಂಗ್ರೆಸ್ ತೊರೆದು 1998ರ ಜನವರಿ 1ರಂದು ಟಿಎಂಸಿ ಸ್ಥಾಪಿಸಿದ್ದರು. ಪಕ್ಷವು 2011ರಲ್ಲಿ ಅಧಿಕಾರಕ್ಕೇರಿತು. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಕೇವಲ ಮೂರು ತಿಂಗಳು ಬಾಕಿಯಿರುವ ಹೊತ್ತಿನಲ್ಲಿ, ಟಿಎಂಸಿ ತನ್ನ 28ನೇ ವರ್ಷಕ್ಕೆ ಕಾಲಿಟ್ಟಿದೆ.

‘ಟಿಎಂಸಿಯು ತಾಯಿ, ತಾಯ್ನೆಲ ಮತ್ತು ಜನರ ಸೇವೆಗೆ ಬದ್ಧವಾಗಿರುವವರೆಗೆ ಯಾವುದೇ ಶಕ್ತಿಗೂ, ಅದು ಎಷ್ಟೇ ದುರಹಂಕಾರಿ ಅಥವಾ ದಬ್ಬಾಳಿಕೆಯಿಂದಲೂ ಕೂಡಿದ್ದರೂ ಬಂಗಾಳದ ಜನರ ದೃಢ ನಿಶ್ಚಯವನ್ನು ಸೋಲಿಸಲು ಸಾಧ್ಯವಿಲ್ಲ’ ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಹೇಳಿದ್ದಾರೆ.

‘ಎಸ್‌ಐಆರ್: ಹಿಂದೂ ನಿರಾಶ್ರಿತರ ಮೇಲೆ ಪರಿಣಾಮ’

ಕೋಲ್ಕತ್ತ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಬಾಂಗ್ಲಾದೇಶದಿಂದ ಪಲಾಯನ ಮಾಡಿ ಪಶ್ಚಿಮ ಬಂಗಾಳದಲ್ಲಿ ನೆಲಸಿರುವ ಹಿಂದೂಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಎಂದು ಸಿಪಿಎಂನ ಹಿರಿಯ ನಾಯಕ ಕಾಂತಿ ಗಂಗೂಲಿ ಹೇಳಿದ್ದಾರೆ.

ದಾಖಲೆಗಳ ಪರಿಶೀಲನೆಗಾಗಿ ಶುಕ್ರವಾರ ಅಧಿಕಾರಿಗಳ ಮುಂದೆ ಹಾಜರಾಗಲಿರುವ 82 ವರ್ಷ ವಯಸ್ಸಿನ ಅವರು, ಚುನಾವಣಾ ಆಯೋಗ ಕೈಗೊಂಡಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಸಮರ್ಥಿಸಿಕೊಂಡರು.

‘ನಾನು ಎಸ್‌ಐಆರ್ ಪರವಾಗಿದ್ದೇನೆ. ಆದರೆ ಇದು ಬಲು ದೊಡ್ಡ ಮತ್ತು ಹೆಚ್ಚು ಸವಾಲಿನ ಕೆಲಸ. ಈ ಪ್ರಕ್ರಿಯೆಯನ್ನು ಇನ್ನಷ್ಟು ಪಾರದರ್ಶಕ ಹಾಗೂ ನಿಖರವಾಗಿ ಮಾಡಲು, ಹೆಚ್ಚಿನ ಸಮಯ ನಿಗದಿಪಡಿಸಬೇಕಾಗಿತ್ತು. ಭಾರತವು ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿರುವ ಕಾರಣ, ಮತದಾರರ ಪಟ್ಟಿಗಳ ಸಮಗ್ರ ಪರಿಷ್ಕರಣೆಗೆ ಹೆಚ್ಚಿನ ಸಮಯ ನೀಡಬೇಕಾಗಿತ್ತು’ ಎಂದು ತಿಳಿಸಿದರು.

‘ನಾನು ಸುಂದರಬನ ಪ್ರದೇಶದವನು. ಬಾಂಗ್ಲಾದೇಶದಿಂದ ಬಂದು ನೆಲಸಿರುವ ಹಿಂದೂಗಳು ಅಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಈ ಪ್ರಕ್ರಿಯೆ ಅವರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ’ ಎಂದರು. ‘ಚುನಾವಣಾ ಆಯೋಗವು ಸೂಕ್ತ ಸಿದ್ಧತೆ ಮಾಡಿಕೊಂಡು ಎಸ್‌ಐಆರ್‌ಗಾಗಿ ವಿಸ್ತೃತ ಮಾರ್ಗಸೂಚಿ ರೂಪಿಸಬೇಕಿತ್ತು. ಹಾಗಾದಲ್ಲಿ, ಈ ಪ್ರಕ್ರಿಯೆ ಬಗ್ಗೆ ಮತದಾರರಲ್ಲಿ ತಪ್ಪು ಅಭಿಪ್ರಾಯ ಮೂಡುವುದನ್ನು ತಡೆಯಬಹುದಿತ್ತು’ ಎಂದರು.

ಹುಲಿಗಳಿಗಿಲ್ಲ ಜಾಗ...

ಜಗತ್ತಿನಲ್ಲಿರುವ ಹುಲಿಗಳ ಸಂಖ್ಯೆಯಲ್ಲಿ ಶೇ 75ರಷ್ಟು ಹುಲಿಗಳಿಗೆ ಭಾರತವೇ ತವರು. 2025ರಲ್ಲಿ ದೇಶದಾದ್ಯಂತ ಒಟ್ಟು 166 ಹುಲಿಗಳು ಮೃತಪಟ್ಟಿವೆ. ‘ಒಂದೆಡೆ, ಹುಲಿಗಳ ಸಂಖ್ಯೆ ಅಧಿಕವಾಗುತ್ತಿದೆ. ಇನ್ನೊಂದೆಡೆ, ಅವುಗಳಿಗೆ ಸಾಕಷ್ಟು ಅರಣ್ಯ ಪ್ರದೇಶ ಲಭ್ಯವಿಲ್ಲ. ತಮ್ಮ ಗಡಿಗಳನ್ನು ಗುರುತಿಸಿಕೊಳ್ಳುವ ಕಾಳಗದಲ್ಲಿ ಹುಲಿಗಳು ಸಾಯುತ್ತಿವೆ’ ಎನ್ನುವುದು ತಜ್ಞರ ಅಭಿಪ್ರಾಯ

ದೇಶದ ಸ್ಥಿತಿ: ಸಾವಿನ ಸಂಖ್ಯೆ ಏರಿಕೆ

ವರ್ಷ	ಸಂಖ್ಯೆ
2023	182
2024	126
2025	166

88 — ಹುಲಿ ಸಂರಕ್ಷಿತ ಪ್ರದೇಶದ ಹೊರಗೆ ಮೃತಪಟ್ಟ ಹುಲಿಗಳ ಸಂಖ್ಯೆ
78 — ಹುಲಿ ಸಂರಕ್ಷಿತ ಪ್ರದೇಶದ ಒಳಗೆ ಮೃತಪಟ್ಟ ಹುಲಿಗಳ ಸಂಖ್ಯೆ

ಯಾವ ರಾಜ್ಯದಲ್ಲಿ ಎಷ್ಟು ಸಾವು



ಆಧಾರ: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ವೆಬ್‌ಸೈಟ್, ಪಿಟಿಐ

ಮಧ್ಯಪ್ರದೇಶದ ಮಾಹಿತಿ

ವರ್ಷ	ಸಂಖ್ಯೆ
2014	308
2018	526
2022	785

‘ಹುಲಿಗಳಿಗೆ ಜಾಗ ಎಲ್ಲಿದೆ?’

ದೇಶದಲ್ಲಿನ ಹುಲಿ ಸಂಖ್ಯೆಯು ಗರಿಷ್ಠ ಮಟ್ಟವನ್ನು ತಲುಪಿದೆ. ಈ ಕಾರಣದಿಂದಲೇ ಅವುಗಳು ಗಡಿ ಸಮಸ್ಯೆಯನ್ನು ಎದುರಿಸುತ್ತಿವೆ. ಮಧ್ಯ ಪ್ರದೇಶದಲ್ಲಿ 2014ರಿಂದ ಈಚೆಗೆ ಹುಲಿಗಳ ಸಂಖ್ಯೆಯು ಶೇ 60ರಷ್ಟು ಹೆಚ್ಚಳವಾಗಿವೆ. ಇದಂತೂ ಭಾರಿ ಬೆಳವಣಿಗೆಯೇ ಆಗಿದೆ. ಇಲ್ಲಿರುವ ಪ್ರಶ್ನೆ ಏನೆಂದರೆ, ಇಷ್ಟೊಂದು ಹುಲಿಗಳಿಗೆ ಜಾಗ ಎಲ್ಲಿದೆ? ಗಡಿ ಗುರುತಿಸಿಕೊಳ್ಳಲು ಹುಲಿಗಳು ಪರಸ್ಪರ ಜಗಳವಾಡುತ್ತಿದ್ದು, ಸಾಯುತ್ತಿವೆ

ಜೈರಾಮ್ ಶುಕ್ಲಾ, ವನ್ಯಜೀವಿ ತಜ್ಞ

‘ಹುಲಿ ಹೆಚ್ಚಿರುವಲ್ಲಿ ಸಾವೂ ಹೆಚ್ಚು’

ಜಗತ್ತಿನಲ್ಲಿಯೇ ಮಧ್ಯ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಹುಲಿಗಳಿವೆ. ಈ ಪ್ರದೇಶದಲ್ಲಿಯೇ ಹುಲಿಗಳ ಸಾವಿನ ಸಂಖ್ಯೆಯೂ ಅಧಿಕವಾಗಿದೆ. ಹುಲಿಗಳ ಸಾವುಗಳನ್ನು ನಾವು ಬೇಟೆಯಾಡಿದ್ದು ಎಂದೇ ಪರಿಗಣಿಸುತ್ತೇವೆ. ಇದಕ್ಕೆ ವ್ಯತಿರಿಕ್ತ ಮಾಹಿತಿಗಳು ದೊರೆತರೆ, ಮಾಹಿತಿಯಂತೆಯೇ ಸಾವಿನ ಕಾರಣವನ್ನು ದಾಖಲು ಮಾಡಿಕೊಳ್ಳುತ್ತೇವೆ. ಮಾನವ ಹಸ್ತಕ್ಷೇಪದಿಂದ ಅರಣ್ಯದ ವ್ಯಾಪ್ತಿಯು ಕುಗ್ಗುತ್ತಲೇ ಇದೆ. ಇದರಿಂದ ಹುಲಿಗಳ ಓಡಾಟಕ್ಕೆ ತೊಂದರೆಯಾಗುತ್ತಿದೆ

ಸುಭರಂಜನ್ ಸೇನ್
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)

‘ನಿಖರ ಕಾರಣ ತಿಳಿಸುವುದು ಮುಖ್ಯ

ಹುಲಿಗಳು ಸಾಯುತ್ತವೆ ಎನ್ನುವುದು ನೈಸರ್ಗಿಕ ಪ್ರಕ್ರಿಯೆ. ಆದರೆ, ಸಾವಿನ ಕಾರಣ ಮುಖ್ಯವಾಗುತ್ತದೆ. ಕಳೆದ ವರ್ಷ ಜೂನ್‌ನಲ್ಲಿ ಮಲೆ ಮಹದೇಶ್ವರ ಬೆಟ್ಟದಲ್ಲಿ ಹುಲಿಗಳಿಗೆ ವಿಷ ಉಣಿಸಿದ ಪ್ರಕರಣ ನಡೆದಿತ್ತು. ಇದು ಗಂಭೀರವಾದುದು. ಅಪಘಾತಗಳಿಂದ ಸಾಯುವುದು, ಬೇಟೆಯಾಡುವುದು, ಹುಲಿಗಳ ಉಗುರು, ಚರ್ಮ ಕಳ್ಳಸಾಗಣೆಗಾಗಿ ಹತ್ಯೆ ಮಾಡುತ್ತಾರೆ ಎನ್ನುವುದು ಆಲೋಚಿಸಬೇಕಾದ ವಿಷಯ. ಆದ್ದರಿಂದ, ವರದಿಗಳಲ್ಲಿ ಹುಲಿಗಳ ಸಾವಿಗೆ ನಿಖರ ಕಾರಣ ತಿಳಿಸಿದರೆ, ಅನುಕೂಲವಾಗುತ್ತದೆ.

ಸಂಜಯ್ ಗುಬ್ಬಿ, ವನ್ಯಜೀವಿ ತಜ್ಞ

ಕರ್ನಾಟಕದಲ್ಲಿ ಸಾವಿನ ಸಂಖ್ಯೆಯ ಏರಿಳಿತ

ವರ್ಷ	ಸಾವಿನ ಸಂಖ್ಯೆ	(ಉಗುರು, ಚರ್ಮ ವಶಕ್ಕೆ ಪಡೆದ ಪ್ರಕರಣಗಳು)
2021	15	1
2022	18	1
2023	12	
2024	13	
2025	14	

3 — ಸಂರಕ್ಷಿತ ಪ್ರದೇಶದ ಒಳಗೆ ಮೃತಪಟ್ಟ ಹುಲಿಗಳ ಸಂಖ್ಯೆ
11 — ಹುಲಿ ಸಂರಕ್ಷಿತ ಪ್ರದೇಶದ ಹೊರಗೆ ಮೃತಪಟ್ಟ ಹುಲಿಗಳ ಸಂಖ್ಯೆ
14 — ರಾಜ್ಯದಲ್ಲಿ ಮೃತಪಟ್ಟ ಹುಲಿಗಳ ಒಟ್ಟು ಸಂಖ್ಯೆ

ಚಿಟಿಕೆ ಸುದ್ದಿ

ಭೀಮಾ ಕೋರೆಗಾಂವ್: ಹುತಾತ್ಮರಿಗೆ ನಮನ

ಪುಣೆ (ಪಿಟಿಐ): ಭೀಮಾ ಕೋರೆಗಾಂವ್ ಯುದ್ಧದ 208ನೇ ವಾರ್ಷಿಕೋತ್ಸವದ ಅಂಗವಾಗಿ ಇಲ್ಲಿರುವ ‘ಜಯ ಸ್ತಂಭ’ಕ್ಕೆ ಸಾವಿರಾರು ಜನರು ಭೇಟಿನೀಡಿ, ಹುತಾತ್ಮರಿಗೆ ನಮನ ಸಲ್ಲಿಸಿದರು.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಹಾಗೂ ಮರಾಠ ಪೇಶ್ವೆ ಬಣದ ನಡುವೆ ಜನವರಿ 1, 1818ರಂದು ಯುದ್ಧವು ನಡೆದಿತ್ತು.

ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ವಂಚಿತ ಬಹುಜನ ಅಘಾಡಿ ಮುಖ್ಯಸ್ಥರಾದ ಪ್ರಕಾಶ್ ಅಂಬೇಡ್ಕರ್ ಸೇರಿದಂತೆ ಹಲವು ನಾಯಕರು ‘ಜಯ ಸ್ತಂಭ’ಕ್ಕೆ ಪುಷ್ಪ ನಮನ ಸಲ್ಲಿಸಿದರು.

ಪುಣೆ ಮತ್ತು ಅಹ್ಮದ್‌ನಗರವನ್ನು ಸಂಪರ್ಕಿಸುವ ರಸ್ತೆ ಮಾರ್ಗದಲ್ಲಿರುವ ಪೆರ್ನೆ ಗ್ರಾಮದಲ್ಲಿ ಸ್ಮಾರಕವಿದ್ದು, ಇಲ್ಲಿ ಬಿಗಿ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿತ್ತು.

ದತ್ತಾಂಶ ಕೇಂದ್ರಿತ ವರ್ಷ: ದ್ವಿವೇದಿ

ನವದೆಹಲಿ (ಪಿಟಿಐ): ಭಾರತೀಯ ಸೇನೆಯು 2026ನೇ ವರ್ಷವನ್ನು ‘ನೆಟ್‌ವರ್ಕಿಂಗ್ ಮತ್ತು ದತ್ತಾಂಶ ಕೇಂದ್ರಿತ ವರ್ಷ’ ಎಂದು ಘೋಷಿಸಿದೆ.


ದ್ವಿವೇದಿ

ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಹೊಸ ವರ್ಷದ ಸಂದೇಶವನ್ನು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದು, ‘ಭಾರತೀಯ ಸೇನೆಯು ಪರಿವರ್ತನೆಯ ದಶಕಕ್ಕೆ ಸಾಕ್ಷಿಯಾಗುತ್ತಿದೆ. ಅಲ್ಲದೆ, ಜಂಟಿ ಕಾರ್ಯಾಚರಣೆ, ಸ್ವಾವಲಂಬನೆ ಮತ್ತು ನಾವೀನ್ಯತೆಯು ಸೇನಾ ಶಕ್ತಿಯ ಪ್ರಮುಖ ಆಧಾರಸ್ತಂಭಗಳಾಗಿವೆ’ ಎಂದು ಹೇಳಿದ್ದಾರೆ.

ಆಂದೋಲನ ಆಗಲಿ: ಖರ್ಗೆ

ನವದೆಹಲಿ (ಪಿಟಿಐ): ‘ಕೆಲಸದ, ಮತದಾನದ ಮತ್ತು ಘನತೆಯಿಂದ ಬದುಕುವ ಹಕ್ಕು ಸೇರಿ ದುರ್ಬಲರ ಹಕ್ಕುಗಳನ್ನು ರಕ್ಷಿಸಲು ಹೊಸ ವರ್ಷವನ್ನು ಸಾಮೂಹಿಕ ಆಂದೋಲನವನ್ನಾಗಿ ಮಾಡಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಎಲ್ಲರೂ ಕೈಜೋಡಿಸಿ ಸಂವಿಧಾನದ ರಕ್ಷಣೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಿಕೊಳ್ಳುವ ಆಶಯವನ್ನು ಅವರ ಹೊಸ ವರ್ಷದ ಪೋಸ್ಟ್ ಒಳಗೊಂಡಿದೆ.

ಭಾರತ–ಪಾಕ್: ದ್ವಿಪಕ್ಷೀಯ ಒಪ್ಪಂದದ ಪ್ರಕಾರ ಪಟ್ಟಿ ವಿನಿಮಯ

ಪರಮಾಣು ಸ್ಥಾವರ ಮಾಹಿತಿ ಹಂಚಿಕೆ

ನವದೆಹಲಿ (ಪಿಟಿಐ): ದ್ವಿಪಕ್ಷೀಯ ಒಪ್ಪಂದದ ಪ್ರಕಾರ ಭಾರತ ಮತ್ತು ಪಾಕಿಸ್ತಾನ ತಮ್ಮಲ್ಲಿನ ಪರಮಾಣು ಸ್ಥಾವರಗಳು ಹಾಗೂ ಮೂಲಸೌಕರ್ಯಗಳ ಪಟ್ಟಿಯನ್ನು ಗುರುವಾರ ಪರಸ್ಪರ ವಿನಿಮಯ ಮಾಡಿಕೊಂಡವು.

ಉಭಯ ದೇಶಗಳು ಪರಸ್ಪರರ ಪರಮಾಣ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸುವುದನ್ನು ಈ ಒಪ್ಪಂದವು ತಡೆಯುತ್ತದೆ.

ಒಪ್ಪಂದದ ನಿಬಂಧನೆಗಳ ಪ್ರಕಾರ ಎರಡೂ ದೇಶಗಳ ಪಟ್ಟಿಯ ವಿನಿಮಯ ನಡೆದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ.

ಕಳೆದ ವರ್ಷ ಮೇನಲ್ಲಿ ನಡೆದ ನಾಲ್ಕು ದಿನಗಳ ಸೇನಾ ಸಂಘರ್ಷದಿಂದ ಎರಡೂ ದೇಶಗಳ ನಡುವಿನ ಸಂಬಂಧ ತೀವ್ರ ಹದಗೆಟ್ಟಿದ್ದರೂ ಪಟ್ಟಿಯ ವಿನಿಮಯ ನಡೆದಿದೆ.

ರಾಜತಾಂತ್ರಿಕ ಮಾರ್ಗಗಳ ಮೂಲಕ ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ಏಕಕಾಲದಲ್ಲಿ ಪಟ್ಟಿಗಳ ವಿನಿಮಯ ನಡೆದಿದೆ ಎಂದು ಸಚಿವಾಲಯ ಹೇಳಿದೆ. ಉಭಯ ದೇಶಗಳು 1988ರ ಡಿಸೆಂಬರ್ 31ರಂದು ಸಹಿ ಹಾಕಿದ್ದ ಈ ಒಪ್ಪಂದವು 1991ರ ಜನವರಿ 27ರಂದು ಜಾರಿಗೆ ಬಂದಿತ್ತು.

ಪಾಕ್ ಗಡಿಯಲ್ಲಿ ಶಸ್ತ್ರಾಸ್ತ್ರ ಪತ್ತೆ

ಮೆಂಧರ್/ಪೂಂಛ್ (ಪಿಟಿಐ): ಭಾರತ- ಪಾಕಿಸ್ತಾನ ಗಡಿಯಲ್ಲಿರುವ ಪೂಂಛ್ ಜಿಲ್ಲೆಯಲ್ಲಿ ಶಸ್ತ್ರಾಸ್ತ್ರಗಳನ್ನು ತುಂಬಿದ್ದ ಚೀಲವನ್ನು ಸೇನೆಯ ಅಧಿಕಾರಿಗಳು ಗುರುವಾರ ವಶಪಡಿಸಿಕೊಂಡಿದ್ದಾರೆ.

ರಂಗರ್ ನಲ್ಲಾ ಹಾಗೂ ಪೂಂಛ್ ನದಿ ನಡುವಿನ ಪ್ರದೇಶದಲ್ಲಿ ಮುಂಜಾನೆ ಚೀಲವು ಪತ್ತೆಯಾಗಿದೆ. ಡ್ರೋನ್ ಮೂಲಕ ಈ ಚೀಲವನ್ನು ಇಲ್ಲಿ ಹಾಕಲಾಗಿದೆ ಎಂದು ಶಂಕಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮದ್ದುಗುಂಡುಗಳು, ಹಳದಿ ಟಿಫಿನ್ ಬಾಕ್ಸ್ ಹಾಗೂ ಸುಧಾರಿತ ಸ್ಫೋಟಕ ಸಾಧನಗಳು (ಐಇಡಿ) ಚೀಲದಲ್ಲಿ ಪತ್ತೆಯಾಗಿವೆ.

ಭಯೋತ್ಪಾದಕನ ಆಸ್ತಿ ಜಪ್ತಿ

ಪೂಂಛ್/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯ ಮೆಂಧರ್‌ನಲ್ಲಿ, ಭಯೋತ್ಪಾದಕನಿಗೆ ಸೇರಿದ್ದ ಸ್ಥಿರಾಸ್ತಿಯನ್ನು ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಮೆಂಧರ್ ಪೊಲೀಸರು ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ಜಂಟಿ ತಂಡವು, ನಕ್ಕಾ ಮಜ್ಜರಿ ಪ್ರದೇಶದಲ್ಲಿರುವ ಕೃಷಿ ಜಮೀನನ್ನು ವಶಪಡಿಸಿಕೊಂಡಿದೆ. ಆಸ್ತಿಯ ಮಾರುಕಟ್ಟೆ ಮೌಲ್ಯ ₹10 ಲಕ್ಷ ಎಂದು ಅಂದಾಜಿಸಲಾಗಿದೆ.

ಇವು ಇಲ್ಲಿನ ನಿವಾಸಿ ರಫೀಕ್ ನಾಯ್ ಅಲಿಯಾಸ್ ಸುಲ್ತಾನ್‌ಗೆ ಸೇರಿದ ಆಸ್ತಿಯಾಗಿದೆ. ಇದೀಗ ಈತ ಪಾಕಿಸ್ತಾನದಲ್ಲಿದ್ದು, ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿದ್ದಾನೆ. 9 ಕ್ರಿಮಿನಲ್ ಪ್ರಕರಣಗಳಲ್ಲಿ ಬೇಕಾಗಿರುವ ಈತನನ್ನು ‘ಭಯೋತ್ಪಾದಕ’ ಎಂದು ಘೋಷಿಸಲಾಗಿದೆ.

ರಫೀಕ್, ನಿಷೇಧಿತ ಭಯೋತ್ಪಾದನಾ ಸಂಘಟನೆ ತಹ್ರೀಕ್–ಉಲ್–ಮುಜಾಹಿದ್ದೀನ್ ಮತ್ತು ಜಮ್ಮು ಕಾಶ್ಮೀರ ಘಜ್ನವಿ ಪಡೆಯ ಹ್ಯಾಂಡ್ಲರ್ ಹಾಗೂ ಲಾಂಚ್ ಕಮಾಂಡರ್ ಆಗಿದ್ದಾನೆ.

ಶಸ್ತ್ರಾಸ್ತ್ರ ವಶ

ಇಂಫಾಲ (ಪಿಟಿಐ): ಮಣಿಪುರದ ಕಾಕಚಿಂಗ್ ಜಿಲ್ಲೆಯ ವಾಬಗೈ ನಟೆಖೋಂಗ್ ತುರೆನ್ಮೈ ಪ್ರದೇಶದಲ್ಲಿ ಶಸ್ತ್ರಾಸ್ತ್ರ ಹಾಗೂ ಅಪಾರ ಪ್ರಮಾಣದ ಸ್ಫೋಟಕಗಳನ್ನು ಪೊಲೀಸರು ಬುಧವಾರ ವಶಪಡಿಸಿಕೊಂಡಿದ್ದಾರೆ.

ಒಂದು ಎಂ–16 ರೈಫಲ್, ಒಂದು ಎಸ್‌ಎಲ್‌ಆರ್, ಒಂದು ಸಿಂಗಲ್–ಬ್ಯಾರೆಲ್ ಗನ್, ಎರಡು ಸಿಂಗಲ್–ಬ್ಯಾರೆಲ್ ಬೋಲ್ಟ್– ಆಕ್ಷನ್ ರೈಫಲ್‌ಗಳು ಮತ್ತು 7.65 ಎಂಎಂ ಪಿಸ್ತೂಲ್, 10 ಗ್ರೆನೇಡ್‌ಗಳು, ನಾಲ್ಕು ಡಿಟೋನೇಟರ್‌ಗಳು, 3 ಕೆ.ಜಿ ತೂಕದ ಸುಧಾರಿತ ಸ್ಫೋಟಕ ಸಾಧನ, ಒಂದು ಸ್ಫೋಟಕ ಶೆಲ್, ಒಂದು 51 ಎಂಎಂ ಮಾರ್ಟರ್ ಬಾಂಬ್, ಆರು ಅಶ್ರುವಾಯು ಶೆಲ್‌ಗಳು ಮತ್ತು 71 ಸಜೀವ ಗುಂಡುಗಳು, ಕ್ವಾಡ್‌ಕಾಪ್ಟರ್ ಡ್ರೋನ್ ಹಾಗೂ ಅದಕ್ಕೆ ಸಂಬಂಧಿತ ಪರಿಕರಗಳನ್ನು ವಶಕ್ಕೆ ಪಡೆಯಲಾಗಿದೆ.

ಪ್ರವಾಸಿ ಆಕರ್ಷಣೆ

ಪಿಟಿಐ ಚಿತ್ರ

ಹೊಸ ವರ್ಷಾಚರಣೆ ಅಂಗವಾಗಿ ಜಬಲ್‌ಪುರದ ಮಾರ್ಬಲ್ ರಾಕ್ ಜಲಪಾತದ ಬಳಿ ಅಪಾರ ಸಂಖ್ಯೆಯ ಪ್ರವಾಸಿಗರು ಸೇರಿದ್ದರು

ಪೊಲೀಸ್ ಠಾಣೆ ಬಳಿ ಸ್ಫೋಟ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಸೋಲನ್ ಜಿಲ್ಲೆಯ ನಾಲಾಘಡ ಪೊಲೀಸ್ ಠಾಣೆಯ ಬಳಿ ಗುರುವಾರ ಸ್ಫೋಟ ಸಂಭವಿಸಿದೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಫೋಟದ ತೀವ್ರತೆಗೆ ಠಾಣೆಯ ಅಕ್ಕಪಕ್ಕದ ಕಟ್ಟಡಗಳ ಕಿಟಕಿ ಗಾಜುಗಳು ಬಿರುಕು ಬಿಟ್ಟಿವೆ.

ಸ್ಫೋಟಕ್ಕೆ ಕಾರಣ ಏನು ಎಂಬುದು ತಿಳಿದುಬಂದಿಲ್ಲ. ವಿಧಿವಿಜ್ಞಾನ ತಜ್ಞರ ತಂಡವು ಸ್ಥಳಕ್ಕೆ ಭೇಟಿ ನೀಡಿ, ಮಾದರಿಯನ್ನು ಕಲೆಹಾಕಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಮೇಯರ್‌ಗೆ ಪ್ರಧಾನಿ ಪತ್ರ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿಯು ತಿರುವನಂತಪುರ ಪಾಲಿಕೆಯನ್ನು ಗೆದ್ದುಕೊಂಡಿತ್ತು. ‘ಇದೊಂದು ಅಭೂತಪೂರ್ವ ಗೆಲುವು’ ಎಂದು ಬಣ್ಣಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಮೇಯರ್ ವಿ.ವಿ. ರಾಜೇಶ್ ಅವರಿಗೆ ಡಿ.30ರಂದು ಪತ್ರ ಬರೆದಿದ್ದಾರೆ.

ರಾಜೇಶ್ ಮತ್ತು ಪಕ್ಷದ ಕಾರ್ಯಕರ್ತರ, ಮುಖಂಡರ ಶ್ರಮವನ್ನು ಕೊಂಡಾಡಿರುವ ಪ್ರಧಾನಿ ಮೋದಿ, ‘ಯುವಕರು ಮತ್ತು ಮಹಿಳೆಯರು ಹೊಸ ಬೆಳಗನ್ನು ನೋಡಲು ಸಿದ್ಧರಾಗಿದ್ದಾರೆ ಎನ್ನುವುದಕ್ಕೆ ಈ ಗೆಲುವೇ ಸಾಕ್ಷಿ’ ಎಂದು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ‘ದೆಹಲಿಯಲ್ಲಿ ಸ್ನೇಹಿತರು; ಕೇರಳದಲ್ಲಿ ವಿರೋಧಿಗಳು ಎಂಬ ಎಲ್‌ಡಿಎಫ್ ಮತ್ತು ಯುಡಿಎಫ್ ಮೈತ್ರಿಕೂಟಗಳ ‘ಮ್ಯಾಚ್‌ಫಿಕ್ಸಿಂಗ್’ ಅಂತ್ಯವಾಗಲಿದೆ ಎಂದಿದ್ದಾರೆ.

‘ದೇಶಕ್ಕೆ ಅವಮಾನವಾಗಿದೆ’

ಹೈದರಾಬಾದ್ (ಪಿಟಿಐ): ‘ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮ ಘೋಷಣೆಗೆ ಮಧ್ಯಸ್ಥಿಕೆ ವಹಿಸಿದ್ದೇವೆ ಎಂಬ ಚೀನಾದ ಹೇಳಿಕೆಯಿಂದ ದೇಶಕ್ಕೆ ಅವಮಾನ ಆಗಿದೆ. ಕೇಂದ್ರ ಸರ್ಕಾರವು ಇದನ್ನು ತೀವ್ರವಾಗಿ ಖಂಡಿಸಬೇಕು ಮತ್ತು ಈ ಹೇಳಿಕೆಯನ್ನು ಸ್ಪಷ್ಟವಾಗಿ ತಿರಸ್ಕರಿಸಬೇಕು’ ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಒತ್ತಾಯಿಸಿದ್ದಾರೆ.

‘ಚೀನಾದೊಂದಿಗಿನ ಸಂಬಂಧಗಳನ್ನು ‘ಸಹಜ ಸ್ಥಿತಿ’ಯಲ್ಲಿ ಇರಿಸಿಕೊಳ್ಳುವಾಗ, ಭಾರತದ ಗೌರವ ಅಥವಾ ಸಾರ್ವಭೌಮತೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು’ ಎಂದೂ ಅವರು ಹೇಳಿದ್ದಾರೆ.

ಈಗ ಚೀನಾ, ಭಾರತ ಮತ್ತು ಪಾಕಿಸ್ತಾನವನ್ನು ಒಂದೇ ತಕ್ಕಡಿಯಲ್ಲಿ ಇಟ್ಟು, ದಕ್ಷಿಣ ಏಷ್ಯಾದಲ್ಲಿ ತನ್ನನ್ನು ತಾನು ಶ್ರೇಷ್ಠ ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದಿದ್ದಾರೆ.

ಆರೋಪಿಗಳನ್ನು ವಶಕ್ಕೆ ಕೋರಿ ಕೊಲ್ಲಂ ವಿಚಕ್ಷಣಾ ಕೋರ್ಟ್‌ಗೆ ಎಸ್‌ಐಟಿ ಅರ್ಜಿ ಸಲ್ಲಿಕೆ

ಶಬರಿಮಲೆ: ಹೆಚ್ಚು ಚಿನ್ನ ನಾಪತ್ತೆ ಶಂಕೆ

ತಿರುವನಂತಪುರಂ (ಪಿಟಿಐ): ಶಬರಿಮಲೆ ಚಿನ್ನ ನಾಪತ್ತೆ ಪ್ರಕರಣದ ಪ್ರಮುಖ ಆರೋಪಿಗಳಿಂದ ಈವರೆಗೆ ವಶಪಡಿಸಿಕೊಂಡಿರುವ ಚಿನ್ನಕ್ಕಿಂತಲೂ ಹೆಚ್ಚಿನ ಪ್ರಮಾಣದ ಚಿನ್ನ ದೇವಾಲಯದಿಂದ ನಾಪತ್ತೆಯಾಗಿದೆ ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಶಂಕೆ ವ್ಯಕ್ತಪಡಿಸಿದೆ.

ಆರೋಪಿಗಳಾದ ಉಣ್ಣಿಕೃಷ್ಣನ್ ಪೋಟಿ, ಸ್ಮಾರ್ಟ್ ಕ್ರಿಯೇಷನ್ಸ್ ಸಿಇಒ ಪಂಕಜ್ ಭಂಡಾರಿ ಹಾಗೂ ಆಭರಣ ವ್ಯಾಪಾರಿ ಗೋವರ್ಧನ್ ರೊದ್ದಂ ಅವರನ್ನು ತನಿಖಾ ತಂಡದ ವಶಕ್ಕೆ ನೀಡಬೇಕೆಂದು ಕೋರಿ ಕೊಲ್ಲಂ ವಿಚಕ್ಷಣಾ ನ್ಯಾಯಾಲಯಕ್ಕೆ ಎಸ್‌ಐಟಿ ಅರ್ಜಿ ಸಲ್ಲಿಸಿದೆ. ಈ ವೇಳೆ ಪ್ರಕರಣದ ವಿವರಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಿ, ಈ ಸಂಶಯ ವ್ಯಕ್ತಪಡಿಸಿದೆ.

2019ರಲ್ಲಿ ದ್ವಾರಪಾಲಕ ಮೂರ್ತಿಗಳ ಕವಚಗಳು ಹಾಗೂ ಗರ್ಭಗುಡಿಯ 7 ಚಿನ್ನ ಲೇಪಿತ ತಾಮ್ರದ ಕವಚವನ್ನು ಸ್ಮಾರ್ಟ್ ಕ್ರಿಯೇಷನ್ಸ್‌ನಲ್ಲಿ ಎಲೆಕ್ಟ್ರೋಪ್ಲೇಟಿಂಗ್ ಮಾಡಿಸಲು ಉಣ್ಣಿಕೃಷ್ಣನ್ ಅವರಿಗೆ ನೀಡಲಾಗಿತ್ತು. ಈ ಪ್ರಕ್ರಿಯೆ ಮುಗಿದ ನಂತರ ಆರೋಪಿಗಳು ಉಳಿದ ಚಿನ್ನವನ್ನು ಕಳವು ಮಾಡಿದ್ದಾರೆ ಎಂದು ಎಸ್‌ಐಟಿ ಉಲ್ಲೇಖಿಸಿದೆ.

ಕವಚದ ಒಟ್ಟು ತೂಕ 42.100 ಕೆಜಿ ಆಗಿತ್ತು. ಚಿನ್ನ ಲೇಪನದ ವೇಳೆ 109.243 ಗ್ರಾಂ ಚಿನ್ನವನ್ನು ತೆಗೆದುಕೊಂಡಿರುವುದಾಗಿ ಭಂಡಾರಿ ಒಪ್ಪಿಕೊಂಡಿದ್ದಾರೆ. ಅಲ್ಲದೇ, ಲೇಪನಕ್ಕೆ ಶುಲ್ಕವಾಗಿ ಈ ಚಿನ್ನವನ್ನು ಪಡೆದಿರುವುದಾಗಿಯೂ ಹೇಳಿದ್ದಾರೆ. ಇನ್ನು ಲೇಪನದ ವೇಳೆ ಕವಚದಿಂದ ತೆಗೆದಿರುವ ಚಿನ್ನವನ್ನು ಗೋವರ್ಧನ್ ಅವರಿಗೆ ನೀಡಲಾಗಿದ್ದು, 2025ರ ಅಕ್ಟೋಬರ್ 24ರಂದು 474.960 ಗ್ರಾಂ ಚಿನ್ನವನ್ನು ಗೋವರ್ಧನ್ ಎಸ್‌ಐಟಿಗೆ ಒಪ್ಪಿಸಿದ್ದಾರೆ.

ಆದರೆ, ತನಿಖೆ ವೇಳೆ ಆರೋಪಿಗಳಿಂದ ವಶಪಡಿಸಿಕೊಂಡಿರುವ ಈ ಚಿನ್ನದ ಪ್ರಮಾಣಕ್ಕಿಂತಲೂ ಹೆಚ್ಚಿನ ಚಿನ್ನ ಕವಚಗಳಿಂದ ಕಾಣೆಯಾಗಿರುವ ಶಂಕೆ ವ್ಯಕ್ತವಾಗಿದೆ. ಹೀಗಾಗಿ ವೈಜ್ಞಾನಿಕ ವಿಶ್ಲೇಷಣೆಗೆ ತಾಮ್ರದ ಕವಚಗಳ ಮೇಲೆ ಲೇಪಿಸಿರುವ ಚಿನ್ನದ ಲೇಪನದ ಮಾದರಿಯನ್ನು ತಿರುವನಂತಪುರದ ವಿಕ್ರಂ ಸಾರಾಭಾಯಿ ಬಾಹ್ಯಾಕಾಶ ಕೇಂದ್ರಕ್ಕೆ (ವಿಎಸ್‌ಎಸ್‌ಸಿ) ಕಳುಹಿಸಲಾಗಿದ್ದು, ವರದಿ ಬರುವುದು ಬಾಕಿ ಇದೆ ಎಂದೂ ಅರ್ಜಿಯಲ್ಲಿ ಎಸ್‌ಐಟಿ ತಿಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ 10 ಮಂದಿಯನ್ನು ಎಸ್‌ಐಟಿ ಬಂಧಿಸಿದೆ.

‘ಸೋನಿಯಾ ಭೇಟಿ ಹೇಗೆ ಸಾಧ್ಯ?’

ಶಬರಿಮಲೆ ಚಿನ್ನ ನಾಪತ್ತೆ ಪ್ರಕರಣದ ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಹಾಗೂ ಕಳವಾದ ಚಿನ್ನವನ್ನು ಖರೀದಿಸಿದ ವ್ಯಕ್ತಿಯು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಲು ಹೇಗೆ ಸಾಧ್ಯವಾಯಿತು ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಶ್ನಿಸಿದ್ದಾರೆ.

ಎಸ್‌ಐಟಿ ತನಿಖೆಯಲ್ಲಿ ಪಿಣರಾಯಿ ಹಾಗೂ ಅವರ ಕಚೇರಿಯ ಹಸ್ತಕ್ಷೇಪವಿದೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸುತ್ತಿರುವ ಬಗ್ಗೆ ವಿಜಯನ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ‘ವಿಚಾರಣೆಯಲ್ಲಿ ಮುಖ್ಯಮಂತ್ರಿ ಕಚೇರಿಯ ಯಾವ ಹಸ್ತಕ್ಷೇಪವೂ ಇಲ್ಲ’ ಎಂದಿದ್ದಾರೆ.

ಇದೇ ವೇಳೆ, ‘ಸೋನಿಯಾ ಗಾಂಧಿ ಅವರನ್ನು ಉಣ್ಣಿಕೃಷ್ಣನ್ ಭೇಟಿಮಾಡಿರುವ ಫೋಟೊ ಬಹಿರಂಗವಾಗಿದೆ. ಮೊದಲು ಇದಕ್ಕೆ ಸ್ಪಷ್ಟನೆ ಸಿಗಬೇಕು’ ಎಂದು ಆಗ್ರಹಿಸಿದ್ದಾರೆ.

ತ್ರಿವೇಣಿ ಕೆಂಪೇಗೌಡ ಸರ್ಕಲ್ DOLBY 7.1 4K DIGITAL 4ಆಟ
ಮಾಗಡಿರಸ್ತೆ : ಪ್ರಸನ್ನ
ಕಾಮಾಕ್ಷಿಪಾಳ್ಯ: VICTORY CINEMA
ಲಾಲ್‌ಬಾಗ್‌ರಸ್ತೆ: URVASHI
ರಾಜಾಜಿನಗರ : ನವರಂಗ್
ಜೆ.ಪಿ.ನಗರ : ಸಿದ್ಧಲಿಂಗೇಶ್ವರ
ಆವಲಹಳ್ಳಿ : ವೆಂಕಟೇಶ್ವರ
ಪೀಣ್ಯ : ಭಾರತಿ
ಕಮಲಾನಗರ : ವೀರಭದ್ರೇಶ್ವರ
ಸುಂಕದಕಟ್ಟೆ : ಮೋಹನ್
ಸಂಜಯನಗರ : ವೈಭವ್
ಬನಶಂಕರಿ : ಕಾಮಾಕ್ಯ
ಕೋಣನಕುಂಟೆ: ಮಾನಸ
ಹೊಂಗಸಂದ್ರ : ಬೃಂದಾ
ಉಲ್ಲಾಳ : ವಜ್ರೇಶ್ವರಿ
ಉತ್ತರಹಳ್ಳಿ : ವೈಷ್ಣವಿ ವೈಭವಿ
ಗರುಡಾಚಾರ್‌ಪಾಳ್ಯ: ವಿಜಯಲಕ್ಷ್ಮೀ
ಚಿಕ್ಕಲ್ಲಸಂದ್ರ : ಬಾಲಾಜಿ
ಸರ್ಜಾಪುರ : RAVI
ಗೊಲ್ಲರಹಟ್ಟಿ : ವೆಂಕಟೇಶ್ವರ
ಅಗರ : ತಿರುಮಲ
ಕಾಡುಗೋಡಿ : ಶ್ರೀನಿವಾಸ
ಬೊಮ್ಮನಹಳ್ಳಿ : ಕೃಷ್ಣ
ಗೌಡನಪಾಳ್ಯ : ಶ್ರೀನಿವಾಸ
ಗೊಟ್ಟಿಗೆರೆ : ಲಕ್ಷ್ಮೀ
ಲಗ್ಗೆರೆ : ಆಕಾಶ್
ಹರಿನಗರ : ವಿನಾಯಕ
ಮಲ್ಲತ್ತಹಳ್ಳಿ : ವಿ.ಆರ್.ಸಿನಿಮಾಸ್
ಯಲಹಂಕ : ಪ್ರಕಾಶ್
ಚಿಕ್ಕಬಾಣಾವರ: ಅಶೋಕ
ಬಂಗಾರಪೇಟೆ : ಬಾಲಚಂದರ್
ಜಿಗಣಿ : ನಂದೀಶ್ವರ
ವರ್ತೂರು: ವಿನಾಯಕ
ಅತ್ತಿಬೆಲೆ : ಗೌರಿಶಂಕರ
ನೆಲಮಂಗಲ : ರೂಪ
PVR INOX MALL OF ASIA, NEXUS | ORION, VAISHNAVI | REGALIA, MARKET CITY | SPIRIT, UPTOWN | BHARATIYA, REX | GT | VR MALL, GLOBAL | FALCONCITY, SWAGATH | CENTRAL, LIDO | MANTRI | RMZ, GARUDA | YELAHANKA, NEIGHBOURHOOD, SBR | BROOKFIELD, VEGACITY
cinépolis ETA | MEENAKSHI, ORION EAST | LULU, SHANTINIKETAN | SJR
GOPALAN CINEMAS ARCH | GRAND, INNOVATION, INNOVATION BTM, SIGNATURE, LEGACY
ROCKLINE mall & cinemas
MIRAJ SUNKADAKATTE
CINEPHILE HSR LAYOUT
INNOVATIVE MULTIPLEX MARATHALLI
KING CINEMAS SEEGEHALLI
MOVIETIME RR NAGAR
new FANGLER MG ROAD
ತುಮಕೂರು : ಮಾರುತಿ, PVR INOX
ಕುಣಿಗಲ್ : ಆಕಾಶ್
ರಾಮನಗರ : ಶ್ರೀರಾಮ
ಚನ್ನಪಟ್ಟಣ : ಲಕ್ಷ್ಮೀ
ಕನಕಪುರ : ಅರ್ಕಾವತಿ
ತಿಪಟೂರು : ಗಣೇಶ್
ಮಾಗಡಿ : ಬಾಲಾಜಿ
ಹಾರೋಹಳ್ಳಿ : ವಿನಾಯಕ
ಆನೇಕಲ್ : ಲಕ್ಷ್ಮೀನರಸಿಂಹ
ದೊಡ್ಡಬಳ್ಳಾಪುರ: ವೈಭವ್
ಚಿಕ್ಕಬಳ್ಳಾಪುರ : ಬಾಲಾಜಿ
ಮಾಲೂರು : ಬಾಲಾಜಿ
ವಿಜಿಪುರ : ಗೌರಿಶಂಕರ
ಸಿರಾ : ಭಾಗ್ಯಲಕ್ಷ್ಮೀ
ತುರುವೇಕೆರೆ : ಪೂರ್ಣಿಮಾ
ಮೈಸೂರು : ವುಡ್‌ಲ್ಯಾಂಡ್ಸ್, DRC CINEMAS, PVR INOX GARUDA | FORUM SATYAM | CENTRO, VISION CINEMAS
ಮಂಡ್ಯ : ಸಂಜಯ್
ಹಾಸನ : ಸಹ್ಯಾದ್ರಿ
ಚಾಮರಾಜನಗರ: ಭ್ರಮರಾಂಬ
ಕೊಳ್ಳೇಗಾಲ : ಶಾಂತಿ
ಮಳವಳ್ಳಿ : ರಾಜರಾಜೇಶ್ವರಿ
ನಾಗಮಂಗಲ : ವೆಂಕಟೇಶ್ವರ
ಪಾಂಡವಪುರ : ಕೋಕಿಲ
ಹುಣಸೂರು : ಲೀಲಾ
ಗೋಣಿಕೊಪ್ಪ : ಸಿನಿಪ್ಲೆಕ್ಸ್
ಬನ್ನೂರು : ರತ್ನಮಹಲ್
ನಂಜನಗೂಡು: ಶ್ರೀವತ್ಸ
ಶ್ರೀರಂಗಪಟ್ಟಣ: ಶ್ರೀದೇವಿ
ಸಕಲೇಶಪುರ : ತೇಜಸ್ವಿನಿ
ಸಾತನೂರು : ವೆಂಕಟೇಶ್ವರ
ಕೆ.ಆರ್.ನಗರ : ವೆಂಕಟೇಶ್ವರ
ಗುಂಡ್ಲುಪೇಟೆ : ವೆಂಕಟೇಶ್ವರ
ಚನ್ನರಾಯಪಟ್ಟಣ: ಗಾಯತ್ರಿ
ಹೊಳೆನರಸೀಪುರ: ಚನ್ನಾಂಬಿಕಾ
ಅರಸೀಕೆರೆ: ರತ್ನ
ಕೆ.ಆರ್.ಪೇಟೆ : ಕೆ.ಜೆ.ಬಿ.ಪಿಕ್ಚರ್‌ಪ್ಯಾಲೇಸ್
ಟಿ.ನರಸೀಪುರ: ಮುರುಗನ್
ಕೆ.ಎಂ.ದೊಡ್ಡಿ : ಸುಮಾ
ದಾವಣಗೆರೆ : ಅಶೋಕ
ಚಿತ್ರದುರ್ಗ : ಪ್ರಸನ್ನ
ಬಳ್ಳಾರಿ : ನಟರಾಜ
ಹೊಸಪೇಟೆ : ಮೀರ್‌ಆಲಂ
ಸಂಡೂರು : ಶ್ರೀನಿವಾಸ
ಹಗರಿಬೊಮ್ಮನಹಳ್ಳಿ: ಕೃಷ್ಣ
ಹಿರಿಯೂರು : ಶ್ರೀಶೈಲ
ಹುಬ್ಬಳ್ಳಿ : ಸುಧಾ, LAXMI CITY PRIDE MULTIPLEX, cinépolis
ಧಾರವಾಡ : ಪದ್ಮ, PVR INOX
ಗದಗ : ಕೃಷ್ಣ
ಬೆಳಗಾವಿ : ಪ್ರಕಾಶ್, PVR INOX, KAPEEL CINEMA, Bharath Cinemas
ಬಿಜಾಪುರ : ಡ್ರೀಮ್‌ಲ್ಯಾಂಡ್
ರಾಣೇಬೆನ್ನೂರು: ಶಿವಶಕ್ತಿ
ಮುಧೋಳ : ಸೂರ್ಯವಂಶಿ
ಮುಂಡರಗಿ : CHHOTU MAHARAJ
ಲಕ್ಷ್ಮೇಶ್ವರ : ಕೃಷ್ಣ
ಮಹಾಲಿಂಗಪುರ: ಮಾರುತಿ
ರಬಕವಿ : ಶ್ರೀನಿವಾಸ
ಜಮಖಂಡಿ : ಶ್ರೀನಿವಾಸ
ಬಾಗಲಕೋಟೆ : ವಾಸವಿ
ಗೋಕಾಕ್ : ಲಕ್ಷ್ಮೀ
ಅಥಣಿ : ದುರ್ಗಾಲಕ್ಷ್ಮೀ
ಹಾರೂಗೇರಿ: ಚಂದ್ರಮ
ಬಾದಾಮಿ : ಮಹಾಕೂಟೇಶ್ವರ
ಇಳಕಲ್ : ನಾರಾಯಣ
ಬೀಳಗಿ : ಶ್ರೀನಿವಾಸ
ತಾಳಿಕೋಟೆ : ಮಹಾವೀರ್
ಹಾವೇರಿ : ಮಾಗವಿ
ರಾಮದುರ್ಗ : ವೆಂಕಟೇಶ್
ಇಂಡಿ : ಮಹಾವೀರ್
ಸಿಂಧಗಿ : ಪ್ರಶಾಂತ್
ಬ್ಯಾಡಗಿ : ಶೋಭಾ
ರೋಣ : ಮಲ್ಲಿಕಾರ್ಜುನ
ಕಲಬುರ್ಗಿ : ಸಂಗಮ್, PVR INOX, MIRAJ
ಗಂಗಾವತಿ : MOHIUDDIN TALKIES
ಕೊಪ್ಪಳ : ಶಾರದ
ಮಾನ್ವಿ : ಅರ್ಪಣ
ಕರಟಗಿ : ಪದ್ಮಾವತಿ
ಕನಕಗಿರಿ : ನಂದಿ
ಸಿಂಧನೂರು : ಶರಣಬಸವೇಶ್ವರ
ಕುಷ್ಟಗಿ : ಬಸವರಾಜ್
ಸಿರವಾರ : ಶಿವಾನಿ
ಶಿವಮೊಗ್ಗ : ಮಂಜುನಾಥ, Bharath Cinemas
ಭದ್ರಾವತಿ : ವೀರಭದ್ರೇಶ್ವರ
ಕಡೂರು : ವಿಜಯಲಕ್ಷ್ಮೀ
ಚಿಕ್ಕಮಗಳೂರು: ಶ್ರೀಲೇಖಾ
ತೀರ್ಥಹಳ್ಳಿ : ವೆಂಕಟೇಶ್ವರ
ಸಾಗರ : ಶ್ರೀ
ಶಿಕಾರಿಪುರ : ಕಿರಣ್
ಬಾಳೆಹೊನ್ನೂರು: ಸುದರ್ಶಿನಿ
ಮಂಗಳೂರು : SP CINEMAS, PVR INOX, cinépolis, Bharath Cinemas BHARATH MALL, Cine GALAXY SURATHKAL
ಉಡುಪಿ : ಅಲಂಕಾರ್, Bharath Cinemas
ಮಣಿಪಾಲ : PVR INOX, cinépolis
ಕುಂದಾಪುರ : Bharath Cinemas
ಪಡುಬಿದ್ರೆ : Bharath Cinemas
ಪುತ್ತೂರು : Bharath Cinemas
ಹಾಗೂ ರಾಜ್ಯಾದ್ಯಂತ

ಕ್ರೀಡಾಡಳಿತ ಕಾಯ್ದೆ ಭಾಗಶಃ ಜಾರಿ

ರಾಷ್ಟ್ರೀಯ ಕ್ರೀಡಾ ಮಂಡಳಿ, ಕ್ರೀಡಾ ನ್ಯಾಯಮಂಡಳಿ ಸ್ಥಾಪನೆಗೆ ದಾರಿ



ಸಚಿವ ಮನ್ಸುಖ್ ಮಾಂಡವೀಯ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆಯು ಗುರುವಾರದಿಂದ ಭಾಗಶಃ ಜಾರಿಗೆ ಬಂದಿದೆ. ಈ ಕಾಯ್ದೆಯು ಶಕ್ತಿಶಾಲಿ ರಾಷ್ಟ್ರೀಯ ಕ್ರೀಡಾ ಮಂಡಳಿ (ಎನ್‌ಎಸ್‌ಬಿ) ಮತ್ತು ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ (ಟ್ರಿಬ್ಯೂನಲ್) ಸ್ಥಾಪನೆಗೆ ದಾರಿಮಾಡಿಕೊಡಲಿದೆ.

2025ರ ಆಗಸ್ಟ್ 18ರಂದು ಈ ಕಾಯ್ದೆಗೆ ಸಂಬಂಧಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಇದು ದೇಶದ ಕ್ರೀಡಾ ಕ್ಷೇತ್ರದ ಇತಿಹಾಸದಲ್ಲೇ ಅತಿ ದೊಡ್ಡ ಸುಧಾರಣಾ ಕ್ರಮ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಬಣ್ಣಿಸಿದ್ದರು.

ಈ ಕಾಯ್ದೆಯ ಕೆಲವು ಸೆಕ್ಷನ್‌ಗಳು ಮತ್ತು ಸಬ್ ಸೆಕ್ಷನ್‌ಗಳು ಜನವರಿ 1ರಿಂದ ಜಾರಿಗೆ ಬಂದಿವೆ ಎಂದು ಕ್ರೀಡಾ ಸಚಿವಾಲಯ ಬುಧವಾರ ತಡರಾತ್ರಿ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಕಾಯ್ದೆಯ ಪ್ರಕಾರ, ಭಾರತ ಒಲಿಂಪಿಕ್ ಸಂಸ್ಥೆ, ರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ, ಕ್ರೀಡಾ ಸಂಸ್ಥೆಗಳು, ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು (ಎನ್‌ಎಸ್‌ಎಫ್) 15 ಸದಸ್ಯರನ್ನು ಮೀರದಂತೆ ಕಾರ್ಯಕಾರಿ ಸಮಿತಿಗಳನ್ನು ರಚಿಸಬೇಕಾಗುತ್ತದೆ. ಇದರಲ್ಲಿ ಕನಿಷ್ಠ ಇಬ್ಬರು ಕ್ರೀಡಾಪಟುಗಳು ಇರುವುದು ಕಡ್ಡಾಯವಾಗಿದೆ.

ರಾಷ್ಟ್ರೀಯ ಕ್ರೀಡಾ ಮಂಡಳಿ ಮತ್ತು ರಾಷ್ಟ್ರೀಯ ಕ್ರೀಡಾ ಟ್ರಿಬ್ಯೂನಲ್ ಸ್ಥಾಪನೆ ಪ್ರಕ್ರಿಯೆಗೂ ಚಾಲನೆ ದೊರಕಲಿದೆ.

ಕ್ರೀಡಾ ಮಂಡಳಿಗೆ ಅಧ್ಯಕ್ಷ ಮತ್ತು ಸದಸ್ಯರನ್ನು ಕೇಂದ್ರ ಸರ್ಕಾರ ನೇಮಕ ಮಾಡಲಿದೆ. ಸಮರ್ಥ, ಸಚ್ಚಾರಿತ್ರ್ಯವುಳ್ಳ ಕ್ರೀಡಾಪಟುಗಳನ್ನು, ಸಾರ್ವಜನಿಕ ಆಡಳಿತ, ಕ್ರೀಡಾಡಳಿತ, ಕ್ರೀಡಾ ನಿಯಮಗಳಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ನುರಿತವರನ್ನು ನೇಮಕ ಮಾಡುವಂತೆ ಕಾಯ್ದೆಯಲ್ಲಿ ತಿಳಿಸಲಾಗಿದೆ. ಶೋಧನಾ ಮತ್ತು ಆಯ್ಕೆ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ನೇಮಕಗಳು ನಡೆಯಲಿದೆ.

ಇನ್ನು ಕೆಲವೇ ತಿಂಗಳಲ್ಲಿ ಚುನಾವಣೆ ನಿಗದಿಯಾಗಿರುವ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ, ಅದನ್ನು ಡಿಸೆಂಬರ್‌ವರೆಗೆ ಮುಂದೂಡಲು ಸಚಿವಾಲಯವು ಅವಕಾಶ ನೀಡಿದೆ. ಹೀಗಾಗಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಚುನಾವಣೆ ಸಹ ವರ್ಷಾಂತ್ಯಕ್ಕೆ ನಡೆಯಲಿದೆ.

ಕ್ರೀಡಾ ಫೆಡರೇಷನ್‌ಗಳು ಸರ್ಕಾರದಿಂದ ಹಣಕಾಸಿನ ನೆರವು ಪಡೆಯಬೇಕಾದರೆ ರಾಷ್ಟ್ರೀಯ ಕ್ರೀಡಾ ಮಂಡಳಿಯ ಮಾನ್ಯತೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಮಂಡಳಿ ಸದಸ್ಯರ ಗರಿಷ್ಠ ವಯೋಮಿತಿಯನ್ನು 65ಕ್ಕೆ ನಿಗದಿಪಡಿಸಲಾಗಿದೆ. ವಯಸ್ಸಿನ ನಿಬಂಧನೆಗೊಳಪಟ್ಟು ಸದಸ್ಯರು ಮತ್ತೊಂದು ಅವಧಿಗೆ ನೇಮಕ ಗೊಳ್ಳಬಹುದಾಗಿದೆ.

ಗರಿಷ್ಠ ವಯೋಮಿತಿ 67 ವರ್ಷಕ್ಕೆ ನಿಗದಿ

ಕ್ರೀಡಾ ಸಂಬಂಧಿ ವ್ಯಾಜ್ಯಗಳನ್ನು ನಿಭಾಯಿಸುವ ಉದ್ದೇಶದಿಂದ ಕ್ರೀಡಾ ನ್ಯಾಯ ಮಂಡಳಿಯನ್ನು ಹೊಸ ಕ್ರೀಡಾ ನೀತಿಯಡಿ ರೂಪಿಸಲಾಗುತ್ತಿದೆ. ಈಗಾಗಲೇ ಉಲ್ಲೇಖಿಸಿರುವ ನಿಯಮಗಳ ಪ್ರಕಾರ ಕ್ರೀಡಾ ನ್ಯಾಯಮಂಡಳಿ ಸದಸ್ಯರ ಗರಿಷ್ಠ ವಯೋಮಿತಿಯನ್ನು 67 ವರ್ಷಕ್ಕೆ ನಿಗದಿಪಡಿಸಲಾಗಿದೆ.

ಕ್ರೀಡಾ ಫೆಡರೇಷನ್‌ಗಳು ಮತ್ತು ಇತರ ಕ್ರೀಡಾ ಸಂಸ್ಥೆಗಳ ಚುನಾವಣೆಗಳನ್ನು ಸುಗಮವಾಗಿ ನಡೆಸಲು ರಾಷ್ಟ್ರೀಯ ಕ್ರೀಡಾ ಚುನಾವಣಾ ಸಮಿತಿಯನ್ನು (ಎನ್‌ಎಸ್‌ಇಪಿ) ಸ್ಥಾಪಿಸುವ ಪ್ರಕ್ರಿಯೆಯೂ ಬಾಕಿಯಿದೆ.

ಮಾನಸ್ ಶತಕ; ರತನ್ ಮಿಂಚು

ವಲ್ಸಾಡ್: ಮಾನಸ್ ಎಂ. ದವೆ ಶತಕ ಮತ್ತು ಮಲಯ್ ವಿ ಶಾ ಅರ್ಧಶತಕದ ಬಲದಿಂದ ಗುಜರಾತ್ ಕ್ರಿಕೆಟ್ ತಂಡವು ಕೂಚ್ ಬಿಹಾರ್ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕದ ಎದುರಿನ ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮೊತ್ತ ಪೇರಿಸಿತು. ಕರ್ನಾಟಕದ ಬೌಲರ್ ಬಿ.ಆರ್. ರತನ್ (107ಕ್ಕೆ4) ಅವರು ಉತ್ತಮ ದಾಳಿ ನಡೆಸಿದರು.

ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಕ್ರಿಕೆಟ್ ಸಂಸ್ಥೆಯು ಮಾನಸ್ (ಔಟಾಗದೇ 100; 137ಎ, 4X15, 6X1) ಮತ್ತು ಮಲಯ್ (78; 119ಎ, 4X10, 6X1) ಅವರ ಬ್ಯಾಟಿಂಗ್‌ನಿಂದ ತಂಡವು 90 ಓವರ್‌ಗಳಲ್ಲಿ 348 ರನ್ ಗಳಿಸಿತು. ಕರ್ನಾಟಕ ತಂಡದ ಬೌಲರ್‌ಗಳ ನಿರಂತರ ಶ್ರಮ ಮತ್ತು ತಾಳ್ಮೆಯಿಂದಾಗಿ ಆತಿಥೇಯ ತಂಡವನ್ನು ಆಲೌಟ್ ಮಾಡಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗುಜರಾತ್ ಕ್ರಿಕೆಟ್ ಸಂಸ್ಥೆ: 90 ಓವರ್‌ಗಳಲ್ಲಿ 348 (ಮಲಯ್ ವಿ ಶಾ 78, ಮೌಲ್ಯರಾಜಸಿಂಹ ಚಾವಡಾ 41, ಮಾನಸ್ ಎಂ ದವೆ ಔಟಾಗದೇ 100, ಕಾವ್ಯ ಪಟೇಲ್ 43, ಈಸಾ ಹಕೀಮ್ ಪುತ್ತಿಗೆ 40ಕ್ಕೆ2, ಧ್ಯಾನ್ ಎಂ ಹಿರೇಮಠ 92ಕ್ಕೆ2, ಬಿ.ಆರ್. ರತನ್ 107ಕ್ಕೆ4) ವಿರುದ್ಧ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ.

ಬೆಂಗಾಲ್ ಟೈಗರ್ಸ್‌ಗೆ ಜಯ

ಪಿಟಿಐ ಚಿತ್ರ

ಜಾರ್ಖಂಡ್‌ನ ರಾಂಚಿಯಲ್ಲಿ ಗುರುವಾರ ನಡೆದ ಎರಡನೇ ಆವೃತ್ತಿಯ ಮಹಿಳಾ ಹಾಕಿ ಇಂಡಿಯಾ ಲೀಗ್‌ನ (ಎಚ್‌ಐಎಲ್) ಪಂದ್ಯದಲ್ಲಿ ಎಸ್‌ಜಿ ಪೈಪರ್ಸ್ (ಬಿಳಿ) ಮತ್ತು ಶ್ರಾಚಿ ಬೆಂಗಾಲ್ ಟೈಗರ್ಸ್ ತಂಡಗಳ ಆಟಗಾರ್ತಿಯರು ಚೆಂಡಿಗಾಗಿ ಪೈಪೋಟಿ ನಡೆಸಿದರು. ಈ ಪಂದ್ಯವನ್ನು ಶೂಟೌಟ್‌ನಲ್ಲಿ ಬೆಂಗಾಲ್ ಟೈಗರ್ಸ್ ಗೆದ್ದುಕೊಂಡಿತು. ನಿಗದಿತ ಅವಧಿಯಲ್ಲಿ 3–3 ಗೋಲುಗಳಿಂದ ಸಮಬಲಗೊಂಡಿತ್ತು

‘ಚೆಸ್ ಕದನ’: ಫಿಡೆ ವಿರುದ್ಧ ಸಿಡಿದೆದ್ದ ರಷ್ಯಾ ಆಟಗಾರ

ಮಾನನಷ್ಟ ಮೊಕದ್ದಮೆ ಹೂಡಿದ ಕ್ರಾಮ್ನಿಕ್

ವ್ಲಾದಿಮಿರ್ ಕ್ರಾಮ್ನಿಕ್

ನವದೆಹಲಿ (ಪಿಟಿಐ): ಆಧಾರವಿಲ್ಲದೇ ಮೋಸದಾಟದ ಆರೋಪ ಹೊರಿಸಿ ಆಟಗಾರರ ಶೋಷಣೆ ಮಾಡುತ್ತಿದ್ದಾರೆಂಬ ಕಾರಣ ನೀಡಿ ತಮ್ಮನ್ನು ತನಿಖೆಗೆ ಒಳಪಡಿಸುವುದನ್ನು ವಿರೋಧಿಸಿ ರಷ್ಯಾದ ಚೆಸ್ ದಿಗ್ಗಜ ವ್ಲಾದಿಮಿರ್ ಕ್ರಾಮ್ನಿಕ್ ಅವರು ಸ್ವಿಟ್ಜರ್ಲೆಂಡ್‌ನ ಸಿವಿಲ್ ನ್ಯಾಯಾಲಯದಲ್ಲಿ ವಿಶ್ವ ಚೆಸ್ ಫೆಡರೇಷನ್ (ಫಿಡೆ) ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ಅಮೆರಿಕದ ಯುವ ಗ್ರ್ಯಾಂಡ್ ಮಾಸ್ಟರ್ ಡೇನಿಯಲ್ ನರೋಡಿಟ್‌ಸ್ಕಿ ಅವರು ನಿಗೂಢ ರೀತಿಯಲ್ಲಿ ಸಾವನ್ನಪ್ಪಲು ಕ್ರಾಮ್ನಿಕ್ ಅವರು ಮಾಡಿದ ಮೋಸದಾಟದ ಆರೋಪಗಳು ಕಾರಣ ಎಂಬ ಮಾತುಗಳು ಬಲವಾಗಿ ಕೇಳಿಬಂದಿದ್ದವು. 2025ರ ಅಕ್ಟೋಬರ್ 19ರಂದು ಅವರು ಮೃತಪಟ್ಟಿದ್ದರು.

ಫಿಡೆ ಮತ್ತು ಸಹ ಆಟಗಾರರು ತಮ್ಮ ವಿರುದ್ಧ ಒಂದೇ ಸಮನೇ ಆರೋಪಗಳನ್ನು ಮಾಡುತ್ತಿರುವುದರಿಂದ ಈ ಕ್ರಮಕ್ಕೆ ಮುಂದಾಗುವುದು ತಮಗೆ ಅನಿವಾರ್ಯವಾಯಿತು ಎಂದು ಕ್ರಾಮ್ನಿಕ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಹಾಕಿದ್ದಾರೆ.

ನರೋಡಿಟ್‌ಸ್ಕಿ ವಿರುದ್ಧ ಕ್ರಾಮ್ನಿಕ್ ಮಾಡಿದ ಮೋಸದಾಟದ ಆರೋಪಗಳು ‘ಅಸಹ್ಯಕರ ಮತ್ತು ನಾಚಿಕಗೇಡಿನದ್ದು’ ಎಂದು ಫಿಡೆ ಸಿಇಒ ಎಮಿಲ್ ಸುತೋವ್‌ಸ್ಕಿ ಅವರು ಟೀಕಿಸಿದ್ದರು.

29 ವರ್ಷ ವಯಸ್ಸಿನ ನರೊಡಿಟ್‌ಸ್ಕಿ ಅವರ ಸಾವಿನ ನಿಖರ ಕಾರಣ ತಿಳಿದು ಬಂದಿಲ್ಲ. ಆದರೆ ಕೊನೆಯ ಬಾರಿ ನೇರಪ್ರಸಾರದ ಕಾರ್ಯಕ್ರಮದಲ್ಲಿ ‘ಕ್ರಾಮ್ನಿಕ್ ತಮ್ಮ ವಿರುದ್ಧ ಮಾಡಿರುವ ಮೋಸದಾಟದ ಆರೋಪಗಳಿಂದ ತೀವ್ರ ಕ್ಲೇಶಕ್ಕೆ ಒಳಗಾಗಿರುವುದಾಗಿ’ ಅವರು ಹೇಳಿದ್ದರು.

ತಮ್ಮ ವಿರುದ್ಧ ಕ್ರಾಮ್ನಿಕ್ ಮಾಡಿದ್ದ ಆನ್‌ಲೈನ್ ಆಟದಲ್ಲಿನ ಮೋಸದ ಆರೋಪದಿಂದ ಹತಾಶೆಗೆ ಒಳಗಾಗಿದ್ದು, ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಯೋಚನೆ ಮೂಡಿತ್ತು ಎಂದು ಝೆಕ್ ಗ್ರ್ಯಾಂಡ್‌ಮಾಸ್ಟರ್ ಡೇವಿಡ್ ನವಾರ ಸಹ ಹೇಳಿದ್ದರು. ಆದರೆ, ಆಧಾರರಹಿತವಾಗಿ ತಾವು ಮಾತನಾಡಿಲ್ಲ. ಎಲ್ಲದ್ದಕ್ಕೂ ಎಲೆಕ್ಟ್ರಾನಿಕ್ ದಾಖಲೆಗಳಿವೆ ಎಂದು ರಷ್ಯಾದ ಆಟಗಾರ ಹೇಳಿದ್ದರು.

ತಮ್ಮನ್ನು ಟೀಕಿಸಿರುವ ಆಟಗಾರರ ವಿರುದ್ಧವೂ ಕ್ರಾಮ್ನಿಕ್ ಕಿಡಿಕಾರಿದ್ದಾರೆ. ಈ ಆಟಗಾರರ ಗುಂಪಿನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್, ಭಾರತದ ನಿಹಾಲ್ ಸರಿನ್ ಅವರೂ ಒಳಗೊಂಡಿದ್ದಾರೆ. ನರೊಡಿಟ್‌ಸ್ಕಿ ಸಾವಿಗೆ ಕ್ರಾಮ್ನಿಕ್ ನೇರ ಕಾರಣ ಎಂದು ನಿಹಾಲ್ ಹೇಳಿದ್ದರು. ‘ಕೆಲವು ಆಟಗಾರರು ಬಹಿರಂಗವಾಗಿ ತಮ್ಮ ಹೆಸರು ಹೇಳಿ, ಅವಮಾನಿಸಿದ್ದಾರೆ’ ಎಂದೂ ಕ್ರಾಮ್ನಿಕ್ ದೂರಿದ್ದಾರೆ.

‘ಯಾರೂ ಸಹ ಕ್ಷಮೆ ಕೇಳಲು ಮುಂದೆಬಂದಿಲ್ಲ. ಅಥವಾ ತಮ್ಮ ಹೇಳಿಕೆಯಿಂದ ಹಿಂದೆಸರಿದಿಲ್ಲ. ಆದರೆ ನಾನು ಒದಗಿಸಿರುವ ಸಾಕ್ಷ್ಯಗಳನ್ನು ಕಡೆಗಣಿಸಿದ್ದಾರೆ’ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಥ್ರೋಬಾಲ್ ಕರ್ನಾಟಕ ಶುಭಾರಂಭ

ಬೆಂಗಳೂರು: ಕರ್ನಾಟಕದ ಪುರುಷರ ಮತ್ತು ಮಹಿಳೆಯರ ತಂಡಗಳು ಮಧ್ಯಪ್ರದೇಶದ ಭಾನಾಪುರದಲ್ಲಿ ಗುರುವಾರ ಆರಂಭಗೊಂಡ 46ನೇ ಸೀನಿಯರ್ ರಾಷ್ಟ್ರೀಯ ಥ್ರೋಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದವು.

ಕರ್ನಾಟಕ ಪುರುಷರ ತಂಡವು 25–21, 25–12ರಿಂದ ಬಿಹಾರ ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯದಲ್ಲಿ 25–14, 25–18ರಿಂದ ಜಮ್ಮು ಮತ್ತು ಕಾಶ್ಮೀರ ತಂಡವನ್ನು ಸೋಲಿಸಿತು.

ರಾಜ್ಯ ಮಹಿಳೆಯರ ತಂಡವು 25–12, 25–11ರಿಂದ ಗೋವಾ ತಂಡವನ್ನು ಸುಲಭವಾಗಿ ಮಣಿಸಿತು.

ಟೂರ್ನಿಯಲ್ಲಿ 21 ರಾಜ್ಯಗಳಿಂದ ಮಹಿಳಾ ಮತ್ತು ಪುರುಷರ ತಂಡಗಳು ಭಾಗವಹಿಸಿವೆ. ಇದೇ 4ರವರೆಗೆ ಚಾಂಪಿಯನ್‌ಷಿಪ್ ನಡೆಯಲಿದೆ.

ಐಎಸ್‌ಎಲ್: 13 ಕ್ಲಬ್‌ಗಳ ಷರತ್ತು

ನವದೆಹಲಿ (ಪಿಟಿಐ): ಪಾಲ್ಗೊಳ್ಳುವಿಕೆ ಶುಲ್ಕ ವಿಧಿಸದಿದ್ದರೆ, ಹಣಕಾಸಿನ ಮತ್ತು ಕಾರ್ಯ ನಿರ್ವಹಣಾ ವೆಚ್ಚಗಳ ಹೊಣೆಯನ್ನು ಫೆಡರೇಷನ್ ವಹಿಸಿಕೊಂಡರೆ 2025–26ನೇ ಋತುವಿನ ಇಂಡಿಯನ್ ಸೂಪರ್ ಲೀಗ್‌ನಲ್ಲಿ (ಐಎಸ್‌ಎಲ್) ಭಾಗವಹಿಸಲು ತಮ್ಮ ಸಮ್ಮತಿ ಇರುವುದಾಗಿ 14 ಕ್ಲಬ್‌ಗಳ ಪೈಕಿ 13 ಕ್ಲಬ್‌ಗಳು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ (ಎಐಎಫ್‌ಎಫ್) ತಿಳಿಸಿವೆ.

ಐಎಸ್‌ಎಲ್‌ನಲ್ಲಿ ಭಾಗವಹಿಸಲು ಷರತ್ತುಗಳನ್ನು ವಿಧಿಸಿರುವ ಕ್ಲಬ್‌ಗಳು, ‘ದೀರ್ಘಾವಧಿ ಯೋಜನೆಗೆ ಸ್ಪಷ್ಟ ಮತ್ತು ಕಾಲಮಿತಿಯೊಡನೆ ನಕ್ಷೆ ಸಿದ್ಧಪಡಿಸುವಂತೆ’ ಫೆಡರೇಷನ್‌ಗೆ ವಿನಂತಿಸಿವೆ. ಈ ಯೋಜನೆಗಳಲ್ಲಿ ವಾಣಿಜ್ಯ ಪಾಲುದಾರರ/ ಪ್ರಸಾರ ಸಂಸ್ಥೆಯ ನೇಮಕಕ್ಕೆ ಸಂಬಂಧಿಸಿ ಗಡುವನ್ನು ವಿಧಿಸಬೇಕು ಎಂದೂ ಕೋರಿವೆ.

‘ಈ ಮೇಲಿನ ಮನವಿಗಳಿಗೆ ಒಪ್ಪಿಗೆ ನೀಡಿದಲ್ಲಿ ಐಎಸ್‌ಎಲ್‌ನಲ್ಲಿ ಭಾಗವಹಿಸಲು ಮತ್ತು ಸಹಕಾರ ನೀಡಲು ನಮ್ಮ ಒಪ್ಪಿಗೆಯಿದೆ’ ಎಂದು 13 ಕ್ಲಬ್‌ಗಳು ಪತ್ರದಲ್ಲಿ ತಿಳಿಸಿವೆ ಎಂದು ಎಐಎಫ್‌ಎಫ್ ಗುರುವಾರ ತಿಳಿಸಿದೆ.

ಐಎಸ್‌ಎಲ್‌ಲ್ಲಿ ಪಾಲ್ಗೊಳ್ಳುವುದನ್ನು ಒಂದು ದಿನದಲ್ಲಿ ಖಚಿತಪಡಿಸುವಂತೆ ಫೆಡರೇಷನ್ ಬುಧವಾರ ಕ್ಲಬ್‌ಗಳಿಗೆ ತಿಳಿಸಿತ್ತು. ಸ್ಪೋರ್ಟಿಂಗ್ ಕ್ಲಬ್ ಡೆಲ್ಲಿ ಸಿಇಒ ಧ್ರುವ್ ಸೂದ್ ಅವರು 13 ಕ್ಲಬ್‌ಗಳ ಪರವಾಗಿ ಈ ಪತ್ರವನ್ನು ಬರೆದಿದ್ದಾರೆ.

ಮೋಹನ್ ಬಾಗನ್, ಈಸ್ಟ್ ಬೆಂಗಾಲ್, ಕೇರಳ ಬ್ಲಾಸ್ಟರ್ಸ್, ಎಫ್‌ಸಿ ಗೋವಾ, ಸ್ಪೋರ್ಟಿಂಗ್ ಕ್ಲಬ್ ಡೆಲ್ಲಿ, ಬೆಂಗಳೂರು ಎಫ್‌ಸಿ, ಮುಂಬೈ ಸಿಟಿ ಎಫ್‌ಸಿ, ಚೆನ್ನೈಯಿನ್ ಎಫ್‌ಸಿ, ಮೊಹಮ್ಮಡನ್ ಸ್ಪೋರ್ಟಿಂಗ್, ಪಂಜಾಬ್ ಎಫ್‌ಸಿ, ಇಂಟರ್ ಕಾಶಿ, ನಾರ್ತ್‌ಈಸ್ಟ್ ಯನೈಟೆಡ್ ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ಭಾಗವಹಿಸಲು ಮುಂದಾಗಿರುವ ಕ್ಲಬ್‌ಗಳು.

ಸಂಕ್ಷಿಪ್ತ ಸುದ್ದಿ

ಅಂಜನಾ ರಾವ್

ಅಮೆರಿಕ ಓಪನ್ ಟಿಟಿ: ಎರಡು ಕಂಚು ಗೆದ್ದ ಅಂಜನಾ ರಾವ್

ಬೆಂಗಳೂರು: ಕರ್ನಾಟಕದ ಅಂಜನಾ ರಾವ್ ಅವರು ಅಮೆರಿಕದ ಲಾಸ್ ವೇಗಸ್‌ನಲ್ಲಿ ಇತ್ತೀಚೆಗೆ ನಡೆದ ಅಮೆರಿಕ ಓಪನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ವಿಶ್ವದ ವಿವಿಧ ದೇಶಗಳಿಂದ ಒಟ್ಟು 1300 ಮಂದಿ ಈ ಚಾಂಪಿಯನ್‌ಷಿಪ್‌ನ ವಿವಿಧ ವಿಭಾಗಗಳಲ್ಲಿ ಭಾಗವಹಿಸಿದ್ದರು. ಮಹಿಳೆಯರ 40 ವರ್ಷ ಮೇಲ್ಪಟ್ಟವರ ವಿಭಾಗದ ಸಿಂಗಲ್ಸ್‌ನಲ್ಲಿ ಮತ್ತು ಇದೇ ವಿಭಾಗದ ಡಬಲ್ಸ್‌ನಲ್ಲಿ ಅವರು ಈ ಪದಕಗಳನ್ನು ಜಯಿಸಿದ್ದಾರೆ.

ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಮಾರ್ಗಿಟ್ ಜೀಗರ್ ಅವರನ್ನು 11–4, 11–5 11–5 ರಿಂದ ಸೋಲಿಸಿದ್ದ ಅಂಜನಾ ಸೆಮಿಫೈನಲ್‌ನಲ್ಲಿ ಹುಯಿ ಝೂವೊ ಅವರಿಗೆ 9–11, 7–11, 9–11 ರಲ್ಲಿ ಮಣಿದಿದ್ದರು.

ಡಬಲ್ಸ್‌ನಲ್ಲಿ ಅಂಜನಾ ಮತ್ತು ದಿವ್ಯಾ ನಾಗರಾಜ್ ಜೋಡಿ ಚೀನಾದ ಜೂನ್ ಲೀ– ಸುಯ ಯೆನ್‌ಲಿನ್ ಜೋಡಿ ಎದುರು 11–13, 8–11, 7–11 ರಲ್ಲಿ ಸೋಲನುಭವಿಸಿತು.

118 ಅಥ್ಲೀಟ್‌ಗಳಿಗೆ ಅವಕಾಶ: ಆರ್ಚರ್ ಅಭಿಷೇಕ್, ಪರಣೀತ್‌ಗೆ ಸ್ಥಾನ

ಟಾಪ್ಸ್: ಕುಸ್ತಿಪಟು ರೀತಿಕಾಗೆ ಕೊಕ್



ಕುಸ್ತಿಪಟು ರೀತಿಕಾ ಹೂಡಾ

ಬಿಲ್ಗಾರ ಅಭಿಷೇಕ್ ವರ್ಮಾ

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡು, ತಾತ್ಕಾಲಿಕವಾಗಿ ಅಮಾನತುಗೊಂಡಿರುವ ಕುಸ್ತಿಪಟು ರೀತಿಕಾ ಹೂಡಾ ಅವರನ್ನು ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ (ಟಾಪ್ಸ್) ಯಿಂದ ಕೈಬಿಡಲಾಗಿದೆ. ಆರ್ಚರಿ ಕ್ರೀಡಾಪಟುಗಳಾದ ಪರಣೀತ್ ಕೌರ್ ಮತ್ತು ಅಭಿಷೇಕ್ ವರ್ಮಾ ಅವರಿಗೆ ಬಡ್ತಿ ಲಭಿಸಿದೆ. ಡೆಕಾಥ್ಲಾನ್ ಅಥ್ಲೀಟ್ ತೇಜಸ್ವಿನ್ ಶಂಕರ್ ಕೂಡ ಸ್ಥಾನ ಗಳಿಸಿದ್ದಾರೆ.

ಕೇಂದ್ರ ಕ್ರೀಡಾ ಸಚಿವಾಲಯವು ಬಿಡುಗಡೆ ಮಾಡಿರುವ ಟಾಪ್ಸ್ ಪಟ್ಟಿಯಲ್ಲಿ ಈ ಸಲ 118 ಅಥ್ಲೀಟ್‌ಗಳು ಅವಕಾಶ ಪಡೆದಿದ್ದಾರೆ. ಅದರಲ್ಲಿ ಸಾಮಾನ್ಯ ವರ್ಗದ 57 ಮತ್ತು 61 ಪ್ಯಾರಾ ಅಥ್ಲೀಟ್‌ಗಳಿದ್ದಾರೆ. 2024ರಲ್ಲಿ ಪ್ಯಾರಿಸ್ ಒಲಿಂಪಿಕ್ ಕೂಡ ಮುಗಿದಿತ್ತು. ಅದರಿಂದಾಗಿ 179 ಅಥ್ಲೀಟ್‌ಗಳಿದ್ದ ಪಟ್ಟಿಯನ್ನು ಹೋದ ವರ್ಷ 94ಕ್ಕೆ ಇಳಿಸಲಾಗಿತ್ತು. ಈ ವರ್ಷ ಹೆಚ್ಚು ಅಥ್ಲೀಟ್‌ಗಳಿಗೆ ಅವಕಾಶ ಲಭಿಸಿದೆ.

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್ ಪದಕ ಗಳಿದಿರುವ ರೀತಿಕಾ ಅವರು ಹೋದ ವರ್ಷ ಫೆಬ್ರುವರಿಯಲ್ಲಿ ಪ್ರಕಟವಾಗಿದ್ದ ಪಟ್ಟಿಯಲ್ಲಿ ಇದ್ದರು. ಆದರೆ ಕಳೆದ ಜುಲೈನಲ್ಲಿ ನಡೆದ ಆಯ್ಕೆ ಪ್ರಕ್ರಿಯೆ ಸಂದರ್ಭದಲ್ಲಿ ನಡೆದಿದ್ದ ಉದ್ದೀಪನ ಮದ್ದು ಪರೀಕ್ಷೆಯಲ್ಲಿ ಸಿಕ್ಕಿ ಬಿದ್ದಿದ್ದರು.

‘ಈ ಬಾರಿಯ ಪಟ್ಟಿಯಿಂದ ಅವರನ್ನು ತೆಗೆದುಹಾಕಲಾಗಿದೆ’ ಎಂದು ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಮೂಲಗಳು ತಿಳಿಸಿವೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಚಿನ್ನದ ಪದಕವಿಜೇತ ಅಥ್ಲೀಟ್ ಸಿಮ್ರನ್ ಮತ್ತು ಅವರ ಕೋಚ್ ಉಮರ್ ಸೈಫಿ ಅವರು ಹೋದ ಅಕ್ಟೋಬರ್‌ನಲ್ಲಿ ಡೋಪ್ ಟೆಸ್ಟ್‌ನಲ್ಲಿ ಅನುತ್ತೀರ್ಣರಾಗಿದ್ದರು. ಆದರೆ ಅವರು ಪಟ್ಟಿಯಲ್ಲಿದ್ದಾರೆ.

‘ಅವರ (ಸಿಮ್ರನ್) ಪ್ರಕರಣದ ಕುರಿತು ಮುಂದಿನ ಮಿಷನ್ ಒಲಿಂಪಿಕ್ಸ್ ಸೆಲ್ ಸಭೆಯಲ್ಲಿ ಚರ್ಚಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಸಿಮ್ರನ್ ಅವರು ದೃಷ್ಟಿದೋಷವುಳ್ಳ ಅಥ್ಲೀಟ್ ಆಗಿದ್ದಾರೆ. ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ 200 ಮೀ ಓಟದಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

ಕಂಪೌಂಡ್ ಆರ್ಚರಿ ವಿಭಾಗದ ಎಂಟು ಜನರಿಗೆ ಈ ಪಟ್ಟಿಯಲ್ಲಿ ಅವಕಾಶ ಪಡೆದಿದೆ. ಪರಣೀತ್, ಅಭಿಷೇಕ್ ಮತ್ತು ಜ್ಯೋತಿ ಸುರೇಖಾ ಅವರು ಇದರಲ್ಲಿದ್ದಾರೆ. ರಿಕರ್ವ್ ತಾರೆಗಳಾದ ದೀಪಿಕಾ ಕುಮಾರಿ, ಧೀರಜ್ ಬೊಮ್ಮದೇವರ ಮತ್ತು ಅಂಕಿತಾ ಭಕತ್ ಇದ್ದಾರೆ. ಅವರಲ್ಲದೇ ಕಂಪೌಂಡ್ ವಿಭಾಗದಲ್ಲಿ ಅದಿತಿ ಗೋಪಿಚಂದ್ ಸ್ವಾಮಿ, ಒಜಸ್ ಪ್ರವೀಣ ಡಿಯೋಟೇಲ್, ಪ್ರಿಯಾಂಶು ಪ್ರಥಮೇಶ್, ಸಮಾಧಾನ್ ಜಾವಕರ್ ಮತ್ತು ರಿಷಭ್ ಯಾದವ್ ಇದ್ದಾರೆ.

ಅಥ್ಲೆಟಿಕ್ಸ್‌ನಲ್ಲಿ ಜಾವೆಲಿನ್ ಥ್ರೋ ತಾರೆ, ಒಲಿಂಪಿಯನ್ ನೀರಜ್ ಚೋಪ್ರಾ, ವಿಶ್ವ ಅಥ್ಲೆಟಿಕ್ಸ್ ಜಾವೆಲಿನ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಸಚಿನ್ ಯಾದವ್ ಅವರು ಪಟ್ಟಿಯಲ್ಲಿದ್ದಾರೆ. ಟ್ರ್ಯಾಕ್–ಫೀಲ್ಡ್ ವಿಭಾಗದಲ್ಲಿ ಸ್ಟೀಪಲ್ ಚೇಸರ್ ಅವಿನಾಶ್ ಸಬಳೆ, ಲಾಂಗ್ ಜಂಪ್ ಅಥ್ಲೀಟ್ ಎಸ್. ಶ್ರೀಶಂಕರ್ ಹಾಗೂ ಹೊಸದಾಗಿ ಸರ್ವೇಶ್ ಕುಶಾರೆ (ಏಷ್ಯನ್ ಚಾಂಪಿಯನ್‌ಷಿಪ್ ಹೈಜಂಪ್ ಬೆಳ್ಳಿ ವಿಜೇತ) ಕೂಡ ಸ್ಥಾನ ಪಡೆದುಕೊಂಡಿದ್ದಾರೆ.

ಡೆವಲಮೆಂಟಲ್ ಗ್ರೂಪ್‌ನಲ್ಲಿ ಅನಿಮೇಶ್ ಕುಜೂರ್ (200 ಮೀ ಓಟ), ರಿಲೇ ಓಟಗಾರರಾದ ಟಿ.ಕೆ. ವಿಶಾಲ್, ಜೈ ಕುಮಾರ್, ರಾಜೇಶ್ ರಮೇಶ್, ಅಮೋಜ್ ಜೇಕಬ್, ಮೊಹಮ್ಮದ್ ಅಜ್ಮಲ್ ವಿ ಮತ್ತು ಸಂತೋಷ್ ಕುಮಾರ್ ಅವರನ್ನು ಸೇರ್ಪಡೆ ಮಾಡಲಾಗಿದೆ. ಟಿಟಿ ಆಟಗಾರರಾದ ಮಾನುಷ್ ಶಾ, ಮಾನವ್ ಠಕ್ಕರ್ ಮತ್ತು ದಿಯಾ ಚಿತಳೆ ಅವರು ಇದ್ದಾರೆ. ಈ ಯೋಜನೆಗೆ ಆಯ್ಕೆಯಾದ ಕ್ರೀಡಾಪಟುಗಳಿಗೆ ತರಬೇತಿ ಮತ್ತಿತರ ಚಟುವಟಿಕೆಗಳಿಗೆ ಧನಸಹಾಯ ನೀಡಲಾಗುತ್ತದೆ.

ಟಾಪ್ಸ್‌ನಲ್ಲಿ ಕರ್ನಾಟಕದ ಧಿನಿಧಿ

ಬೆಂಗಳೂರು: ಕರ್ನಾಟಕದ ಈಜುಪಟು ಧಿನಿಧಿ ದೇಸಿಂಗು ಅವರನ್ನು ಟಾಪ್ಸ್ ಯೋಜನೆಯ ಡೆವಲಪ್‌ಮೆಂಟ್ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದೆ. ಆದರೆ ಈಚೆಗೆ ಏಷ್ಯನ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಪದಕಗಳನ್ನು ಗೆದ್ದ ಶ್ರೀಹರಿ ನಟರಾಜ್ ಅವರ ಹೆಸರು ಈ ಪಟ್ಟಿಯಲ್ಲಿ ಇಲ್ಲ. 100 ಮೀಟರ್ಸ್ ಓಟದ ಅಥ್ಲೀಟ್ ಹಾಗೂ ಕರ್ನಾಟಕದ ಶರವೇಗದ ಓಟಗಾರ ಮಣಿಕಾಂತ್ ಹೋಬಳಿದಾರ್ ಅವರ ಹೆಸರು ಕೂಡ ಈ ಪಟ್ಟಿಯಲ್ಲಿ ಇಲ್ಲ.

ಟಾಪ್ಸ್‌ನಲ್ಲಿ ಕರ್ನಾಟಕದವರು: ಡೆವಲ್‌ಪ್‌ಮೆಂಟ್ ವಿಭಾಗ: ಧಿನಿಧಿ ದೇಸಿಂಗು (ಈಜು), ಆಯುಷ್ ಶೆಟ್ಟಿ (ಬ್ಯಾಡ್ಮಿಂಟನ್), ಸ್ನೇಹಾ ಎಸ್‌ಎಸ್ (ಅಥ್ಲೆಟಿಕ್ಸ್), ತಿಲೋತ್ತಮಾ ಸೇನ್ (ಶೂಟಿಂಗ್), ದಿವ್ಯಾ ಟಿ.ಎಸ್ (ಶೂಟಿಂಗ್), ಯಶಸ್ವಿನಿ ಘೋರ್ಪಡೆ (ಟಿಟಿ). ದ ಏಷ್ಯನ್ ಗೇಮ್ಸ್ ಗ್ರೂಪ್ (ಟಿಎಜಿಜಿ) ಪಟ್ಟಿ: ಫೌವಾದ್ ಮಿರ್ಜಾ (ಈಕ್ವೆಸ್ಟ್ರಿಯನ್), ಪ್ರಣವಿ ಅರಸ್ (ಗಾಲ್ಫ್), ಅವನಿ ಪ್ರಶಾಂತ್ (ಗಾಲ್ಫ್).

ಬೆಂಗಳೂರು ಸಾಯ್: ಹೈಫರ್ಮಾಮೆನ್ಸ್ ಕೇಂದ್ರಕ್ಕೆ ಶಿಲಾನ್ಯಾಸ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದ ನೇತಾಜಿ ಸುಭಾಷ್ ದಕ್ಷಿಣ ಪ್ರಾದೇಶಿಕ ಕೇಂದ್ರದಲ್ಲಿ (ಸಾಯ್ ಎನ್‌ಎಸ್‌ಎಸ್‌ಸಿ) ನಿರ್ಮಾಣವಾಗಲಿರುವ ಅತ್ಯಾಧುನಿಕ ಹೈಫರ್ಮಾಮೆನ್ಸ್ ಕೇಂದ್ರಕ್ಕೆ (ಎಚ್‌ಪಿಸಿ) ಬುಧವಾರ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ವರ್ಚುವಲ್ ಮೂಲಕ ಶಿಲಾನ್ಯಾಸ ನೆರವೇರಿಸಿದರು.

ಹೈಫರ್ಮಾಮೆನ್ಸ್ ಕೇಂದ್ರಕ್ಕೆ ₹75 ಕೋಟಿ ವೆಚ್ಚವಾಗಲಿದೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ (ಎಚ್‌ಎಎಲ್) ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ಬೆಂಬಲದೊಂದಿಗೆ ಅಭಿವೃದ್ಧಿ ಪಡಿಸಲಾಗುವುದು. ಈ ಯೋಜನೆಗೆ ಎಚ್‌ಎಎಲ್ ₹ 60 ಕೋಟಿ ಕೊಡುಗೆ ನೀಡಲಿದೆ. ಮುಂದಿನ 12 ತಿಂಗಳಲ್ಲಿ ಕೇಂದ್ರವು ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ ಎಂದು ಸಾಯ್ ಮೂಲಗಳು ತಿಳಿಸಿವೆ.

ಹೈಫರ್ಮಾಮೆನ್ಸ್ ಕೇಂದ್ರದಲ್ಲಿ ಅತ್ಯಾಧುನಿಕ ಕ್ರೀಡಾ ವಿಜ್ಞಾನ ವ್ಯವಸ್ಥೆ, ಕ್ರೀಡಾ ಔಷಧ, ಪುನಃಶ್ಚೇತನಕ್ಕೆ ಅಗತ್ಯ ಸೌಲಭ್ಯ, ಬಯೋಮೆಕಾನಿಕ್ಸ್, ಶರೀರಶಾಸ್ತ್ರ, ಮನೋವಿಜ್ಞಾನ, ಪೋಷಕಾಂಶ, ಕಾರ್ಯಕ್ಷಮತೆ ವಿಶ್ಲೇಷಣೆ ಮತ್ತು ಹೈಡ್ರೋಥೆರಪಿ ಮುಂತಾದ ಸುಧಾರಿತ ಸೌಲಭ್ಯಗಳು ಒಳಗೊಂಡಿರಲಿದೆ.

ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಸಾಯ್ ಕಾರ್ಯದರ್ಶಿ ವಿಷ್ಣುಕಾಂತ್ ತಿವಾರಿ ಮತ್ತು ಎಚ್‌ಎಎಲ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಡಿ.ಕೆ. ಸುನಿಲ್ ಉಪಸ್ಥಿತರಿದ್ದರು.

ವಿಶ್ವಕಪ್: ಆಸ್ಟ್ರೇಲಿಯಾ ತಂಡದಲ್ಲಿ ಪ್ಯಾಟ್ ಕಮಿನ್ಸ್, ಹ್ಯಾಜಲ್‌ವುಡ್

ಪ್ಯಾಟ್ ಕಮಿನ್ಸ್

ಮೆಲ್ಬರ್ನ್ (ಎಎಫ್‌ಪಿ): ವೇಗದ ಬೌಲರ್‌ಗಳಾದ ಪ್ಯಾಟ್ ಕಮಿನ್ಸ್ ಮತ್ತು ಜೋಶ್ ಹ್ಯಾಜಲ್‌ವುಡ್ ಅವರನ್ನು ಈ ವರ್ಷದ ಫೆಬ್ರುವರಿ 7 ರಿಂದ ನಡೆಯುವ ಟಿ20 ವಿಶ್ವಕಪ್‌ನಲ್ಲಿ ಭಾಗವಹಿಸುವ ಆಸ್ಟ್ರೇಲಿಯಾ ತಂಡದಲ್ಲಿ ಸೇರ್ಪಡೆ ಮಾಡಲಾಗಿದೆ.

15 ಮಂದಿಯ ಸಂಭವನೀಯ ತಂಡದಲ್ಲಿ ನಾಲ್ವರು ಸ್ಪಿನ್ನರ್‌ಗಳಿದ್ದಾರೆ. ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ವಿಶ್ವಕಪ್ ನಡೆಯಲಿದೆ.

ಬೆನ್ನುನೋವಿನ ಕಾರಣ ಕಮಿನ್ಸ್ ಅವರಿಗೆ ಆ್ಯಷಸ್ ಟೆಸ್ಟ್ ಸರಣಿಯಲ್ಲಿ ಒಂದು ಪಂದ್ಯದಲ್ಲಿ ಮಾತ್ರ ಆಡಲು ಸಾಧ್ಯವಾಗಿತ್ತು. ಹ್ಯಾಜಲ್‌ವುಡ್ ಸರಣಿಯನ್ನೇ ಕಳೆದುಕೊಂಡಿದ್ದಾರೆ.

ಪ್ರಮುಖ ಸ್ಪಿನ್ನರ್‌ಗಳಾದ ಆ್ಯಡಂ ಜಂಪಾ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಜೊತೆ ಎಡಗೈ ಸ್ಪಿನ್ನರ್‌ಗಳಾದ ಮಾಥ್ಯೂ ಕುನ್ಹೆಮನ್ ಮತ್ತು ಕೂಪರ್ ಕಾನೊಲಿ ಅವರೂ 15 ಮಂದಿ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಆಸ್ಟ್ರೇಲಿಯಾ ತಂಡ ಫೆ. 11ರಂದು ಕೊಲಂಬೊದಲ್ಲಿ ಐರ್ಲೆಂಡ್ ವಿರುದ್ಧ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ.

ತಂಡ ಹೀಗಿದೆ: ಮಿಚೆಲ್ ಮಾರ್ಷ್ (ನಾಯಕ), ಕ್ಸೇವಿಯರ್ ಬಾರ್ಟ್ಲೆಟ್, ಕೂಪರ್ ಕಾನೊಲಿ, ಪ್ಯಾಟ್ ಕಮಿನ್ಸ್, ಟಿಮ್ ಡೇವಿಡ್, ಕ್ಯಾಮೆರಾನ್ ಗ್ರೀನ್, ನೇಥನ್ ಎಲಿಸ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮ್ಯಾಥ್ಯೂ ಕುನ್ಹೆಮನ್, ಗ್ಲೆನ್ ಮ್ಯಾಕ್ಸ್‌ವೆಲ್, ಮ್ಯಾಥ್ಯೂ ಶಾರ್ಟ್, ಮಾರ್ಕಸ್ ಸ್ಟೊಯಿನಿಸ್ ಮತ್ತು ಆ್ಯಡಂ ಜಂಪಾ.

ಕ್ರಿಕೆಟ್: ವ್ಯೋಮ್ ನಾಯ್ಡು ದ್ವಿಶತಕ

ವ್ಯೋಮ್ ನಾಯ್ಡು

ಬೆಂಗಳೂರು: ಅಮೋಘ ಲಯದಲ್ಲಿರುವ ವ್ಯೋಮ್ ನಾಯ್ಡು 150 ಎಸೆತಗಳಲ್ಲಿ 283 ರನ್ ಗಳಿಸಿದರು. ಇದರಿಂದಾಗಿ ವಿದ್ಯಾನಿಕೇತನ ಶಾಲೆ ತಂಡವು ಬಿ.ಟಿ. ರಾಮಯ್ಯ ಶೀಲ್ಡ್‌ಗಾಗಿ ನಡೆಯುತ್ತಿರುವ ಕೆಎಸ್‌ಸಿಎ 14 ವರ್ಷದೊಳಗಿನವರ ಎರಡನೇ ಡಿವಿಷನ್ ಟೂರ್ನಿಯಲ್ಲಿ ಕಾರ್ಮೆಲ್ ಶಾಲೆ ವಿರುದ್ಧ 410 ರನ್‌ಗಳಿಂದ ಗೆದ್ದಿತು.

ನಾಯ್ಡು ದ್ವಿಶತಕದ ಬಲದಿಂದ ವಿದ್ಯಾನಿಕೇತನ ತಂಡವು 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 504 ರನ್ ಗಳಿಸಿತು. ಅದಕ್ಕುತ್ತರವಾಗಿ ಕಾರ್ಮೆಲ್ ಶಾಲೆಯು 20.5 ಓವರ್‌ಗಳಲ್ಲಿ 94 ರನ್ ಮಾತ್ರ ಗಳಿಸಿತು. ಬೌಲಿಂಗ್‌ನಲ್ಲಿಯೂ ಮಿಂಚಿದ ವ್ಯೋಮ್ ನಾಯ್ಡು 3 ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರುಗಳು: ವಿದ್ಯಾನಿಕೇತನ್ ಶಾಲೆ: 50 ಓವರ್‌ಗಳಲ್ಲಿ 4ಕ್ಕೆ504 (ವ್ಯೋಮ್ ನಾಯ್ಡು 283, ವೇದ್ ನಹರ್ 49, ಆರ್ಯನ್ ಪ್ರದೀಪ್ 69, ಯುಗ್ ವಿಶಾಲ್ ರಾವ್ 41, ರಣವೀರ್ ಪ್ರಸಾದ್ 73ಕ್ಕೆ2) ಕಾರ್ಮೆಲ್ ಸ್ಕೂಲ್: 20.5 ಓವರ್‌ಗಳಲ್ಲಿ 94 (ವಿಸ್ಮಯ್ ಎನ್ ಮೂರ್ತಿ 43; ವೇದ್ ನಹರ್ 18ಕ್ಕೆ3, ವ್ಯೋಮ್ ನಾಯ್ಡು 14ಕ್ಕೆ3)
ಪಾಲ್ಸ್ ಇಂಗ್ಲಿಷ್ ಸ್ಕೂಲ್: 50 ಓವರ್‌ಗಳಲ್ಲಿ 6ಕ್ಕೆ 587 (ಅಯ್ಯೂಖ್ ಎನ್ ರಾವ್ 83, ವಿಹಾನ್ ದರ್ಶನ ಪಯಪ್ಪನವರ್ 27, ಸಾತ್ವಿಕ್ ಸಾಣಿಕೊಪ್ಪ 167, ಗೌರವ್ ಜೀವನ್ ಔಟಾಗದೇ 149, ವಿಪಿನ್ ಎಸ್ 64; ಸೈಯದ್ ಉಮರ್ ಬಶೀರ್ 99ಕ್ಕೆ2, ಎಂ ವಜೀರ್ ಅಹ್ಮದ್ 85ಕ್ಕೆ2) ಫ್ಲಾರೆನ್ಸ್ ಪಬ್ಲಿಕ್ ಸ್ಕೂಲ್: 15.5 ಓವರ್‌ಗಳಲ್ಲಿ 67 (ಪ್ರಣೀಕ್ ಧೀರಜ್ 13ಕ್ಕೆ3, ನಿಹಾಲ್ ಗೌಡ ಎನ್ 17ಕ್ಕೆ4, ವಿ.ಎಸ್. ವೇದಾಂತ್ 13ಕ್ಕೆ3)

ಯುಟಿಟಿ ಯೂತ್ ಕಂಟೆಂಡರ್ ಇಂದಿನಿಂದ: 10 ದೇಶಗಳಿಂದ 334 ಸ್ಪರ್ಧಿಗಳು

ಕಣದಲ್ಲಿ ಕರ್ನಾಟಕದ ಯಶಸ್ವಿನಿ, ತನಿಷ್ಕಾ

ಕರ್ನಾಟಕದ ತನಿಷ್ಕಾ ಕಾಲಭೈರವ

ವಡೋದರ (ಪಿಟಿಐ): ವಿಶ್ವ ಟೇಬಲ್ ಟೆನಿಸ್ (ಯುಟಿಟಿ) ಯೂತ್ ಕಂಟೆಂಡರ್ ಮತ್ತು ಯುಟಿಟಿ ಫೀಡರ್ ಸರಣಿಯು ಇಲ್ಲಿನ ಸಮಾ ಒಳಾಂಗಣ ಕ್ರೀಡಾ ಸಂಕೀರ್ಣದಲ್ಲಿ ಶುಕ್ರವಾರ ಆರಂಭಗೊಳ್ಳಲಿದೆ. ಹತ್ತು ದೇಶಗಳಿಂದ 334 ಮಂದಿ ಸ್ಪರ್ಧಾ ಕಣದಲ್ಲಿದ್ದಾರೆ.

11ರಿಂದ 19 ವರ್ಷದೊಳಗಿನವರ ವಿಭಾಗಗಳನ್ನು ಒಳಗೊಂಡ ಯೂತ್ ಕಂಟೆಂಡರ್‌ನ ಎರಡನೇ ಆವೃತ್ತಿಯು ಇದೇ 2ರಿಂದ 5 ರವರೆಗೆ ನಡೆಯಲಿದೆ. ಇದೇ 7ರಿಂದ 11ರವರೆಗೆ ಫೀಡರ್ ಸರಣಿಯನ್ನು ಆಯೋಜಿಸಲಾಗಿದೆ. ಕರ್ನಾಟಕದ ಯಶಸ್ವಿನಿ ಘೋರ್ಪಡೆ ಮತ್ತು ತನಿಷ್ಕಾ ಕಾಲಭೈರವ ಕೂಟಕ್ಕೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.

ಯೂತ್ ಕಂಟೆಂಡರ್‌ನಲ್ಲಿ ನಾಲ್ಕು ದೇಶಗಳಿಂದ 226 ಮಂದಿ ಸ್ಪರ್ಧಿಸಲಿದ್ದಾರೆ. ಕೂಟದ ಮೊದಲ ದಿನ 13 ವರ್ಷದೊಳಗಿನವರ ಮತ್ತು 17 ವರ್ಷದೊಳಗಿನವರ ಸಿಂಗಲ್ಸ್ ಸ್ಪರ್ಧೆ ನಡೆಯಲಿದೆ. ಜ.4 ಮತ್ತು 5ರಂದು 11, 15 ಮತ್ತು 19 ವರ್ಷದೊಳಗಿನವರ ಸ್ಪರ್ಧೆಗಳು ನಿಗದಿಯಾಗಿವೆ.

ಕಳೆದ ವರ್ಷ ಯೂತ್ ಕಂಟೆಂಡರ್ ವಿಭಾಗದಲ್ಲಿ ಭಾರತವು ಪ್ರಾಬಲ್ಯ ಸಾಧಿಸಿತ್ತು, ಅಂಕುರ್ ಭಟ್ಟಾಚಾರ್ಜಿ ಮತ್ತು ಸಿಂಡ್ರೆಲಾ ದಾಸ್ ಅವರು ಕ್ರಮವಾಗಿ 19 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದರು.

ದಿವ್ಯಾಂಶಿ ಭೌಮಿಕ್ ಅವರು 15 ಮತ್ತು 17 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಚಾಂಪಿಯನ್ ಆಗಿದ್ದರು. ಈ ವರ್ಷ ದಿವ್ಯಾಂಶಿ ಅವರು 17 ಮತ್ತು 19 ವರ್ಷದೊಳಗಿನವರ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ. ಮತ್ತೊಂದೆಡೆ ಸಿಂಡ್ರೆಲಾ ತನ್ನ ಪ್ರಶಸ್ತಿ ಉಳಿಸಿಕೊಳ್ಳುವ ಗುರಿ ಹೊಂದಿದ್ದಾರೆ.

ಫೀಡರ್ ಸರಣಿಯಲ್ಲಿ ಹತ್ತು ದೇಶಗಳಿಂದ 108 ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಸಿಂಡ್ರೆಲಾ ಮತ್ತು ದಿವ್ಯಾಂಶಿ ಅವರು ಫೀಡರ್ ಸರಣಿಯಲ್ಲೂ ಕಣಕ್ಕೆ ಇಳಿಯುವರು.

ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಸವಾಲನ್ನು ಅನುಭವಿಗಳಾದ ಸುತೀರ್ಥ ಮುಖರ್ಜಿ, ಐಹಿಕಾ ಮುಖರ್ಜಿ ಮತ್ತು ಕರ್ನಾಟಕದ ಯಶಸ್ವಿನಿ ಘೋರ್ಪಡೆ ಮುನ್ನಡೆಸಲಿದ್ದಾರೆ. 20 ವರ್ಷದ ಯಶಸ್ವಿನಿ ಅವರು ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದು, ವಿಶ್ವ ರ್‍ಯಾಂಕಿಂಗ್‌ನಲ್ಲಿ 85ನೇ ಸ್ಥಾನದಲ್ಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಮಾನುಷ್ ಶಾ, ಹರ್ಮೀತ್ ದೇಸಾಯಿ, ಸ್ನೇಹಿತ್ ಎಸ್ ಮತ್ತು ಅಂಕುರ್ ಭಟ್ಟಾಚಾರ್ಜಿ ಅವರು ತವರಿನ ಸವಾಲನ್ನು ಮುನ್ನಡೆಸಲಿದ್ದಾರೆ. ಮಾನುಷ್ ಅವರು ದಿಯಾ ಚಿತಳೆ ಅವರೊಂದಿಗೆ ಋತುವಿನ ಅಂತ್ಯದ ಡಬ್ಲ್ಯುಟಿಟಿ ಫೈನಲ್ಸ್‌ಗೆ ಅರ್ಹತೆ ಪಡೆದ ಭಾರತದ ಮೊದಲ ಮಿಶ್ರ ಡಬಲ್ಸ್ ಜೋಡಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದರು.

ಕರ್ನಾಟಕದ ಉದಯೋನ್ಮುಖ ಆಟಗಾರ್ತಿ ತನಿಷ್ಕಾ ಕಾಲಭೈರವ ಅವರೂ ಮಹಿಳೆಯರ ಸಿಂಗಲ್ಸ್ ಮತ್ತು ಮಹಿಳೆಯರ ಡಬಲ್ಸ್‌ಗೆ ವೈಲ್ಡ್ ಕಾರ್ಡ್ ಪಡೆದಿದ್ದಾರೆ. 14 ವರ್ಷದ ತನಿಷ್ಕಾ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸಲಿದ್ದಾರೆ. ಡಬಲ್ಸ್‌ನ ಮುಖ್ಯ ಸುತ್ತಿನಲ್ಲಿ ಅವರು ಮರಿಯಾ ರೋನಿ ಅವರೊಂದಿಗೆ ಕಣಕ್ಕಿಳಿಯಲಿದ್ದಾರೆ.